ಮಂಗಳೂರು ಗುರುವಾರ, 28 ಮೇ 2026 ಸಂಪುಟ 48, ಸಂಚಿಕೆ 70, ಪುಟಗಳು 12+8 hosadigantha.com ₹5
ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily

# ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಕೇರಳ: ಸಿಪಿಎಂ ಬೆಂಬಲಿಗರಿಂದ ಇಡಿ ವಾಹನ ಧ್ವಂಸ • ಪುಟ 2

## ಮುಕ್ತ ಚುನಾವಣೆಗೆ ಎಸ್ಐಆರ್ ಅಗತ್ಯ: ಸುಪ್ರೀಂಕೋರ್ಟ್ • ಪುಟ 2

ಮಂಗಳೂರು
ಗುರುವಾರ, 28 ಮೇ 2026
ಸಂಪುಟ 48, ಸಂಚಿಕೆ 70, ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ







## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಚಿತ್ರ

### ದಿನದ ಮಾತು

ಸಜ್ಜನರು ಒಳ್ಳೆಯದಕ್ಕೆ ಒಳ್ಳೆಯದು ಮಾಡುತ್ತಾರೆ, ದುಃಖ ಪಡಿಸಿದರೂ ಒಳ್ಳೆಯದು ಮಾಡುತ್ತಾರೆ.
▲ ಕಾವ್ಯಸಾರಾಂಶ

### ಈ ಪರಿಸ್ಥಿತಿಗಳಲ್ಲಿ ನಗುವುದೂ ಅಪರಾಧವೇ!

ಗುರುತರ
• ಸೋಮಶೇಖರ ಸಿ.ಜೆ.
• ಪುಟ ೬

## ಕಿರುಸುದ್ದಿ

### ಗಡಿಗಳ ಸಮೀಪದ ಅಕ್ರಮ ನಿರ್ಮಾಣ ತೆರವಿಗೆ ಸೂಚನೆ

• **ಹೊಸದಿಲ್ಲಿ:** ನೆರೆಯ ದೇಶಗಳೊಂದಿಗಿನ ಭಾರತದ ಅಂತಾರಾಷ್ಟ್ರೀಯ ಗಡಿಗಳ 15 ಕಿಮೀ ವ್ಯಾಪ್ತಿಯಲ್ಲಿರುವ ಎಲ್ಲಾ ಕಾನೂನುಬಾಹಿರ ನಿರ್ಮಾಣಗಳನ್ನು ಧ್ವಂಸಗೊಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.
• ಪುಟ ೭

### ತ್ರಿಭಾಷಾ ನೀತಿ: ಕೇಂದ್ರ ಸರ್ಕಾರಕ್ಕೆ ನೋಟಿಸ್
• ಪುಟ ೭

### ಜೂ.1-4ರವರೆಗೆ ಭಾರತ ಅಮೆರಿಕ ವ್ಯಾಪಾರ ಚರ್ಚೆ
• ಪುಟ ೭

### ಪದ್ಮನಾಭ ದೇಗುಲ ಚಿನ್ನ ನಾಪತ್ತೆ; ಆರೋಪ
• ಪುಟ ೭

### ಸಾರ್ಥಕ್ ಪಿಡಿಎಸ್ ಪ್ಯಾಕೇಜ್‌ಗೆ ಅಸ್ತು
• ಪುಟ ೭

### ಅಲ್-ಫಲಾ ಸ್ಥಾಪಕನ ವಿರುದ್ಧ ಆರೋಪಪಟ್ಟಿ
• ಪುಟ ೭

### ಇಸ್ರೇಲ್ ದಾಳಿಗೆ ಹಮಾಸ್ ಮುಖ್ಯಸ್ಥನ ಹತ್ಯೆ
• ಪುಟ ೭

### ಎಎಂಸಿಎ ಉತ್ಪಾದನೆಗೆ ಚಾಲನೆ
• ಪುಟ ೪



### ಅಕ್ರಮ ವಲಸಿಗರ ಸಕ್ರಮ ಗಡಿಪಾರಿಗೆ ಉನ್ನತ ಸಿದ್ಧತೆ
• ಪುಟ ೭
ಸುದ್ದಿ ಸಮಗ್ರ

---


ಸಿಎಂ ರಾಜೀನಾಮೆ ನೀಡ್ತಾರೆ: ದೇಶಪಾಂಡೆ, ಜಾರಕಿಹೊಳಿ
ಎಲ್ಲವೂ ಊಹಾಪೋಹ ಎಂದ ಉಸ್ತುವಾರಿ ಸುರ್ಜೆವಾಲ

# ರಾಜ್ಯದ ರಾಜಕಾರಣ ಮೋಡದ ವಾತಾವರಣ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎನ್ನುವ ಸುದ್ದಿ ಹಿನ್ನೆಲೆಯಲ್ಲಿ ಬುಧವಾರ ಇಡೀ ದಿನ ರಾಜಕೀಯ ಚಟುವಟಿಕೆಗಳು, ಹಲವು ರಾಜಕೀಯ ಬೆಳವಣಿಗೆಗಳು ನಡೆದವು. ಈ ನಡುವೆ ಕಾಂಗ್ರೆಸ್‌ನ ಇಬ್ಬರು ಹಿರಿಯ ನಾಯಕರು ಸಿಎಂ ರಾಜೀನಾಮೆ ನೀಡುವುದನ್ನು ಖಚಿತಪಡಿಸಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್‌ನ ಪರಿಹಾರ ಸೂತ್ರದನ್ವಯ ಅಧಿಕಾರ ಬಿಟ್ಟುಕೊಡಲು ಮುಂದಾಗಿರುವ ಸಿದ್ದರಾಮಯ್ಯ ಅವರು, ಗುರುವಾರ (ಮೇ 28) ಲೋಕಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ. ಈ ನಡುವೆ ಸಿಎಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎನ್ನುವ ಸುಳಿವನ್ನು ಸಚಿವ ಸತೀಶ್ ಜಾರಕಿಹೊಳಿ ಹಾಗೂ ಶಾಸಕ ಆರ್.ವಿ.ದೇಶಪಾಂಡೆ ಅವರು ನೀಡಿದ್ದಾರೆ. ಸಿದ್ದರಾಮಯ್ಯ ರಾಜೀನಾಮೆ ನೀಡುವ ಕುರಿತು ಹೊಸದಿಲ್ಲಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು, ಮೇಲ್ನೋಟಕ್ಕೆ ಸಿಎಂ ಸಿದ್ದರಾಮಯ್ಯ ರಾಜೀನಾಮೆ ಕೊಡುವ ಸ್ಥಿತಿ ಕಾಣುತ್ತಿದೆ. ಗುರುವಾರ ಬೆಳಗ್ಗೆ ಮುಖ್ಯಮಂತ್ರಿಗಳು ಉಪಾಹಾರಕ್ಕೆ ಆಹ್ವಾನಿಸಿದ್ದಾರೆ. ಏನು ಎಂಬುದು ಗೊತ್ತಾಗಲಿದೆ. ಅಧಿಕೃತವಾಗಿ ಸಿಎಂ ಸಿದ್ದರಾಮಯ್ಯ ಇನ್ನೂ ಏನೂ ಹೇಳಿಲ್ಲ. ಗುರುವಾರ ಬೆಳಗ್ಗೆ ನಾನು ಉಪಾಹಾರ ಕೂಟದಲ್ಲಿ ಭಾಗಿಯಾಗುತ್ತೇನೆ. ನಾನು ಇನ್ನೂ ಸಿಎಂ ಜತೆಗೆ ವೈಯಕ್ತಿಕವಾಗಿ ಮಾತನಾಡಿಲ್ಲ ಎಂದರು. ➡ಪುಟ ೪





> ಕಾಂಗ್ರೆಸ್ ಹೈಕಮಾಂಡ್ ಸದ್ಯಕ್ಕೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಯಾವುದೇ ಊಹಾಪೋಹಗಳಿಗೆ ಕಿವಿಗೊಡಬೇಡಿ. ಅಲ್ಲದೆ ನಾಯಕತ್ವ ಬದಲಾವಣೆ ಮಾಡಲು ಶಾಸಕಾಂಗ ಪಕ್ಷದ ಸಭೆಯನ್ನೇ ಕರೆದಿಲ್ಲ.
> ■ ರಣದೀಪ್ ಸಿಂಗ್ ಸುರ್ಜೆವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

### ಇಂದು ಶಾಸಕರಿಗೆ ಉಪಾಹಾರ

ಸಿಎಂ ಸಿದ್ದರಾಮಯ್ಯ ಅವರು ಗುರುವಾರ ಬೆಳಗ್ಗೆ 9ಗಂಟೆಗೆ ಕಾವೇರಿ ನಿವಾಸದಲ್ಲಿ ಸಚಿವರು ಹಾಗೂ ಶಾಸಕರಿಗೆ ಉಪಾಹಾರ ಕೂಟ ಏರ್ಪಡಿಸಿದ್ದಾರೆ. ಈ ಉಪಾಹಾರ ಕೂಟದಲ್ಲಿ ಸಿಎಂ ಅವರು ತಮ್ಮ ಅಭಿಪ್ರಾಯವನ್ನು ಶಾಸಕರೊಂದಿಗೆ ಹಂಚಿಕೊಳ್ಳಲಿದ್ದಾರೆ.

### ರಾಜ್ಯಪಾಲರ ಸಮಯಾವಕಾಶ ಕೇಳಿದ ಸಿಎಂ ಸಿದ್ದರಾಮಯ್ಯ

ಗುರುವಾರ ಶಾಸಕರೊಂದಿಗಿನ ಉಪಾಹಾರ ಕೂಟದ ಬಳಿಕ ಲೋಕಭವನಕ್ಕೆ ತೆರಳಲಿದ್ದಾರೆ ಎನ್ನಲಾಗಿದೆ. ಈಗಾಗಲೇ ರಾಜ್ಯಪಾಲರಿಗೆ ಭೇಟಿಯಾಗಲು ಸಮಯಾವಕಾಶ ಕೇಳಿದ್ದು, ಅವರು ಕೊಟ್ಟ ಸಮಯಕ್ಕೆ ರಾಜ್ಯಪಾಲರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ.

### 'ನಾಳೆ ಹೇಳುತ್ತೇನೆ': ಮುಖ್ಯಮಂತ್ರಿ

ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಅವರ ಪುಣ್ಯ ಸ್ಮರಣೆ ಅಂಗವಾಗಿ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾಧ್ಯಮಗಳ ಪ್ರಶ್ನೆಗೆ ಒಂದೇ ಪದ ನುಡಿದ ಸಿದ್ದರಾಮಯ್ಯ ಅವರು, 'ನಾಳೆ ಹೇಳುತ್ತೇನೆ ' ಎಂದು ಹೇಳಿದರು.


---

ಮುಕ್ತ ಚುನಾವಣೆಗೆ ಎಸ್‌ಐಆರ್ ಅಗತ್ಯ: ಸುಪ್ರೀಂ

# ಇಸಿಗೆ ಯೆಸ್ ಸರ್


### ಸುಪ್ರೀಂ ಕೋರ್ಟ್ ಹೇಳಿದ್ದೇನು?

- ಎಸ್‌ಐಆರ್ ಕ್ರಮ ಸಂವಿಧಾನಬದ್ಧ
- ಇಸಿಗೆ ವಿಶೇಷ ಪರಿಷ್ಕರಣೆ ನಡೆಸುವ ಅಧಿಕಾರ ಇದೆ
- ಮತದಾರರ ಪಟ್ಟಿಯ ಶುದ್ಧತೆ ಪ್ರಜಾಪ್ರಭುತ್ವದ ಮೂಲ
- ನಾಗರಿಕತ್ವ ಪರಿಶೀಲನೆಗೆ ಸೀಮಿತ ವಿಚಾರಣೆ ನಡೆಸಬಹುದು
- ಆದರೆ ನಾಗರಿಕತ್ವದ ಅಂತಿಮ ತೀರ್ಮಾನ ಕೇಂದ್ರ ಪ್ರಾಧಿಕಾರದ್ದು
- ಹೆಸರು ತೆಗೆದುವ ಪ್ರಕರಣವನ್ನು 4 ವಾರದಲ್ಲಿ ಪ್ರಾಧಿಕಾರಕ್ಕೆ ಕಳುಹಿಸಬೇಕು
- ಸಂಬಂಧಿತ ವ್ಯಕ್ತಿಗೆ ವಿಚಾರಣೆ ಅವಕಾಶ ನೀಡಬೇಕು
- ನಾಗರಿಕರೆಂದು ದೃಢಪಟ್ಟರೆ ಮರು ಸೇರ್ಪಡೆ ಮಾಡಬೇಕು
- ಎಸ್‌ಐಆರ್ ಕ್ರಮ ಅತಿರೇಕ ಅಥವಾ ದುರುದ್ದೇಶಿತವಲ್ಲ
- ಸಮರ್ಪಕ ಸುರಕ್ಷತಾ ಕ್ರಮಗಳಿವೆ ಎಂದು ಕೋರ್ಟ್ ಅಭಿಪ್ರಾಯ



• **ಹೊಸದಿಲ್ಲಿ:** ದೇಶದ ಚುನಾವಣಾ ವ್ಯವಸ್ಥೆ, ಮತದಾರರ ಹಕ್ಕು ಹಾಗೂ ನಾಗರಿಕತ್ವ ಚರ್ಚೆಗೆ ಭಾರೀ ರಾಜಕೀಯ-ಸಾಂವಿಧಾನಿಕ ತಿರುವು ನೀಡುವ ಮಹತ್ವದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಬುಧವಾರ ಚುನಾವಣಾ ಆಯೋಗದ (ಇಸಿ) ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಕ್ರಮವನ್ನು ಸಂವಿಧಾನಬದ್ಧವೆಂದು ಘೋಷಿಸಿದೆ.

ಬಿಹಾರದಲ್ಲಿ ಕೈಗೊಂಡಿದ್ದ ಮತದಾರರ ಪಟ್ಟಿಯ ಎಸ್‌ಐಆರ್ ವಿರುದ್ಧ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ತಳ್ಳಿ ಹಾಕಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ, ನಿಖರ ಮತ್ತು ಶುದ್ಧ ಮತದಾರರ ಪಟ್ಟಿಯೇ ಪ್ರಜಾಪ್ರಭುತ್ವದ ಆಧಾರ. ಎಸ್‌ಐಆರ್ ಕ್ರಮವು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ಸಂವಿಧಾನಾತ್ಮಕ ಗುರಿಗೆ ಜೀವ ತುಂಬುತ್ತದೆ ಎಂದು ಹೇಳಿದೆ. ನ್ಯಾ. ಜಾಯ್‌ಮಾಲ್ಯ ಬಾಗ್ಚಿ ಕೂಡ ಇದ್ದ ಪೀಠ, ಸಂವಿಧಾನದ 324ನೇ ವಿಧಿ ಹಾಗೂ ಜನಪ್ರತಿನಿಧಿಗಳ ಕಾಯ್ದೆ (ಆರ್ ಪಿ ಎ) ಸೆಕ್ಷನ್ 21(3) ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ಇಂತಹ ವಿಶೇಷ ಪರಿಷ್ಕರಣೆ ನಡೆಸುವ ಅಧಿಕಾರವಿದೆ ಎಂದು ಸ್ಪಷ್ಟಪಡಿಸಿದೆ.



ಇದೇ ವೇಳೆ, ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕುವುದು ಎಂದರೆ ವ್ಯಕ್ತಿಯ ಭಾರತೀಯ ನಾಗರಿಕತ್ವವನ್ನು ಅಂತಿಮವಾಗಿ ರದ್ದುಗೊಳಿಸಿದಂತಲ್ಲ ಎಂದು ಕೋರ್ಟ್ ಮಹತ್ವದ ಸ್ಪಷ್ಟನೆ ನೀಡಿದೆ. ➡ಪುಟ ೪

» ಎಸ್‌ಐಆರ್ ಮಾನ್ಯ: ಇಸಿಗೆ ಸುಪ್ರೀಂ ಬಲ
» ಇಸಿಗೆ ಹೆಸರು ನಿರಾಳ, ವಿರೋಧ ಪಕ್ಷಗಳಿಗೆ ಹಿನ್ನಡೆ

### ಎಸ್‌ಐಆರ್ ಎನ್‌ಆರ್‌ಸಿ ಅಲ್ಲ

ಅರ್ಜಿದಾರರು ಎಸ್‌ಐಆರ್ ಅನ್ನು ಪರೋಕ್ಷ ಎನ್‌ಆರ್‌ಸಿ ಎಂದು ವಾದಿಸಿದ್ದರು. ಆದರೆ ಸುಪ್ರೀಂ ಕೋರ್ಟ್, ಇಸಿ ನಡೆಸುವ ಪರಿಶೀಲನೆ ಕೇವಲ ಮತದಾರರ ಅರ್ಹತೆಗಾಗಿ ಮಾತ್ರ, ಅದು ನಾಗರಿಕತ್ವದ ಅಂತಿಮ ನಿರ್ಧಾರವಲ್ಲ ಎಂದು ಸ್ಪಷ್ಟಪಡಿಸಿದೆ.

### ಈ ತೀರ್ಪು ಮಹತ್ವ ಏಕೆ?

ಈ ತೀರ್ಪು ಮುಂದಿನ ದಿನಗಳಲ್ಲಿ ದೇಶದಾದ್ಯಂತ ಮತದಾರರ ಪಟ್ಟಿಗಳ ಸಮಗ್ರ ಪರಿಶೀಲನೆಗೆ ದಾರಿ ತೆರೆದು ಕೊಡುವ ಸಾಧ್ಯತೆ ಇದೆ. ಹಾಗೆಯೇ, ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳು ಸುಪ್ರೀಂಕೋರ್ಟ್ ಮೆಟ್ಟಿಲೇರಲು ಸಿದ್ಧತೆ ನಡೆಸಿವೆ.



ಹೀಗಾಗಿ ಈ ತೀರ್ಪು ಕಾನೂನಾತ್ಮಕವಾಗಿ ಆಯೋಗಕ್ಕೆ ಶಕ್ತಿ ನೀಡಬಹುದು. ಹಾಗೆಯೇ ಅಕ್ರಮ ವಲಸೆ, ನಕಲಿ ಮತದಾರರು, ಪುನರಾವರ್ತಿತ ಹೆಸರುಗಳು ಮತ್ತು ಮತದಾರರ ಪಟ್ಟಿಯ ಶುದ್ಧತೆ ಕುರಿತು ನಡೆಯುತ್ತಿರುವ ರಾಜಕೀಯ ಚರ್ಚೆಗೆ ಸುಪ್ರೀಂ ಕೋರ್ಟ್ ಸ್ಪಷ್ಟ ಕಾನೂನುಬದ್ಧ ಬೆಂಬಲ ನೀಡಿದಂತಾಗಿದೆ. ➡ಪುಟ ೪

---

ಆಯೋಗದ ಅಧ್ಯಕ್ಷ ಮಧುಸೂಧನ್‌ರಿಂದ ವರದಿ ಬಗ್ಗೆ ವಿವರಣೆ

# ಜಾತಿಗಣತಿ ವರದಿ ಸ್ವೀಕರಿಸಿದ ಸಿಎಂ

• **ಬೆಂಗಳೂರು:** ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸ್ವೀಕರಿಸಿದರು.

ಬುಧವಾರ ವಿಧಾನಸೌಧಕ್ಕೆ ಆಗಮಿಸಿದ ಮುಖ್ಯಮಂತ್ರಿಗಳು, ಆಯೋಗದ ಅಧ್ಯಕ್ಷ ಮಧುಸೂಧನ್ ಆರ್. ನಾಯಕ್ ಅವರಿಂದ ವರದಿ ಬಗ್ಗೆ ವಿವರಣೆ ಪಡೆದುಕೊಂಡರು. ಕಾಂತರಾಜು ಆಯೋಗವು ತಯಾರಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಹಾಗೂ ನಂತರದ ಬಿಜೆಪಿ ಸರ್ಕಾರ ಸ್ವೀಕರಿಸಿರಲಿಲ್ಲ. 2023ರಲ್ಲಿ ಸಿದ್ದರಾಮಯ್ಯ ಅವರು 2ನೇ ಬಾರಿ ಸಿಎಂ ಆಗಿದ್ದಾಗ ವರದಿ ಸ್ವೀಕರಿಸಲಾಯಿತು, ಇದಕ್ಕೆ ಪ್ರಬಲ ಸಮುದಾಯಗಳು ವಿರೋಧ ವ್ಯಕ್ತಪಡಿಸಿದ್ದರಿಂದ ಮಧುಸೂಧನ್ ಆರ್. ನಾಯಕ್ ಅಧ್ಯಕ್ಷತೆಯಲ್ಲಿ ಮರು ಸಮೀಕ್ಷೆಗೆ ನಿರ್ಧರಿಸಲಾಗಿತ್ತು. ➡ಪುಟ ೪



> ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮರುಗಣತಿಯ ವರದಿಯನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿದ್ದೇನೆ. ಮುಂದಿನ ದಿನಗಳಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ಈ ವರದಿಯು ಮಾರ್ಗದರ್ಶಿಯಾಗಲಿ ಎಂದು ಆಶಿಸುತ್ತೇನೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

---

ಯುಸಿಸಿ ಜಾರಿಗೊಳಿಸಿದ ಮೂರನೇ ರಾಜ್ಯ

# ಅಸ್ಸಾಂನಲ್ಲಿ ಏನಾಸಂ ಜಾರಿ

• **ದಿಸ್ಪುರ್:** ಅಸ್ಸಾಂ ವಿಧಾನಸಭೆ ಬುಧವಾರ ಏಕರೂಪ ನಾಗರಿಕ ಸಂಹಿತೆ ಮಸೂದೆ, 2026ನ್ನು ಅಂಗೀಕರಿಸಿದ್ದು, ಬುಡಕಟ್ಟು ನಿವಾಸಿಗಳನ್ನು ಹೊರತುಪಡಿಸಿ ಎಲ್ಲರ ವೈಯಕ್ತಿಕ ವಿಷಯಗಳನ್ನು ನಿಯಂತ್ರಿಸುವ ಏಕೀಕೃತ ಕಾನೂನು ಚೌಕಟ್ಟನ್ನು ಜಾರಿಗೆ ತಂದಿದೆ. ಇದರೊಂದಿಗೆ, ಉತ್ತರಾಖಂಡ ಮತ್ತು ಗುಜರಾತ್ ನಂತರ ಏಕರೂಪ ಸಂಹಿತೆ ಜಾರಿಗೆ ತಂದ ಮೂರನೇ ರಾಜ್ಯವಾಗಿ ಅಸ್ಸಾಂ ಹೊರಹೊಮ್ಮಿದೆ.

**ಪ್ರಮುಖ ನಿಷೇಧಗಳು:** ಹೊಸದಾಗಿ ಅಂಗೀಕರಿಸಲ್ಪಟ್ಟ ಶಾಸನ, ರಾಜ್ಯಾದ್ಯಂತ ದ್ವಿಪತ್ನಿತ್ವ ಮತ್ತು ಬಹುಪತ್ನಿತ್ವವನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ. ಈ ನಿಬಂಧನೆಗಳಲ್ಲಿ ಅಪರಾಧ ಸಾಬೀತಾದರೆ ಗರಿಷ್ಠ ಏಳು ವರ್ಷ ಜೈಲು ಶಿಕ್ಷೆ ಮತ್ತು ಆರ್ಥಿಕ ದಂಡವನ್ನು ವಿಧಿಸಲಾಗುತ್ತದೆ.



**ಕಡ್ಡಾಯ ನೋಂದಣಿ, ರಕ್ಷಣೆ:** ಕರಡು ಕಾನೂನಿನ ಪ್ರಕಾರ, ದಂಪತಿಗಳು ವಿವಾಹ ಅಥವಾ ವಿಚ್ಛೇದನ ನಡೆದ 60 ದಿನಗಳ ಕಡ್ಡಾಯ ಅವಧಿಯೊಳಗೆ ಅದನ್ನು ಅಧಿಕೃತವಾಗಿ ನೋಂದಾಯಿಸಬೇಕು. ಅಲ್ಲದೆ, ಲಿವ್-ಇನ್ ಸಂಬಂಧಗಳನ್ನು ಆರಂಭಿಸಿದ 30 ದಿನಗಳ ಒಳಗೆ ಕಡ್ಡಾಯವಾಗಿ ನೋಂದಾಯಿಸಬೇಕೆಂದು ಮಸೂದೆ ಒತ್ತಾಯಿಸುತ್ತದೆ. ಇದನ್ನು ಪಾಲಿಸಲು ವಿಫಲವಾದರೆ ಮೂರು ತಿಂಗಳವರೆಗೆ ಜೈಲು ಶಿಕ್ಷೆ ಅಥವಾ 10 ಸಾವಿರ ರೂ. ದಂಡ ವಿಧಿಸಲಾಗುತ್ತದೆ.

ನೋಂದಾಯಿತ ಲಿವ್-ಇನ್ ಸಂಬಂಧದಿಂದ ಜನಿಸಿದ ಮಕ್ಕಳಿಗೆ ಈ ಕಾನೂನಿನ ಚೌಕಟ್ಟು ಸಂಪೂರ್ಣ ಕಾನೂನುಬದ್ಧ ಸ್ಥಾನಮಾನ ನೀಡುತ್ತದೆ. ಇದು ಕೈಬಿಡಲ್ಪಟ್ಟ ಲಿವ್-ಇನ್ ಪಾಲುದಾರರಿಗೂ ಶಾಸನಬದ್ಧ ಹಕ್ಕುಗಳನ್ನು ವಿಸ್ತರಿಸುತ್ತದೆ. ಅವರು ನ್ಯಾಯಾಲಯಗಳ ಮೂಲಕ ಕಾನೂನು ಬದ್ಧವಾಗಿ ಆರ್ಥಿಕ ಜೀವನಾಂಶ ಪಡೆಯಲು ಅನುಮತಿಸುತ್ತದೆ.




### ಸಂಸ್ಕೃತಿ ರಕ್ಷಣೆ

ಪ್ರಾದೇಶಿಕ ವೈವಿಧ್ಯತೆ ಕಾಪಾಡಲು, ನಿಖಾ, ಸಪ್ತಪದಿ ಮತ್ತು ಆನಂದ್ ಕಾರಜ್ ಸೇರಿದಂತೆ ಯಾವುದೇ ಧಾರ್ಮಿಕ ಪದ್ಧತಿಗಳ ಪ್ರಕಾರ ವಿವಾಹವಾಗಲು ಕಾನೂನು ಅನುಮತಿಸುತ್ತದೆ. ಇದು ಅಸ್ಸಾಂ ಮುಸ್ಲಿಂ ವಿವಾಹಗಳು ಮತ್ತು ವಿಚ್ಛೇದನಗಳ ಕಡ್ಡಾಯ ನೋಂದಣಿ ಕಾಯ್ದೆ, 2024ನ್ನು ರದ್ದುಗೊಳಿಸುತ್ತದೆ. ಆಯಾ ಸಮುದಾಯಗಳು ತಮ್ಮದೇ ವಿವಾಹ ಪದ್ಧತಿಯನ್ನು ಅನುಸರಿಸಬಹುದು.

---

# ಮೋದಿ ಭೇಟಿಯಾದ ತ.ನಾಡು ಸಿಎಂ ವಿಜಯ್

• **ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಬುಧವಾರ ದಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯಕ್ಕೆ ಸಂಬಂಧಿತ ಹಲವು ವಿಚಾರಗಳ ಕುರಿತು ಚರ್ಚಿಸಿದರು. ಮೇಕೆದಾಟು ಜಲ ವಿವಾದದಲ್ಲಿ ಮಧ್ಯ ಪ್ರವೇಶಿಸುವಂತೆ ಪ್ರಧಾನಿ ಮೋದಿ ಅವರನ್ನು ಸಿಎಂ ವಿಜಯ್ ವಿನಂತಿಸಿದ್ದಾರೆ. ರಾಜ್ಯದ ಕಲ್ಯಾಣ ಕಾರ್ಯಕ್ರಮಗಳು ಮತ್ತು ಮೂಲಸೌಕರ್ಯಗಳಿಗೆ ಕೇಂದ್ರದ ಹಣಕಾಸು ಬೆಂಬಲ, ಪ್ರಮುಖ ಅಭಿವೃದ್ಧಿ ಯೋಜನೆಗಳಿಗೆ ಮಂಜೂರಾತಿಗೆ ಆಗ್ರಹಿಸುವ ಮನವಿಪತ್ರವನ್ನು ಪ್ರಧಾನಿಗೆ ಸಲ್ಲಿಸಿದ್ದಾರೆ. ಸಿ. ಜೋಸೆಫ್ ವಿಜಯ್ ಈ ತಿಂಗಳಾರಂಭದಲ್ಲಿ ತಮಿಳುಡಿನ ಮುಖ್ಯಮಂತ್ರಿಯಾದ ನಂತರದಲ್ಲಿ ದಿಲ್ಲಿಗೆ ನೀಡಿದ ಚೊಚ್ಚಲ ಭೇಟಿ ಇದಾಗಿದೆ.



### ಮೇಕೆದಾಟು ವಿಚಾರದಲ್ಲಿ ಮಧ್ಯಪ್ರವೇಶಕ್ಕೆ ಮನವಿ

ಕರ್ನಾಟಕದ ಪ್ರಸ್ತಾವಿತ ಮೇಕೆದಾಟು ಅಣೆಕಟ್ಟು ಯೋಜನೆಗೆ ಬಲವಾದ ವಿರೋಧ ವ್ಯಕ್ತಪಡಿಸಿದ ಸಿಎಂ ವಿಜಯ್, ಯೋಜನೆಯಿಂದ ರಾಜ್ಯದ ಕುಡಿ ಯುವ ನೀರು ಮತ್ತು ನೀರಾವರಿ ಅಗತ್ಯಗಳಿಗೆ ತೊಂದರೆಯಾಗಲಿದೆ. ➡ಪುಟ ೪

---

ದೇಶದಲ್ಲಿ ಹೆಚ್ಚುತ್ತಿರುವ ತಾಪಮಾನ: ಮೋದಿ ಕಳಕಳಿ

# ಹೆಚ್ಚೆಚ್ಚು ನೀರು ಕುಡಿಯಿರಿ

• **ಹೊಸದಿಲ್ಲಿ:** ದೇಹದಲ್ಲಿ ಆದಷ್ಟು ನೀರಿನಂಶ ಕಾಪಾಡಿಕೊಳ್ಳಿ, ಪ್ರಸಕ್ತ ಬೇಸಗೆಯ ತಾಪಮಾನ ಸಹಿಸಿಕೊಳ್ಳಲು ಸಾಕಷ್ಟು ಜಾಗ್ರತೆ ವಹಿಸಿ. ದೇಶದಲ್ಲಿ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಗರಿಷ್ಠ ಮುಂಜಾಗ್ರತೆ ವಹಿಸಿ ಎಂದು ಜನರಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.



ಮಿತಿಮೀರಿದ ತಾಪಮಾನ ಮತ್ತು ಇದು ಸೃಜಿಸುತ್ತಿರುವ ಸವಾಲುಗಳಿಗೆ ಭಾರತದ ವಿವಿಧ ಪ್ರದೇಶಗಳು ಸಾಕ್ಷಿಯಾಗಿವೆ. ಪ್ರಸ್ತುತ ತಾಪಮಾನವು ನಮ್ಮೆಲ್ಲರ ಪಾಲಿಗೆ ಕಡುವಾಗಿದ್ದು, ಎಲ್ಲರೂ ಆದಷ್ಟು ಮುಂಜಾಗರೂಕತೆ ವಹಿಸಿ. ಮನೆಯಿಂದ ಹೊರಗಿಳಿವಾಗ ನೀರಿನ ಬಾಟಲಿ ಜತೆಗಿರಲಿ, ಇತರರಿಗೂ ಕುಡಿಯಲು ನೀರು ಕೊಡಿ, ಇಂತಹ ಹವಾಮಾನ ಸನ್ನಿವೇಶದಲ್ಲಿ ಈ ತೆರ ದಯಾಳುತನ ಅವಿಸ್ಮರಣೀಯವಾಗಿರುವುದು ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಸಂದೇಶದಲ್ಲಿ ದೇಶದ ಜನರನ್ನು ವಿನಂತಿಸಿದ್ದಾರೆ. ತಾಪಮಾನದಿಂದ ತಲೆಸುತ್ತುವಿಕೆ, ವಾಕರಿಕೆ, ಮಿತಿಮೀರಿ ಸುಸ್ತು ಇತ್ಯಾದಿ ಆರೋಗ್ಯ ಸಮಸ್ಯೆಗಳು ಕಾಡುತ್ತವೆ. ನಿಮ್ಮ ಸುತ್ತಮುತ್ತ ಯಾರಾದರೂ ಈ ರೀತಿ ಬಳಲುತ್ತಿದ್ದಲ್ಲಿ ತಕ್ಷಣ ಅವರನ್ನು ನೆರಳಿನ ಜಾಗಕ್ಕೆ ಕರೆದೊಯ್ಯಿರಿ ಮತ್ತು ಅವರಿಗೆ ಕುಡಿಯಲು ನೀರು, ಒಆರ್‌ಎಸ್ ಇತ್ಯಾದಿ ಕೊಡಿ. ➡ಪುಟ ೪



### ಪಕ್ಷಿಗಳನ್ನೂ ಕಾಪಾಡಿ

ಬಿಸಿಗಾಳಿಯೊಡ್ಡುವ ಗಂಡಾಂತರಗಳಿಂದ ನಿಮ್ಮ ಕುಟುಂಬಗಳ ಹಿರಿಯ ಸದಸ್ಯರನ್ನು ದೂರವಿಡಿ. ಏಕಕಾಲಕ್ಕೆ ಪಕ್ಷಿಗಳು ಮತ್ತು ಪ್ರಾಣಿಗಳನ್ನೂ ಇದೇ ರೀತಿ ಕಾಪಾಡಿ. ಬಾಯಾರಿದ ಪಕ್ಷಿಗಳ ದಾಹ ತಣಿಸಲು ನಿಮ್ಮ ಮನೆಗಳ ಹೊರಗಡೆ, ಬಾಲ್ಕನಿಗಳು, ಟೆರೇಸ್‌ಗಳು, ಅಂಗಡಿಗಳು ಮತ್ತು ಕಚೇರಿಗಳ ಹೊರಗಡೆ ಸಣ್ಣ ಪಾತ್ರೆಗಳಲ್ಲಿ ನೀರಿಟ್ಟುಬಿಡಿ. ಪ್ರಸ್ತುತ ಸಂಕಷ್ಟದ ದಿನಗಳಲ್ಲಿ ದಯೆ, ಕರುಣೆಗಳು ನಮಗೆ ದಾರಿದೀಪವಾಗಲಿ ಎಂದು ಪ್ರಧಾನಿ ಮೋದಿ ಎಕ್ಸ್ ಸಂದೇಶದಲ್ಲಿ ಹಾರೈಸಿದ್ದಾರೆ.

---

## ಜೂನ್ 4ರಿಂದ ಆಫ್ರಿಕಾ ಚೀತಾ ವೀಕ್ಷಣೆ ಅವಕಾಶ

• **ಬೆಂಗಳೂರು:** ಕಳೆದ ಏಪ್ರಿಲ್ 18ರಂದು ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಬಂದ 4 ಶಿವಂಗಿ(ಚೀತಾ)ಗಳ ಕ್ವಾರಂಟೈನ್ ಅವಧಿ ಮುಗಿದಿದ್ದು, ಜೂನ್ 4ರಿಂದ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗಲಿವೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ. ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್ ಅವರೊಂದಿಗೆ ಸಭೆ ನಡೆಸಿದ ಸಚಿವರು, ಬನ್ನೇರುಘಟ್ಟ ಮೃಗಾಲಯದಲ್ಲಿ ಪ್ರತ್ಯೇಕವಾಗಿ ಸಿದ್ಧಪಡಿಸಿರುವ ಆವರಣದಲ್ಲಿ ಈ ಚೀತಾಗಳನ್ನು ಬಿಡಲಾಗುವುದು ಎಂದು ಹೇಳಿದರು. ➡ಪುಟ ೪




---

ಪಿಣರಾಯಿ ಮನೆ ಮೇಲೆ ಇಡಿ ದಾಳಿ ವೇಳೆ ಕಾರ್ಯಕರ್ತರ ದಾಂಧಲೆ

# ಸಿಪಿಎಂ ಬೆಂಬಲಿಗರಿಂದ ಇಡಿ ವಾಹನ ಧ್ವಂಸ

• **ತಿರುವನಂತಪುರಂ:** ಕೊಚ್ಚಿನ್ ಮಿನರಲ್ಸ್ ಅಂಡ್ ರುಟೈಲ್ ಲಿಮಿಟೆಡ್ (ಸಿಎಂಆರ್‌ಎಲ್) ಹಗರಣಕ್ಕೆ ಸಂಬಂಧಿಸಿ ಕೇರಳ ಹೈಕೋರ್ಟ್ ಇಡಿ ತನಿಖೆಯನ್ನು ರದ್ದುಗೊಳಿಸಬೇಕೆಂಬ ಅರ್ಜಿಯನ್ನು ತಿರಸ್ಕರಿಸಿ ತನಿಖೆಗೆ ಅನುಮತಿ ನೀಡಿದ ಬಳಿಕ ಜಾರಿ ನಿರ್ದೇಶನಾಲಯ(ಇಡಿ)ವು, ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಎಂ ನಾಯಕ ಪಿಣರಾಯಿ ವಿಜಯನ್ ಅವರ ನಿವಾಸ ಸೇರಿದಂತೆ 10 ಕಡೆಗಳಲ್ಲಿ ದಾಳಿ ನಡೆಸಿ ಶೋಧ ಕೈಗೊಂಡಿತು. ಇದೇ ವೇಳೆ ಪಿಣರಾಯಿ ನಿವಾಸದಲ್ಲಿ ಶೋಧ ನಡೆಸಿ ಹೊರಬರುತ್ತಿದ್ದಂತೆ ಇಡಿ ವಾಹನದ ಮೇಲೆ ಸಿಪಿಎಂ ಬೆಂಬಲಿಗರು ದಾಳಿ ನಡೆಸಿದ ಆಘಾತಕಾರಿ ಘಟನೆಯೂ ನಡೆದಿದೆ.



ತಿರುವನಂತಪುರಂನ ಬೇಕರಿ ಜಂಕ್ಷನ್‌ನಲ್ಲಿರುವ ಪಿಣರಾಯಿ ವಿಜಯನ್ ನಿವಾಸ , ಕಣ್ಣೂರಿನ ಅವರ ನಿವಾಸ , ಅವರ ಅಳಿಯ ಮಾಜಿ ಸಚಿವ ಮೊಹಮ್ಮದ್ ರಿಯಾಸ್ (ಪಿಣರಾಯಿ ವಿಜಯನ್ ಅವರ ಅಳಿಯ)ಅವರ ಕೋಯಿಕ್ಕೋಡ್ ನಿವಾಸ, ಸಿಎಂಆರ್‌ಎಲ್‌ನ ಆಡಳಿತ ನಿರ್ದೇಶಕ ಸುಧರನ್ ಕರ್ತ ಅವರ ನಿವಾಸ, ಹಗರಣಕ್ಕೆ ಸಂಬಂಧಿಸಿದ ಕಚೇರಿಗಳು ಸೇರಿದಂತೆ ಕೇರಳದ 10 ಕಡೆಗಳಲ್ಲಿ ಇಡಿ ದಾಳಿ ನಡೆದಿದೆ. ➡ಪುಟ ೪

» ಸಿಪಿಎಂ ನಾಯಕ ಪಿಣರಾಯಿ ನಿವಾಸ ಸೇರಿದಂತೆ 10 ಕಡೆಗಳಲ್ಲಿ ಇಡಿ ದಾಳಿ



---

**ಬೆಳ್ಳಿ ಬಂಗಾರ (ಬೆಂಗಳೂರು)** ಬೆಳ್ಳಿ: 2,74,000(2,73,800) ಅಪರಂಜಿ ಚಿನ್ನ 15,730(15,895) ಆಭರಣ ಚಿನ್ನ: 14,510(14,565) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

**ಷೇರು ಸೂಚ್ಯಂಕ** ಬಿಎಸ್‌ಇ 75,867(141↓) ಎನ್‌ಎಸ್‌ಇ 23,907(↓) $1 = ₹95.23

### ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ ಅಧ್ಯಕ್ಷ ಟಿ. ರಘುಮೂರ್ತಿ

# ಮಂಗಳೂರಿಗೆ ಸಮಗ್ರ ಒಳಚರಂಡಿ ಯೋಜನೆ



• **ಮಂಗಳೂರು:** ಮಂಗಳೂರು ನಗರಕ್ಕೆ 1200 ಕೋಟಿರೂ.ವೆಚ್ಚದಸಮಗ್ರಒಳಚರಂಡಿಯೋಜನೆಯ ಪ್ರಸ್ತಾವನೆಯನ್ನು ದ.ಕ. ಜಿಲ್ಲಾಡಳಿತದಿಂದ ಸರಕಾರಕ್ಕೆ ಈಗಾಗಲೇ ಸಲ್ಲಿಸಲಾಗಿದ್ದು, ಮಂಗಳೂರಿಗೆ ಈ ಯೋಜನೆ ಅವಶ್ಯಕತೆ ಇದೆ ಎಂದು ಸರಕಾರಕ್ಕೆ ವರದಿ ನೀಡಲಾಗುವುದು ಎಂದು ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ ಅಧ್ಯಕ್ಷ ಟಿ. ರಘುಮೂರ್ತಿ ತಿಳಿಸಿದರು.

ಸಮಿತಿ ನೇತೃತ್ವದಲ್ಲಿ ನಗರದಲ್ಲಿ ರಾಜಕಾಲುವೆ ಹಾಗೂ ನದಿಗಳಲ್ಲಿ ಒಳಚರಂಡಿ ತ್ಯಾಜ್ಯ ಹರಿಯುತ್ತಿರುವ ಸ್ಥಳಗಳಿಗೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ ಎಡಿಬಿ, ಕೆಯುಐಡಿಎಫ್‌ಸಿ, ಅಮೃತ್ 1 ಹಾಗೂ ಸ್ಮಾರ್ಟ್ ಸಿಟಿ ಯೋಜನೆಯಡಿ ಸುಮಾರು 450 ಕೋಟಿ ರೂ. ವೆಚ್ಚದಲ್ಲಿ ವಿವಿಧ ಒಳಚರಂಡಿ ಕಾಮಗಾರಿಗಳನ್ನು ನಡೆಸಲಾಗಿದೆ. ಹಾಗಿದ್ದರೂ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಅರ್ಧಂಬರ್ಧ ಆಗಿದೆ. ಅದನ್ನು ಪರಿಶೀಲನೆಯ ವೇಳೆ ಸಮಿತಿ ಗಮನಿಸಿದೆ. ನಗರಕ್ಕೆ ಸುವ್ಯವಸ್ಥಿತ ಒಳಚರಂಡಿ ವ್ಯವಸ್ಥೆಯ ಆಗತ್ಯತೆ ಕಂಡು ಬಂದಿದೆ ಎಂದರು.

ಎಡಿಬಿ ಯೋಜನೆಯಡಿ 2001ರಿಂದ 2014ರ ಅವಧಿಯಲ್ಲಿ 218 ಕೋಟಿ ರೂ.ಗಳ ಒಳಚರಂಡಿ ಕಾಮಗಾರಿ ನಡೆದಿದೆ. ಅಮೃತ್ 1 ಯೋಜನೆಯಡಿ 2018ರಿಂದ 150 ಕೋಟಿ ರೂ. ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, 8 ಕೋಟಿ ರೂ.ಗಳ ಕಾಮಗಾರಿ ಬಾಕಿ ಇದೆ. ಈ ನಡುವೆ ರಾಜ್ಯ ಸರಕಾರವು 2018ರಿಂದ 2026ರ ಅವಧಿಯಲ್ಲಿ ಒಳಚರಂಡಿ ವ್ಯವಸ್ಥೆಗೆ 80 ಕೋಟಿ ರೂ. ನೀಡಿದ್ದು, ಒಟ್ಟು 457 ಕೋಟಿ ರೂ.ಗಳನ್ನು ಒಳಚರಂಡಿಗಾಗಿ ವ್ಯಯಿಸಲಾಗಿದೆ. ಇದೀಗ ಸಮಗ್ರ ವ್ಯವಸ್ಥೆಗಾಗಿನ ಆಗತ್ಯತೆಯ ಬಗ್ಗೆಯೂ ಚರ್ಚೆ ನಡೆಸಿ ವರದಿಯಲ್ಲಿ ಉಲ್ಲೇಖಿಸಲಾಗುವುದು ಎಂದರು.

ಮನಪಾ ಆಯುಕ್ತ ರವಿಚಂದ್ರ ನಾಯಕ್ ಮಾತನಾಡಿ, 2003ನೇ ಸಾಲಿನಲ್ಲಿ ಎ.ಡಿ.ಬಿ ನೆರವಿನ ಕುಡ್ಸೆಂಪ್ ಯೋಜನೆ ಮಂಜೂರಾಗಿದ್ದು ಇದರಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳನ್ನು ಒಳಗೊಂಡಂತೆ 20 ಹೊಸ ವೆಟ್‌ವೆಲ್‌ಗಳು ಮತ್ತು 4 ಹೊಸ ಎಸ್‌ಟಿಪಿಗಳ ನಿರ್ಮಾಣವಾಗಿತ್ತು. ಸುಮಾರು 355 ಕಿ.ಮೀ ಕೊಳವೆ ಮಾರ್ಗ 14,815 ಲ್ಯಾಟರೈಟ್ ಸ್ಟೋನ್ ಮೆಶಿನ್ ಹೋಲ್‌ಗಳು ಈ ಯೋಜನೆಯಲ್ಲಿ ಒಳಗೊಂಡಿದ್ದು, ಯೋಜನೆಯ ಕಾಮಗಾರಿಗಳು 2014ರಲ್ಲಿ ಮುಕ್ತಾಯಗೊಂಡಿದೆ. 2014ರಿಂದ ಇಲ್ಲಿಯವರೆಗೆ ಮಂಗಳೂರು ಮಹಾನಗರಪಾಲಿಕೆಯು ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಿಂದ ಒಳಚರಂಡಿ ಜಾಲಗಳ ಅಭಿವೃದ್ಧಿ ಹಾಗೂ ಮೆಶಿನ್ ಹೋಲ್‌ಗಳ ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಮೂಲಕ ಪಾಲಿಕೆ ವ್ಯಾಪ್ತಿಯ ಒಟ್ಟು 850 ಕಿ.ಮೀ. ವ್ಯಾಪ್ತಿಯಲ್ಲಿ ಶೇ. 65ರಷ್ಟು ಮಾತ್ರವೇ ಯುಜಿಡಿ ವ್ಯವಸ್ಥೆ ಇದ್ದು, ಉಳಿದ ಶೇ. 35 ಹಾಗೂ ಈಗಾಗಲೇ ಶಿಥಿಲಾವಸ್ಥೆಯಲ್ಲಿರುವ ಹಳೆಯ ವ್ಯವಸ್ಥೆಗಳನ್ನು ಬದಲಾಯಿಸುವುದು ಸೇರಿದಂತೆ 2046ರವರೆಗಿನ ಅಂದಾಜು 8 ಲಕ್ಷ ಜನಸಂಖ್ಯೆಯ ಆಧಾರದಲ್ಲಿ ಸಮಗ್ರ ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ವಿವರ ನೀಡಿದರು.

> **ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯಡಿ ಈವರೆಗೆ ಆಗಿರುವ ಕಾಮಗಾರಿಯಲ್ಲಿನ ನ್ಯೂನತೆ, ಲೋಪದೋಷಗಳ ಬಗ್ಗೆ ಚರ್ಚೆ ನಡೆಸಿ ತಪ್ಪು ಎಸಗಿರುವುದು ಕಂಡು ಬಂದಲ್ಲಿ ಕ್ರಮಕ್ಕೂ ಸಮಿತಿ ವರದಿಯಲ್ಲಿ ಶಿಫಾರಸು ಮಾಡಲಾಗುವುದು.**
> ■ ಟಿ. ರಘುಮೂರ್ತಿ

ಸಮಿತಿಯ ಸದಸ್ಯ ಐವನ್ ಡಿಸೋಜ ಮಾತನಾಡಿ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯು ವಾರದಲ್ಲೊಂದು ದಿನ ನಡೆಸುವ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗುತ್ತದೆ. ಈ ದಿನ ಸಮಿತಿಯು ಸುರತ್ಕಲ್ ಖಂಡಿಗೆ ನದಿಗೆ ಭೇಟಿ ನೀಡಿದ ವೇಳೆ ಅಲ್ಲಿನ ಅವ್ಯವಸ್ಥೆ ವೀಕ್ಷಿಸಿ ದಿಗ್ಭ್ರಮೆ ಆಗಿದೆ. ಒಳಚರಂಡಿ ನೀರು ನದಿಗೆ ಸೇರುತ್ತಿರುವುದು ಕಂಡು ಬಂದಿದೆ. ಈ ಎಲ್ಲಾ ವಿಚಾರಗಳ ಬಗ್ಗೆ ಸಮಿತಿಯು ಚರ್ಚಿಸಿ ವರದಿಯನ್ನು ಸಲ್ಲಿಸಲಿದೆ. ನಗರಕ್ಕೆ ಸಮಗ್ರ ಒಳಚರಂಡಿ ಯೋಜನೆ ಬಗ್ಗೆ ಅಧಿವೇಶನದಲ್ಲೂ ಚರ್ಚಿಸಲಾಗುವುದು ಎಂದು ಹೇಳಿದರು.

ಸಮಿತಿ ಸದಸ್ಯರಾದ ಕಿಶೋರ್ ಕುಮಾರ್ ಪುತ್ತೂರು, ಜಿ.ಕೆ. ವೆಂಕಟಶಿವಾರೆಡ್ಡಿ, ಎಂ. ಕೃಷ್ಣಪ್ಪ, ಶಾಂತನಗೌಡ ಡಿ.ಜಿ., ಎಸ್. ಮುನಿರಾಜು, ಬಿ.ಎನ್. ಚಂದ್ರೇಗೌಡ, ಕಾರ್ಯದರ್ಶಿ ಹರೀಶ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಉಪಸ್ಥಿತರಿದ್ದರು.

---

## ಮೇ 30: 'ಸುಹಾನಾ ಸಫರ್-ಬಿನಾಕಾ ಗೀತ್ ಮಾಲಾ'

• **ಮಂಗಳೂರು:** ಲಯನ್ಸ್ ಪ್ರಕೋಷ್ಠ ಹಾಗೂ ಲಯನ್ಸ್ ಜಿಲ್ಲೆ 317 ಡಿ ವತಿಯಿಂದ ಲಯನ್ಸ್ ಕ್ಲಬ್ ಮಂಗಳೂರು ಸಹಯೋಗದೊಂದಿಗೆ 'ಸುಹಾನಾ ಸಫರ್ ಮತ್ತು ಬಿನಾಕಾ ಗೀತ್ ಮಾಲಾ' ಕಾರ್ಯಕ್ರಮ ಮೇ 30ರಂದು ಸಂಜೆ 5ರಿಂದ ರಾತ್ರಿ 8.45ರವರೆಗೆನಗರದಕದ್ರಿಸುಜೀರ್ ಸಿ.ವಿ. ನಾಯಕ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಂಜೆ 5ಕ್ಕೆ ದಾಯ್ಜಿವರ್ಲ್ಡ್ ಸಂಪಾದಕ ವಾಲ್ಟರ್ ನಂದಳಿಕೆ ಕಾರ್ಯಕ್ರಮ ಉದ್ಘಾಟಿಸುವರು. ಲಯನ್ಸ್ ಜಿಲ್ಲೆ 317 ಡಿ ಚುನಾಯಿತ ಪ್ರಥಮ ಉಪ ಜಿಲ್ಲಾ ಗವರ್ನರ್ ಎಂ.ಗೋವರ್ಧನ್ ಶೆಟ್ಟಿ, ಉದ್ಯಮಿ ಗಿರಿಧರ್ ಪ್ರಭು, ಯೆನೆಪೋಯ ಮೆಡಿಕಲ್ ಕಾಲೇಜು ಪ್ರಾಧ್ಯಾಪಕ ಡಾ. ಕುಂಬ್ಳೆ ಅನಂತ ಪ್ರಭು, ಪ್ರಸಾದ್ ನೇತ್ರಾಲಯ ವೈದ್ಯಕೀಯ ನಿರ್ದೇಶಕ ಡಾ. ಕೃಷ್ಣ ಪ್ರಸಾದ್ ಕೂಡ್ಲು, ಮಂಗಳೂರಿನ ಜಿಎಸ್‌ಬಿ ಸೇವಾ ಸಂಘ ಅಧ್ಯಕ್ಷ ಡಾ. ಕೆ. ಮೋಹನ್ ಪೈ, ಪ್ರಮುಖರಾದ ರಾಘವೇಂದ್ರ ಕುಡ್ವ, ಕುಂಬ್ಳೆ ವಿಘ್ನೇಶ್ ಪ್ರಭು ಭಾಗವಹಿಸುವರು ಎಂದು ಲಯನ್ಸ್ ಪ್ರಕೋಷ್ಠ ಜಿಲ್ಲಾಧ್ಯಕ್ಷ ಕುಂಬ್ಳೆ ನರಸಿಂಹ ಪ್ರಭು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಹಾನಾ ಸಫರ್ ಹಳೆಯ ಹಿಂದಿ ಸಿನೆಮಾ ಹಾಡುಗಳ ಸಂಗೀತ ಕಾರ್ಯಕ್ರಮವಾಗಿದೆ. ಬಿನಾಕಾ ಗೀತ್‌ಮಾಲಾ ರೇಡಿಯೋ ಸಿಲೋನ್‌ನಲ್ಲಿ ಪ್ರಸಾರವಾಗುತ್ತಿದ್ದ ಪ್ರಸಿದ್ಧ ಸಂಗೀತ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ 22 ಹಾಡುಗಳನ್ನು ಡಾ. ಕುಂಬ್ಳೆ ಅನಂತ ಪ್ರಭು, ಮಾಲಿನಿ ಕೇಶವ ಪ್ರಸಾದ್ ಅವರು ಇತರ ಪ್ರತಿಭಾವಂತ ಗಾಯಕರ ಜತೆ ಹಾಡಲಿದ್ದಾರೆ. ಈ ಸಂದರ್ಭ 100 ವರ್ಷಗಳನ್ನು ಪೂರೈಸಿದ ಸಿಟಿ ಬೇಕರಿ ಸಂಸ್ಥೆಯನ್ನು ಗೌರವಿಸಲಾಗುವುದು. ಕಾರ್ಯಕ್ರಮಕ್ಕೆ ಪಾಸ್ ಮೂಲಕ ಪ್ರವೇಶವಿದೆ ಎಂದರು.

ಲಯನ್ಸ್‌ಕ್ಲಬ್ ಮಂಗಳೂರು ಅಧ್ಯಕ್ಷ ಎಂ. ರಾಜೇಶ್ ಕಾಮತ್, ವೆಂಕಟೇಶ್ ಬಾಳಿಗಾ ಉಪಸ್ಥಿತರಿದ್ದರು.

---

## ಅಕ್ಷರ್ ಜೆ ಶೆಟ್ಟಿಗೆ ಬಾಲ ನಟ ಪ್ರಶಸ್ತಿ



• **ಮಂಗಳೂರು:** ಮುಲ್ಕಿ ಸುಂದರ್ ರಾಮ ಶೆಟ್ಟಿ ಕನ್ವೆನ್ಷನ್ ಸೆಂಟರ್ ನಲ್ಲಿ ಸ್ಕ್ಯಾಂಡಿಸ್ ಕಂಪನಿಯ ಆಶ್ರಯದಲ್ಲಿ ನಡೆದ ಕೋಸ್ಟಲ್ ಫಿಲಂ ಅವಾರ್ಡ್ಸ್ ನಲ್ಲಿ ರಾಕ್ ಸ್ಟಾರ್ ರೂಪೇಶ್ ಶೆಟ್ಟಿ ನಿರ್ದೇಶನ "ಜೈ" ತುಳು ಸಿನಿಮಾದಲ್ಲಿ ಅಕ್ಷರ್ ಜೆ ಶೆಟ್ಟಿಯ ಅಭಿನಯಕ್ಕಾಗಿ ಬಾಲನಟ ಪ್ರಶಸ್ತಿ ಲಭಿಸಿದೆ. ಇವರು ಸುರತ್ಕಲ್ ನಿವಾಸಿ ಜಗನ್ನಾಥ ಶೆಟ್ಟಿ ಬಾಳ ಹಾಗೂ ಚಿತ್ರಾ.ಜೆ. ಶೆಟ್ಟಿ ಇವರ ಸುಪುತ್ರರಾಗಿದ್ದಾರೆ.

---

### ಶ್ರೀ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪ್ರತಿಭಾ ಪುರಸ್ಕಾರ

## ವಿದ್ಯಾರ್ಥಿಗಳಿಂದ ಸಾಧನೆ: ಪೇಜಾವರ ಶ್ರೀ



• **ಕಡಬ:** ರಾಮಕುಂಜದ ಶ್ರೀ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪ್ರತಿಭಾ ಪುರಸ್ಕಾರ, ನೂತನ ಕಂಪ್ಯೂಟರ್ ಕೊಠಡಿ, ವಿಸ್ತೃತ ವಿದ್ಯಾರ್ಥಿ ನಿಲಯ ಹಾಗೂ ಶ್ರೀ ರಾಮಕುಂಜೇಶ್ವರ ವಿದ್ಯಾಲಯದಲ್ಲಿ ಸಿಬಿಎಸ್‌ಇ 9ನೇ ತರಗತಿಯ ಉದ್ಘಾಟನಾ ಸಮಾರಂಭ ನಡೆಯಿತು.

ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಉದ್ಘಾಟಿಸಿ ಆಶೀರ್ವಚನ ನೀಡಿ ಶ್ರೀ ರಾಮಕುಂಜೇಶ್ವರ ಕ್ಷೇತ್ರವೇ ಪಾವನವಾಗಿರುವಂತದ್ದು. ಇಲ್ಲಿನ ವಿದ್ಯಾಸಂಸ್ಥೆಯ ಪಕ್ಕದಲ್ಲೇ ದೇವಾಲಯವಿದೆ. ಗುರುಗಳಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಅವತಾರ ತಾಳಿದ ಕ್ಷೇತ್ರವಿದು. ಅವರು ಕಲಿತಿರುವ ಸಂಸ್ಥೆ ಇದು. ಇಂತಹ ವಿದ್ಯಾಸಂಸ್ಥೆಯಲ್ಲಿ ಅನೇಕ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ. ಈಗ ಇಲ್ಲಿ ಸೇರ್ಪಡೆಗೊಂಡ ವಿದ್ಯಾರ್ಥಿಗಳು ಇವರೆಲ್ಲರನ್ನೂ ಮೀರಿಸುವಂತೆ ಬೆಳೆಯ ಬೇಕು. ಸಂಸ್ಥೆ ಭೌತಿಕ ಬೆಳವಣಿಗೆಯೊಂದಿಗೆ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವೂ ಎತ್ತರಕ್ಕೆ ಏರಿದೆ ಎಂದರು.

ಮಂಗಳೂರು ದೇರಳಕಟ್ಟೆ ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ. ಅವಿನ್ ಆಳ್ವ ಮಾತನಾಡಿ, ಶಿಕ್ಷಣ ಕೇವಲ ಅಂಕಗಳಿಕೆಗೆ ಮಾತ್ರ ಸೀಮಿತವಾಗಬಾರದು. ಗುಣಮಟ್ಟ, ತಂತ್ರಜ್ಞಾನ, ಮೌಲ್ಯಗಳು, ಅವಕಾಶಗಳು ಸೇರಿಕೊಂಡಾಗ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿದೆ ಎಂದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಅಧಿಕಾರಿ ಮೈಸೂರಿನ ಅನಂತ ವೈದ್ಯ, ಸಂಸ್ಥೆಯ ಹಿರಿಯ ವಿದ್ಯಾರ್ಥಿ ಇಂದ್ರೇಶ್ ಸಿ. ಮಾತನಾಡಿದರು. ಶ್ರೀ ರಾಮಕುಂಜೇಶ್ವರ ವಿದ್ಯಾವರ್ಧಕ ಸಭಾದ ಕಾರ್ಯದರ್ಶಿ ರಾಧಾಕೃಷ್ಣ ಕುವೆಟ್ಟಾರು, ಸಂಚಾಲಕ ಟಿ. ನಾರಾಯಣ ಭಟ್, ಸದಸ್ಯರಾದ ಬಾಲಚಂದ್ರ ಮುಚ್ಚಿಂತ್ತಾಯ, ಹರಿನಾರಾಯಣ ಆಚಾರ್, ಶ್ರೀ ರಾಮಕುಂಜೇಶ್ವರ ವಿದ್ಯಾಲಯದ ಸಂಚಾಲಕ ಶಿವಪ್ರಸಾದ್ ಇಜ್ಜಾವು, ಪ.ಪೂ. ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಕೆ., ಶಾಲಾ ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷ ಗಿರೀಶ್ ಎ.ಪಿ., ಶ್ರೀ ರಾಮಕುಂಜೇಶ್ವರ ವಿದ್ಯಾಲಯದ ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷ ನೀರಜ್ ಕುಮಾರ್ ರೈ, ಆಡಳಿತಾಧಿಕಾರಿ ಆನಂದ ಎಸ್.ಟಿ., ಮೇನೇಜರ್ ರಮೇಶ್ ರೈ ಉಪಸ್ಥಿತರಿದ್ದರು.

ಶಾಲಾ ಕಾರ್ಯದರ್ಶಿ ಕೆ.ಸೇಸಪ್ಪ ರೈ ಸ್ವಾಗತಿಸಿ, ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಗಾಯತ್ರಿ ಯು.ಎನ್. ವಂದಿಸಿದರು. ಶಿಕ್ಷಕ ಕಿಶೋರ್ ಕುಮಾರ್ ನಿರ್ವಹಿಸಿದರು.

### ಪ್ರತಿಭಾ ಪುರಸ್ಕಾರ

**ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಸಾಧನೆ ಮಾಡಿದ 126 ವಿದ್ಯಾರ್ಥಿಗಳಿಗೆ ಸಮಾರಂಭದಲ್ಲಿ ಗೌರವಾರ್ಪಣೆ ನಡೆಯಿತು. 500ಕ್ಕಿಂತ ಹೆಚ್ಚು ಅಂಕ ಪಡೆದ ಹಾಗೂ ವಿಷಯವಾರು 100ಕ್ಕೆ 100 ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು. ಟಿವಿ ಕಾಮಿಡಿ ಶೋನಲ್ಲಿ ನಟಿಸುತ್ತಿರುವ ಶ್ರೀ ರಾಮಕುಂಜೇಶ್ವರ ಆಂಗ್ಲಮಾಧ್ಯಮ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿಯರಾದ ಆಶೀ ಗೌಡ ಸಂಪ್ಯಾಡಿ ಹಾಗೂ ಅದ್ವಿಕಾ ಬಾಕಿಲ ಅವರನ್ನು ಸಮ್ಮಾನಿಸಲಾಯಿತು.**

---



---

# ಮಹಿಳಾ ಸ್ವಾವಲಂಬನೆಯ ಹಾದಿ, ಕರ್ನಾಟಕದ ಮಾದರಿ

### ಕಲ್ಪವೃಕ್ಷವಾದ 'ಗೃಹಲಕ್ಷ್ಮಿ' | ಶೋಷಿತರ ಬದುಕಿಗೆ ಸ್ವಾಭಿಮಾನದ ಬೆಳಕು




ಗ್ಯಾರಂಟಿ ವಾರ್ತೆ

**ಬೆಂಗಳೂರು:** 'ನಾನು ತೃತೀಯಲಿಂಗಿಯಾಗಿರುವ ಕಾರಣ ಸಮಾಜ ನನ್ನನ್ನು ನೋಡುವ ದೃಷ್ಟಿಯೇ ಬೇರೆಯಾಗಿತ್ತು. ಇಷ್ಟು ವರ್ಷ ಕಷ್ಟ-ನೋವುಗಳನ್ನು ಸಹಿಸಿಕೊಂಡಿದ್ದ ನನಗೆ ಆಸರೆಯಾಗಿದ್ದೇ ಕರ್ನಾಟಕ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ. ಪ್ರತಿ ತಿಂಗಳು ಬರುತ್ತಿರುವ ಹಣದಿಂದಲೇ ನಾನೀಗ ಹಣ್ಣಿನ ಅಂಗಡಿ ಇಟ್ಟುಕೊಂಡು ಗೌರವದಿಂದ ಜೀವನ ನಡೆಸುತ್ತಿದ್ದೇನೆ. ಅಂದು ನನ್ನನ್ನು ಹೀಗಳೆಯುತ್ತಿದ್ದವರೆಲ್ಲಾ ಇಂದು ಪ್ರೀತಿಯಿಂದ 'ಅಕ್ಕಾ' ಎಂದು ಕರೆಯುತ್ತಿದ್ದಾರೆ...' ಇದು ಕಲಬುರಗಿಯ ಸಪ್ನಾ ಅವರ ಮನದಾಳದ ಮಾತುಗಳು.

ಗೃಹಲಕ್ಷ್ಮಿ

ಸಪ್ನಾರಂತಹ ಲಕ್ಷಾಂತರ ಶೋಷಿತ ಹಾಗೂ ಕೋಟ್ಯಂತರ ಗೃಹಿಣಿಯರ ಬದುಕಿನಲ್ಲಿ ಸ್ವಾಭಿಮಾನದ ಬೆಳಕು ಚೆಲ್ಲಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ. ಮಹಿಳೆ ಆರ್ಥಿಕವಾಗಿ ಸಬಲಳಾದರೆ ಇಡೀ ಕುಟುಂಬವೇ ಪ್ರಗತಿಯ ಹಾದಿಯಲ್ಲಿ ಸಾಗುತ್ತದೆ ಎಂಬ ಉದಾತ್ತ ಚಿಂತನೆಯೊಂದಿಗೆ ಜಾರಿಗೆ ತಂದ ಈ ಮಹತ್ವಾಕಾಂಕ್ಷಿ ಯೋಜನೆಗೆ 2023ರ ಆಗಸ್ಟ್ 30ರಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಐತಿಹಾಸಿಕ ಚಾಲನೆ ನೀಡಲಾಗಿತ್ತು. ಇಂದು ಈ ಯೋಜನೆ ಯಶಸ್ವಿಯಾಗಿ ಮೂರು ವರ್ಷ ಪೂರೈಸಿದ್ದು, ನಾಡಿನ ಮನೆ-ಮನಗಳ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.

## ಮಹಿಳೆಯರ ಆರ್ಥಿಕ ಸ್ವಾತಂತ್ರ್ಯವೇ ಸಮೃದ್ಧ ಸಮಾಜದ ಬುನಾದಿ



'ಗೃಹಲಕ್ಷ್ಮಿ' ಯೋಜನೆ ಕೇವಲ ರಾಜಕೀಯ ಭರವಸೆಯಲ್ಲ; ಅದು ನಮ್ಮ ತಾಯಂದಿರ ಘನತೆ ಮತ್ತು ಗೌರವದ ಸಂಕೇತ. ಮಹಿಳೆಯರ ಕೈಯಲ್ಲಿ ಹಣ ಓಡಾಡಿದರೆ ಇಡೀ ಕುಟುಂಬ ಸುಖವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ 1.24 ಕೋಟಿಗೂ ಅಧಿಕ ತಾಯಂದಿರ ಖಾತೆಗೆ ನಿರಂತರವಾಗಿ ಹಣ ತಲುಪುತ್ತಿರುವುದು ನಮ್ಮ ಸರ್ಕಾರದ ಪ್ರಾಮಾಣಿಕತೆಗೆ ಸಾಕ್ಷಿ.

– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

## ದೇಶದ ಇತಿಹಾಸದಲ್ಲೇ ಅತಿ ದೊಡ್ಡ ಕ್ರಾಂತಿ



'ಗೃಹಲಕ್ಷ್ಮಿ' ಯೋಜನೆಯು ಕೇವಲ ಕರ್ನಾಟಕದ ಹೆಮ್ಮೆಯಲ್ಲ, ಇಡೀ ದೇಶದ ಇತಿಹಾಸದಲ್ಲೇ ಮಹಿಳೆಯರಿಗಾಗಿ ಜಾರಿಯಾದ ಅತ್ಯಂತ ಬೃಹತ್ ನೇರ ನಗದು ವರ್ಗಾವಣೆ ಯೋಜನೆಯಾಗಿದೆ. ತಂತ್ರಜ್ಞಾನದ ಮೂಲಕ ಅತ್ಯಂತ ಪಾರದರ್ಶಕವಾಗಿ ಕೋಟ್ಯಂತರ ತಾಯಂದಿರನ್ನು ತಲುಪಿ, ಅವರ ಬದುಕಿಗೆ ಸ್ಥಿರವಾದ ಆರ್ಥಿಕ ಭದ್ರತೆ ನೀಡಲು ನಮ್ಮ ಸರ್ಕಾರ ಯಶಸ್ವಿಯಾಗಿದೆ.

– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

## ಮಾಸಿಕ ಗೌರವಧನ, ಮಹಿಳಾ ಸಬಲೀಕರಣದ ಹೊಸ ಆಯಾಮ

ಮನೆಯ ಯಜಮಾನಿ ತನಗೆ ಬೇಕಾದ ಸಣ್ಣಪುಟ್ಟ ಅಗತ್ಯಗಳಿಗೂ ಇತರರ ಮುಂದೆ ಕೈಚಾಚಬಾರದು ಎಂಬ ದೃಢ ಸಂಕಲ್ಪದೊಂದಿಗೆ ಈ ಯೋಜನೆಯನ್ನು ಆರಂಭಿಸಲಾಗಿದೆ. ಅರ್ಹ ಮಹಿಳೆಯರ ಖಾತೆಗೆ ಪ್ರತಿ ತಿಂಗಳು ₹2,000 ನಗದು ಹಣವನ್ನು ನೇರವಾಗಿ ಜಮೆ (DBT) ಮಾಡಲಾಗುತ್ತಿದೆ. ಇದು ಕೇವಲ ಉಚಿತ ಹಣವಲ್ಲ, ಬದಲಿಗೆ ದಿನವಿಡೀ ಸಂಸಾರಕ್ಕಾಗಿ ಶ್ರಮಿಸುವ ಗೃಹಿಣಿಯರ ತ್ಯಾಗಕ್ಕೆ ರಾಜ್ಯ ಸರ್ಕಾರ ನೀಡುತ್ತಿರುವ ಅತ್ಯುನ್ನತ 'ಗೌರವಧನ'ವಾಗಿದೆ. ಇದರಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶದ ಕೆಳ ಮತ್ತು ಮಧ್ಯಮ ವರ್ಗದ ಮಹಿಳೆಯರು ತಮ್ಮದೇ ಆದ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ.

## ಮೂರು ವರ್ಷಗಳಲ್ಲಿ ತಂದ ಆರ್ಥಿಕ ಕ್ರಾಂತಿ

ಪ್ರತಿ ವರ್ಷ ಬರೋಬ್ಬರಿ ₹24,000 ಪಡೆಯುತ್ತಿರುವ ಮಹಿಳೆಯರು, ಕಳೆದ ಮೂರು ವರ್ಷಗಳ ಅವಧಿಯಲ್ಲಿ ₹70,000 ಕ್ಕೂ ಅಧಿಕ ಆರ್ಥಿಕ ಆಸರೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಹಣ ಬಡ ಕುಟುಂಬಗಳ ಆರ್ಥಿಕ ಚಿತ್ರಣವನ್ನೇ ಬದಲಿಸಿದೆ. ನಾಡಿನ ತಾಯಂದಿರು ಈ ಹಣವನ್ನು ಅತ್ಯಂತ ಜವಾಬ್ದಾರಿಯುತವಾಗಿ ಬಳಸುತ್ತಿದ್ದಾರೆ. ಸಾವಿರಾರು ಮಹಿಳೆಯರು ಈ ನೆರವಲ್ಲಿ ಕುರಿ-ಕೋಳಿ ಸಾಕಾಣಿಕೆ, ಮಕ್ಕಳ ವಿದ್ಯಾಭ್ಯಾಸ, ಮನೆಗೆ ಎಲೆಕ್ಟ್ರಾನಿಕ್ ಉಪಕರಣ ಖರೀದಿ, ಗೃಹೋದ್ಯಮಗಳನ್ನು ಆರಂಭಿಸಿ ಸಬಲೀಕರಣದ ಜೊತೆಗೆ ಸ್ವಾವಲಂಬನೆಯ ಹಾದಿ ಹಿಡಿದಿದ್ದಾರೆ. ಗ್ರಾಮೀಣ ಭಾಗದ ಅನೇಕ ಮಹಿಳೆಯರು ಈ ಹಣವನ್ನು ಒಟ್ಟುಗೂಡಿಸಿ, ಸ್ವ-ಸಹಾಯ ಸಂಘಗಳಲ್ಲಿ ಸಣ್ಣಪುಟ್ಟ ಉಳಿತಾಯ ಮಾಡುತ್ತಿದ್ದಾರೆ.

## ಅಂಕಿ-ಅಂಶಗಳಲ್ಲಿ ಜಾಗತಿಕ ದಾಖಲೆ

ಇಡೀ ದೇಶದಲ್ಲೇ ಇನ್ನೊಂದು ಬೃಹತ್ ಸಂಖ್ಯೆಯ ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಹಾಗೂ ನೇರ ನಗದು ವರ್ಗಾವಣೆ ಮಾಡುವ ಮತ್ತೊಂದು ಯೋಜನೆ ಇಲ್ಲ. 1.24 ಕೋಟಿಗೂ ಅಧಿಕ ಗೃಹಿಣಿಯರು ಪ್ರತಿ ತಿಂಗಳು ನೇರ ನಗದು ವರ್ಗಾವಣೆ ಮೂಲಕ ₹2,000 ಪಡೆಯುತ್ತಿದ್ದು, ಈವರೆಗೆ ಸರ್ಕಾರ ಈ ಯೋಜನೆಗಾಗಿ ₹69,783 ಕೋಟಿ ಅನುದಾನ ನೀಡಿದೆ.

## ಸಬಲ ಮಹಿಳೆ, ಸಶಕ್ತ ಸಮಾಜ



ಯಾವ ದೇಶದಲ್ಲಿ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಾರೋ, ಆ ದೇಶ ಮಾತ್ರ ನಿಜವಾದ ಪ್ರಗತಿ ಸಾಧಿಸಲು ಸಾಧ್ಯ. 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆಯು ರಾಜ್ಯದ ಕೋಟ್ಯಂತರ ಕುಟುಂಬಗಳಿಗೆ ಬೆಲೆ ಏರಿಕೆಯ ಈ ದಿನಗಳಲ್ಲಿ ದೊಡ್ಡ ಆಸರೆಯಾಗಿ ನಿಂತಿದೆ. ಪ್ರತಿಯೊಂದು ಕುಟುಂಬವನ್ನು ಮುನ್ನಡೆಸುವ ಶಕ್ತಿ ಹೆಣ್ಣಿಗೆ ಇದೆ. ಆಕೆಯ ಕೈ ಬಲಪಡಿಸಿದರೆ ಇಡೀ ಕುಟುಂಬವೇ ಬಲವಾಗುತ್ತದೆ ಎಂಬ ನಂಬಿಕೆಯಿಂದ ನಮ್ಮ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ.

– ಲಕ್ಷ್ಮಿ ಹೆಬ್ಬಾಳ್ಕರ್,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು



ನನಗೆ ಅಪ್ಪ-ಅಮ್ಮ ಇಬ್ಬರೂ ಇಲ್ಲ... ತುತ್ತು ಅನ್ನಕ್ಕೂ ಪರದಾಡುವಂತ ಮೂವರು ಹೆಣ್ಣುಮಕ್ಕಳು ನಾವು, ಅದರಲ್ಲೂ ನಾನು ಅಂಗವಿಕಲೆ. ಬದುಕೇ ಮುಗಿದುಹೋಯಿತು ಅಂದುಕೊಂಡಾಗ ಕೈಹಿಡಿದಿದ್ದು ಇದೇ 'ಗೃಹಲಕ್ಷ್ಮಿ' ಹಣ. ಅದರಿಂದಲೇ ಬಟ್ಟೆ ವ್ಯಾಪಾರ ಶುರು ಮಾಡಿಕೊಂಡಿದ್ದೇನೆ. ಯಾರ ಮುಂದೆಯೂ ಕೈಚಾಚದೆ, ಸ್ವಾವಲಂಬಿಯಾಗಿ ದುಡಿದು ತಿನ್ನಬೇಕು ಅನ್ನೋ ನನ್ನ ಆಸೆಗೆ ಸಿದ್ದರಾಮಯ್ಯ ಸರ್ ಜೀವ ಕೊಟ್ಟಿದ್ದಾರೆ.

▸▸ ಜಯಮ್ಮ, ಬಳ್ಳಾರಿ



ಗಂಡ ತೀರಿಹೋಗಿ 8 ವರ್ಷವಾಯಿತು. ಮೂವರು ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಗಂಡು ದಿಕ್ಕಿಲ್ಲದ ಮನೆಯನ್ನು ನಿಭಾಯಿಸುವುದು ನರಕಯಾತನೆಯಾಗಿತ್ತು. ಕಾಫಿ ಸೀಸನ್‌ನಲ್ಲಿ ಕೂಲಿ ಸಿಕ್ಕರೆ ಮಾತ್ರ ಕೈಯಲ್ಲಿ ಹಣ. ಇಲ್ಲದಿದ್ದರೆ ವರ್ಷಪೂರ್ತಿ ಖಾಲಿಯೇ ಇರಬೇಕು. ಇಂದು 'ಗೃಹಲಕ್ಷ್ಮಿ'ಯ ಹಣವೇ ನಮ್ಮ ಉಸಿರಾಗಿದೆ. ಒಂದೊಮ್ಮೆ ಈ ಯೋಜನೆ ನಿಂತು ಹೋದರೆ ನಮ್ಮ ಬದುಕು ಏನಾಗಬಹುದು ಎಂದು ಊಹಿಸಿಕೊಳ್ಳಲೂ ಅಸಾಧ್ಯ, ಕಣ್ಣಲ್ಲಿ ನೀರು ಬರುತ್ತದೆ.

▸▸ ಲಕ್ಷ್ಮಿ, ಚಾಮರಾಜನಗರ



ನನಗೆ ನಾಟಿ ಕೋಳಿ ಸಾಕಾಣಿಕೆ ಆರಂಭಿಸುವ ಆಸೆ ಇತ್ತು. ವ್ಯಾಪಾರಕ್ಕಾಗಿ ಓಡಾಟ ಹಾಗೂ ಬಂಡವಾಳದ ಕೊರತೆಯಿಂದ ಕಂಗಾಲಾಗಿದ್ದೆ. 'ಗೃಹಲಕ್ಷ್ಮಿ' ಯೋಜನೆಯ ಹಣವನ್ನು ಕೂಡಿಟ್ಟು ನಾಟಿ ಕೋಳಿ ಫಾರ್ಮ್ ಶುರು ಮಾಡಿದೆ. ನಾನು ಈಗ ಯಾರ ಮೇಲೂ ಅವಲಂಬಿತಳಾಗದೇ ಬದುಕುತ್ತಿದ್ದೇನೆ.

▸▸ ಲೀಲಾವತಿ, ಶಿವಮೊಗ್ಗ



ನಾನು ಉಪ್ಪಿನಕಾಯಿ ವ್ಯಾಪಾರ ಮಾಡ್ತೀನಿ. ಆದರೆ, ವ್ಯಾಪಾರಕ್ಕಾಗಿ ಪ್ರತಿದಿನ ಕಿಲೋಮೀಟರ್‌ಗಟ್ಟಲೆ ನಡೆಯಬೇಕಿತ್ತು, ಕಾಲುಗಳು ದಣಿದು ಹೋಗುತ್ತಿದ್ದವು. ಇಂತಹ ಸಂದರ್ಭದಲ್ಲಿ ನನ್ನ ಕೈಹಿಡಿದಿದ್ದು 'ಗೃಹಲಕ್ಷ್ಮಿ' ಯೋಜನೆ. ಪ್ರತಿ ತಿಂಗಳು ಬರುತ್ತಿರುವ 2,000 ರೂಪಾಯಿಗಳನ್ನು ಕೂಡಿಟ್ಟು ನಾನು ಸ್ವಂತ ಸ್ಕೂಟರ್ ಖರೀದಿಸಿದ್ದೇನೆ. ಮನೆಮನೆಗೆ ಹೋಗಿ ಉಪ್ಪಿನಕಾಯಿ ಮಾರಲು ತುಂಬಾ ಸಹಾಯವಾಗಿದೆ.

▸▸ ಜೀನತ್, ಮಂಗಳೂರು



ಹೊಟ್ಟೆಯಲ್ಲಿದ್ದ ಮಗ ಐದು ತಿಂಗಳ ಕೂಸಾಗಿದ್ದಾಗಲೇ ಗಂಡ ನನ್ನನ್ನು ಬಿಟ್ಟು ಇನ್ನೊಂದು ಮದುವೆಯಾಗಿ ಹೋದ. ಸಾಲದ ಹೊರೆ ಹೆದರಿಸುತ್ತಿತ್ತು, ಸತ್ತು ಹೋಗೋಣ ಅನ್ನಿಸಿತ್ತು. ತಿನ್ನಲು ಅನ್ನವಿರಲಿಲ್ಲ, ಕರೆಂಟ್ ಬಿಲ್ ಕಟ್ಟದ್ದಕ್ಕೆ ಕನೆಕ್ಷನ್ ಕಟ್ ಮಾಡಿಕೊಂಡು ಹೋಗಿದ್ದರು. ಕತ್ತಲಲ್ಲಿ ಅತ್ತ ದಿನಗಳು ಅಪಾರ. ಇಂದು 'ಗೃಹಲಕ್ಷ್ಮಿ'ಯ ಹಣ ನನ್ನ ಬದುಕಿನ ಕತ್ತಲನ್ನು ದೂರ ಮಾಡಿದೆ. ಅಜ್ಜಿಯೊಬ್ಬರು ಕೊಟ್ಟ ಪುಟ್ಟ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು, ಅಂಗಡಿಗೆ ಸಾಮಾನು ತರಲು ಈ ಹಣ ನೆರವಾಗಿದೆ. ಸಿದ್ದರಾಮಯ್ಯ ಪುಣ್ಯದ ಕೆಲಸ ಮಾಡಿದ್ದಾರೆ.

▸▸ ರೇಣುಕಾ, ಕೊಪ್ಪಳ



ಮನೆಯಲ್ಲಿ ಕಡು ಬಡತನ. ಸಂಸಾರವನ್ನು ನಿಭಾಯಿಸೋದು ತುಂಬಾ ಕಷ್ಟ ಇತ್ತು. ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ ನನ್ನ ಬದುಕಿಗೆ ಆರ್ಥಿಕ ಶಕ್ತಿ ತುಂಬಿತು. ಪ್ರತಿ ತಿಂಗಳು ಬರುತ್ತಿದ್ದ ಹಣವನ್ನು ಕೂಡಿಟ್ಟು, ಅದರಿಂದ ಎರಡು ಮೇಕೆಗಳನ್ನು ಖರೀದಿಸಿ ಸಾಕಲು ಆರಂಭಿಸಿದೆ. ಸದ್ಯ ಅವುಗಳ ಸಂಖ್ಯೆ ಹೆಚ್ಚಾಗಿದ್ದು, ನಮ್ಮ ಕುಟುಂಬಕ್ಕೆ ಆದಾಯದ ಮೂಲವಾಗಿದೆ.

▸▸ ದೇವಮ್ಮ, ಯಾದಗಿರಿ

# ಸಿಪಿಎಂ ಬೆಂಬಲಿಗರಿಂದ ಇಡಿ ವಾಹನ ಧ್ವಂಸ

ಪುಟ ೨➡ **ಕಾಂಗ್ರೆಸ್-ಬಿಜೆಪಿ ನಂಟು ಎಂದ ಸಿಪಿಎಂ:** ದೇಶದಲ್ಲಿನ ವಿಪಕ್ಷ ನಾಯಕರನ್ನು ಗುರಿಯಾಗಿರಿಸಿ ಇಡಿ ದಾಳಿ ನಡೆಸುತ್ತಿದೆ ಎಂದು ಪಿಣರಾಯಿ ವಿಜಯನ್ ಆರೋಪಿಸಿದ್ದಾರೆ. ಇದೇ ವೇಳೆ, ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಬೆನ್ನಿಗೇ ಈ ದಾಳಿ ನಡೆದಿದ್ದು, ಇದರ ಹಿಂದೆ ಕಾಂಗ್ರೆಸ್-ಬಿಜೆಪಿ ನಂಟಿದೆ ಎಂದು ಸಿಪಿಎಂ ಆರೋಪಿಸಿದೆ. ಇಡಿ ದಾಳಿ ಬಗ್ಗೆ ಆಪ್ ನಾಯಕ ಅರವಿಂದ್ ಕೇಜ್ರಿವಾಲ್ ಕಿಡಿಕಾರಿದ್ದು, ಇದು ಬಿಜೆಪಿಯಿಂದ ಕೇಂದ್ರೀಯ ಏಜೆನ್ಸಿಗಳ ದುರ್ಬಳಕೆಗೆ ಮತ್ತೊಂದು ನಿದರ್ಶನ ಎಂದು ಟೀಕಿಸಿದ್ದಾರೆ.ಕಾಂಗ್ರೆಸ್‌ನ 'ನಿಷ್ಕ್ರಿಯತೆ'' ಬಗ್ಗೆ ದೂರಿರುವ ಅವರು ಇದು ಕಾಂಗ್ರೆಸ್-ಬಿಜೆಪಿ ನಂಟೆಂದು ಆರೋಪಿಸಿ 'ಪ್ರಜಾತಂತ್ರ ಅಪಾಯದಲ್ಲಿದೆ 'ಎಂದೂ ಸೇರಿಸಿದ್ದಾರೆ.

ಇನ್ನೊಬ್ಬ ಸಿಪಿಎಂ ನಾಯಕ ಹಾಗೂ ಮಾಜಿ ಸಚಿವ ಕೆ.ಟಿ.ಜಲೀಲ್ ಇದು ಕೇಂದ್ರ ಮತ್ತು ಕೇರಳ ಸರಕಾರಗಳು ಪಿಣರಾಯಿ ವಿರುದ್ಧ ಪೂರ್ಣ ಬಲ ಪ್ರಯೋಗಿಸಿವೆ ಎಂದು ಆರೋಪಿಸಿದ್ದಾರೆ.ಪಿಣರಾಯಿ ವಿಜಯನ್ ಮೋದಿ ಅವರ ರಾಜಕೀಯ ಸಿದ್ಧಾಂತವನ್ನು ವಿರೋಧಿಸಿದ್ದೇ ಈ ದಾಳಿಗೆ ಕಾರಣ ಎಂದೂ ಆತ ಹೇಳಿಕೊಂಡಿದ್ದಾರೆ. ಪಿಣರಾಯಿ ಅಳಿಯ ಮಹಮ್ಮದ್ ರಿಯಾಸ್ ಅವರು ಈ ದಾಳಿ ಸಂಘಪರಿವಾರದ ದಾಳಿ ಎಂದು ಹೇಳಿದ್ದು, ಇದಕ್ಕೆ ತಾನು ಬಗ್ಗುವುದಿಲ್ಲ ಎಂದಿದ್ದಾರೆ.

ಸಿಎಂಆರ್‌ಎಲ್ ಹಗರಣಕ್ಕೆ ಸಂಬಂಧಿಸಿ ಇಡಿ ತನಿಖೆಯನ್ನು ರದ್ದುಗೊಳಿಸಬೇಕೆಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಕೇರಳ ಹೈಕೋರ್ಟ್ ತಿರಸ್ಕರಿಸಿ ಜಾರಿ ನಿರ್ದೇಶನಾಲಯದ ತನಿಖೆಗೆ ಅನುಮತಿ ನೀಡಿದ ಬಳಿಕ ಈ ದಾಳಿ ನಡೆದಿದೆ. ಇದು ಅಕ್ರಮ ಹಣಕಾಸು ವರ್ಗಾವಣೆ ಕಾಯ್ದೆ(ಪಿಎಂಎಲ್‌ಎ)ಯಡಿ ಬರುವ ಪ್ರಕರಣವಾಗಿದ್ದು, 2025ರ ಏಪ್ರಿಲ್‌ನಲ್ಲೇ ಎಸ್‌ಎಫ್‌ಐಒ ದೂರು ದಾಖಲಿಸಿದ್ದನ್ನು ನೆನಪಿಸಿದ ಇಡಿ ತನಿಖೆಗೆ ಅನುಮತಿ ನೀಡುವಂತೆ ಕೋರಿತ್ತು. ಅಲ್ಲದೆ ಗಂಭೀರ ವಂಚನಾ ತನಿಖಾ ಕಚೇರಿ (ಎಸ್‌ಎಫ್‌ಐಒ)ನಡೆಸಿದ ತನಿಖೆಯಲ್ಲಿ ಅಕ್ರಮಗಳು ಕಂಡುಬಂದ ಹಿನ್ನೆಲೆಯಲ್ಲಿ ಇಡಿ ತನಿಖೆ ಆರಂಭಿಸಿತ್ತು. ಯಾವುದೇ ಸೇವೆ ಸಲ್ಲಿಸದೆಯೇ ಕೋಟ್ಯಂತರ ರೂ.ಗಳನ್ನು ಪಿಣರಾಯಿ ವಿಜಯನ್ ಪುತ್ರಿ ವೀಣಾ ವಿಜಯನ್ ಕಂಪನಿಗೆ ಸಿಎಂಆರ್‌ಎಲ್ ಹಣ ಪಾವತಿಸಿತ್ತು. ಈ ಹಣವನ್ನು ಯಾಕೆ ಸ್ವೀಕರಿಸಿದ್ದೀರಿ ಎಂಬ ಪ್ರಶ್ನೆಗೆ ಪಿಣರಾಯಿ ಪುತ್ರಿ ವೀಣಾ ಈವರೆಗೆ ತೃಪ್ತಿಕರ ಉತ್ತರ ನೀಡಿಲ್ಲ ಎಂಬುದನ್ನು ಇಡಿ ಎತ್ತಿತೋರಿದೆ.

**ತನಿಖೆ ತಡೆಯಲು ನಡೆಸಿದ ಯತ್ನಗಳಿಗೆ ಕೋರ್ಟ್ ತಿರಸ್ಕಾರ:** ಇದಕ್ಕೂ ಮುನ್ನ ಪಿಣರಾಯಿ ವಿಜಯನ್ ಪುತ್ರಿ ವೀಣಾ ವಿಜಯನ್ ಅವರ ಅಸ್ತಿತ್ವದಲ್ಲಿಲ್ಲದ ಕಂಪನಿ ಮತ್ತು ಸಿಎಂಆರ್‌ಎಲ್ ನಡುವಣ ಅಕ್ರಮ ವ್ಯವಹಾರಗಳ ಕುರಿತಂತೆ ತನಿಖೆ ನಡೆಸುವುದನ್ನು ತಡೆಯಲು ಸಿಎಂಆರ್‌ಎಲ್ ಕೇರಳ, ಕರ್ನಾಟಕ, ದಿಲ್ಲಿ ಸೇರಿದಂತೆ ವಿವಿಧ ನ್ಯಾಯಾಲಯಗಳಲ್ಲಿ ನಡೆಸಿದ ಪ್ರಯತ್ನಗಳು ವಿಫಲವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

**ಹಣ ಪಾವತಿ ಬಗ್ಗೆ ತೃಪ್ತಿಕರ ಉತ್ತರ ನೀಡದ ವೀಣಾ:** ಕೊಚ್ಚಿನ್ ಮಿನರಲ್ಸ್ ಅಂಡ್ ರುಟೈಲ್ ಲಿಮಿಟೆಡ್ ಕಂಪೆನಿಯಿಂದ ಯಾಕೆ ಹಣ ಸ್ವೀಕರಿಸಿದ್ದೀರಿ ಎಂಬ ರಿಜಿಸ್ಟ್ರಾರ್ ಆಫ್ ಕಂಪನೀಸಂ(ಆರ್‌ಒಎಸ್) 2023ರಲ್ಲೇ ವೀಣಾ ವಿಜಯನ್ ಅವರನ್ನು ಪ್ರಶ್ನಿಸಿದ್ದು ಅವರು ಈವರೆಗೂ ಈ ಬಗ್ಗೆ ತೃಪ್ತಿಕರ ಉತ್ತರ ನೀಡಿಲ್ಲ. ಹಾಗೆಯೇ ಪಿಣರಾಯಿ ವಿಜಯನ್ ಅವರ ಪಾತ್ರದ ಬಗ್ಗೆ ಕೇಳಿದ ಪ್ರಶ್ನೆಗೂ ಅವರು ಸೂಕ್ತ ಉತ್ತರ ನೀಡಿಲ್ಲ ಎಂಬುದನ್ನು ಮೂಲಗಳು ಬೊಟ್ಟು ಮಾಡಿವೆ.

**ಕಾಂಗ್ರೆಸ್ ಮೇಲೆ ಪಿಣರಾಯಿ ಕಿಡಿ:** ಕಾಂಗ್ರೆಸ್ ತನ್ನ ಸದಸ್ಯರನ್ನು ಇಡಿ ಗುರಿ ಮಾಡುವವರೆಗೂ ಮೌನವಾಗಿಯೇ ಉಳಿಯುತ್ತದೆ ಎಂದು ಕಿಡಿಕಾರಿರುವ ಪಿಣರಾಯಿ ವಿಜಯನ್, ಬೆಂಬಲಿಗರ ಪ್ರತಿಭಟನೆಯನ್ನು ಸಮರ್ಥಿಸಿಕೊಂಡರು. ಯಾವುದೇ ಸವಾಲನ್ನು ಎದುರಿಸುವುದೇ ನಮ್ಮ ಬಲ ಎಂದು ಹೇಳಿಕೊಂಡರು. ಇನ್ನು ಕೂಡ ಪಿಣರಾಯಿ ವಿಜಯನ್ ಅವರನ್ನು ತನಿಖಾ ಸಂಸ್ಥೆಗಳು ಯಾಕೆ ಬಂಧಿಸಿಲ್ಲ ಎಂದು ರಾಹುಲ್ ಗಾಂಧಿ ಪ್ರಶ್ನಿಸಿದ್ದನ್ನು ಉಲ್ಲೇಖಿಸಿದ ಸಿಪಿಎಂ, ಇದು ಕಾಂಗ್ರೆಸ್-ಬಿಜೆಪಿ ನಂಟಿನ ದಾಳಿ ಎಂದು ಕಿಡಿಕಾರಿದೆ.

ಆದರೆ ಸಿಪಿಎಂನ ಆರೋಪವನ್ನು ಬಿಜೆಪಿಯ ವಿ.ಮುರಳೀಧರನ್ ತಳ್ಳಿಹಾಕಿದ್ದು, ಇದು ನ್ಯಾಯಾಲಯಗಳು ನೀಡಿದ ಅನುಮತಿಯ ಮೇರೆಗೆ ನಡೆದ ತನಿಖೆಯಾಗಿದೆ. ಈ ತನಿಖೆಯನ್ನು ತಪ್ಪಿಸಲು ಕರ್ನಾಟಕ, ಕೇರಳ, ದಿಲ್ಲಿ ನ್ಯಾಯಾಲಯಗಳಲ್ಲಿ ಪ್ರಯತ್ನಿಸಿದರೂ ನ್ಯಾಯಾಲಯಗಳು ಇದಕ್ಕೆ ಮನ್ನಣೆ ನೀಡದೆ ತನಿಖೆಗೆ ಅನುಮತಿ ನೀಡಿವೆ ಎಂಬುದನ್ನು ಬೊಟ್ಟು ಮಾಡಿದರು. ಕೇರಳ ಗೃಹಸಚಿವ ರಮೇಶ್ ಚೆನ್ನಿತ್ತಲ ಅವರು ಕೂಡ ಸಿಪಿಎಂ ಆರೋಪವನ್ನು ತಳ್ಳಿಹಾಕಿದ್ದಾರೆ. ಸಿಪಿಎಂ ನಾಯಕರೇ ಈ ಹಿಂದೆ ಬಿಜೆಪಿ ಜತೆ ನಂಟು ಕುದುರಿಸಲು ಯತ್ನಿಸಿದ್ದರು ಎಂದ ಚೆನ್ನಿತ್ತಲ ಅವರು, ಈ ದಾಳಿಗೂ ಮುಖ್ಯಮಂತ್ರಿ ಮತ್ತು ಪ್ರಧಾನಿ ಮೋದಿ ಭೇಟಿಗೂ ಯಾವುದೇ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದರು.

### ಇಡಿ ಅಧಿಕಾರಿಗಳ ಕಾರು ಧ್ವಂಸ ಮಾಡಿದ ಸಿಪಿಎಂ ಬೆಂಬಲಿಗರು!

ಬುಧವಾರ ಇಡಿ ಅಧಿಕಾರಿಗಳು ತಿರುವನಂತಪುರಂನಲ್ಲಿ ಪಿಣರಾಯಿ ವಿಜಯನ್ ಅವರ ನಿವಾಸದಲ್ಲಿ ಶೋಧ ನಡೆಸಿ ಹೊರಬಂದು ಹೊರಡುವ ವೇಳೆ ಅವರ ಕಾರಿನ ಮೇಲೆ ಸಿಪಿಎಂ ಬೆಂಬಲಿಗರು ಹಿಂಸಾತ್ಮಕ ದಾಳಿ ನಡೆಸಿ ಕಾರನ್ನು ಹಾನಿಗೊಳಿಸಿದರು. ಈ ದುಷ್ಕರ್ಮಿಗಳ ದಾಳಿಯಿಂದ ಇಡಿ ಅಧಿಕಾರಿಗಳನ್ನು ರಕ್ಷಿಸಲು ಪೊಲೀಸರು ಹರಸಾಹಸಪಟ್ಟರು. ಪಿಣರಾಯಿ ಪರ ಘೋಷಣೆಗಳನ್ನು ಕೂಗಿ ಬೆಂಬಲಿಗರು ಇಡಿ ಅಧಿಕಾರಿಗಳ ಕಾರಿಗೆ ಭಾರೀ ಹಾನಿಯನ್ನುಂಟು ಮಾಡಿದರು.

### ರಾಹುಲ್ ಗಾಂಧಿಗೆ ಈಗ ತೃಪ್ತಿ ಆಗಿರಬಹುದು: ಪಿಣರಾಯಿ ವ್ಯಂಗ್ಯ

• **ತಿರುವನಂತಪುರಂ:** ಸಿಎಂಆರ್‌ಎಲ್ ಹಗರಣಕ್ಕೆ ಸಂಬಂಧಿಸಿ ತನ್ನ ನಿವಾಸ ಸೇರಿದಂತೆ ವಿವಿಧೆಡೆ ಇಡಿ ಅಧಿಕಾರಿಗಳು ದಾಳಿ ಮಾಡಿರುವ ಬಗ್ಗೆ ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಎಂ ನಾಯಕ ಪಿಣರಾಯಿ ವಿಜಯನ್ ಅವರು ಕಾಂಗ್ರೆಸ್ ವಿರುದ್ಧ ತೀವ್ರ ಕಿಡಿಕಾರಿದ್ದಾರೆ. ನನ್ನ ಮನೆ ಮೇಲೆ ಏಕೆ ದಾಳಿ ನಡೆಸಿಲ್ಲ? ನನ್ನನ್ನು ಏಕೆ ಇನ್ನೂ ಬಂಧಿಸಿಲ್ಲ ಎಂದು ಪದೇಪದೆ ಪ್ರಶ್ನಿಸಿದ್ದ ರಾಹುಲ್ ಗಾಂಧಿಗೆ ಈಗ ತೃಪ್ತಿಯಾಗಿರಬಹುದು ಎಂದು ಅವರು ವ್ಯಂಗ್ಯವಾಡಿದ್ದಾರೆ. ಬುಧವಾರ ಜಾರಿ ನಿರ್ದೇಶನಾಲಯ (ಇಡಿ) ಕೇರಳದ ಮಾಜಿ ಸಿಎಂ ಪಿಣರಾಯಿ ವಿಜಯನ್ ಅವರ ನಿವಾಸ, ಮಾಜಿ ಲೋಕೋಪಯೋಗಿ ಸಚಿವ ಮೊಹಮ್ಮದ್ ರಿಯಾಸ್ ನಿವಾಸ, ಸಿಎಂಆರ್‌ಎಲ್ ಅಧಿಕಾರಿಗಳ ನಿವಾಸ ಸೇರಿದಂತೆ 10 ಕಡೆ ನಡೆಸಿದ ಶೋಧ ಕಾರ್ಯಾಚರಣೆ ಹಿನ್ನೆಲೆಯಲ್ಲಿ ಪಿಣರಾಯಿ ಈ ರೀತಿ ರಾಹುಲ್ ಗಾಂಧಿ ವಿರುದ್ಧ ಕಿಡಿಕಾರಿದ್ದಾರೆ.

### ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮೋದಿ, ಷಾ ದೇಶ ದ್ರೋಹಿಗಳು– ರಾಹುಲ್ ಗಾಂಧಿ
– ಬ್ರಿಟಿಷರೂ ಈ ದೇಶವನ್ನು ಆಳುತ್ತಿದ್ದಾಗ ದೇಶಕ್ಕಾಗಿ ಹೋರಾಟ ಮಾಡುವವರನ್ನು ದೇಶ ದ್ರೋಹಿಗಳು ಅಂತಲೇ ಕರೆಯುತ್ತಿದ್ದರಂತೆ!

### ದಿನ ಭವಿಷ್ಯ

**ಮೇಷ** ಕಠಿಣ ದಿನ. ಆದರೂ ಮೌನವಾಗಿ ನಿಮ್ಮ ಕಾರ್ಯ ನಿರ್ವಹಿಸಿ. ಸಾಫಲ್ಯ ಸಿಗಲಿದೆ. ಆರ್ಥಿಕ ಬಿಕ್ಕಟ್ಟು ನಿವಾರಣೆ. ಕೌಟುಂಬಿಕ ಸಹಕಾರ.

**ವೃಷಭ** ಭರವಸೆಯ ದಿನ. ಶುಭ ಸಂಕೇತಗಳು ಕಾಣುತ್ತಿವೆ. ವೈಯಕ್ತಿಕ ಸಮಸ್ಯೆ ಪರಿಹಾರದ ದಾರಿ ತೋರಲಿದೆ. ಚಿಂತಿತ ಮನಸ್ಸಿಗೆ ಶಮನ.

**ಮಿಥುನ** ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ಪುಟ್ಟ ಪ್ರವಾಸಕ್ಕೆ ಸಿದ್ಧರಾಗಿ. ದೈನಂದಿನ ರಗಳೆ ಮರೆತು ವ್ಯವಹರಿಸಿ. ಬಂಧು ಜತೆಗಿನ ವಿರಸ ಮಾಯ.

**ಕಟಕ** ಹರ್ಷೋಲ್ಲಾಸ. ಕೌಟುಂಬಿಕ ಸಮಾಗಮ. ಹಣದ ಬಿಕ್ಕಟ್ಟು ಪರಿಹಾರ. ಖರ್ಚು ತುಸು ಹೆಚ್ಚಿದರೂ ಅದು ಕೌಟುಂಬಿಕ ಹರ್ಷ ಹೆಚ್ಚಿಸಲಿದೆ.

**ಸಿಂಹ** ನಿಮ್ಮ ವ್ಯವಹಾರದಲ್ಲಿ ಒಳ್ಳೆ ಅವಕಾಶ ಸಿಕ್ಕರೆ ತಿರಸ್ಕರಿಸಬೇಡಿ. ಹಿಂಜರಿಕೆ ತ್ಯಜಿಸಿ. ಆತ್ಮೀಯರ ಸಂಗದಲ್ಲಿ ಸಂತೋಷ ಕಾಣುವಿರಿ. ಧನಪ್ರಾಪ್ತಿ.

**ಕನ್ಯಾ** ನಿಮ್ಮ ಹಠಮಾರಿ ವರ್ತನೆ ಇತರರ ಟೀಕೆಗೆ ಗುರಿಯಾದೀತು. ವಿನಯ ಪ್ರದರ್ಶಿಸಿ. ಕೋಪದ ಕೈಗೆ ಬುದ್ಧಿ ಕೊಡಬೇಡಿ.

**ತುಲಾ** ವ್ಯವಹಾರದಲ್ಲಿ ಮುತುವರ್ಜಿ ವಹಿಸಿ. ನಿರ್ಲಕ್ಷ್ಯಕ್ಕೆ ಬೆಲೆ ತೆರಬೇಕಾದೀತು. ಖಾಸಗಿ ಬದುಕಿಗೆ ಹೆಚ್ಚಿನ ಗಮನ ಕೊಡಬೇಕಾದ ಪ್ರಸಂಗ.

**ವೃಶ್ಚಿಕ** ನಿಮ್ಮ ಕುರಿತಂತೆಯೆ ಸಿನಿಕತನ ಬೇಡ. ಎಲ್ಲವನ್ನು ಆಶಾವಾದದಿಂದ ಸ್ವೀಕರಿಸಿ. ಜಗದ ಜಂಜಡಕ್ಕೆ ಮನಸು ಹಾಳು ಮಾಡಿಕೊಳ್ಳದಿರಿ. ಒಳ್ಳೆ ಕಾಲ ಬರಲಿದೆ.

**ಧನು** ಶಾಂತ ಮನಸ್ಸು. ದುಗುಡ ನಿವಾರಣೆ. ಇತರರ ಮೇಲ್ಪಂಕ್ತಿ ಅನುಸರಿಸಿ. ಮುಖ್ಯ ಬೇಡಿಕೆಯೊಂದು ಇಂದು ಈಡೇರುವುದು.

**ಮಕರ** ಎಲ್ಲರ ನಡುವೆ ನಿಮ್ಮ ಕೆಲಸವೇನು ಎಂದು ಪರಾಮರ್ಶಿಸಿ. ಅದರಂತೆ ವರ್ತಿಸಿ. ಎಲ್ಲರಿಂದ ಬೇರೆಯಾಗಿ ನಿಲ್ಲಬೇಡಿ. ಹೊಂದಾಣಿಕೆ ಮುಖ್ಯ.

**ಕುಂಭ** ಆರ್ಥಿಕ ಉನ್ನತಿ. ಆಕಾಂಕ್ಷೆ ಈಡೇರಿಕೆ. ಆಪ್ತರ ಜತೆ ಭಾವುಕ ಸನ್ನಿವೇಶ ಎದುರಿಸುವಿರಿ. ಮನೋದಾರ್ಢ್ಯ ಪ್ರದರ್ಶಿಸಿ.

**ಮೀನ** ಒತ್ತಡಗಳಿಲ್ಲದ ವಿರಾಮ ದಿನ. ಬಂಧು ಬಳಗದ ಭೇಟಿ.ಮನೆಯಲ್ಲಿ ಹರ್ಷದ ವಾತಾವರಣ. ಖರೀದಿ ಹುಮ್ಮಸ್ಸು.

**ರಾಹುಕಾಲ: 1.30-3.00**
**ಗುಳಿಕಕಾಲ: 9.00-10.30**

ಅದೃಷ್ಟ ಸಂಖ್ಯೆ : 0,5,8,2

## ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್
# ಮುಂಚೂಣಿಯಲ್ಲಿದೆ ಎಐ

• **ಬೆಂಗಳೂರು:** ಹವಾಮಾನ ಬದಲಾವಣೆ, ನಗರೀಕರಣ, ಅಂತರ್ಜಲ ಕುಸಿತ ಹಾಗೂ ಮೂಲಸೌಕರ್ಯಗಳ ಮೇಲಿನ ಒತ್ತಡದಂತಹ ಭವಿಷ್ಯದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಕೃತಕ ಬುದ್ಧಿಮತ್ತೆ (ಎಐ) ಮತ್ತು ಡಿಜಿಟಲ್ ತಂತ್ರಜ್ಞಾನಗಳು ಪ್ರಮುಖ ಪಾತ್ರ ವಹಿಸುತ್ತಿದ್ದು, ಎಐ ಆಧಾರಿತ ನಗರ ಜಲ ಆಡಳಿತದಲ್ಲಿ ಕರ್ನಾಟಕವು ರಾಷ್ಟ್ರಮಟ್ಟದಲ್ಲಿ ಮುಂಚೂಣಿಯಲ್ಲಿದೆ ಎಂದು ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.

ಬುಧವಾರ ಖಾಸಗಿ ಹೋಟೆಲ್‌ನಲ್ಲಿ ಎಲೆಟ್ಸ್ ಮತ್ತು ಕೆಪಿಎಂಜಿ ಸಹಯೋಗದೊಂದಿಗೆ ಬೆಂಗಳೂರು ಜಲಮಂಡಳಿ ಆಯೋಜಿಸಿದ್ದ ರಾಷ್ಟ್ರೀಯ ಎಐ ಮತ್ತು 2026ರ ಡಿಜಿಟಲ್ ವಾಟರ್ ಶೃಂಗಸಭೆ ಉದ್ಘಾಟಿಸಿ ಮಾತನಾಡಿದರು. ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಮತ್ತು ಬೆಳಗಾವಿಯಂತಹ ನಗರಗಳ ಮೇಲೆ ನೀರಿನ ಒತ್ತಡ ಹೆಚ್ಚಾಗುತ್ತಿದೆ. ದಕ್ಷ, ಪಾರದರ್ಶಕ ಮತ್ತು ಜವಾಬ್ದಾರಿಯುತ ಸಾರ್ವಜನಿಕ ಸೇವೆಗಳನ್ನು ಖಚಿತಪಡಿಸಿಕೊಳ್ಳಲು ತಂತ್ರಜ್ಞಾನ ಆಧಾರಿತ ಇಂಟಲಿಜೆಂಟ್ ಆಡಳಿತ ವ್ಯವಸ್ಥೆಗಳು ಅತ್ಯಗತ್ಯವಾಗಿವೆ ತಿಳಿಸಿದರು.

ನಗರದ ನೀರು ಸರಬರಾಜು ಮಂಡಳಿಗಳಿಗೆ ಎಐ ಮತ್ತು ಡಿಜಿಟಲ್ ಇಂಟೆಲಿಜೆನ್ಸ್ ಇನ್ನು ಮುಂದೆ ಕೇವಲ ಐಚ್ಛಿಕ ಸಾಧನಗಳಾಗಿ ಉಳಿದಿಲ್ಲ. ನೈಜ-ಸಮಯದ ಮೇಲ್ವಿಚಾರಣೆ, ಪ್ರಿಡಿಕ್ಟಿವ್ ಅನಾಲಿಟಿಕ್ಸ್, ನೀರಿನ ಬೇಡಿಕೆಯ ಮುನ್ಸೂಚನೆ ಹಾಗೂ ದತ್ತಾಂಶ ಆಧಾರಿತ ಆಡಳಿತವು ಭವಿಷ್ಯದ ಜಲ ನಿರ್ವಹಣೆಯನ್ನು ನಿರ್ಧರಿಸಲಿವೆ ಎಂದರು.

ಕರ್ನಾಟಕವು ಈಗಾಗಲೇ ಎಐ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಿದೆ ಹಾಗೂ ಡಿಜಿಟಲ್ ಸಂಗ್ರಹಣೆ, ಡೇಟಾ ಹಂಚಿಕೆ ಮತ್ತು ಕಾರ್ಯಕ್ಷಮತೆ ಆಧಾರಿತ ಆಡಳಿತ ವ್ಯವಸ್ಥೆಗಳನ್ನು ಬೆಂಬಲಿಸುವ ನೀತಿ ಚೌಕಟ್ಟುಗಳನ್ನು ಪರಿಚಯಿಸಿದೆ ಎಂದು ಅವರು ಉಲ್ಲೇಖಿಸಿದರು. ಡಿಜಿಟಲ್ ರೂಪಾಂತರದ ಕೇಂದ್ರಬಿಂದುವಾಗಿ ಹೊಣೆಗಾರಿಕೆಗೂ ಆದ್ಯತೆ ನೀಡಬೇಕು ಕರೆ ನೀಡಿದರು.

ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾರೆಡ್ಡಿ, ಎಲೆಟ್ಸ್ ಟೆಕ್ನೋ ಮೀಡಿಯಾ ಸಂಸ್ಥೆಯ ಸಂಸ್ಥಾಪಕ ಹಾಗೂ ಸಿಇಒ ರವಿಗುಪ್ತಾ, ಜಾಗತಿಕ ಜಲ ತಜ್ಞರು, ಎಐ ಪರಿಣತರು, ನೀತಿ ನಿರೂಪಕರು, ತಂತ್ರಜ್ಞಾನ ಕಂಪನಿಗಳು, ನವೋದ್ಯಮಗಳು ಹಾಗೂ ದೇಶ ವಿದೇಶಗಳ ನಗರ ಆಡಳಿತ ವೃತ್ತಿಪರರು ಭಾಗವಹಿಸಿದ್ದರು.



> ಡಿಜಿಟಲ್ ರೂಪಾಂತರದ ಭಾಗವಾಗಿ ಜಲಮಂಡಳಿಯು ಈಗಾಗಲೇ ಏಷ್ಯಾದ ಅತಿದೊಡ್ಡ ನಗರ-ಮಟ್ಟದ ಸ್ಕಾಡಾ ವ್ಯವಸ್ಥೆ, ಜಿಐಎಸ್ ಆಧಾರಿತ ಮ್ಯಾಪಿಂಗ್, ಐಒಟಿ ಮೇಲ್ವಿಚಾರಣೆ, ಸ್ವಯಂಚಾಲಿತ ಸೋರಿಕೆ ಪತ್ತೆ ವ್ಯವಸ್ಥೆಗಳು ಮತ್ತು ಸ್ಮಾರ್ಟ್ ಮೀಟರಿಂಗ್ ಪ್ರಾಯೋಗಿಕ ಯೋಜನೆಗಳನ್ನು ಅಳವಡಿಸಿಕೊಂಡಿದೆ.
> ■ **ಡಾ. ರಾಮ್ ಪ್ರಸಾತ್ ಮನೋಹರ**, ಜಲಮಂಡಳಿ ಅಧ್ಯಕ್ಷ

> ಕೇವಲ ತಂತ್ರಜ್ಞಾನವೊಂದೇ ಬದಲಾವಣೆ ತರಲು ಸಾಧ್ಯವಿಲ್ಲ, ತಂತ್ರಜ್ಞಾನದ ಜೊತೆಗೆ ಸಂಸ್ಥೆಗಳು, ಸರ್ಕಾರದ ವ್ಯವಸ್ಥೆ ಹಾಗೂ ಮಾನವನ ಸಹಕಾರ ಬೆರೆತಾಗ ಮಾತ್ರವೇ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ವ್ಯವಸ್ಥೆಗಳು ಸಂಪೂರ್ಣ ಯಶಸ್ಸು ಕಾಣಲು ಸಾಧ್ಯ.
> ■ **ತುಷಾರ್ ಗಿರಿನಾಥ್**, ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

## ರಾಜ್ಯದ ರಾಜಕಾರಣ ಮೋಡದ ವಾತಾವರಣ

ಪುಟ ೨➡ ಇನ್ನೊಂದೆಡೆ ಕಾಂಗ್ರೆಸ್‌ನ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜೀನಾಮೆ ನೀಡಲಿದ್ದಾರೆ ಎನ್ನುವ ಮಹತ್ವದ ಸುಳಿವು ನೀಡಿದ್ದಾರೆ. ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಹೌದು, ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಆದರೆ, ರಾಜೀನಾಮೆ ನೀಡದಂತೆ ಮನವಿ ಮಾಡಿದ್ದೇನೆ ಎಂದು ಹೇಳಿದರು.

**ಕಾವೇರಿ ನಿವಾಸದಲ್ಲಿ ಬೆಳಗ್ಗೆಯಿಂದಲೇ ಚಟುವಟಿಕೆ:** ಇನ್ನು ಸಿಎಂ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಬುಧವಾರ ಬೆಳಗ್ಗೆಯಿಂದಲೇ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿದ್ದವು. ಬುಧವಾರ ವೇಳಾಪಟ್ಟಿಯಲ್ಲಿ ಅಧಿಕೃತವಾಗಿದ್ದ ಕಾರ್ಯಕ್ರಮಕ್ಕೆ ತೆರಳುವ ಮುಂಚೆ ಹಲವು ಹಿರಿಯ ಸಚಿವರು ಹಾಗೂ ಶಾಸಕರು ಸಿಎಂ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು. ಸಚಿವರಾದ ಡಾ. ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್, ಶಿವರಾಜ್ ತಂಗಡಗಿ, ಚಲುವರಾಯಸ್ವಾಮಿ, ಜಮೀರ್ ಅಹ್ಮದ್ ಖಾನ್, ಶಾಸಕರಾದ ಆರ್.ವಿ.ದೇಶಪಾಂಡೆ, ಅಶೋಕ್ ಪಟ್ಟಣ್ ಸೇರಿದಂತೆ ಹಲವರು ಸಿಎಂ ಅವರನ್ನು ಭೇಟಿ ಮಾಡಿ ರಾಜಕೀಯ ಬೆಳವಣಿಗಗಳ ಕುರಿತು ಚರ್ಚೆ ನಡೆಸಿದರು.

**ರಾಜೀನಾಮೆ ವಿಚಾರ ಅಪ್ರಸ್ತುತ- ಸಚಿವರ ಹೇಳಿಕೆ:** ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎನ್ನುವ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವರಾದ ಎಂ.ಬಿ.ಪಾಟೀಲ್ ಹಾಗೂ ಡಾ.ಜಿ.ಪರಮೇಶ್ವರ್ ಅವರು ಸಿಎಂ ಬದಲಾವಣೆ ವಿಚಾರ ಈಗ ಅಪ್ರಸ್ತುತ ಹಾಗೂ ಊಹಾಪೋಹ ಎಂದಿದ್ದಾರೆ.

ನಾಯಕತ್ವ ವಿಚಾರವಾಗಿ ಯಾವುದೇ ಮಾತುಕತೆ ಆಗಿಲ್ಲ. ಈ ವಿಚಾರವಾಗಿ ಕೆ.ಸಿ. ವೇಣುಗೋಪಾಲ್ ಹೇಳಿದ್ದೇ ಅಂತಿಮ. ಸಿಎಂ ಸಿದ್ದರಾಮಯ್ಯ ರಾಜೀನಾಮೆ ಅನ್ನೋದೆಲ್ಲಾ ಊಹಾಪೋಹ ಎಂದು ಸಚಿವ ಎಂ.ಬಿ.ಪಾಟೀಲ್ ಸ್ಪಷ್ಟಪಡಿಸಿದರು. ಸಿಎಂ ಭೇಟಿಗೂ ಮುನ್ನ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ರಾಜೀನಾಮೆ ಪ್ರಶ್ನೆಯೇ ಉದ್ಭವಿಸಲ್ಲ. ಮಂಗಳವಾರ ರಾಜ್ಯಸಭೆ ಹಾಗೂ ವಿಧಾನಪರಿಷತ್ ಚುನಾವಣೆ ಬಗ್ಗೆ ಮಾತ್ರ ಚರ್ಚೆಯಾಗಿದೆ.

### ಡಿಕೆಸು ನಿವಾಸದಲ್ಲೂ ರಾಜಕೀಯ ಚಟುವಟಿಕೆ

ಇನ್ನು ಡಿ.ಕೆ.ಶಿವಕುಮಾರ್ ಸಿಎಂ ಆಗಲಿದ್ದಾರೆ ಎನ್ನುವ ಸುದ್ದಿಯ ಹಿನ್ನೆಲೆಯಲ್ಲಿ ಮಾಜಿ ಸಂಸದ ಹಾಗೂ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಅವರ ಸದಾಶಿವನಗರ ನಿವಾಸದಲ್ಲಿ ಬುಧವಾರ ಇಡೀ ದಿನ ರಾಜಕೀಯ ಚುವಟಿಕೆಗಳು ನಡೆದವು. ಹೊಸದಿಲ್ಲಿಯಿಂದ ಡಿ.ಕೆ.ಸುರೇಶ್ ಆಗಮಿಸುತ್ತಿದ್ದಂತೆಯೆ ಅವರ ನಿವಾಸಕ್ಕೆ ಆಗಮಿಸಿದ ಶಾಸಕರಾದ ಇಕ್ಬಾಲ್ ಹುಸೇನ್, ರಂಗನಾಥ್, ವಿಧಾನ ಪರಿಷತ್ ಸದಸ್ಯ ರವಿ ಅವರು ಭೇಟಿ ನೀಡಿ ಚರ್ಚೆ ನಡೆಸಿದರು.

## ಇಸಿಗೆ ಯೆಸ್ ಸರ್

ಪುಟ ೨➡ ನಾಗರಿಕತ್ವ ಕುರಿತ ಅಂತಿಮ ನಿರ್ಧಾರ ಕೇಂದ್ರ ಸರ್ಕಾರದ ಪ್ರಾಧಿಕಾರವೇ ತೆಗೆದುಕೊಳ್ಳಬೇಕು ಎಂದೂ ಆದೇಶಿಸಿದೆ.

**ಮತದಾರರ ಪಟ್ಟಿಯ ಶುದ್ಧತೆ ಪ್ರಜಾಪ್ರಭುತ್ವದ ಆತ್ಮ:** 124 ಪುಟಗಳ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಕಳೆದ ಎರಡು ದಶಕಗಳಿಂದ ಸಮಗ್ರ ಪರಿಷ್ಕರಣೆ ಮಾಡದಿರುವುದು, ಭಾರೀ ಪ್ರಮಾಣದ ವಲಸೆ, ನಗರೀಕರಣ, ಪುನರಾವರ್ತಿತ ಹೆಸರುಗಳು ಹಾಗೂ ದೋಷಪೂರಿತ ದಾಖಲೆಗಳು ಎಸ್‌ಐಆರ್ ಅಗತ್ಯವನ್ನೇ ತೋರಿಸುತ್ತವೆ ಎಂದು ಅಭಿಪ್ರಾಯಪಟ್ಟಿದೆ. ಚುನಾವಣೆ ಎಂದರೆ ಕೇವಲ ಮತದಾನ ಯಂತ್ರದ ಪ್ರಕ್ರಿಯೆಯಲ್ಲ ಎಂದಿರುವ ಅದು, ಅದರ ವಿಶ್ವಾಸಾರ್ಹತೆ ಮತದಾರರ ಪಟ್ಟಿಯ ಶುದ್ಧತೆಯ ಮೇಲೆ ನಿಂತಿದೆ ಎಂಬ ಅಭಿಪ್ರಾಯ ನೀಡಿದೆ.

**ರಾಜಕೀಯ ವಾಕ್ಸಮರ:** ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ಎಸ್‌ಐಆರ್ ಕಾನೂನುಬದ್ಧ ಹಾಗೂ ಸಂವಿಧಾನಬದ್ಧ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ಭಾರತೀಯ ಮತದಾರರಿಗಿಂತ ಅಕ್ರಮ ನುಸುಳುಕೋರರ ಪರ ನಿಂತಿದ್ದರು ಎಂದು ವಾಗ್ದಾಳಿ ನಡೆಸಿದರು. ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ಈ ತೀರ್ಪು ಇಸಿಯ ತಾರತಮ್ಯಪೂರ್ಣ ಕ್ರಮಗಳಿಗೆ ಮುದ್ರೆ ಒತ್ತಿದಂತಾಗಿದೆ. ಲಕ್ಷಾಂತರ ಮಾನ್ಯ ಮತದಾರರು ಮತಹಕ್ಕು ಕಳೆದುಕೊಂಡಿದ್ದಾರೆ ಎಂದು ಆಕ್ಷೇಪಿಸಿದರು. ಅರ್ಜಿದಾರರಲ್ಲಿ ಒಬ್ಬರಾಗಿದ್ದ ಯೋಗೇಂದ್ರ ಯಾದವ್, ಇಂದಿನಿಂದ ಯಾರು ಮತ ಹಾಕಬೇಕು, ಯಾರು ಹಾಕಬಾರದು ಎಂಬುದನ್ನು ಬಿಜೆಪಿ ನಿರ್ಧರಿಸುವ ಪರಿಸ್ಥಿತಿ ಬಂದಿದೆ ಎಂದು ಕಿಡಿಕಾರಿದರು.

### ಈ ತೀರ್ಪು ಮಹತ್ವ ಏಕೆ?

ಪುಟ ೨➡ ಇದರಿಂದ ಚುನಾವಣಾ ಆಯೋಗದ ಅಧಿಕಾರ ಮತ್ತಷ್ಟು ಬಲಗೊಂಡಿದ್ದು, 2027ರೊಳಗೆ ಹಲವು ರಾಜ್ಯಗಳಲ್ಲಿ ಇದೇ ಮಾದರಿಯ ಎಸ್‌ಐಆರ್ ಅಭಿಯಾನಗಳು ಆರಂಭವಾಗುವ ಸಾಧ್ಯತೆಗಳ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆ ಶುರುವಾಗಿದೆ.

### ಟೈಮ್‌ಲೈನ್

| | |
|---|---|
| ಜೂ. 26, 2025 | ಬಿಹಾರದಲ್ಲಿ ಎಸ್‌ಐಆರ್ ಘೋಷಣೆ |
| ಜು. 5 | ಎಡಿಆರ್‌ನಿಂದ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ |
| ಜು. 28 | ವಿಚಾರಣೆ ಆರಂಭ |
| ಆ.1 | ಬಿಹಾರದಲ್ಲಿ 65 ಲಕ್ಷ ಹೆಸರುಗಳ ತೆಗೆದ ಬಗ್ಗೆ ಘೋಷಣೆ |
| ಸೆ.30 | ಅಂತಿಮ ಮತದಾರರ ಪಟ್ಟಿ ಪ್ರಕಟ |
| ಅ. 7 | ಹೊರಗುಳಿದ ಮತದಾರರ ವಿವರ ಕೇಳಿದ ಎಸ್‌ಸಿ |
| ಅ. 9 | ಕಾನೂನು ನೆರವಿಗೆ ಸೂಚನೆ |
| ಜ. 29, 2026 | ತೀರ್ಪು ಕಾಯ್ದಿರಿಸಿದ ಸುಪ್ರೀಂ |
| ಮೇ 27, 2026 | ಎಸ್‌ಐಆರ್ ಮಾನ್ಯ ಎಂದು ಸುಪ್ರೀಂ ತೀರ್ಪು |

### ಆಯೋಗದ ವಾದ

ಚುನಾವಣಾ ಆಯೋಗವು ತನ್ನ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿತು. ಕಳೆದ ಎರಡು ದಶಕಗಳಿಂದ ಸಮಗ್ರ ಪರಿಶೀಲನೆ ನಡೆದಿರದ ಕಾರಣ, ಮತದಾರರ ಪಟ್ಟಿಯಲ್ಲಿ ಪುನರಾವರ್ತಿತ ಹೆಸರುಗಳು, ವಲಸೆಗೊಂಡವರ ದಾಖಲೆಗಳು ಮತ್ತು ದೋಷಪೂರಿತ ನಮೂದುಗಳು ಹೆಚ್ಚಾಗಿವೆ ಎಂದು ಆಯೋಗ ಹೇಳಿತು. ಸಂವಿಧಾನದ 324ನೇ ವಿಧಿ ಹಾಗೂ ಜನಪ್ರತಿನಿಧಿಗಳ ಕಾಯ್ದೆಯ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ವಿಶೇಷ ಪರಿಷ್ಕರಣೆ ನಡೆಸುವ ಅಧಿಕಾರ ಇದೆ ಎಂದು ಇಸಿ ವಾದಿಸಿತು. ಇದು ನಾಗರಿಕತ್ವ ತೀರ್ಮಾನಿಸುವ ಪ್ರಕ್ರಿಯೆಯಲ್ಲ, ಕೇವಲ ಮತದಾರರ ಅರ್ಹತೆ ಪರಿಶೀಲನೆಯಷ್ಟೇ ಎಂದು ಸ್ಪಷ್ಟಪಡಿಸಿತು. ಇದೇ ವೇಳೆ, ಯಾರನ್ನೂ ಏಕಪಕ್ಷೀಯವಾಗಿ ಪಟ್ಟಿಯಿಂದ ತೆಗೆದುಹಾಕಿಲ್ಲ. ಕರಡು ಪಟ್ಟಿ ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಸಾಕಷ್ಟು ಪ್ರಕ್ರಿಯಾತ್ಮಕ ಸುರಕ್ಷತಾ ಕ್ರಮಗಳಿವೆ ಎಂದು ಚುನಾವಣಾ ಆಯೋಗ ಕೋರ್ಟ್‌ಗೆ ತಿಳಿಸಿತು.

### ಅರ್ಜಿದಾರರ ವಾದ

ಬಿಹಾರದಲ್ಲಿ ಚುನಾವಣಾ ಆಯೋಗ ಕೈಗೊಂಡಿದ್ದ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಕ್ರಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಅರ್ಜಿದಾರರು, ಇದು ಸಾಮಾನ್ಯ ಮತದಾರರ ಪರಿಶೀಲನೆ ಅಲ್ಲ, ಬದಲಿಗೆ ಪರೋಕ್ಷ ಎನ್‌ಆರ್‌ಸಿ ಪ್ರಕ್ರಿಯೆಯಾಗಿದೆ ಎಂದು ವಾದಿಸಿದರು. ಮತದಾರರ ಪಟ್ಟಿಗೆ ಹೆಸರು ಸೇರಿಸಲು ಅಥವಾ ಉಳಿಸಿಕೊಳ್ಳಲು ಜನರಿಂದ ದಾಖಲೆಗಳನ್ನು ಕೇಳುವ ಮೂಲಕ ಚುನಾವಣಾ ಆಯೋಗ ತನ್ನ ಅಧಿಕಾರ ಮೀರಿದೆ ಎಂದು ಅವರು ಆಕ್ಷೇಪಿಸಿದರು. ಅರ್ಜಿದಾರರ ಪರ ವಕೀಲರು, ನಾಗರಿಕತ್ವ ನಿರ್ಧಾರ ಮಾಡುವ ಅಧಿಕಾರ ಕೇವಲ ಕೇಂದ್ರ ಸರ್ಕಾರದ ಪ್ರಾಧಿಕಾರಕ್ಕಷ್ಟೇ ಇದೆ. ಚುನಾವಣಾ ಆಯೋಗವು ಮತದಾರರ ಪಟ್ಟಿಯ ನಿರ್ವಹಣೆ ಮಾಡಬಹುದೇ ಹೊರತು ವ್ಯಕ್ತಿಯ ನಾಗರಿಕತ್ವ ಪ್ರಶ್ನಿಸಲು ಸಾಧ್ಯವಿಲ್ಲ ಎಂದು ವಾದಿಸಿದರು. ಅದರ ಜತೆಗೆ, ಬಡವರು, ವಲಸೆ ಕಾರ್ಮಿಕರು, ಗ್ರಾಮೀಣ ಪ್ರದೇಶದ ಜನರು ಮತ್ತು ದಾಖಲೆಗಳ ಕೊರತೆಯಿರುವವರು ಅನ್ಯಾಯವಾಗಿ ಮತದಾರರ ಪಟ್ಟಿಯಿಂದ ಹೊರಗುಳಿಯುವ ಅಪಾಯ ಎದುರಿಸಿದ್ದಾರೆ ಎಂದೂ ಅರ್ಜಿದಾರರು ಹೇಳಿದರು. ಲಕ್ಷಾಂತರ ಹೆಸರುಗಳನ್ನು ಕೈಬಿಟ್ಟಿರುವುದು ಮತಹಕ್ಕಿನ ಮೇಲೆ ದೊಡ್ಡ ಹೊಡೆತ ಎಂದು ಅವರು ಕೋರ್ಟ್ ಗಮನಕ್ಕೆ ತಂದರು.

## ಜೂನ್ 4ರಿಂದ ಆಫ್ರಿಕಾ ಚೀತಾ ವೀಕ್ಷಣೆ ಅವಕಾಶ

ಪುಟ ೨➡ ವನ್ಯಜೀವಿ ವಿನಿಮಯ ಕಾರ್ಯಕ್ರಮದ ಭಾಗವಾಗಿ ಏ.18ರ ಮಧ್ಯರಾತ್ರಿ ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಬಂದ ಈ ಹೊಸ ಅತಿಥಿಗಳನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಬರಮಾಡಿಕೊಂಡಿದ್ದರು. ಈ ಚೀತಾಗಳು ಬನ್ನೇರುಘಟ್ಟ ಪರಿಸರ, ವಾತಾವರಣ, ಹವಾಮಾನಕ್ಕೆ ಹೊಂದಿಕೊಳ್ಳಲು ಪ್ರತ್ಯೇಕವಾಗಿ ಇಡಲಾಗಿತ್ತು. ಅಲ್ಲದೆ ಇವುಗಳ ಆರೋಗ್ಯದ ಬಗ್ಗೆ ಸತತ ನಿಗಾ ಇಡಲಾಗಿತ್ತು. ಪ್ರಸ್ತುತ ಚೀತಾಗಳು ಸಂಪೂರ್ಣ ಆರೋಗ್ಯವಾಗಿವೆ ಎಂಬ ಮಾಹಿತಿ ಪಡೆದ ಸಚಿವರು, ಜೂನ್ ಮೊದಲ ವಾರದಲ್ಲಿ ಪ್ರವಾಸಿಗರಿಗೆ ಚೀತಾ ನೋಡಲು ಅವಕಾಶ ಕಲ್ಪಿಸುವಂತೆ ನಿರ್ದೇಶಿಸಿದರು.

## ಜಾತಿಗಣತಿ ವರದಿ ಸ್ವೀಕರಿಸಿದ ಸಿಎಂ

ಪುಟ ೨➡ ಅದರಂತೆ ಈ ವರದಿಯನ್ನು ಬುಧವಾರ ಮುಖ್ಯಮಂತ್ರಿಗಳು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಶಿವರಾಜ್ ತಂಗಡಗಿ, ಎಚ್.ಸಿ. ಮಹದೇವಪ್ಪ, ಎಂ.ಸಿ. ಸುಧಾಕರ್, ಸತೀಶ್ ಜಾರಕಿಹೊಳಿ, ಚಲುವರಾಯಸ್ವಾಮಿ ಸೇರಿದಂತೆ ಆಯೋಗದ ಸದಸ್ಯರು, ವಿಶೇಷ ಸಲಹೆಗಾರರು ಮತ್ತು ಇತರೆ ತಜ್ಞರು ಉಪಸ್ಥಿತರಿದ್ದರು.



> ಎಲ್ಲ ವರದಿ ಸಂಪೂರ್ಣ ಆಗಿದ್ದು, ವಿವರ ಹೇಳಲು ಆಗಲ್ಲ. ಒಬಿಸಿ ಸಂಬಂಧ ವರದಿ ಸಂಪೂರ್ಣ ಆಗಿದೆ. ವರದಿ ಭಾಷಾಂತರ ಆಗಲು ಸಮಯ ಬೇಕಿತ್ತು. ಮೇ 30ಕ್ಕೆ ವರದಿ ನೀಡಲು ನಿರ್ಧರಿಸಲಾಗಿತ್ತು. 29ಕ್ಕೆ ರಜೆ ಇರುವುದರಿಂದ ಇವತ್ತು ಸಲ್ಲಿಕೆ ಮಾಡಲಾಯಿತು. 300 ಪುಟಗಳಷ್ಟಿದೆ ವರದಿ.
> ■ **ಮಧುಸೂದನ್ ಆರ್. ನಾಯಕ್,** ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ

## ಹೆಚ್ಚೆಚ್ಚು ನೀರು ಕುಡಿಯಿರಿ

ಪುಟ ೨➡ ಇದು ಅವರು ಚೇತರಿಸಲು ನೆರವಾಗುತ್ತೆ. ಮಿತಿಮೀರಿದ ತಾಪಮಾನವು ವಿಶೇಷವಾಗಿ ಮಕ್ಕಳು, ಹಿರಿಯ ನಾಗರಿಕರು ಮತ್ತು ಹೊರಾಂಗಣಗಳಲ್ಲಿ ದುಡಿಯುವವರ ಮೇಲೆ ಬೇಗ ಪ್ರತಿಕೂಲ ಪರಿಣಾಮ ಬೀರುತ್ತೆ. ಈ ಎಚ್ಚರಿಕೆಗಳನ್ನು ಕಡೆಗಣಿಸುವುದು ಅಪಾಯಕಾರಿ. ಕಡೆಗಣನೆಯಿಂದ ಹೀಟ್‌ಸ್ಟ್ರೋಕ್‌ನಂತಹ ಸಮಸ್ಯೆಗಳಾಗುವುದು. ಇಂತಹ ಹವಾಮಾನದಲ್ಲಿ ಸಕಾಲಿಕ ಕಾಳಜಿ ಮತ್ತು ಜಾಗ್ರತೆ ತೀರಾ ಅಗತ್ಯವೆಂದು ಪ್ರಧಾನಿ ಮೋದಿ ಪೋಸ್ಟ್‌ನಲ್ಲಿ ಸಲಹೆಯಿತ್ತಿದ್ದಾರೆ.

## ಎಸ್‌ಐಆರ್ ಸಭೆಗೆ ಗೈರಾಗಿದ್ದ ಕೈ ಪದಾಧಿಕಾರಿಗಳ ತಲೆದಂಡ

• **ಬೆಂಗಳೂರು:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಕುರಿತು ರಾಜ್ಯ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಸಭೆಗೆ ಗೈರು ಹಾಜರಾಗಿದ್ದ ಕೆಪಿಸಿಸಿಯ 32 ಪದಾಧಿಕಾರಿಗಳ ತಲೆದಂಡ ಆಗಿದೆ. ಸಭೆಗೆ ಗೈರುಹಾಜರಾಗಿದ್ದ ಕೆ. ಶಿವಮೂರ್ತಿ, ಬಾಬುರಾವ್ ಜಾಗೀರದಾರ, ಎಂ.ಸಿ ವೇಣುಗೋಪಾಲ್ ಸೇರಿದಂತೆ ಮೂವರು ಕೆಪಿಸಿಸಿ ಉಪಾಧ್ಯಕ್ಷರು ಹಾಗೂ ನಿಗಮ-ಮಂಡಳಿಗಳ ಉಪಾಧ್ಯಕ್ಷರಾದ ನಿಕೇತ್ ರಾಜ್ ಮೌರ್ಯ, ಇಸ್ಮಾಯಿಲ್ ತಮಟಗಾರ ಒಳಗೊಂಡಂತೆ 29 ಪ್ರಧಾನ ಕಾರ್ಯದರ್ಶಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆಯಾ ಹುದ್ದೆಗಳಿಂದ ಬಿಡುಗಡೆಗೊಳಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ಮೇ 25ರಂದು ಬೆಂಗಳೂರಿನಲ್ಲಿ ಕರೆಯಲಾಗಿದ್ದ ಕೆಪಿಸಿಸಿ ಸಭೆಗೆ ಈ ಪದಾಧಿಕಾರಿಗಳು ಗೈರುಹಾಜರಾಗಿದ್ದರು. ಈ ಹಿನ್ನೆಲೆಯಲ್ಲಿ ಎಐಸಿಸಿ ಸೂಚನೆ ಮೇರೆಗೆ ಶಿಸ್ತು ಕ್ರಮ ಕೈಗೊಳ್ಳಲಾಗಿದ್ದು, ಮುಂಬರುವ ದಿನಗಳಲ್ಲಿ ಪಕ್ಷದಲ್ಲಿ ಸೂಕ್ತ ಜವಾಬ್ದಾರಿಗಳನ್ನು ನೀಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

# ಮೋದಿ ಭೇಟಿಯಾದ ತ.ನಾಡು ಸಿಎಂ ವಿಜಯ್

ಪುಟ ೨➡ ಈ ಹಿನ್ನೆಲೆಯಲ್ಲಿ, ಕಾವೇರಿ ನೀರಿಗೆ ಸಂಬಂಧಿಸಿ ತಮಿಳುನಾಡಿನ ಹಕ್ಕುಗಳನ್ನು ಕಾಪಾಡಬೇಕು. ತಮಿಳುನಾಡಿನ ಸಮ್ಮತಿ ವಿನಾ ಮೇಕೆದಾಟು ಯೋಜನೆಗೆ ಮಂಜೂರಾತಿ ಕೊಡಕೂಡದೆಂದು ಪ್ರಧಾನಿ ಮೋದಿ ಅವರನ್ನು ವಿನಂತಿಸಿದರು. ರಾಜ್ಯದಲ್ಲಿ ಈಗಾಗಲೆ ಪ್ರಗತಿಯಲ್ಲಿರುವ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರದ ವಿಸ್ತೃತ ನೆರವು ಕೋರಿದ ಸಿಎಂ ವಿಜಯ್, ನಗರ ಮೂಲಸೌಕರ್ಯ, ಸಾರಿಗೆ ಮತ್ತು ಕೈಗಾರಿಕಾ ವಿಸ್ತರಣೆಗೆ ಸಂಬಂಧಪಟ್ಟ ಯೋಜನೆಗಳಿಗೆ ತುರ್ತು ಮಂಜೂರಾತಿ ನೀಡುವಂತೆ ಪ್ರಧಾನಿ ಅವರಲ್ಲಿ ಮನವಿ ಮಾಡಿದರು.

**ಮೇಕೆದಾಟು ಚರ್ಚೆಯ ಪ್ರಧಾನ ವಿಚಾರ:** ಮೇಕೆದಾಟು ವಿವಾದವನ್ನು ಕೇಂದ್ರೀಕರಿಸಿ ಸಿಎಂ ವಿಜಯ್ ಪ್ರಧಾನಿ ಜತೆ ಚರ್ಚಿಸಿದರು. ಮೇಕೆದಾಟಿನಲ್ಲಿ ಕಾವೇರಿ ನದಿಗೆ ಸಮತೋಲಿತ ಜಲಾಶಯ ನಿರ್ಮಿಸುವ ಕರ್ನಾಟಕದ ಪ್ರಸ್ತಾವವನ್ನು ತ.ನಾಡು ಖಡಾಖಂಡಿತ ನೆಲೆಯಲ್ಲಿ ವಿರೋಧಿಸಿದೆ. ಇದರಿಂದ ಕಾವೇರಿ ನದಿ ನೀರಲ್ಲಿ ತಮಿಳ್ನಾಡಿನ ಪಾಲಿಗೆ ತೊಂದರೆಯಾಗಲಿದೆ ಎಂಬುದು ತಮಿಳ್ನಾಡಿನ ಆರೋಪ. ಈ ವಿಚಾರವು ಹಲವು ವರ್ಷಗಳಿಂದ ಉಭಯ ರಾಜ್ಯಗಳ ನಡುವೆ ರಾಜಕೀಯವಾಗಿ ಸೂಕ್ಷ್ಮ ಸಂಗತಿಯಾಗಿ ಬಾಕಿಯುಳಿದಿದೆ.

ಮೇಕೆದಾಟು ಯೋಜನೆಗೆ ಮಂಜೂರಾತಿ ನೀಡಕೂಡದು ಮತ್ತು ಕಾವೇರಿ ನ್ಯಾಯಮಂಡಳಿಯಲ್ಲಿ ತಮಿಳ್ನಾಡಿನ ಜಲ ಹಕ್ಕುಗಳನ್ನು ರಕ್ಷಿಸಬೇಕೆಂದು ಸಿಎಂ ವಿಜಯ್ ಈ ಹಿಂದೆಯೇ ಪ್ರಧಾನಿ ಮೋದಿ ಅವರನ್ನು ಪತ್ರಮುಖೇನ ವಿನಂತಿಸಿದ್ದರು.

ಪ್ರಧಾನಿ ಮೋದಿ ಜತೆ ಮಾತುಕತೆ ಬಳಿಕ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ, ರಾಜ್ಯದ ವಿವಿಧ ಯೋಜನೆಗಳಿಗೆ ಹಣಕಾಸು ಬೆಂಬಲವನ್ನು ಸಿಎಂ ವಿಜಯ್ ಕೋರಲಿದ್ದಾರೆ. ತಮಿಳ್ನಾಡಿಗೆ ಕೇಂದ್ರದಿಂದ ಅತ್ಯಧಿಕ ಅನುದಾನ ಮಂಜೂರು ಮಾಡುವಂತೆಯೂ ಸಚಿವರನ್ನು ಆಗ್ರಹಿಸಲಿದ್ದಾರೆ.

## ಎಎಂಸಿಎ ಉತ್ಪಾದನೆಗೆ ಚಾಲನೆ

• **ಹೊಸದಿಲ್ಲಿ:** ಭಾರತದ ರಕ್ಷಣಾ ಸಚಿವಾಲಯ, ದೇಶದಲ್ಲಿ ಎರಡನೇ ಯುದ್ಧ ವಿಮಾನ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಸ್ಥಾಪಿಸಲು ಶಾರ್ಟ್ ಲಿಸ್ಟ್ ಮಾಡಲಾದ ಮೂರು ಖಾಸಗಿ ಸಂಸ್ಥೆಗಳಿಗೆ ಸುಧಾರಿತ ಮಧ್ಯಮ ಯುದ್ಧ ವಿಮಾನ (ಎಎಂಸಿಎ) ಕಾರ್ಯಕ್ರಮದ ಪ್ರಸ್ತಾವನೆಗಾಗಿ ವಿನಂತಿ (ಆರ್‌ಎಫ್‌ಪಿ) ಕಳುಹಿಸಿದೆ. ಪ್ರಸ್ತಾವನೆಗಾಗಿ ವಿನಂತಿಯನ್ನು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್, ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಜತೆಗಿನ ಲಾರ್ಸೆನ್ ಅಂಡ್ ಟೂಬ್ರೊ ಒಕ್ಕೂಟ ಮತ್ತು ಭಾರತ್ ಫೋರ್ಜ್ ಮತ್ತು ಬಿಇಎಂಎಲ್ ಒಳಗೊಂಡಿರುವ ಮತ್ತೊಂದು ಸಂಸ್ಥೆ ನೀಡಲಾಗಿದೆ. ಈ ಬೆಳವಣಿಗೆಯಿಂದ, ಸಾಂಪ್ರದಾಯಿಕವಾಗಿ ದೇಶೀಯ ಯುದ್ಧ ವಿಮಾನ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಹೊರತುಪಡಿಸಿ ಅದೇ ರೀತಿಯ ಮಿಲಿಟರಿ ವಿಮಾನಯಾನ ಉತ್ಪಾದನಾ ಘಟಕ ವನ್ನು ಸ್ಥಾಪಿಸಿದಂತಾಗುತ್ತದೆ. ಈ ಕ್ರಮ ದೀರ್ಘಾವಧಿಯ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸುತ್ತದೆ ಮತ್ತು ಯುದ್ಧ ವಿಮಾನಗಳ ಒಟ್ಟಾರೆ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ.

## ದತ್ತಿ ಮಸೂದೆಗೆ ರಾಜ್ಯಪಾಲರ ಅಂಕಿತ

• **ಬೆಂಗಳೂರು:** ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಅನುಮೋದನೆಗೊಂಡಿದ್ದ ಹಿಂದು ಧಾರ್ಮಿಕ ದತ್ತಿ ಇಲಾಖೆಯ ಮಸೂದೆಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಅನುಮೋದನೆ ನೀಡಿದ್ದಾರೆ.

ಸರ್ಕಾರದ ನಿಯಂತ್ರಣದಲ್ಲಿರುವ ಹಿಂದು ಧಾರ್ಮಿಕ ದತ್ತಿ ಇಲಾಖೆಯ ಪ್ರಮುಖ ದೇವಾಲಯಗಳಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ದೇವಾಲಯಗಳ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರವು ದೇವಾಲಯಗಳ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದೆ.

ನಂತರ ಆಯಾ ದೇವಾಲಯಗಳಲ್ಲಿ ದಿನನಿತ್ಯ ಮತ್ತು ಹಬ್ಬ ಹರಿದಿನ, ರಥೋತ್ಸವಗಳಂತಹ ವಿಶೇಷ ದಿನಗಳಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪೂಜಾ ವಿಧಿ ವಿಧಾನಗಳು, ರೂಢಿ ಸಂಪ್ರದಾಯಗಳು, ಪದ್ಧತಿಗಳ ಆಚರಣೆಯಲ್ಲಿ ಯಾವುದೇ ಲೋಪವಾಗದಂತೆ ನಿರ್ವಹಿಸಲು ಪರಿಣಾಮಕಾರಿಯಾಗಿ ಆಡಳಿತ ನಿರ್ವಹಿಸುವ ದೃಷ್ಟಿಯಿಂದ ಸರ್ಕಾರವು ಈ ಪ್ರಾಧಿಕಾರಗಳಲ್ಲಿ ಮುಜರಾಯಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅನುಭವವುಳ್ಳ ಗ್ರೂಪ್ ಎ ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ಕಾರ್ಯದರ್ಶಿಗಳ ಹುದ್ದೆಗೆ ನಿಯುಕ್ತಿಗೊಳಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿದೆ.

ಅದರಂತೆ ಪ್ರಸ್ತುತ ರಚಿಸಲಾಗಿರುವ ಪ್ರಾಧಿಕಾರಿಗಳಾದ ಶ್ರೀ ಚಾಮುಂಡೇಶ್ವರಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಸವದತ್ತಿ ಶ್ರೀ ರೇಣುಕಾ ಯಲ್ಲಮ್ಮ ದೇವಾಲಯದ ಪ್ರಾಧಿಕಾರ, ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಕೊಪ್ಪಳ ಹುಲಿಗಿ ಶ್ರೀ ಹುಲಿಗಮ್ಮ ದೇವಾಲಯದ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ.

ಈ ದೇವಾಲಯಗಳ ಅಭಿವೃದ್ಧಿ ಪ್ರಾಧಿಕಾರಗಳ ಕಾನೂನು (ತಿದ್ದುಪಡಿ) ವಿಧೇಯಕ 2025ರ ತಿದ್ದುಪಡಿ ವಿಧೇಯಕಗಳನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ ಎರಡು ಸದನಗಳಲ್ಲಿ ಮಂಡನೆ ಮಾಡಿ ಅಂಗೀಕರಿಸಲ್ಪಟ್ಟ ಈ ವಿಧೇಯಕಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

# ಸಾಧನೆ ಕನ್ನಡಿಗರಿಗೆ ಅರ್ಪಣೆ: ಸಿಎಂ

**ಬೆಂಗಳೂರು:** ರಾಜ್ಯದ ಜನರ ಆಶೀರ್ವಾದದೊಂದಿಗೆ ನಾವು ಅಧಿಕಾರಕ್ಕೆ ಬಂದು ಮೂರು ವರ್ಷಗಳು ಪೂರೈಸಿರುವ ಈ ಸಾರ್ಥಕ ಸಂದರ್ಭದಲ್ಲಿ ನಮ್ಮ ಸರ್ಕಾರದ ಎಲ್ಲಾ ಸಾಧನೆಗಳ ಶ್ರೇಯವನ್ನು ಪ್ರತಿಯೊಬ್ಬ ಕನ್ನಡಿಗನಿಗೂ ಅರ್ಪಿಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ಹಂಚಿಕೊಂಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಪ್ರತಿ ಮಾತಿಗೂ ಬದ್ಧರಾಗಿ ನಡೆಯುವ ಮೂಲಕ ನುಡಿದಂತೆ ನಡೆದ ಹೆಮ್ಮೆ ನಮಗಿದೆ. 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಪ್ರತಿ ಮನೆಗೂ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದಿದ್ದಾರೆ. ಯಾರೂ ಹಸಿವಿನಿಂದ ಮಲಗಬಾರದು ಎಂಬ ಸಂಕಲ್ಪದೊಂದಿಗೆ ಜಾರಿಗೊಂಡ ಅನ್ನಭಾಗ್ಯ ಯೋಜನೆಯು ಕೋಟ್ಯಂತರ ಕುಟುಂಬಗಳಿಗೆ ಪೌಷ್ಟಿಕ ಆಹಾರದ ಭದ್ರತೆ ನೀಡುವ ಮೂಲಕ ಆರೋಗ್ಯವಂತ ಸಮಾಜಕ್ಕೆ ಆಧಾರವಾಗಿದೆ. ಅನ್ನಭಾಗ್ಯ ಯೋಜನೆಯಡಿ ಉಚಿತ ಆಹಾರಧಾನ್ಯ ವಿತರಿಸಲು ಈವರೆಗೆ 18,897 ಕೋಟಿ ರೂ. ವ್ಯಯಿಸಲಾಗಿದ್ದು, 4.26 ಕೋಟಿ ಪಡಿತರದಾರರು ಮೂರು ಹೊತ್ತು ನೆಮ್ಮದಿಯಿಂದ ಊಟ ಮಾಡುತ್ತಿದ್ದಾರೆ ಎಂದಿದ್ದಾರೆ.

ವಿದ್ಯುತ್ ಬಿಲ್ ಹೊರೆಯಿಂದ ಕಂಗೆಟ್ಟಿದ್ದ ಜನರಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡಿ, ನೆಮ್ಮದಿಯ ಬದುಕು ಕಲ್ಪಿಸುವ ಬದ್ಧತೆಯೊಂದಿಗೆ ನಾವು ಜಾರಿಗೆ ತಂದ ಗೃಹಜ್ಯೋತಿ ಯೋಜನೆ ಇಂದು ನಾಡಿನ ಪ್ರತಿ ಮನೆಯನ್ನು ಬೆಳಗುತ್ತಿದೆ. ಈ ಯೋಜನೆಯಡಿ ರಾಜ್ಯದ ಒಟ್ಟು 1.64 ಕೋಟಿ ಕುಟುಂಬಗಳಿಗೆ ಮಾಸಿಕ ಗರಿಷ್ಠ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಈವರೆಗೆ ಯೋಜನೆಗಾಗಿ 26,115 ಕೋಟಿ ರೂ. ಅನುದಾನವನ್ನು ವ್ಯಯಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬರೆದುಕೊಂಡಿದ್ದಾರೆ. ನಾಡಿನ ಪ್ರತಿಯೊಬ್ಬ ಮಹಿಳೆಯೂ ಕೂಡ ಆರ್ಥಿಕ ಸಂಕಷ್ಟಗಳಿಂದ ಹೊರಬಂದು ಸುಖ ಸಂತೋಷದಿಂದ ಜೀವನ ಸಾಗಿಸುವಂತಾಗಬೇಕು ಎಂಬ ಉದ್ದೇಶವನ್ನು ಗೃಹಲಕ್ಷ್ಮಿ ಯೋಜನೆಯು ಈಡೇರಿಸುತ್ತಿದೆ. ಸುಮಾರು 1.24 ಕೋಟಿ ಫಲಾನುಭವಿಗಳ ಖಾತೆಗೆ ಪ್ರತಿ ತಿಂಗಳು 2,000 ರೂ. ಧನಸಹಾಯ ವರ್ಗಾವಣೆ ಮಾಡಲಾಗುತ್ತಿದ್ದು, ಈ ಯೋಜನೆಗಾಗಿ ಈವರೆಗೆ 74,216 ಕೋಟಿ ರೂ. ವ್ಯಯಿಸಲಾಗಿದೆ ಎಂದು ಎಕ್ಸ್‌ನಲ್ಲಿ ಸಿದ್ದರಾಮಯ್ಯ ಮಾಹಿತಿ ನೀಡಿದ್ದಾರೆ.

ನೆಹರು ಪುಣ್ಯಸ್ಮರಣೆ



ಮಾಜಿ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರ ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಅವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಸಚಿವ ಎಚ್.ಸಿ. ಮಹದೇವಪ್ಪ ಉಪಸ್ಥಿತರಿದ್ದರು.

# ಜೂ.9ರವರೆಗೆ ನ್ಯಾಯಾಂಗ ಬಂಧನ

**ಬೆಳಗಾವಿ:** ಬಹುಕೋಟಿ ಆರೋಪಿ ಶಿವಾನಂದ ನೀಲಣ್ಣವರ ಇದೀಗ ಮಹತ್ವದ ಘಟ್ಟಕ್ಕೆ ತಲಪಿದ್ದು ಸಿಐಡಿ ಅಧಿಕಾರಿಗಳ ಹತ್ತು ದಿನಗಳ ಪೊಲೀಸ್ ಕಸ್ಟಡಿ ಅಂತ್ಯವಾದ ಬಳಿಕ ಬುಧವಾರ ಬೆಳಗಾವಿಯ ನ್ಯಾಯಾಲಯಕ್ಕೆ ಸಿಐಡಿ ಅಧಿಕಾರಿಗಳು ವಿಚಾರಣೆಗೆ ಹಾಜರು ಪಡಿಸಿದ್ದರು.

ನ್ಯಾಯಾಲಯವು ವಿಚಾರಣೆಯನ್ನು ಒಳಪಡಿಸಿದ ಬಳಿಕ ಮತ್ತೆ ಶಿವಾನಂದ ನೀಲಣ್ಣವರ್ 14 ದಿನಗಳ ಕಾಲ ನ್ಯಾಯಾಂಗ ಬಂಧನ ನೀಡಿ ಕೋರ್ಟ್ ಆದೇಶ ಹೊರಡಿಸಿದೆ. ಜಾಮೀನು ಅರ್ಜಿಗೆ ನೀಲಣ್ಣನವರ್ ಪರ ವಕೀಲರು ಅರ್ಜಿ ಸಲ್ಲಿಕೆ ಮುಂದಾಗಿದ್ದು, ಮತ್ತೊಂದೆಡೆ ಪ್ರಕರಣ ತನಿಖೆಯಲ್ಲಿ ಸಿಐಡಿ ಅಧಿಕಾರಿಗಳು ಎರಡು ಪ್ರತ್ಯೇಕ ಹೂಡಿಕೆದಾರರ ಲಿಸ್ಟ್ ಸಿದ್ಧಪಡಿಸಿದ್ದಾರೆ ಎನ್ನಲಾಗುತ್ತಿದೆ.



2ನೇ ಹೆಚ್ಚುವರಿ ಸತ್ರ ನ್ಯಾಯಾಲಯಕ್ಕೆ ಸಿಐಡಿ ಅಧಿಕಾರಿಗಳು ಹಾಜರುಪಡಿಸಿದರು. ಸಿಐಡಿ ಡಿವೈಎಸ್ಪಿ ಕೋದಂಡರಾಮ್ ನೇತೃತ್ವದ ತಂಡ ವೈದ್ಯಕೀಯ ತಪಾಸಣೆ ಬಳಿಕ ಕೋರ್ಟ್ ಕರೆ ತಂದಿತ್ತು. ಪ್ರಕರಣದ ತನಿಖೆ ಇನ್ನೂ ಮುಂದುವರಿದಿರುವ ಹಿನ್ನೆಲೆ ಸಿಐಡಿ ಅಧಿಕಾರಿಗಳು ನ್ಯಾಯಾಂಗ ಬಂಧನಕ್ಕೆ ಮನವಿ ಸಲ್ಲಿಸಿದರು. ಮನವಿಯನ್ನು ಪರಿಗಣಿಸಿದ ನ್ಯಾಯಾಧೀಶ ಗಂಗಾಧರ್ ಕೆ. ಶಿವಾನಂದ ನೀಲಣ್ಣವರ್ ಅವರನ್ನು ಜೂನ್ 9ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶವನ್ನು ಹೊರಡಿಸಿದ್ದಾರೆ. ಹತ್ತು ದಿನಗಳ ಸಿಐಡಿ ಕಸ್ಟಡಿ ಅಂತ್ಯಗೊಂಡ ಬಳಿಕ ನೀಲಣ್ಣವರ ಹಿಂಡಲಗಾ ಜೈಲಿಗೆ ರವಾನೆ ಮಾಡಲಾಯಿತು.

ಶಿವಾನಂದ ನೀಲಣ್ಣವರ್ ಖರೀದಿಸಿದ ಐಷಾರಾಮಿ ಕಾರುಗಳನ್ನು ಕೂಡ ಸಿಐಡಿ ಅಧಿಕಾರಿಗಳು ಪಂಚನಾಮೆ ನಡೆಸಿ ಈಗಾಗಲೇ ಜಪ್ತಿ ಮಾಡಿದ್ದಾರೆ. ಡಿಪೇಂಡರ್, ವೈಲಫೈರ್, ಮರ್ಸಿಡಿಸ್ ಬೆಂಚ್ ಕಾರು ಸೇರಿವೆ. ಇನ್ನೂ ಪ್ರಕರಣದ ಸಂಬಂಧಿಸಿದಂತೆ ಶಿವಾನಂದ ನೀಲಣ್ಣವರ್ ಪರ ವಕೀಲ ಆರ್.ಪಿ ಪಾಟೀಲ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಜಾಮೀನು ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಜೂನ್ 1ರಂದು ಜಾಮೀನು ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆ ಇದೆ. ಯಾರು ಕೂಡ ನೇರವಾಗಿ ನೀಲಣ್ಣವರ್ ವಿರುದ್ಧ ದೂರು ನೀಡಿಲ್ಲ ಎಂದು ತಿಳಿಸಿದರು.

## ಕಿರುಸುದ್ದಿ

### ಉಚಿತ ಪ್ರವೇಶಕ್ಕಾಗಿ ಆನ್‌ಲೈನ್ ಲಾಟರಿ

**ಬೆಂಗಳೂರು:** 2026-27ನೇ ಶೈಕ್ಷಣಿಕ ಸಾಲಿನ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿಯಲ್ಲಿ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಉಚಿತ ಪ್ರವೇಶಕ್ಕಾಗಿ ಮೊದಲ ಸುತ್ತಿನ ಆನ್‌ಲೈನ್ ಲಾಟರಿ ಪ್ರಕ್ರಿಯೆಯನ್ನು ಶಾಲಾ ಶಿಕ್ಷಣ ಇಲಾಖೆ ನಡೆಸಿದೆ. ಆರ್‌ಟಿಇ ಕಾಯ್ದೆ-2009ರ ಸೆಕ್ಷನ್ 12(1)(ಬಿ) ಹಾಗೂ 12(1)(ಸಿ) ಅಡಿಯಲ್ಲಿ ಸಲ್ಲಿಕೆಯಾಗಿದ್ದ ಅರ್ಹ ಅರ್ಜಿಗಳನ್ನು ಪರಿಗಣಿಸಿ ಮೇ 25 ರಂದು ಮೊದಲ ಸುತ್ತಿನ ಲಾಟರಿಯನ್ನು ಆನ್‌ಲೈನ್ ಮೂಲಕ ನಡೆಸಲಾಗಿದೆ. ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳನ್ನು ವಿವಿಧ ಖಾಸಗಿ ಶಾಲೆಗಳಿಗೆ ಹಂಚಿಕೆ ಮಾಡಲಾಗಿದ್ದು, ಆಯ್ಕೆಯಾದ ಮಕ್ಕಳ ಪೋಷಕರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಸೀಟು ಹಂಚಿಕೆ ಮಾಹಿತಿ ಕಳುಹಿಸಲಾಗಿದೆ. ಪೋಷಕರು ಮೇ 26ರಿಂದ ಜೂ. 8ರವರೆಗೆ ಸಂಬಂಧಪಟ್ಟ ಶಾಲೆಗಳಿಗೆ ಸೀಟು ಹಂಚಿಕೆ ಪತ್ರದೊಂದಿಗೆ ಭೇಟಿ ನೀಡಿ ಮಕ್ಕಳ ದಾಖಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಇಲಾಖೆ ತಿಳಿಸಿದೆ. ಸೀಟು ಹಂಚಿಕೆ ವಿವರಗಳನ್ನು ಇಲಾಖೆಯ www.schooleducation.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗಾಳಿಯಲ್ಲಿ ಗುಂಡು; ಐವರ ಸೆರೆ

**ಧಾರವಾಡ:** ತಡಸಿಕೊಪ್ಪ ಗ್ರಾಮದ ಜಮೀನು ವಿವಾದ ವೇಳೆ ಗಾಳಿಯಲ್ಲಿ ಗುಂಡು ಹಾರಿಸಿ, ಓರ್ವನಿಗೆ ಗಾಯಪಡಿಸಿದ ಆರೋಪದಡಿ ಐವರನ್ನು ವಶಕ್ಕೆ ಪಡೆದಿದೆ ಎಂದು ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಹೇಳಿದರು. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಫಿಲೋಮಿನಾ, ಪ್ರವೀಣ್ ಸುತಾರ, ಇಂದರ ಪಾಲ್, ಬೆಂಜಮಿನ್, ವಿಶಾಲ್ ಬಂಧಿತ ಆರೋಪಿಗಳು. ತಪ್ಪಿಸಿಕೊಂಡ ಸುಂದರ ಪಾಲ್ ಬಂಧನಕ್ಕೆ ತಂಡ ರಚಿಸಲಾಗಿದೆ ಎಂದರು. ಜಮೀನು ಖರೀದಿ ವಿಚಾರವಾಗಿ ಉಭಯ ಬಣಗಳ ನಡುವೆ ಮಾತಿನ ಚಕಮಕಿ ನಡೆದಿದೆ. ಗಲಾಟೆ ವಿಕೋಪಕ್ಕೆ ಹೋದಾಗ ಗಾಳಿಯಲ್ಲಿ ಗುಂಡು ಹಾರಿಸಿದ್ದರಿಂದ ವಿಠ್ಠಲ ಎಂಬುವರ ಕಾಲಿಗೆ ಗುಂಡು ತಾಗಿದ್ದಾಗಿ ತಿಳಿಸಿದರು. ಮೊದಲು ಅಂಗರಕ್ಷಕ ಗುಂಡು ಹಾರಿಸಿದ ಮಾಹಿತಿ ಇತ್ತು. ಆದರೆ, ಪೊಲೀಸರು ತನಿಖೆ ನಡೆಸಿ, ಪರಿಶೀಲಿಸಿದಾಗ ಲಭಿಸಿದ ವಿಡಿಯೋ ತುಣುಕು ಆಧರಿಸಿದ ಮೇಲೆ ಐವರನ್ನು ಬಂಧಿಸಿದೆ ಎಂದು ಮಾಹಿತಿ ನೀಡಿದರು. ಗಾಯಾಳು ವಿಠ್ಠಲ ಜಮೀನು ಮಾಲೀಕನ ಸಂಬಂಧಿ. ಅವರ ಮೇಲೆ ಗುಂಡಿನ ದಾಳಿಯಾಗಿದೆ. ಅವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಿದೆ. ಕೊಲೆ ಯತ್ನ, ಅಟ್ರಾಸಿಟಿ ಪ್ರಕರಣದಡಿ ದೂರು ದಾಖಲಾಗಿದೆ ಎಂದರು.

### ರಸ್ತೆ ಅಪಘಾತ: ನಾಲ್ಕು ಮಂದಿ ಸಾವು

**ಚಿತ್ರದುರ್ಗ:** ಲಾರಿ ಮತ್ತು ಬೊಲೆರೋ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ನಾಲ್ಕು ಜನ ಸ್ಥಳದಲ್ಲೇ ದಾರುಣ ವಾಗಿ ಮೃತಪಟ್ಟಿರುವ ಘಟನೆ ಮೊಳಕಾಲ್ಮುರು ತಾಲೂಕಿನ ಭೈರಾಪುರ ಗ್ರಾಮದ ಬಳಿ ಬುಧವಾರ ನಡೆದಿದೆ. ಮೃತರನ್ನು ಬಳ್ಳಾರಿಯ ಉದಾರ ಗ್ರಾಮದ ನಿವಾಸಿಗಳು ಎಂದು ತಿಳಿದುಬಂದಿದೆ. ಶಿವಮ್ಮ (28), ಮೀನಾಕ್ಷಿ (14), ಪೂಜಾ (4), ಪುರುಷೋತ್ತಮ್ (2) ಎಂದು ಗುರುತಿಸಲಾಗಿದೆ. ವೇಗವಾಗಿ ಬಂದ ಬೊಲೆರೊ ವಾಹನ ಲಾರಿಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದ್ದು, ಅಪಘಾತದ ತೀವ್ರತೆಗೆ ಬೊಲೆರೊ ವಾಹನದ ನುಜ್ಜುಗುಜ್ಜಾಗಿದೆ. ಅಪಘಾತದ ಭೀಕರರತೆಯ ಪರಿಣಾಮವಾಗಿ ಬೊಲೆರೋ ವಾಹನದಲ್ಲಿ ಮೂರು ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ರಾಜ್ಯ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ಮನವಿ

# ಎಸ್‌ಐಆರ್‌ಗೆ ಸಹಕರಿಸಿ

**ಬೆಂಗಳೂರು:** ಅನರ್ಹ ಮತದಾರರು ಪಟ್ಟಿಯಲ್ಲಿ ಇರಬಾರದೆಂಬ ಉದೇಶದಿಂದ ಲೋಪ ದೋಷಗಳಿಲ್ಲದ ಹೊಸ ಸಮಗ್ರ ಮತದಾರರ ಪಟ್ಟಿ ಸಿದ್ಧ ಪಡಿಸುವುದೇ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಷ್ಕರಣೆ(ಎಸ್‌ಐಆರ್)-2026 ಆಗಿದೆ ಎಂದು ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ತಿಳಿಸಿದರು.



ವಾರ್ತಾ ಸೌಧದ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಬುಧವಾರ ರಾಜ್ಯ ಚುನಾವಣಾ ಆಯೋಗದಿಂದ ಆಯೋಜಿಸಲಾಗಿದ್ದ ಮಾಧ್ಯಮ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ರಾಜ್ಯದ ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ವಂಚಿತರಾಗಬಾರದು. ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರನಿಂದ ಅವರದ್ದೇ ಸಹಿಯಡಿ ಸಮಗ್ರ ಮಾಹಿತಿಯನ್ನು ಪಡೆದು ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗುವುದು. ಎಸ್‌ಐಆರ್‌ನಲ್ಲಿ ಪ್ರತಿಯೊಬ್ಬರೂ ಅರ್ಜಿ ಭರ್ತಿ ಮಾಡಿ, ಫೋಟೋ ಅಂಟಿಸಿ ಸಹಿ ಮಾಡಿ ಕೊಡಬೇಕು. ಇಲ್ಲದಿದ್ದರೆ ಕರಡು ಪಟ್ಟಿಯಲ್ಲಿ ಮತ್ತು ಹೊಸ ಮತದಾರರ ಪಟ್ಟಿಯಲ್ಲಿ ಹೆಸರು ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಮತದಾರರ ಪಟ್ಟಿ ರಚನೆಗೆ ಪ್ರತಿಯೊಬ್ಬರ ಸಹಕಾರ ಅಗತ್ಯ. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವ ಹೊಣೆ ಪ್ರತಿಯೊಬ್ಬ ಭಾರತೀಯನದ್ದಾಗಿದೆ. ಇದು ಕೇವಲ ಚುನಾವಣಾ ಆಯೋಗದ ಹೊಣೆಯಷ್ಟೇ ಅಲ್ಲ ಎಂದರು.

ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಪ್ರತಿ ಮನೆಗೆ ಭೇಟಿ ನೀಡಿ ಮತದಾರರಿಗೆ ಎಣಿಕೆ ಫಾರ್ಮ್ (ಎನ್ಯುಮರೇಷನ್ ಫಾರ್ಮ್) ಜೊತೆಗೆ ಎಲ್ಲ ಮಾಹಿತಿಗಳನ್ನು ಮನೆ ಮನೆ ಭೇಟಿಯಲ್ಲಿ ಪಡೆಯಲಿದ್ದಾರೆ. ಇದಲ್ಲದೆ, ಈ ಸಂಬಂಧ ಉದ್ಭವಿಸುವ ಸಮಸ್ಯೆಗಳು, ಪ್ರಶ್ನೆಗಳ ನಿವಾರಣೆಗೆ ಪಂಚಾಯತ್‌ಗೊಂದು ಫೆಸಿಲಿಟೇಟಿಂಗ್ ಕೇಂದ್ರಗಳನ್ನು ನೀಡಲಾಗುವುದು. ಒಟ್ಟಿನಲ್ಲಿ ಸ್ವಚ್ಛ ಮತ್ತು ವಿನೂತನ ಮತದಾರರ ಪಟ್ಟಿ ತಯಾರಿಕೆ ಸದ್ಯ ರಾಜ್ಯ ಚುನಾವಣಾ ಆಯೋಗದ ಪ್ರಮುಖ ಕರ್ತವ್ಯ ಎಂದರು. ಮುಕ್ತ ಮತ್ತು ನಿಷ್ಪಕ್ಷಪಾತ ಚುನಾವಣೆಗಳನ್ನು ನಡೆಸಲು ಮತದಾರರ ಪಟ್ಟಿಗಳ ವಿಶ್ವಾಸರ್ಹತೆಯನ್ನು ಕಾಪಾಡಿಕೊಳ್ಳುವುದು ಮೂಲಭೂತ ಅಗತ್ಯ. ಈ ನಿಟ್ಟಿನಲ್ಲಿ ಈಗಾಗಲೇ ನಿಗದಿಯಾದ ಮಾರ್ಗಸೂಚಿ ಮತ್ತು ವೇಳಾಪಟ್ಟಿಗನುಗುಣವಾಗಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಯಲಿದೆ ಎಂದು ತಿಳಿಸಿದರು.

### ಯಾವಾಗ ಹೆಸರು ತೆಗೆಯಲಾಗುತ್ತದೆ?

2025ರ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಎಲ್ಲರಿಗೂ ತಲಾ ಎರಡು ಎಣಿಕೆ ಫಾರ್ಮ್ ಕೊಡಲಾಗುತ್ತದೆ. ಹೆಸರು ಇಲ್ಲದವರು ಹೊಸದಾಗಿ ಹೆಸರು ಸೇರಿಸುವುದಕ್ಕೆ ಅರ್ಜಿ ಸಲ್ಲಿಸಬೇಕು. ಎಣಿಕೆ ಫಾರ್ಮ್ ಭರ್ತಿ ಮಾಡಿ ಸಹಿ ಮಾಡಿ ಕೊಡದಿದ್ದರೆ ಅಂತಹವರ ಹೆಸರು ಮತದಾರರ ಪಟ್ಟಿಯಿಂದ ತೆಗೆಯಲಾಗುತ್ತದೆ. ಹೊಸ ಮತದಾರರ ಕರಡು ಅಥವಾ ಅಂತಿಮ ಪಟ್ಟಿಯಲ್ಲಿ ಸಣ್ಣಪುಟ್ಟ ಲೋಪಗಳಿದ್ದರೆ ಮತದಾರರ ಅನುಮತಿ ಇಲ್ಲದೇ ಯಾವುದೇ ಬದಲಾವಣೆ ಮಾಡುವುದಿಲ್ಲ. ಅರ್ಜಿ ಕೊಟ್ಟ ನಂತರ ಮಾಹಿತಿ ತಪ್ಪಾಗಿದ್ದರೆ ಕಾರಣ ಕೇಳಿ ನೋಟಿಸ್ ಕೊಡ್ತದೆ. ನೋಟಿಸ್ ಕೊಡದೇ ಹೆಸರು ತೆಗೆದು ಹಾಕುವುದಿಲ್ಲ. ಒಂದು ವೇಳೆ ಎಸ್‌ಐಆರ್ ನಡೆಯುವ ವೇಳೆ ಮತದಾರರ ಮನೆಯಲ್ಲಿ ಅಥವಾ ಊರಿನಲ್ಲಿಲ್ಲದಿದ್ದರೆ ಆನ್‌ಲೈನ್‌ನಲ್ಲಿಯೂ ಅರ್ಜಿ ಸಲ್ಲಿಸುವುದಕ್ಕೆ ಅವಕಾಶವಿದೆ ಎಂದು ಅನ್ಬು ಕುಮಾರ್ ಸ್ಪಷ್ಟಪಡಿಸಿದರು.

# ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ: ವಿಜಯೇಂದ್ರ

**ಶಿವಮೊಗ್ಗ:** ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ ನಡೆಯುವ ಸಾಧ್ಯತೆಗಳಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭವಿಷ್ಯ ನುಡಿದಿದ್ದಾರೆ.

ವಿನೋಬನಗರದ ತಮ್ಮ ನಿವಾಸದಲ್ಲಿ ಬುಧವಾರ ಮಾಧ್ಯಮಗಳ ಜತೆ ಮಾತನಾಡಿ, ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ಬಳಿಕ ಯಾವುದೇ ಹೊಸ ಮುಖ್ಯಮಂತ್ರಿ ಬಂದರೂ ಅದು ತಾತ್ಕಾಲಿಕ. ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ ನಡೆಯಲಿದೆ.



ಅದಕ್ಕಾಗಿ ರಾಜ್ಯದ ಜನತೆಗೆ ಏನು ಕೊಡಬೇಕು ಹಾಗೂ ಸಂಘಟನೆಯ ಮೂಲಕ ರಾಜ್ಯದಲ್ಲಿ ಹೇಗೆ ಅಧಿಕಾರಕ್ಕೆ ಬರಬೇಕು ಎನ್ನುವ ಬಗ್ಗೆ ಯೋಚಿಸುತ್ತೇವೆ ಎಂದು ತಿಳಿಸಿದರು.

ಸಿದ್ದರಾಮಯ್ಯನವರು ರಾಜೀನಾಮೆ ನೀಡಿ ಯಾರೇ ಮುಖ್ಯಮಂತ್ರಿಯಾದರೂ ಅದರ ಆಯ್ಕೆ ಅಷ್ಟು ಸಲೀಸಾಗಿ ಆಗುವುದಿಲ್ಲ. ರಾಜ್ಯ ಸರ್ಕಾರದಲ್ಲಿ ಗೊಂದಲ ಶುರುವಾಗಲಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೆ ಎನ್ನುವುದು ಮುಖ್ಯವಲ್ಲ. ಕೊನೆಗೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ರಾಜ್ಯ ಸರ್ಕಾರದ ವೈಫಲ್ಯ ಒಪ್ಪಿಕೊಂಡಿದೆ. ದೇಶದಲ್ಲಿ ಕಾಂಗ್ರೆಸ್ ಅವನತಿ ಶುರುವಾಗಿದೆ. ರಾಜ್ಯದಲ್ಲಿ ಸಿಎಂ ಬದಲಾವಣೆ ಬಳಿಕ ಕರ್ನಾಟಕದಲ್ಲೂ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳಲಿದೆ ಎಂದರು.

ನನಗೆ ಸಿದ್ದರಾಮಯ್ಯನವರ ಬಗ್ಗೆ ಯಾವುದೇ ದ್ವೇಷವಿಲ್ಲ. ಆದರೆ ದಕ್ಷಿಣ ಭಾರತದಲ್ಲೇ ಇತರ ರಾಜ್ಯಗಳಿಗೆ ಹೋಲಿಸಿದರೆ ಹತ್ತು ಲಕ್ಷ ಕೋಟಿ ರೂ.ಸಾಲ ಮಾಡುವ ಮೂಲಕ ಸಿದ್ದರಾಮಯ್ಯ ದಾಖಲೆ ಮುರಿದಿದ್ದಾರೆ ಎಂದರು.

### ಹೆಚ್ಚು ಕಾಲ ಪ್ರಧಾನಿ ನರೇಂದ್ರ ಮೋದಿ

ಕೇಂದ್ರದಲ್ಲಿ ಮೋದಿ ಸರ್ಕಾರ 12 ವರ್ಷ ಪೂರೈಸಿದ ಶುಭ ಘಳಿಗೆಯಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಯುಪಿಎ ಅವಧಿಯಲ್ಲಿ ಅತ್ಯಂತ ಭ್ರಷ್ಟಾಚಾರದ ಆಡಳಿತವಿತ್ತು. ಜನತೆ ದೇಶದ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದರು. ಆ ಸಂದರ್ಭದಲ್ಲಿ ದೇಶದ ಚುಕ್ಕಾಣಿ ಹಿಡಿದು ಅಭಿವೃದ್ಧಿ ಪಥದತ್ತ ದೇಶವನ್ನು ಕೊಂಡೊಯ್ದು ಜನತೆ ವಿಶ್ವಾಸ ಗಳಿಸಿದ್ದಾರೆ. ಅತಿ ಹೆಚ್ಚು ಕಾಲ ಪ್ರಧಾನಿಯಾಗಿ ದೇಶದ ಆಡಳಿತ ನೀಡಿದ ಕೀರ್ತಿ ಮೋದಿಯ ವರದ್ದಾಗಲಿದೆ. ಅವರ ಅವಧಿಯಲ್ಲಿ ಯಾವುದೇ ಭ್ರಷ್ಟಾಚಾರದ ಆರೋಪ ಬಂದಿಲ್ಲ. ಕೋವಿಡ್ ಸಂದರ್ಭದಲ್ಲಿ ಇಷ್ಟು ದೊಡ್ಡ ದೇಶವನ್ನು ಯಶಸ್ವಿಯಾಗಿ ನಿರ್ವಹಿಸಿದ ಉದಾಹರಣೆ ನಮ್ಮ ಕಣ್ಣ ಮುಂದಿದೆ. ವಿಶ್ವದಲ್ಲೇ ಭಾರತ 4ನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗುವತ್ತ ಸದೃಢ ಆಡಳಿತ ನೀಡಿ ಸರ್ವಕಾಲಿಕ ದಾಖಲೆ ಮುರಿದಿದ್ದಾರೆ ಎಂದರು.

# ಪ್ರತ್ಯೇಕ ಪ್ರಕರಣ: ಸಿಡಿಲಿಗೆ 3 ಸಾವು

**ಮೈಸೂರು:** ಜಿಲ್ಲೆಯಲ್ಲಿ ನಡೆದ ಮೂರು ಪ್ರತ್ಯೇಕ ಪ್ರಕರಣದಲ್ಲಿ ಸಿಡಿಲು ಬಡಿದು ಮೂವರು ವ್ಯಕ್ತಿಗಳು ಹಾಗೂ ಹಸುವೊಂದು ಸಾವಿಗೀಡಾಗಿರುವ ಘಟನೆ ನಡೆದಿದೆ. ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಮಾಳದ ಹಾಡಿಯ ನಿವಾಸಿಯಾದ ಅಪ್ಪಯ್ಯ, ಹುಣಸೂರು ತಾಲೂಕಿನ ಹೊಸಮರ ಗ್ರಾಮದ ನಿವಾಸಿಯಾದ ಯಶೋಧಮ್ಮ ಹಾಗೂ ಮಡಿಕೇರಿ ಜಿಲ್ಲೆಯ ಜಲಾಶಯ ಬಡಾವಣೆಯ ನಿವಾಸಿಯಾದ ರೋಷನ್ (43) ಮೃತಪಟ್ಟವರು.

ಬುಧವಾರ ಮಧ್ಯಾಹ್ನ 1ರ ವೇಳೆಯಲ್ಲಿ ಎಚ್.ಡಿ.ಕೋಟೆ ತಾಲೂಕಿನ ಮಾಳದ ಹಾಡಿಯ ನಿವಾಸಿಯಾದ ಅಪ್ಪಯ್ಯ ಎಂಬುವರು ತಮ್ಮ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ವೇಳೆ ಗುಡುಗು, ಸಿಡಿಲಿನೊಂದಿಗೆ ಮಳೆ ಸುರಿಯುತ್ತಿದ್ದು, ರಕ್ಷಣೆಗೆಂದು ಮರದ ಕೆಳಗಡೆ ಬಂದ ಅವರಿಗೆ ಸಿಡಿಲು ಬಡಿದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಹುಣಸೂರು ತಾಲೂಕಿನ ಹೊಸಮರ ಗ್ರಾಮದ ನಿವಾಸಿಯಾದ ಯಶೋಧಮ್ಮ ಹಳೇ ಮರ ಗ್ರಾಮ ದಲ್ಲಿರುವ ಪತಿಯ ಜಮೀನಿಗೆ ಹೋಗಿದ್ದು, ಈ ವೇಳೆ ಸುರಿಯುತ್ತಿದ್ದ ಮಳೆಯಿಂದ ರಕ್ಷಣೆ ಪಡೆಯಲೆಂದು ಮರದ ಕೆಳಗಡೆ ಹೋದಾಗ ಸಿಡಿಲು ಬಡಿದು ಸ್ಥಳದಲ್ಲಿಯೇ ಅವರು ಅಸುನೀಗಿದ್ದಾರೆ. ಇವರಿಗೆ ಪತಿ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

**ಹಸು ಸಾವು:** ಮತ್ತೊಂದೆಡೆ ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ನೂರಲ ಕುಪ್ಪೆ ಗ್ರಾಮದಲ್ಲಿ ಸಿಡಿಲು ಬಡಿದು ಹಸುವೊಂದು ಸಾವಿಗೀಡಾಗಿದೆ.

### ಐಟಿ ಉದ್ಯೋಗಿ ಸಾವು

ಸಿಡಿಲು ಬಡಿದು ಐಟಿ ಉದ್ಯೋಗಿಯೊಬ್ಬರು ಸಾವಿಗೀಡಾಗಿರುವ ಘಟನೆ ಮೈಸೂರು ತಾಲೂಕಿನ ಇಲವಾಲದಲ್ಲಿ ನಡೆದಿದೆ. ಮಡಿಕೇರಿ ಜಿಲ್ಲೆಯ ಜಲಾಶಯ ಬಡಾವಣೆಯ ನಿವಾಸಿಯಾದ ರೋಷನ್ (43) ಮೃತಪಟ್ಟವರು. ಬೆಂಗಳೂರಿನ ಐಟಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದ ಅವರು ವರ್ಕ್ ಫ್ರಂ ಹೋಮ್ ಹಿನ್ನೆಲೆಯಲ್ಲಿ ವೃತ್ತಿ ಜತೆಗೆ ತಮ್ಮ ಕುಟುಂಬದ ಕಾಫಿ ತೋಟದ ನಿರ್ವಹಣೆಯನ್ನೂ ನೋಡಿಕೊಳ್ಳುತ್ತಿದ್ದರು.

ಮಾವಿನ ಹಣ್ಣು ಕೀಳುವ ವೇಳೆ ಪಕ್ಕದ ತೆಂಗಿನ ಮರಕ್ಕೆ ಸಿಡಿಲು ಬಡಿದಿದೆ. ಸಿಡಿಲಾಘಾತಕ್ಕೆ ಕುಸಿದು ಬಿದ್ದು, ನಿತ್ರಾಣಗೊಂಡಿದ್ದ ರೋಷನ್ ಅವರನ್ನು ಸ್ಥಳೀಯರ ನೆರವಿ ನೊಂದಿಗೆ ಹತ್ತಿರದ ಎನ್‌ಜೆ ಆಸ್ಪತ್ರೆಗೆ, ನಂತರ ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆ ದೊಯ್ಯಲಾಗಿದೆ. ಆದರೆ, ಪರೀಕ್ಷಿಸಿದ ವೈದ್ಯರು ರೋಷನ್ ಮೃತಪಟ್ಟಿರುವುದಾಗಿ ಖಚಿತಪಡಿಸಿದ್ದಾರೆ. ಬಳಿಕ ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು.

# ರಾಜ್ಯದಲ್ಲಿ ಎಬೋಲಾ ಬಗ್ಗೆ ಆತಂಕ ಇಲ್ಲ

**ಬೆಂಗಳೂರು:** ರಾಜ್ಯದಲ್ಲಿ ಎಬೋಲಾ ವೈರಸ್ ಸೋಂಕು ಕಾಲಿಟ್ಟಿದೆಯೇ ಎಂಬ ಆತಂಕಕ್ಕೆ ಕೊನೆಗೂ ತೆರೆ ಬಿದ್ದಿದೆ. ಉಗಾಂಡಾ ಮೂಲದ ಮಹಿಳೆಯೊಬ್ಬರ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದ್ದು, ಅದರ ವರದಿ ನೆಗೆಟಿವ್ ಬಂದಿರುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಉಗಾಂಡಾ ದೇಶದ ಕ್ಯಾಂಪಲಾ ಮೂಲದ ನಾಗಿರೆ ಲತಿಫಾ (28) ಮಹಿಳೆಯಲ್ಲಿ ಮೇ 23ರಂದು ಬೆಂಗಳೂರಿಗೆ ಆಗಮಿಸಿ ನಗರದ ರಾಯಲ್ ಏಸ್ ಬೂಟಿಕ್ ಹೋಟೆಲ್‌ನಲ್ಲಿ ತಂಗಿದ್ದರು. ಈ ವೇಳೆ ಅವರಿಗೆ ಎಬೋಲಾ ಸೋಂಕಿನ ಲಕ್ಷಣಗಳಿಗೆ ಹೋಲುವ ಆರೋಗ್ಯ ಸಮಸ್ಯೆಗಳು ಕಂಡುಬಂದ ಹಿನ್ನೆಲೆ ಆರೋಗ್ಯ ಇಲಾಖೆ ತುರ್ತು ಕ್ರಮ ಕೈಗೊಂಡಿತ್ತು. ಶಂಕಿತ ಮಹಿಳೆಯನ್ನು ತಕ್ಷಣವೇ ಆ್ಯಂಬುಲೆನ್ಸ್ ಮೂಲಕ ಐಸೋಲೇಷನ್ ವಾರ್ಡ್‌ಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು.

ಅವರ ರಕ್ತ ಸೇರಿದಂತೆ ಅಗತ್ಯ ಮಾದರಿಗಳನ್ನು ಸಂಗ್ರಹಿಸಿ ಹೆಚ್ಚಿನ ಪರೀಕ್ಷೆಗಾಗಿ ಪುಣೆಯ ವಿಶೇಷ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪರೀಕ್ಷಾ ವರದಿ ಇದೀಗ ನೆಗೆಟಿವ್ ಬಂದಿದ್ದು, ಮಹಿಳೆಗೆ ಎಬೋಲಾ ಸೋಂಕು ಇಲ್ಲ ಎಂಬುದು ದೃಢಪಟ್ಟಿದೆ. ಈ ಕುರಿತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದ್ದು, ರಾಜ್ಯದಲ್ಲಿ ಉಂಟಾಗಿದ್ದ ಆತಂಕ ದೂರವಾಗಿದೆ ಎಂದು ತಿಳಿಸಿದ್ದಾರೆ. ಇಬೋಲಾ ಶಂಕಿತ ಪ್ರಕರಣದ ಹಿನ್ನೆಲೆ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿತ್ತು.

# ಹಿಂದುಳಿದ ವರ್ಗದವರಿಗೆ ಮತ್ತೆ ಮೋಸ: ವಿ. ಸುನೀಲ್

**ಬೆಂಗಳೂರು:** ಹಿಂದುಳಿದ ವರ್ಗದ ನಾಯಕರಿಗೆ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಐತಿಹಾಸಿಕ ದ್ರೋಹ ಬಗೆದಿದೆ ಎಂದು ಶಾಸಕ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಅಂದು ದೇವರಾಜ್ ಅರಸು ಅವರನ್ನು ಹೀನಾಯವಾಗಿ ಪಟ್ಟದಿಂದ ಇಳಿಸಿದ ರೀತಿಯಲ್ಲಿ ಇಂದು ಸಿದ್ದರಾಮಯ್ಯ ಅವರನ್ನು ಸಿಎಂ ಹುದ್ದೆಯಿಂದ ಪದಚ್ಯುತಗೊಳಿಸುವ ಮೂಲಕ ಹಿಂದುಳಿದ ವರ್ಗದ ಸಮುದಾಯದ ರಾಜಕೀಯ ಉತ್ಕರ್ಷವನ್ನು ಕಾಂಗ್ರೆಸ್ ಹೈಕಮಾಂಡ್ ಸಹಿಸುವುದಿಲ್ಲ ಎಂಬುದನ್ನು ಮತ್ತೆ ಸಾಬೀತು ಮಾಡಿದೆ ಎಂದಿದ್ದಾರೆ.



ಉಳುವವನೇ ಹೊಲದೊಡೆಯ ಕಾಯ್ದೆ ಜಾರಿ ಸೇರಿದಂತೆ ಕರ್ನಾಟಕದಲ್ಲಿ ಕ್ರಾಂತಿಕಾರಿ ಆಡಳಿತ ನೀಡುವ ಮೂಲಕ ಅರಸು ಜನಮನ್ನಣೆ ಗಳಿಸಿದ್ದರು. ಆದರೆ, ಅವರ ಜನಪ್ರಿಯತೆಯನ್ನು ಸಹಿಸದ ಇಂದಿರಾ ಗಾಂಧಿ ಅವರು ಅರಸು ಅವರನ್ನು ಅಧಿಕಾರದಿಂದ ಕೆಳಗಿಳಿಸಿದರು. ಅರಸು ಅವರ ನಂತರ ಕರ್ನಾಟಕ ಹಾಗೂ ರಾಷ್ಟ್ರ ಮಟ್ಟದ ಜನಪ್ರಿಯ ಹಿಂದುಳಿದ ವರ್ಗದ ನಾಯಕರಾಗಿದ್ದ ಸಿದ್ದರಾಮಯ್ಯ ಅವರನ್ನು ಈಗ ರಾಹುಲ್ ಗಾಂಧಿ ಪದಚ್ಯುತಿಗೊಳಿಸಿದ್ದಾರೆ. ನೂಲಿನಂತೆ ಸೀರೆ ಎಂಬಂತೆ ಗಾಂಧಿ ಕುಟುಂಬದ ಡಿಎನ್‌ಎಯಲ್ಲೇ ಹಿಂದುಳಿದ ವರ್ಗದ ನಾಯಕರ ಬಗ್ಗೆ ದ್ವೇಷ, ಈರ್ಷೆ ಹಾಗೂ ಅಸಹನೆ ಅಡಗಿದೆ ಎಂದು ಹೇಳಿದ್ದಾರೆ.

### ಸಿಎಂ ಪದಚ್ಯುತಿ ಯಾಕೆ?

ಒಂದೆಡೆ ತಾನು ಹಿಂದುಳಿದ ಸಮುದಾಯದ ಧ್ವನಿಯನ್ನು ಆಲಿಸುವುದಕ್ಕೆ ವಿಳಂಬ ಮಾಡಿದೆ, ಜಾತಿ ಗಣತಿ ನಡೆಸಿ ಒಬಿಸಿ ಸಮುದಾಯಕ್ಕೆ ನ್ಯಾಯ ಕೊಡುತ್ತೇನೆಂದು ವೇದಿಕೆಯಲ್ಲಿ ರಾಜಕೀಯ ಭಾಷಣ ಮಾಡುವ ರಾಹುಲ್, ಇನ್ನೊಂದೆಡೆ ಒಬಿಸಿ ಸಮುದಾಯದ ರಾಜಕೀಯ ನಾಯಕರನ್ನು ಅಧಿಕಾರದಿಂದ ಎಳೆದು ಕೆಡವುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇದ್ದ ಒಬ್ಬನೇ ಒಬ್ಬ ಹಿಂದುಳಿದ ವರ್ಗದ ಸಿಎಂಯನ್ನು ಯಾಕೆ ಪದಚ್ಯುತಿಗೊಳಿಸಿದಿರಿ? ಎಂಬ ಪ್ರಶ್ನೆಗೆ ರಾಹುಲ್ ಉತ್ತರಿಸಬೇಕಾಗುತ್ತದೆ ಎಂದಿದ್ದಾರೆ.

## ಮಹಿಳೆಯರಿಗೆ ಅರಿಶಿಣ ಕುಂಕುಮ ತಾಂಬೂಲ ಕೊಟ್ಟು ಸಿಹಿ ವಿತರಣೆ

# ರೈತನಿಂದ ಗೋಮಾತೆಗೆ ಸೀಮಂತ

**ಕೋಲಾರ:** ಗರ್ಭಿಣಿಯರಿಗೆ ಸೀಮಂತ ಮಾಡುವುದು ಸಾಮಾನ್ಯ. ಆದರೆ, ರೈತರೊಬ್ಬರು ತಮ್ಮ ಕುಟುಂಬಕ್ಕೆ ನಿರಂತರವಾಗಿ ಹಾಲು ನೀಡಿ ಪೋಷಿಸುತ್ತಿರುವ ಗೋಮಾತೆಗೆ ಸೀಮಂತ ಮಾಡಿ ಸಂಭ್ರಮಿಸಿರುವ ಅಪರೂಪದ ಘಟನೆ ತಾಲೂಕಿನ ಕಳ್ಳಿಪುರ ಗ್ರಾಮದಲ್ಲಿ ನಡೆದಿದೆ.

ಕಳ್ಳಿಪುರ ಗ್ರಾಮದ ರೈತ ಡೈರಿ ನಾಗರಾಜ್ ಅವರ ಮನೆಯಲ್ಲಿ ಗೋಮಾತೆಗೆ ಸೀಮಂತದಂತಹ ಸಂಪ್ರದಾಯಬದ್ಧ ಶಾಸ್ತ್ರ ನಡೆಸಿದ್ದು, ಗೋವನ್ನು ಮನುಷ್ಯರಂತೆಯೇ ಗೌರವ, ಪ್ರೀತಿಯಿಂದ ನಡೆಸಿಕೊಂಡಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕೋಲಾರ ತಾಲೂಕು ಕಳ್ಳಿಪುರ ಗ್ರಾಮದಲ್ಲಿ ಡೈರಿ ಬಸವರಾಜ್ ರವರ ಮನೆಯ ಹಸುವು ಫಲಕ್ಕೆ ಬಂದು ಗರ್ಭಿಣಿಯಾದಾಗ ಮನೆ ಮಂದಿ ಸಂಭ್ರಮಿಸಿ ಗ್ರಾಮದ ಮಹಿಳೆಯರನ್ನೆಲ್ಲ ಕರೆದು ಮನೆ ಮಗಳ ಸೀಮಂತ ಮಾಡುವಂತೆ ಸಂಭ್ರಮಿಸಿದ್ದು, ಗಮನ ಸೆಳೆದಿದೆ.

ಹಸುವಿಗೆ ಹೂಗಳಿಂದ ಅಲಂಕಾರ ಮಾಡಿ ಬಾಲಕ್ಕೆ ಮೊಗ್ಗಿನ ಜಡೆ ಪೋಣಿಸಿ ಕಾಲುಗಳಿಗೆ ಗೆಜ್ಜೆಯಂತೆ ಬಣ್ಣದ ಟೇಪ್ ಕಟ್ಟಿ ಅಲಂಕರಿಸಿ ಗೋಮಾತೆ ಮುಂದೆ ಸಿಹಿ ಖಾದ್ಯಗಳಲ್ಲಿಟ್ಟು, ಗ್ರಾಮದ ಮುತ್ತೈದೆಯರನ್ನು ಮನೆಗೆ ಕರೆದು ಅರಿಶಿನ ಕುಂಕುಮ ಹಚ್ಚಿ ಸೀಮಂತ ವೈಭವದ ಹಾಡು ಹೇಳಿ ಆರತಿ ಬೆಳಗಿ ಮಡಲಕ್ಕಿ ಕಟ್ಟಿ ಮಡಿಲು ತುಂಬಿ ನಮಸ್ಕರಿಸಿ ಗಮನ ಸೆಳೆದರು.



ಸಮಾರಂಭದ ನಂತರ ಬಂದಂತಹ ಮಹಿಳೆಯರಿಗೆ ಅರಿಶಿಣ ಕುಂಕುಮ ತಾಂಬೂಲ ಕೊಟ್ಟು ಸಿಹಿ ನೀಡಿ ಗೋಮಾತೆಯ ಸೀಮಂತವನ್ನು ವಿಜೃಂಭಣೆಯಿಂದ ಗ್ರಾಮಸ್ಥರು ಆಚರಿಸಿದರು. ಈ ಕುರಿತು ಪತ್ರಕರ್ತರು ಡೈರಿ ನಾಗರಾಜ್‌ರನ್ನು ಪ್ರಶ್ನಿಸಿದಾಗ ಹೆತ್ತ ತಾಯಿ ಒಂದು ವರ್ಷ ಹಾಲುಣಿಸಿ ಸಾಕುತ್ತಾಳೆ ಆದರೆ ಗೋಮಾತೆ ನಮ್ಮ ಜೀವನವಿಡೀ ನಮಗೆ ಹಾಲು, ಮೊಸರು, ಮಜ್ಜಿಗೆ, ತುಪ್ಪ ನೀಡಿ ಪೋಷಿಸುತ್ತಿದ್ದು, ನಾವು ಗೋಮಾತೆಯನ್ನು ನಮ್ಮ ಮನೆಮಗಳಂತೆ ಸಾಗಿದ್ದೇವೆ ಎಂದರು.

ಗೋಹತ್ಯೆಯನ್ನು ಬೆಂಬಲಿಸುವ ಅತ್ಯಂತ ಹೀನ ಸಂಸ್ಕೃತಿಯ ನಡುವೆ ನಮಗೆ ಜೀವನವಿಡಿ ಹಾಲುಣಿಸುವ ಗೋವನ್ನು ನಮ್ಮಂತೆ, ನಮ್ಮ ಕುಟುಂಬ ಸದಸ್ಯನೆಂಬಂತೆ ಪೂಜಿಸಿ ಸಂಭ್ರಮಿಸಿದ ಈ ರೈತರ ಪ್ರಯತ್ನ ಆದರ್ಶವಾಗಿದೆ.

## ಮುಖ್ಯಮಂತ್ರಿ ಬದಲಾದರೂ ರಾಜ್ಯದ ಅಭಿವೃದ್ಧಿ ಮಾತ್ರ ಶೂನ್ಯ: ಪ್ರತಿಪಕ್ಷ ನಾಯಕ

# ಕೈ ಸರ್ಕಾರ ಬದಲಾವಣೆಯಾಗಲಿ: ಆರ್.ಅಶೋಕ

**ಬೆಂಗಳೂರು:** ಕರ್ನಾಟಕಕ್ಕೆ ಇಂದು ಬೇಕಿರುವುದು ಕೇವಲ ಮುಖ್ಯಮಂತ್ರಿ ಬದಲಾವಣೆ ಅಲ್ಲ, ಈ ಜನವಿರೋಧಿ ಕಾಂಗ್ರೆಸ್ ಸರ್ಕಾರದ ಸಂಪೂರ್ಣ ಬದಲಾವಣೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೂ ರಾಜ್ಯದಲ್ಲಿ ಆಡಳಿತ ಎನ್ನುವುದು ಸಂಪೂರ್ಣ ಮರೀಚಿಕೆಯಾಗಿದೆ. ಅಭಿವೃದ್ಧಿ, ಜನ ಸಮಸ್ಯೆ, ರೈತರ ಸಂಕಷ್ಟ, ಯುವಕರ ಭವಿಷ್ಯ, ಇವೆಲ್ಲವೂ ಗೌಣವಾಗಿದೆ. ಕುರ್ಚಿ ಯಾರಿಗೆ? ಎನ್ನುವ ಒಂದೇ ಪ್ರಶ್ನೆ ಸರ್ಕಾರವನ್ನು ನುಂಗಿಬಿಟ್ಟಿದೆ ಎಂದಿದ್ದಾರೆ. ಅಧಿಕಾರ ಹಂಚಿಕೆ ಎಂಬ ಪ್ರಹಸನ ಈಗ ಬೀದಿ ನಾಟಕದ ಮಟ್ಟಕ್ಕೆ ಇಳಿದಿದೆ. ಎಗ್ಗಿಲ್ಲದೆ ನಡೆಯುತ್ತಿರುವ ಕುರ್ಚಿ ಕದನ ಇಡೀ ಕರ್ನಾಟಕದ ಮಾನವನ್ನು ದೇಶದ ಮುಂದೆ ಹರಾಜು ಹಾಕುತ್ತಿದೆ. ಪ್ರಜಾಸೌಧದಲ್ಲಿ ಆಡಳಿತದ ಚರ್ಚೆ ಇಲ್ಲ ಬರಿ ಅಧಿಕಾರದ ಲೆಕ್ಕಾಚಾರ ಮಾತ್ರ ಎನ್ನುವಂತಾಗಿದೆ! ಕನ್ನಡಿಗರು ಅರ್ಥ ಮಾಡಿಕೊಳ್ಳಬೇಕಾದ ಸತ್ಯ ಒಂದೇ. ಸಿದ್ದರಾಮಯ್ಯ ಅವರೇ ಮುಂದುವರಿಯಲಿ, ಡಿ.ಕೆ. ಶಿವಕುಮಾರ್ ಬರಲಿ ಅಥವಾ ಮತ್ತೊಬ್ಬರನ್ನು ಕೂರಿಸಲಿ ಈ ದಿವಾಳಿ ಕಾಂಗ್ರೆಸ್ ಸರ್ಕಾರದಿಂದ ಕನ್ನಡಿಗರಿಗೆ ನಯಾ ಪೈಸೆ ಪ್ರಯೋಜನವಿಲ್ಲ ಎಂಬುದಾಗಿದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್‌ನವರುಗೆ ರಾಜ್ಯದ ಅಭಿವೃದ್ಧಿಯ ಬಗ್ಗೆ ದೃಷ್ಟಿಯಿಲ್ಲ. ರೈತರ ಕಣ್ಣೀರಿನ ಬಗ್ಗೆ ಕಾಳಜಿಯಿಲ್ಲ. ಯುವಕರ ಭವಿಷ್ಯದ ಬಗ್ಗೆ ಚಿಂತೆಯಿಲ್ಲ ಮತ್ತು ಜನರ ಸಮಸ್ಯೆಗಳ ಬಗ್ಗೆ ಉತ್ತರದಾಯಿತ್ವವೇ ಇಲ್ಲ. ಇವರಿಗೆ ಇರುವುದು ಒಂದೇ ಅಜೆಂಡಾ - ಅದು ಕುರ್ಚಿ, ಅಧಿಕಾರ, ಲೂಟಿ ಮತ್ತು ಸ್ವಾರ್ಥ ರಾಜಕಾರಣ ಎಂದು ಟೀಕಿಸಿದ್ದಾರೆ. ಕರ್ನಾಟಕದ ಜನರ ಸಹನೆಯನ್ನು ಕಾಂಗ್ರೆಸ್ ದುರ್ಬಲತೆ ಎಂದು ಭಾವಿಸಬಾರದು. ಕನ್ನಡಿಗರು ಎಲ್ಲವನ್ನೂ ಗಮನಿಸುತ್ತಿದ್ದಾರೆ ಎಂದು ಅಶೋಕ ಹೇಳಿದ್ದಾರೆ.

### ದಲಿತರಿಗೆ ಕಾಂಗ್ರೆಸ್ ವಂಚನೆ: ಛಲವಾದಿ

**ಮೈಸೂರು:** ಕಾಂಗ್ರೆಸ್ ದಲಿತರನ್ನು ವೋಟ್ ಬ್ಯಾಂಕ್ ಮಾಡಿಕೊಂಡಿದೆ. ಆದರೆ ದಲಿತರನ್ನು ಮುಖ್ಯಮಂತ್ರಿ ಮಾಡದೆ ವಂಚಿಸುತ್ತಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು.



ಬುಧವಾರ ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದರೆ ನಮ್ಮ ತಕರಾರು ಇಲ್ಲ. ಆದರೆ, ದಲಿತರನ್ನು ಸಿಎಂ ಮಾಡುತ್ತೇವೆ ಎಂದು ಕಾಂಗ್ರೆಸ್ ಕಳೆದ 70 ವರ್ಷದಿಂದ ವಂಚನೆ ಮಾಡುತ್ತಿದೆ. ಹಾಗಾಗಿ, ಕಾಂಗ್ರೆಸ್‌ನಲ್ಲಿರುವ ದಲಿತ ನಾಯಕರು ಸೀಡ್‌ಲೆಸ್ ಮತ್ತು ಶುಗರ್ ಲೆಸ್ ರೀತಿ ಆಗಿದ್ದಾರೆ. ಯಾರಿಗೂ ನಮಗೆ ಸಿಎಂ ಕೊಡಿ ಎಂದು ಕೇಳುವ ತಾಕತ್ತು ಇಲ್ಲ. ಕಾಂಗ್ರೆಸ್ ಪಕ್ಷ ದಲಿತರಿಗೆ ದ್ರೋಹ ಮಾಡಿದೆ ಎಂದು ವಾಗ್ದಾಳಿ ನಡೆಸಿದರು. ದಲಿತರು ಸಿಎಂ ಆಗಬೇಕಾದ ಸಮಯದಲ್ಲಿ ದಲಿತರಿಗೆ ಸಮಾಧಿ ಕಟ್ಟಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರು. ಹಿಂದೆ ಪರಮೇಶ್ವರ್ ಅವರನ್ನು ಸೋಲಿಸಿದ್ದರು. ಈಗಲಾದರೂ ಸಿದ್ದರಾಮಯ್ಯನವರು ದಲಿತರಾದ ಡಾ.ಜಿ. ಪರಮೇಶ್ವರ್ ಪರ ಅವರು ಧ್ವನಿ ಎತ್ತುತ್ತಿಲ್ಲ. ಇದನ್ನು ಕಾಂಗ್ರೆಸ್‌ನಲ್ಲಿರುವ ಎಲ್ಲಾ ದಲಿತರು ಖಂಡಿಸಬೇಕು. ಕಾಂಗ್ರೆಸ್‌ನ ದಲಿತ ನಾಯಕರು ಯಾರು ಕೂಡ ಸಚಿವ ಸ್ಥಾನ ತೆಗೆದುಕೊಳ್ಳದೆ, ಪ್ರತಿಭಟನೆ ಮಾಡಬೇಕು ಎಂದು ಕಿಡಿಕಾರಿದರು.

## ಸಂಪಾದಕೀಯ

### ರೂಬಿಯೋ ಭೇಟಿ ಎಷ್ಟು ಫಲಕಾರಿ?

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಭಾರತಕ್ಕೆ ನೀಡಿದ ಭೇಟಿಯು ಉಭಯದೇಶಗಳ ನಡುವಿನ ವ್ಯಾಪಾರ ವಹಿವಾಟು ಹೆಚ್ಚಿಸುವ ಉದ್ದೇಶಕ್ಕಿಂತಲೂ ಹೆಚ್ಚಾಗಿ ಭಾರತ ಮತ್ತು ಅಮೆರಿಕಗಳ ಮಧ್ಯೆ ಹದಗೆಟ್ಟಿರುವ ರಾಜತಾಂತ್ರಿಕ ಸಂಬಂಧಕ್ಕೆ ತೇಪೆ ಹಚ್ಚುವ ಉದ್ದೇಶದ್ದಾಗಿತ್ತು ಎನ್ನುವುದೇ ಹೆಚ್ಚು ಸೂಕ್ತ. ಆದರೆ ಅವರು ಈ ಉದ್ದೇಶದಲ್ಲಿ ಎಷ್ಟು ಸಫಲರಾಗಿದ್ದಾರೆ ಎನ್ನುವುದು ಮಾತ್ರ ಇನ್ನೂ ಪ್ರಶ್ನಾರ್ಥಕವಾಗಿಯೇ ಉಳಿದಿದೆ. ಏಕೆಂದರೆ ಅಮೆರಿಕವು ಭಾರತ ಮತ್ತು ಪಾಕಿಸ್ತಾನ ನಡುವಿನ ಸಮೀಕರಣವನ್ನು ನಿಲ್ಲಿಸದ ಹೊರತು,



ಭಾರತದ ಮೇಲೆ ಹೇರುತ್ತಿರುವ ತೆರಿಗೆ ದಂಡವನ್ನು ಹಿಂತೆಗೆದುಕೊಳ್ಳದ ಹೊರತು ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧವು ಸರಿದಾರಿಗೆ ಮರಳುವುದು ಕಷ್ಟವೇ ಆಗಿದೆ. ಮಾರ್ಕೋ ರೂಬಿಯೋ ಭಾರತಕ್ಕೆ ಹಿತಕರವಾದಂತಹ ಯಾವುದೇ ಮಾತುಗಳನ್ನು ಆಡಿದರೂ ಅದು ಆಚರಣೆಗೆ ಬಾರದ ಹೊರತು ಸಂಬಂಧ ಸುಧಾರಣೆ ಕಷ್ಟವೇ. ಅಮೆರಿಕದಿಂದ ಭಾರತಕ್ಕೆ ಪೂರಕವಾದ ಕಾರ್ಯಾನುಷ್ಠಾನ ನಡೆಯಬೇಕಾದರೆ ಅದು ಅಧ್ಯಕ್ಷ ಟ್ರಂಪ್‌ರಿಂದ ಆಗಬೇಕೇ ಹೊರತು, ವಿದೇಶಾಂಗ ಕಾರ್ಯದರ್ಶಿಯಿಂದಾಗಲಿ, ಭಾರತದಲ್ಲಿರುವ ಅಮೆರಿಕದ ರಾಯಭಾರಿ ಸರ್ಗಿಯೋ ಗೋರ್ ಅವರಿಂದಾಗಲಿ ಅಲ್ಲ. ಆದರೆ ಟ್ರಂಪ್ ಅದರೋ ಈವರೆಗೆ ಕೈಗೊಂಡ ಕಾರ್ಯಗಳೆಲ್ಲವೂ ಭಾರತದ ಪಾಲಿಗೆ ಹಾನಿ ತರುವಂತಹುದೇ ಆಗಿವೆ. ಭಾರತ ಮಂಟಪಂನಲ್ಲಿ ನಡೆಯುತ್ತಿರುವ ಕಾರ್ಯಕ್ರಮದ ಮಧ್ಯೆಯೇ ಟ್ರಂಪ್ ಅವರು ಅಮೆರಿಕದಿಂದ ಫೋನ್ ಕರೆ ಮಾಡಿ ಭಾರತವು ತನ್ನ ಮೇಲೆ ಶೇ.100ರಷ್ಟು ವಿಶ್ವಾಸವಿಡಬಹುದು ಎಂದು ಹೇಳಿದರಾದರೂ, ಅವರ ಈ ಮಾತಿನ ಮೇಲೆಯೇ ವಿಶ್ವಾಸವಿಡುವುದು ಕಷ್ಟವೇ ಆಗಿದೆ.

ರೂಬಿಯೋ ಅವರು ಕ್ವಾಡ್ ದೇಶಗಳ ಸಚಿವ ಮಟ್ಟದ ಸಭೆಯಲ್ಲಿ ಪಾಲ್ಗೊಂಡರಾದರೂ ಈಗ ಕ್ವಾಡ್‌ಗೆ ಸಂಬಂಧಿಸಿ ಅಮೆರಿಕದ ನಿಲುವಿನ ಮೇಲೆ ಕೂಡಾ ಸಂಶಯದ ನೆರಳು ಕವಿದಿದೆ. ಇಂಡೋ– ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಪಾರಮ್ಯಕ್ಕೆ ಸವಾಲೊಡ್ಡುವುದು ಕ್ವಾಡ್ ಕೂಟದ ಉದ್ದೇಶವಾಗಿದ್ದರೂ ಇತ್ತೀಚೆಗಷ್ಟೆ ಚೀನಾಕ್ಕೆ ಭೇಟಿ ನೀಡಿದ್ದ ಟ್ರಂಪ್ ಅವರು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜತೆ ಆತ್ಮೀಯ ಮಾತುಕತೆ ನಡೆಸಿ ಆವೆರಡು ದೇಶಗಳ ನಡುವಿನ ಬಾಂಧವ್ಯ ವೃದ್ಧಿಸುವ ಮಾತನಾಡಿದ್ದಾರೆ.

ರೂಬಿಯೋ ಭಾರತ ಭೇಟಿಯ ವೇಳೆ ಸಂಭವಿಸಿದ ಒಂದೇ ಒಂದು ಉತ್ತಮ ಬೆಳವಣಿಗೆಯೆಂದರೆ ವಿರಳ ಖನಿಜಗಳ ಗಣಿಗಾರಿಕೆ, ಸಂಸ್ಕರಣೆ ಮತ್ತು ಪೂರೈಕೆ ಜಾಲದ ಕುರಿತಂತೆ ಅಮೆರಿಕ ಮತ್ತು ಭಾರತಗಳು ಒಪ್ಪಂದಕ್ಕೆ ಸಹಿ ಹಾಕಿರುವುದು. ತಂತ್ರಜ್ಞಾನ ಅಭಿವೃದ್ಧಿಗೆ ವಿರಳ ಖನಿಜಗಳು ಈಗ ಅತ್ಯವಶ್ಯವಾಗಿರುವ ಹಿನ್ನೆಲೆಯಲ್ಲಿ ಹಾಗೂ ಪ್ರಸ್ತುತ ಚೀನಾವನ್ನೆ ಇದಕ್ಕೆ ಅವಲಂಬಿಸಿರುವ ಹಿನ್ನೆಲೆಯಲ್ಲಿ ಭಾರತ ಮತ್ತು ಅಮೆರಿಕ ನಡುವಿನ ಒಪ್ಪಂದವು ಈ ಕ್ಷೇತ್ರದಲ್ಲಿ ಸ್ವಾವಲಂಬನೆಗೆ ನೆರವಾಗಬಲ್ಲುದು.

# ಈ ಪರಿಸ್ಥಿತಿಗಳಲ್ಲಿ ನಗುವುದೂ ಅಪರಾಧವೇ!

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ನಗು ಕೆಲವೊಮ್ಮೆ ಮನುಷ್ಯನ ಮಾನಸಿಕ ಸ್ಥಿತಿಯನ್ನು ಬಹಿರಂಗಪಡಿಸಿಬಿಡುತ್ತದೆ. ಒಬ್ಬೊಬ್ಬರೇ ಕುಳಿತು ಸುಮ್ಮನೆ ನಗುತ್ತಿದ್ದರೆ, ಅದನ್ನು ನೋಡಿದವರು ಇವರಿಗೆ ಹುಚ್ಚು ಹಿಡಿದಿದೆ ಎಂದುಕೊಳ್ಳುತ್ತಾರೆಯೇ ಹೊರತು, ಆ ನಗುವಿಗೆ ಒಂದು ಕಾರಣವಿರಬಹುದು ಎಂದು ಭಾವಿಸುವುದಿಲ್ಲ. ಏಕೆಂದರೆ, ಸುಖಾಸುಮ್ಮನೆ ನಗುವುದು ಒಳ್ಳೆಯ ಲಕ್ಷಣವಲ್ಲ. ಹಾಗೆಯೇ, ಸಾವಿನ ಮನೆಯಲ್ಲಿ, ನೊಂದವರಿಗೆ ಸಾಂತ್ವನ ಹೇಳಲು ಹೋದ ವೇಳೆ ಯಾವ ಕಾರಣಕ್ಕೂ ನಗಬಾರದು. ಅಂಥ ಸಂದರ್ಭದ ನಗು ತೀರಾ ಅಪರಾಧ ಎಂದೇ ಎನ್ನಿಸಿಬಿಡುತ್ತದೆ.

ನಗುವಿನ ಬಗ್ಗೆ ಇಷ್ಟೆಲ್ಲಾ ಹೇಳಲು ಕಾರಣಗಳಿವೆ. ತೀರಾ ಮೊನ್ನೆಯಷ್ಟೇ ತಮಿಳುನಾಡಿನಲ್ಲಿ, ಅಂಗಡಿಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೊರಟಿದ್ದ ಹತ್ತು ವರ್ಷದ ಬಾಲಕಿ ವಾಪಸ್ ಬರಲೇ ಇಲ್ಲ. ಇಬ್ಬರು ದುಷ್ಕರ್ಮಿಗಳು ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಕೊಂದು ಹಾಕಿದ್ದರು. ಪಾಪ, ಮಗಳ ಬರುವಿಕೆಗಾಗಿ ಕಾದು ಕಾದು ಬಸವಳಿದಿದ್ದ ಪೋಷಕರು ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದರು. ಎರಡು ದಿನಗಳ ಬಳಿಕ ಆ ಬಾಲಕಿಯ ಶವ ಪತ್ತೆಯಾಗಿತ್ತು. ಇದಾದ ಬಳಿಕ, ಬಾಲಕಿಯನ್ನು ಕೊಂದ ಇಬ್ಬರನ್ನು ಸೆರೆಹಿಡಿದ ಸುದ್ದಿಯನ್ನು ಹೇಳಲು ಪೊಲೀಸರು ಕಾತರಗೊಂಡಿದ್ದರು. ಏಕೆಂದರೆ, ಇತ್ತೀಚೆಗಷ್ಟೇ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದಿರುವ ವಿಜಯ್ ಸರ್ಕಾರಕ್ಕೆ ಈ ಪ್ರಕರಣ ಗಂಭೀರ ಸವಾಲಾಗಿ, ದೇಶಾದ್ಯಂತ ಸುದ್ದಿಯಾಗಿತ್ತು. ದುಷ್ಕರ್ಮಿಗಳು ಸಿಕ್ಕಿಬಿದ್ದಿದ್ದಾರೆ ಎಂಬುದನ್ನಷ್ಟೇ ಹೇಳಬೇಕಿತ್ತು. ಆದರೆ, ಆ ಪತ್ರಿಕಾಗೋಷ್ಠಿಯಲ್ಲಿ ಕೆಲವು ಅಪದ್ಧಗಳು ನಡೆದುಹೋದವು. ಪೊಲೀಸರು ಬಾಲಕಿಯ ಸಾವನ್ನೇ ಮರೆತುಬಿಟ್ಟರು! ಸಾವಿಗೆ ಕಾರಣರಾದವರನ್ನು ಹಿಡಿದೆವು ಎಂಬ ಯಶಸ್ಸಿನ ಅಮಲಷ್ಟೇ ಅವರ ತಲೆಯಲ್ಲಿತ್ತು. ಹೀಗಾಗಿ, ಮಾಧ್ಯಮಗಳ ಕ್ಯಾಮೆರಾಗಳ ಮುಂದೆಯೇ ಗಹಗಹಿಸಿ ನಕ್ಕರು, ತಮಾಷೆ ಮಾಡಿದರು. ತಾವು ಬಾಲಕಿಯೊಬ್ಬಳ ಸಾವಿನ ನಂತರದ ಬೆಳವಣಿಗೆಯ ಬಗ್ಗೆ ಮಾತನಾಡಲು ಬಂದಿದ್ದೇವೆ ಎಂಬ ಪ್ರಜ್ಞೆಯೇ ಆ ಮೂವರಿಗೂ ಇರಲಿಲ್ಲ. ದುರಂತವೆಂದರೆ, ಆ ಮೂವರು ಪೊಲೀಸ್ ಅಧಿಕಾರಿಗಳಲ್ಲಿ ಒಬ್ಬರು ಮಹಿಳೆಯೂ ಆಗಿದ್ದರು.

ಒಂದು ವ್ಯವಸ್ಥೆ ಎಷ್ಟರಮಟ್ಟಿಗೆ ಜಡ್ಡುಗಟ್ಟಿಹೋಗಿದೆ ಎಂಬುದನ್ನು ಇಂಥ ಕ್ಷಣಗಳೇ ಬಯಲು ಮಾಡುತ್ತವೆ. ಆ ಬಾಲಕಿಯ ಜಾಗದಲ್ಲಿ ಒಂದು ಕ್ಷಣ ತಮ್ಮದೇ ಮಗಳನ್ನು ಇಟ್ಟು ನೋಡಿಕೊಂಡಿದ್ದರೆ, ಆ ಯಾವ ಅಧಿಕಾರಿಯ ತುಟಿಯಲ್ಲೂ ನಗು ಸುಳಿಯುತ್ತಿರಲಿಲ್ಲ. ಆದರೆ, ಬಲಿಯಾದವಳು ಬೇರೆಯವರ ಮಗಳಾಗಿದ್ದಾಗ ಆಕೆ ಬರೀ ಒಂದು ಪ್ರಕರಣವಾಗಿ, ಒಂದು ಕಡತದ ಸಂಖ್ಯೆಯಾಗಿ ಸೀಮಿತಗೊಂಡುಬಿಡುತ್ತಾಳೆ. ಆ ಸಂಖ್ಯೆಯ ಹಿಂದೆ ಇದ್ದ ಪುಟ್ಟ ಕನಸುಗಳು, ಆ ಮಗುವಿನ ನಗು, ಮನೆಯವರ ಕಣ್ಣೀರು ಯಾವುದೂ ನಮ್ಮ ಲೆಕ್ಕಕ್ಕೇ ಬರುವುದಿಲ್ಲ. ಬೇರೊಬ್ಬರ ದುರಂತವನ್ನು ನಮ್ಮ ಸಾಧನೆಯ ವೇದಿಕೆಯನ್ನಾಗಿ ಬಳಸಿಕೊಳ್ಳುವ ಈ ಮನಃಸ್ಥಿತಿಯೇ ನಮ್ಮ ಕಾಲದ ಅತಿದೊಡ್ಡ ಅನಾಹುತ.

ಈಗ ನನ್ನ ಪ್ರಶ್ನೆ ಇಷ್ಟೇ. ಅಪರಾಧವೇ ನಡೆಯದಂತೆ ಸಮಾಜವನ್ನು ಕಟ್ಟುವುದು ನಮ್ಮ ಸಾಧನೆಯೋ, ಅಥವಾ ಅಪರಾಧ ನಡೆದ ಮೇಲೆ ದುಷ್ಕರ್ಮಿಗಳನ್ನು ಹಿಡಿಯುವುದು ನಮ್ಮ ಸಾಧನೆಯೋ? ಅತ್ಯಂತ ದುಃಖಕರ ಸಂಗತಿ ಎಂದರೆ, ನಾವು ಮತ್ತು ನಮ್ಮ ಸಮಾಜ ಇಂದಿಗೂ ಎರಡನೆಯದನ್ನೇ ದೊಡ್ಡ ಗೆಲುವೆಂದು ಸಂಭ್ರಮಿಸುತ್ತಿದೆ. ಎಲ್ಲೋ ದುರುಳರು ಯುವತಿಯೊಬ್ಬಳನ್ನು ಅತ್ಯಾಚಾರ ಮಾಡಿ ಹತ್ಯೆಗೈಯುತ್ತಾರೆ, ಇನ್ನೆಲ್ಲೋ ಕೆಲಸದ ಸ್ಥಳದಲ್ಲೇ ಸಹೋದ್ಯೋಗಿಯೊಬ್ಬ ಮಹಿಳೆಯ ಮೇಲೆ ಅತ್ಯಾಚಾರವೆಸಗಿ ಸಾಯಿಸುತ್ತಾನೆ, ಮತ್ತೆಲ್ಲೋ ಚಿಕ್ಕ ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತದೆ, ವರದಕ್ಷಿಣೆಯ ನೆಪದಲ್ಲಿ ಮನೆಯೊಳಗೇ ಸೊಸೆಯನ್ನು ಬಲಿ ತೆಗೆದುಕೊಳ್ಳಲಾಗುತ್ತದೆ. ಈ ಎಲ್ಲ ಪ್ರಕರಣಗಳಲ್ಲೂ ನಾವು ಮಾಧ್ಯಮದವರೂ ಸೇರಿದಂತೆ ಎಲ್ಲರೂ ಕೇಳುವ ಪ್ರಶ್ನೆ ಒಂದೇ ದುಷ್ಕರ್ಮಿಗಳ ಬಂಧನ ಯಾವಾಗ? ಆದರೆ, ಈ ಮಹಿಳಾ ಶೋಷಣೆ ಕೊನೆಗೊಳ್ಳುವುದು ಯಾವಾಗ? ಎಂಬ ಪ್ರಶ್ನೆಯನ್ನು ನಾವು ಎಂದಾದರೂ ನಮಗೇ ಕೇಳಿಕೊಂಡಿದ್ದೇವೆಯೇ?

ಇದರಲ್ಲಿ ನಾವು ಮಾಧ್ಯಮದವರ ಪಾಲೂ ಸಣ್ಣದೇನಲ್ಲ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಒಂದು ಅತ್ಯಾಚಾರ, ಒಂದು ಕೊಲೆ ನಡೆದಾಗ ನಾವು ಅದರ ಮೇಲೆ ಮುಗಿಬೀಳುತ್ತೇವೆ, ಬ್ರೇಕಿಂಗ್ ನ್ಯೂಸ್ ಆಗಿ ಗಂಟೆಗಟ್ಟಲೆ ಚರ್ಚಿಸುತ್ತೇವೆ, ಟಿಆರ್‌ಪಿ ಎಣಿಸುತ್ತೇವೆ. ಆದರೆ, ಆರೋಪಿ ಸಿಕ್ಕಿಬಿದ್ದ ಮರುದಿನವೇ ಆ ಸುದ್ದಿ ತಣ್ಣಗಾಗುತ್ತದೆ. ಆ ಕುಟುಂಬ ಮುಂದೆ ಹೇಗೆ ಬದುಕಿತು, ಕೋರ್ಟಿನಲ್ಲಿ ನ್ಯಾಯ ಸಿಕ್ಕಿತೋ ಇಲ್ಲವೋ ಎಂಬುದನ್ನು ಹಿಂಬಾಲಿಸುವ ತಾಳ್ಮೆ ನಮಗಿಲ್ಲ. ಶೋಷಣೆಯನ್ನು ಸುದ್ದಿಯಾಗಿ ಮಾರುವ ನಾವು, ಆ ಶೋಷಣೆಯನ್ನು ಬೇರಿನಿಂದ ತಡೆಯುವ ಪ್ರಶ್ನೆಯನ್ನು ಮಾತ್ರ ಎಂದೂ ಅಷ್ಟೇ ಗಂಭೀರವಾಗಿ ಎತ್ತುವುದಿಲ್ಲ.

ಇಂದಿಗೂ ಹೆಣ್ಣುಮಕ್ಕಳ ಹೆತ್ತವರ ಮನದಲ್ಲಿ ಈ ಭಯ ಮನೆಮಾಡಿಯೇ ಇದೆ ಮನೆಯಿಂದ ಹೊರಗೆ ಹೋದ ನನ್ನ ಮಗಳು ಸುರಕ್ಷಿತವಾಗಿ ವಾಪಸ್ ಬರುತ್ತಾಳೆಯೇ? ಮಗಳು ಶಾಲೆಗೋ, ಕಾಲೇಜಿಗೋ, ಕೆಲಸಕ್ಕೋ ಹೊರಟಾಗ, ಆಕೆ ಮನೆಗೆ ಮರಳುವವರೆಗೂ ಆ ತಂದೆ–ತಾಯಿಯ ಎದೆಯಲ್ಲಿ ಒಂದು ಸಣ್ಣ ನಡುಕ ಇದ್ದೇ ಇರುತ್ತದೆ. ದುರಂತವೆಂದರೆ, ಈ ಆತಂಕವನ್ನು ಬೇರೊಬ್ಬರ ಬಳಿ ಹೇಳಿಕೊಳ್ಳುವ ಸ್ಥಿತಿಯೂ ಇಲ್ಲ. ಇಂಥ ಮಾತುಗಳನ್ನು ಆಡಿದರೆ, ನಿಮ್ಮ ಆಲೋಚನೆಯೇ ನೆಗೆಟಿವ್ ಎಂಬ ಮುದ್ರೆಯನ್ನೂ ಒತ್ತಿಬಿಡುತ್ತಾರೆ. ಆದರೆ, ಹೆಣ್ಣುಮಗುವನ್ನು ಹೆತ್ತವರ ಎದೆಯೊಳಗಿನ ಆ ನಿತ್ಯದ ನೋವು, ಆ ಮೌನ ಪ್ರಾರ್ಥನೆ ಇವರಿಗೆ ಎಂದಾದರೂ ಅರ್ಥವಾಗುತ್ತದೆಯೇ?

ಇದರ ನಡುವೆಯೇ, ಪುಣೆಯಲ್ಲಿ ಯುವಕ–ಯುವತಿಯ ಮೇಲೆ ಕಾರು ಹರಿಸಿ ಹತ್ಯೆಗೈದ ಅಪ್ರಾಪ್ತ ಬಾಲಕ ಮತ್ತು ಆತನ ಪೋಷಕರ ಸಂಭ್ರಮದ ವಿಡಿಯೋ ಒಂದು ವೈರಲ್ ಆಗಿದೆ. ಜಾಮೀನಿನ ಮೇಲೆ ಬಿಡುಗಡೆಯಾದ ಆರೋಪಿಗಳು ಮನೆಯಲ್ಲಿ ಸಂಭ್ರಮಾಚರಣೆಯನ್ನೇ ಮಾಡಿದ್ದಾರೆ, ಜೈಲಿನಿಂದ ಮರಳಿ ಬಂದವರನ್ನು ಹೆಗಲ ಮೇಲೆ ಎತ್ತಿಕೊಂಡು ಕುಣಿದಿದ್ದಾರೆ. ಆದರೆ, ಇಲ್ಲಿ ಏಳಬೇಕಾದ ಪ್ರಶ್ನೆ ಇಷ್ಟೇ, ಈ ಪರಿಯ ಸಂಭ್ರಮಕ್ಕೆ ಅವರೇನು ಯುದ್ಧ ಗೆದ್ದು ಬಂದಿದ್ದರೇ? ರಸ್ತೆಯಲ್ಲಿ ನಿಂತಿದ್ದ ಇಬ್ಬರ ಮೇಲೆ ಕಾರು ಹಾಯಿಸಿ ಪ್ರಾಣ ತೆಗೆದ ಆರೋಪದ ಮೇಲೆ ಜೈಲಿಗೆ ಹೋಗಿ ಬಂದವರಿವರು. ಅಂದು ಮಡಿದ ಆ ಯುವಕ–ಯುವತಿಯ ಮನೆಗಳಲ್ಲಿ ಕಣ್ಣೀರು ಇನ್ನೂ ಆರಿಲ್ಲ. ಬೆಳೆದು ನಿಂತು, ಕೆಲಸಕ್ಕೆ ಸೇರಿ ಕುಟುಂಬಕ್ಕೆ ದುಡಿಮೆಯ ಆಸರೆಯಾಗಿದ್ದ ಮಕ್ಕಳನ್ನು ಕಳೆದುಕೊಂಡ ಆ ಮನೆಗಳ ಸ್ಥಿತಿ ಏನಾಗಿರಬೇಡ! ಆ ಮಕ್ಕಳ ಬಗ್ಗೆ ಹೆತ್ತವರು ಎಷ್ಟೆಲ್ಲಾ ಕನಸುಗಳನ್ನು ಕಂಡಿದ್ದಿರಬಹುದು ಎಂಬ ಸಣ್ಣ ಅರಿವಾದರೂ ಸಂಭ್ರಮಿಸಿದವರಿಗೆ ಇತ್ತೇ? ಇಲ್ಲ. ನಮ್ಮ ನಾಗರಿಕ ಸಮಾಜ ಈ ಎಲ್ಲ ಸೂಕ್ಷ್ಮ, ಭಾವನಾತ್ಮಕ ಸಂಗತಿಗಳನ್ನು ಮರೆತೇಬಿಟ್ಟಿದೆ. ನಾವೀಗ ಎಲ್ಲವನ್ನೂ ಘಟನೆ ನಡೆದ ಮೇಲೆಯೇ ಆಲೋಚಿಸುತ್ತೇವೆಯೇ ಹೊರತು, ಘಟನೆಗೆ ಮುನ್ನ ಯೋಚಿಸುವುದೇ ಇಲ್ಲ.

ಈ ಸಂಭ್ರಮ ಕೇವಲ ಒಂದು ಕುಟುಂಬದ ಅಸೂಕ್ಷ್ಮತೆಯಲ್ಲ. ಅದು ಇಡೀ ಸಮಾಜಕ್ಕೆ ರವಾನಿಸುವ ಒಂದು ಅಪಾಯಕಾರಿ ಸಂದೇಶ. ಹಣವಿದ್ದರೆ, ಪ್ರಭಾವವಿದ್ದರೆ ಪ್ರಾಣ ತೆಗೆದರೂ ಜಾಮೀನು ಸಿಗುತ್ತದೆ, ಬೇಕಿದ್ದರೆ ಸಂಭ್ರಮಿಸಲೂಬಹುದು ಎಂಬ ಪಾಠವನ್ನು ಅದು ಮುಂದಿನ ಪೀಳಿಗೆಗೆ ಕಲಿಸುತ್ತದೆ.

ಇದೇ ಅಪರಾಧವನ್ನು ಬಡವನ ಮಗ ಮಾಡಿದ್ದರೆ ಆತ ವರ್ಷಗಟ್ಟಲೆ ಜೈಲಿನ ಕಂಬಿಗಳ ಹಿಂದೆ ಕೊಳೆಯಬೇಕಾಗಿತ್ತು. ಆದರೆ ಇಲ್ಲಿ ಹೆಗಲ ಮೇಲೆ ಹೊತ್ತು ಕುಣಿಯುವ ಸ್ವಾತಂತ್ರ್ಯ ಸಿಗುತ್ತದೆ. ಯಾವ ಸಮಾಜದಲ್ಲಿ ಮನುಷ್ಯನ ಪ್ರಾಣಕ್ಕಿಂತ ಆತನ ಜೇಬಿನ ತೂಕ ಹೆಚ್ಚಾಗುತ್ತದೋ, ಆ ಸಮಾಜ ಒಳಗಿನಿಂದಲೇ ಸತ್ತುಹೋಗಿರುತ್ತದೆ.

ಇಲ್ಲಿ ನಗು ಎಂಬುದು ಕೇವಲ ತುಟಿಯ ಮೇಲಿನ ಚಲನೆಯಲ್ಲ. ಅದು ನಮ್ಮ ಒಳಗಿನ ಸಂವೇದನೆ ಸತ್ತುಹೋಗಿರುವುದರ ಸಂಕೇತ. ಬಾಲಕಿಯ ಶವದ ನೆನಪು ಇನ್ನೂ ಹಸಿಯಾಗಿರುವಾಗಲೇ ಪೊಲೀಸರ ತುಟಿಯಲ್ಲಿ ನಗು ಅರಳುತ್ತದೆ, ಇಬ್ಬರ ಪ್ರಾಣ ಬಲಿ ಪಡೆದ ಕೈಗಳು ಮನೆಯಲ್ಲಿ ಸಂಭ್ರಮದಿಂದ ಕುಣಿಯುತ್ತವೆ. ಇದು ನಮ್ಮ ಗೆಲುವಿನ ಲಕ್ಷಣವಲ್ಲ, ನಮ್ಮ ಮನುಷ್ಯತ್ವದ ಸೋಲಿನ ಲಕ್ಷಣ.

ಒಂದು ನಾಗರಿಕ ಸಮಾಜದ ನಿಜವಾದ ಅಳತೆಗೋಲು, ಅದು ಎಷ್ಟು ಬೇಗ ಅಪರಾಧಿಯನ್ನು ಹಿಡಿಯುತ್ತದೆ ಎಂಬುದಲ್ಲ. ಎಷ್ಟು ಹೆಣ್ಣುಮಕ್ಕಳು ಭಯವಿಲ್ಲದೆ ಮನೆಯಿಂದ ಹೊರಬಿದ್ದು, ಸುರಕ್ಷಿತವಾಗಿ ಮರಳಿ ಬರುತ್ತಾರೆ ಎಂಬುದು. ಆ ದಿನ ಬಂದಾಗ ಮಾತ್ರ ನಾವು ನಿಜವಾಗಿಯೂ ಸಂಭ್ರಮಿಸಲು ಅರ್ಹರಾಗುತ್ತೇವೆ. ಅಲ್ಲಿಯವರೆಗೆ ಪ್ರತಿ ಬಂಧನವೂ ಒಂದು ಸೋಲಿನ ಒಪ್ಪಿಗೆಯಷ್ಟೇ, ಅಪರಾಧವನ್ನು ತಡೆಯಲು ನಮಗೆ ಸಾಧ್ಯವಾಗಲಿಲ್ಲ ಎಂಬ ಮೌನ ಒಪ್ಪಿಗೆ. ಹೀಗಾಗಿ, ಮುಂದಿನ ಬಾರಿ ಇಂಥದ್ದೊಂದು ಸುದ್ದಿ ಕಿವಿಗೆ ಬಿದ್ದಾಗ ನಮ್ಮೊಳಗೆ ನಗು ಮೂಡಬಾರದು, ಮೂಡಿದರೂ ಒಂದು ಕ್ಷಣದಲ್ಲಿ ಗಂಟಲಲ್ಲೇ ಅದು ಸತ್ತುಹೋಗಬೇಕು.

ಬೇರೊಬ್ಬರ ನೋವಿಗೆ ನಮ್ಮ ಮುಖ ಬಾಡಬೇಕು, ಕಣ್ಣಂಚು ಒದ್ದೆಯಾಗಬೇಕು. ಆ ಬಾಡಿದ ಮುಖ, ಆ ಮೌನ, ಆ ಒದ್ದೆಗಣ್ಣು ಇವೇ ನಮ್ಮನ್ನು ಇನ್ನೂ ಮನುಷ್ಯರನ್ನಾಗಿ ಉಳಿಸಿಕೊಂಡಿರುವ ಕೊನೆಯ ಗುರುತುಗಳು. ಆ ಗುರುತುಗಳನ್ನೂ ನಾವು ಕಳೆದುಕೊಂಡ ದಿನ ಹೌದು, ಆಗ ಈ ಪರಿಸ್ಥಿತಿಗಳಲ್ಲಿ ನಗುವುದೇ ಅತಿದೊಡ್ಡ ಅಪರಾಧವಾಗುತ್ತದೆ.

## ಸಕಾಲದಲ್ಲಿ ಫಲ

**ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।**
**ಸ್ವಂ ಕಾಲಂ ನಾತಿವರ್ತಂತೇ ತಥಾ ಕರ್ಮ ಪುರಾಕೃತಮ್ ॥ –ಮಹಾಭಾರತ**

ಫಲ ಪುಷ್ಪಗಳು ಯಾರೂ ಪ್ರೇರೇಪಿಸದೆ ಬರುವಂತೆ ನಾವು ಮಾಡಿದ ಪ್ರಾಚೀನ ಕರ್ಮವು (ಫಲವನ್ನೀಯುವ ವಿಷಯದಲ್ಲಿ) ತನ್ನ ಕಾಲವನ್ನು ಮೀರುವುದಿಲ್ಲ. ಕಾಲದಲ್ಲಿ ಫಲವನ್ನು ಕೊಟ್ಟೇ ಕೊಡುತ್ತವೆ – ಎಂಬುದು ಶ್ಲೋಕಾರ್ಥ.

ಜಗತ್ತಿನಲ್ಲಿ ಯಾವ ಕಾಲದಲ್ಲಿ ಏನಾಗಬೇಕೋ ಅದು ಆಯಾ ಕಾಲದಲ್ಲಿ ಸಂಭವಿಸುತ್ತದೆ. ಜಗದ ನಿಯಮವನ್ನು ಬದಲಾಯಿಸುವುದು ಸಾಧ್ಯವಿಲ್ಲವೆಂದೇ ಹೇಳಬಹುದು. ಯಾರ ಪ್ರೇರೇಪಣೆಯಿಲ್ಲದೇ, ಯಾರದೇ ಕೈವಾಡವಿಲ್ಲದೇ ಆಗಬೇಕಾದದ್ದು ಸಂದರ್ಭಕ್ಕನುಗುಣವಾಗಿ ಆಗುತ್ತದೆ.

ಗಿಡವನ್ನು ನೆಟ್ಟು ಮಣ್ಣು ಗೊಬ್ಬರಗಳನ್ನು ಹಾಕಿ ಹೆಚ್ಚೆಚ್ಚು ನೀರೆರೆದರೆ ತಕ್ಷಣ ಫಲ–ಪುಷ್ಪಾದಿಗಳು ಬಿಡುವುದಿಲ್ಲ. ಅದಕ್ಕೆ ಅದರದೇ ಆದ ಕಾಲ ಬೇಕಾಗುತ್ತದೆ.




ಸಮಾಧಾನ ಚಿತ್ತದಿಂದ ಎಲ್ಲವನ್ನು ಗಮನಿಸಬೇಕು. ಒಂದಷ್ಟು ಸಮಯ ಕಾಯಬೇಕಾಗುತ್ತದೆ.

ನಮ್ಮದು ಕಿಂಚಿತ್ ಪ್ರಯತ್ನ ಎಲ್ಲದಿದ್ದರೂ, ಯಾರೂ ಪ್ರೇರೇಪಿಸದಿದ್ದರೂ ತಾನು ಹೂ ಬಿಡುವ ಸಂದರ್ಭಗಳಲ್ಲಿ ಬಳ್ಳಿಗಳು, ಗಿಡ–ಮರಗಳು ಫಲ– ಪುಷ್ಪಾದಿಗಳನ್ನು ಕೊಡುತ್ತವೆ. ಆದರ ಸಮಯ ಬಂದಾಗ ಹೀಗಾಗುವುದು ಸಹಜ. ಯಾರ ಪ್ರಯತ್ನವೂ ಬೇಕಾಗಿಲ್ಲ. ಫಲಾದಿಗಳು ತನ್ನಷ್ಟಕ್ಕೆ ಬರುತ್ತವೆ. ತಡೆಯುವುದಕ್ಕೆ ನಮ್ಮಿಂದ ಸಾಧ್ಯವಾಗುವುದಿಲ್ಲ . ಫಲವನ್ನು ನೀಡುವ ವಿಷಯದಲ್ಲಿ ಕಾಲವನ್ನು ಮೀರದೇ ಸಕಾಲದಲ್ಲಿ ನೀಡುತ್ತವೆ.

'ನಿಯತಂ ಕುರು ಕರ್ಮತ್ವಂ' ನಿರಂತರವಾಗಿ ಕರ್ಮವನ್ನು ಮಾಡುತ್ತಿರಬೇಕು ಎಂಬುದು ಸೂಕ್ತಿಯ ಅರ್ಥ. ಮನುಷ್ಯನು ತನ್ನ ಕೆಲಸವನ್ನು ನಿರಂತರ ಮಾಡುತ್ತಲೇ ಇರಬೇಕು. ಕರ್ಮ ಮಾಡದೆ ಸಮಯವನ್ನು ವ್ಯರ್ಥ ಮಾಡಬಾರದು. ಕಾಲ ಕೂಡಿ ಬಂದಾಗ ಅದರ ಫಲ ನಮಗೆ ಸಿಕ್ಕೇ ಸಿಗುತ್ತದೆ. ನಮ್ಮ ಪ್ರಯತ್ನ, ಪರಿಶ್ರಮ, ನಿಷ್ಠೆ ಇವುಗಳನ್ನು ಆಧರಿಸಿ ಕರ್ಮದ ಫಲ ಪ್ರಾಪ್ತಿಯಾಗುತ್ತದೆ. ಪ್ರಯತ್ನಿಸದೇ ಫಲವನ್ನು ಬಯಸುವುದು ಮೂರ್ಖತನ. ಅದು ಸರಿಯಲ್ಲ. ಚೆನ್ನಾಗಿ ಓದಿ ಅರ್ಥ ಮಾಡಿಕೊಂಡು ಉತ್ತರವನ್ನು ಬರೆದ ವಿದ್ಯಾರ್ಥಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣನಾಗುತ್ತಾನೆ. ಗೌರವಕ್ಕೆ ಭಾಜನನಾಗುತ್ತಾನೆ. ಪ್ರಯತ್ನಿಸದೆ ಅಂಕ ಬರಲೆಂದು ಆಶಿಸುವುದು ಮೂರ್ಖತನ. ನಾವು ನಿರಂತರ ಒಳ್ಳೆಯ ಕರ್ಮಗಳನ್ನು ಮಾಡುತ್ತಿರಬೇಕು. ಇದು ಯಾರನ್ನೂ ಮೆಚ್ಚಿಸುವುದಕ್ಕಾಗಿ ಆಗಬಾರದು. ಕೇವಲ ಕರ್ತವ್ಯ ದೃಷ್ಟಿ ಮಾತ್ರ ಇರಬೇಕು. ಕರ್ತವ್ಯ ಮಾಡುವುದಕ್ಕೆ ನಮಗೆ ಅಧಿಕಾರವೇ ವಿನಾ ಫಲದ ವಿಷಯದಲ್ಲಲ್ಲ. ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿದರೆ ಅದಕ್ಕೆ ಅನುಗುಣವಾದ ಫಲವು ಸಿಕ್ಕೇ ಸಿಗುತ್ತದೆ. ನಾವು ಮಾಡಿದ ಕರ್ಮವು ಕಾಲ ಕೂಡಿ ಬಂದಾಗ ಫಲದ ರೂಪದಲ್ಲಿ ದೊರೆಯುತ್ತದೆ. ನಾವಿಂದು ಕರ್ತವ್ಯವನ್ನು ಮಾಡದೆ ಹಕ್ಕುಗಳ ಬಗ್ಗೆ ಸಾಕಷ್ಟು ಮಾತನ್ನಾಡುತ್ತೇವೆ. ಹಕ್ಕುಗಳನ್ನು ಪ್ರತಿಪಾದಿಸುವುದರಲ್ಲೆ ಮುಳುಗಿದ ನಾವು ಕರ್ತವ್ಯವನ್ನು ಮರೆಯುತ್ತೇವೆ. ಆಗ ಫಲವೆಂತು ಲಭ್ಯವಾಗುತ್ತದೆ? ನಮ್ಮ ಪ್ರಾಮಾಣಿಕ ಕರ್ತವ್ಯಕ್ಕೆಂದೂ ಮೋಸವಾಗದು. ಕಾಲಕ್ಕೆ ಸರಿಯಾಗಿ ಮಳೆ ಬೆಳೆಯಾಗುವಂತೆ, ಮರಬಳ್ಳಿಗಳು ಪುಷ್ಪವನ್ನೂ ಫಲವನ್ನೂ ಕೊಡುವಂತೆ ಕರ್ತವ್ಯವು ಕಾಲಕ್ಕೆ ಸರಿಯಾಗಿ ಫಲವೀಯುತ್ತದೆ. ಆದ್ದರಿಂದ ನಾವು ಕರ್ತವ್ಯ ಪರರಾಗಬೇಕು.

# ಶಿಕ್ಷಣವಿದೆ...ಆದರೆ ನಾಗರಿಕ ಪ್ರಜ್ಞೆ ಎಲ್ಲಿದೆ?

▸ ಡಾ.ಮೈತ್ರಿ ಭಟ್, ವಿಟ್ಲ

ಅದೇನು ಹೊಸ ಹಾದಿಯಲ್ಲ. ಸುಮಾರು ಹತ್ತು–ಹನ್ನೆರಡು ವರುಷಗಳಿಂದ ಚಿರಪರಿಚಿತ ರಸ್ತೆ. ಮೊನ್ನೆ ಮೊನ್ನೆ ಆ ರಸ್ತೆಯಲ್ಲಿ ಸಾಗುವಾಗಲೂ ಸ್ವಚ್ಛವಾಗಿದ್ದ ಆ ರಸ್ತೆ ಕೆಲವೇ ದಿನಗಳಲ್ಲಿ ಎಷ್ಟು ಬದಲಾಗಿತ್ತೆಂದರೆ ರಸ್ತೆಯ ಇಕ್ಕೆಲಗಳಲ್ಲಿ ಕಸದ ರಾಶಿ, ವಾಸನೆ.... ಆಗಲೇ ಅನಿಸಿದ್ದು... ಆಧುನಿಕ ಶಿಕ್ಷಣ ಪಡೆದ ನಾವು ಅದೇಕೆ ನಾಗರಿಕ ಪ್ರಜ್ಞೆ ಮರೆಯುತ್ತಿದ್ದೇವೆ? ನಾವು ಎಚ್ಚರಗೊಳ್ಳುವುದು ಯಾವಾಗ ಅಥವಾ ನಮ್ಮಲ್ಲಿ ಈ 'ಸಿವಿಕ್ ಸೆನ್ಸ್' ಬೆಳೆಸುವುದು ಹೇಗೆ? ಇತ್ಯಾದಿ.

ಒಮ್ಮೆ ಮನೆಯ ಕಾಂಪೌಂಡ್ ದಾಟಿ ರಸ್ತೆಗಿಳಿದರೆ ಸಾಕು. ನಮ್ಮ ಸುತ್ತಮುತ್ತ ಎಲ್ಲೆಂದರಲ್ಲಿ ಕಸ ಎಸೆಯುವುದು, ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು, ಸಂಚಾರ ನಿಯಮಗಳನ್ನು ಪಾಲಿಸದೇ ಅಪಘಾತಗಳಿಗೆ ಕಾರಣವಾಗುವುದು, ಸರ್ಕಾರಿ ಆಸ್ತಿಪಾಸ್ತಿಗಳನ್ನು ಹಾನಿಗೊಳಿಸುವುದು –ಇವೆಲ್ಲವೂ ಇಂದು ಎಲ್ಲಿ ನೋಡಿದರಲ್ಲಿ ಕಣ್ಣಿಗೆ ಬೀಳುವ ಸಾಮಾನ್ಯ ದೃಶ್ಯಗಳಾಗಿಬಿಟ್ಟಿವೆ. ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ಆರ್ಥಿಕತೆಯಲ್ಲಿ ಭಾರತ ವೇಗವಾಗಿ ಮುನ್ನಡೆಯುತ್ತಿದ್ದರೂ 'ನಾಗರಿಕ ಪ್ರಜ್ಞೆ' ಅಥವಾ 'ಸಿವಿಕ್ ಸೆನ್ಸ್' ವಿಷಯದಲ್ಲಿ ನಾವು ಇನ್ನೂ ಬಹಳಷ್ಟು ದೂರವೇ ಉಳಿದು ಬಿಟ್ಟಿದ್ದೇವೆ. ಈ ದಿಕ್ಕಿನಲ್ಲಿ ನಾವು ಬಹಳಷ್ಟು ದೂರ ಸಾಗಬೇಕಿದೆ ಎಂಬುದು ಕಳವಳಕಾರಿ ಸಂಗತಿ. ಆದರೆ ನಾವು ಸಮಾಜದಲ್ಲಿ ಶಿಸ್ತಿನ ಬದುಕು ನಡೆಸಲು ಮತ್ತು ಸುಸಂಸ್ಕೃತ ರಾಷ್ಟ್ರ ನಿರ್ಮಾಣಕ್ಕೆ ನಾಗರಿಕ ಪ್ರಜ್ಞೆ ಅತ್ಯಗತ್ಯ.

**ಹಾಗಾದರೆ, 'ಸಿವಿಕ್ ಸೆನ್ಸ್' ಎಂದರೇನು?**

ಸಮಾಜದಲ್ಲಿ ಬದುಕುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಅರಿತು ನಡೆದುಕೊಳ್ಳುವುದು, ಇತರರಿಗೆ ತೊಂದರೆ ಆಗದಂತೆ ಸಾರ್ವಜನಿಕ ಸ್ಥಳಗಳನ್ನು ಬಳಸುವುದು, ಕಾನೂನು ಮತ್ತು ನಿಯಮಗಳನ್ನು ಗೌರವಿಸುವುದು, ಪರಿಸರದ ಸ್ವಚ್ಛತೆಯನ್ನು ಕಾಪಾಡುವುದು... ಇವೆಲ್ಲವನ್ನು ಒಟ್ಟಾಗಿ 'ಸಿವಿಕ್ ಸೆನ್ಸ್' ಎಂದು ಕರೆಯಬಹುದು. ಇದು ಕೇವಲ ಪುಸ್ತಕಗಳಲ್ಲಿ ಕಲಿಯುವ ಪಾಠವಲ್ಲ; ಬದಲಾಗಿ ನಮ್ಮ ನಿತ್ಯ ಜೀವನದಲ್ಲಿ ಪಾಲಿಸಬೇಕಾದ ಮೌಲ್ಯವಾಗಿದೆ.

ಏಕೆಂದರೆ, ನಾಗರಿಕ ಪ್ರಜ್ಞೆ ಇರುವ ವ್ಯಕ್ತಿ ಎಲ್ಲೆಂದರಲ್ಲಿ ಕಸ ಎಸೆಯುವುದಿಲ್ಲ, ಸಾಲಿನಲ್ಲಿ ನಿಂತು ತನ್ನ ಸರದಿಯನ್ನು ಕಾಯುತ್ತಾನೆ, ಸಂಚಾರಿ ನಿಯಮಗಳನ್ನು ಪಾಲಿಸುತ್ತಾನೆ, ನೀರನ್ನು ಅನಗತ್ಯ ಪೋಲು ಮಾಡುವುದಿಲ್ಲ, ಸಾರ್ವಜನಿಕ ಆಸ್ತಿಯನ್ನು ತನ್ನದೇ ಆಸ್ತಿಯಂತೆ ಕಾಪಾಡುತ್ತಾನೆ. ನಾವು ಬೆಳೆಸಿಕೊಳ್ಳುವ ಇಂತಹ ಸಣ್ಣಪುಟ್ಟ ಅಭ್ಯಾಸಗಳೇ ಒಂದು ಉತ್ತಮ ಸಮಾಜವನ್ನು ರೂಪಿಸುತ್ತವೆ.

ಆದರೆ ಇಂದಿನ ಸಮಾಜದಲ್ಲಿ ನಾಗರಿಕ ಪ್ರಜ್ಞೆಯ ಕೊರತೆ ಹಲವಾರು ರೂಪಗಳಲ್ಲಿ ಕಾಣಿಸುತ್ತಿದೆ. ಎಲ್ಲೆಂದರಲ್ಲಿ ಉಗುಳುವುದು, ಸಾರ್ವಜನಿಕ ಸ್ಥಳಗಳಲ್ಲಿ ಪ್ಲಾಸ್ಟಿಕ್ ಕಪ್, ಚಿಪ್ಸ್ ಕವರ್, ಬಾಟಲ್‌ಗಳನ್ನು ಎಸೆಯುವುದು ಸಾಮಾನ್ಯವಾಗಿದೆ. ರೈಲು ನಿಲ್ದಾಣ, ಬಸ್ ನಿಲ್ದಾಣ, ಉದ್ಯಾನವನ, ದೇವಸ್ಥಾನ ಮುಂತಾದ ಸ್ಥಳಗಳಲ್ಲಿ ಎದ್ದು ನಿಂತಿರುವ ಕಸದ ರಾಶಿ ಜನರ ನಿರ್ಲಕ್ಷ್ಯ ಮನೋಭಾವಕ್ಕೆ ಸಾಕ್ಷಿಯಾಗಿದೆ. ಸಂಚಾರ ನಿಯಮ



ಉಲ್ಲಂಘನೆಯೂ ದೊಡ್ಡ ಸಮಸ್ಯೆಯಾಗಿದ್ದು, ಹೆಲ್ಮೆಟ್ ಧರಿಸದೇ ವಾಹನ ಚಲಾಯಿಸುವುದು, ಸಿಗ್ನಲ್ ಮೀರುವುದು, ಅತಿಯಾದ ವೇಗದಿಂದ ಅಥವಾ ಮೊಬೈಲ್‌ನಲ್ಲಿ ಮಾತನಾಡುತ್ತ ವಾಹನ ಚಲಾಯಿಸುವುದು ... ಇವೆಲ್ಲವೂ ನಾಗರಿಕ ಪ್ರಜ್ಞೆಯ ಕೊರತೆಗೆ ಉದಾಹರಣೆಗಳು. ಇಂತಹ ನಿರ್ಲಕ್ಷ್ಯದಿಂದ ಪ್ರತಿದಿನ ಅನೇಕ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ.

**ಶಿಕ್ಷಣ ಇದ್ದರೂ ನಾಗರಿಕ ಪ್ರಜ್ಞೆ ಏಕಿಲ್ಲ?**

ಇಂದು ಅನೇಕರು ಉನ್ನತ ಶಿಕ್ಷಣ ಪಡೆದಿದ್ದಾರೆ. ಆದರೆ ಶಿಕ್ಷಣದೊಡನೆ ನಾಗರಿಕ ಪ್ರಜ್ಞೆಯೂ ಹೆಚ್ಚಳವಾಗಬೇಕು ಎಂಬ ನಿರೀಕ್ಷೆ ಸಾಕಾರವಾಗುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ ಮೌಲ್ಯಾಧಾರಿತ ಶಿಕ್ಷಣದ ಕೊರತೆ. ಇಂದು ನಮ್ಮ ಶಾಲೆಗಳಲ್ಲಿ ನೀಡುವ ಶಿಕ್ಷಣ ಕೇವಲ ಅಂಕ ಆಧಾರಿತವಾಗಿದೆ. ಇಲ್ಲಿ ಜೀವನ ಮೌಲ್ಯಗಳು, ಸಾಮಾಜಿಕ ಹೊಣೆಗಾರಿಕೆ, ಪರಿಸರ ಜಾಗೃತಿ, ಸಾರ್ವಜನಿಕ ಶಿಸ್ತಿನ ಬಗ್ಗೆ ಸಾಕಷ್ಟು ಒತ್ತನ್ನು ನೀಡಲಾಗುತ್ತಿಲ್ಲ. ಜೊತೆಗೆ ಮನೆಯಲ್ಲಿಯೂ ಮಕ್ಕಳಿಗೆ ಉತ್ತಮ ಅಭ್ಯಾಸಗಳನ್ನು ಬೆಳೆಸುವುದು ಕಡಿಮೆಯಾಗುತ್ತಿದೆ. ಹಿರಿಯರು ಸಾರ್ವಜನಿಕ ಸ್ಥಳಗಳಲ್ಲಿ ನಿಯಮ ಉಲ್ಲಂಘಿಸಿದರೆ, ತಮ್ಮ ಮನೆಯ ಕಸವನ್ನು ಎಲ್ಲೆಂದರಲ್ಲಿ ಎಸೆದರೆ ಮಕ್ಕಳು ಅದನ್ನೇ ಅನುಕರಿಸುತ್ತಾರೆ. ಆದ್ದರಿಂದ ನಾಗರಿಕ ಪ್ರಜ್ಞೆಯ ಅರಿವು ನಮ್ಮ ಮನೆಯಿಂದಲೇ ಆರಂಭವಾಗಬೇಕು.

ಪ್ರಸ್ತುತ 'ಸ್ವಚ್ಛ ಭಾರತ' ಎಂಬ ಘೋಷಣೆ ದೇಶಾದ್ಯಂತ ಕೇಳಿಬಂದರೂ, ಈ ಕನಸು ನನಸಾಗಬೇಕಾದರೆ ಸ್ವಚ್ಛತೆಯ ಕಲ್ಪನೆ–ಅರಿವು ಜನರ ಮನಸ್ಸಿನಲ್ಲಿ ಮೂಡಬೇಕು. ಏಕೆಂದರೆ, ಸರ್ಕಾರ ರಸ್ತೆಗಳನ್ನು ಸ್ವಚ್ಛಗೊಳಿಸಬಹುದು; ಆದರೆ ಮತ್ತೆ ಕಸ ಎಸೆಯದಿರುವ ಹೊಣೆಗಾರಿಕೆ ನಾಗರಿಕರದ್ದೇ ಆಗಿದೆ. ಅಲ್ಲವೇ?

ವಿದೇಶಗಳಲ್ಲಿ ಸಾರ್ವಜನಿಕ ಸ್ಥಳಗಳನ್ನು ಜನರು ತುಂಬಾ ಎಚ್ಚರದಿಂದ ಬಳಸುತ್ತಾರೆ. ಅಲ್ಲಿ ಕಸ ಎಸೆಯುವುದನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ "ಇದು ನನ್ನ ಮನೆ ಅಲ್ಲ" ಎಂಬ ಮನೋಭಾವದಿಂದ ಜನರು ಎಲ್ಲೆಂದರಲ್ಲಿ ಎಸೆಯುತ್ತಾರೆ. ಆದುದರಿಂದ 'ಸಾರ್ವಜನಿಕ ಸ್ಥಳವೂ ನಮ್ಮದೇ' ಎಂಬ ಅರಿವು ಮೂಡಬೇಕು.

ಪ್ರತಿದಿನ ನಡೆಯುವ ರಸ್ತೆ ಅಪಘಾತಗಳಲ್ಲಿ ಬಹುಪಾಲು ನಾವು ಎಸಗುವ ತಪ್ಪುಗಳಿಂದಲೇ ಸಂಭವಿಸುತ್ತವೆ. ಹೀಗಿರುವಾಗ ಟ್ರಾಫಿಕ್ ನಿಯಮಗಳನ್ನು ಪಾಲಿಸುವುದು ಕೇವಲ ಪೊಲೀಸರ ಭಯದಿಂದಲ್ಲ; ನಮ್ಮ ಮತ್ತು ಇತರರ ಜೀವದ ಸುರಕ್ಷತೆಗಾಗಿ ಎಂಬ ಅರಿವು ಅಗತ್ಯ. ಜೀಬ್ರಾ ಕ್ರಾಸಿಂಗ್‌ನಲ್ಲಿ ಪಾದಚಾರಿಗಳಿಗೆ ದಾರಿ ಬಿಡುವುದು, ಸಿಗ್ನಲ್ ಪಾಲಿಸುವುದು, ಹೆಲ್ಮೆಟ್ ಮತ್ತು ಸೀಟ್‌ಬೆಲ್ಟ್ ಧರಿಸುವುದು, ಅತಿವೇಗ ತಪ್ಪಿಸುವುದು... ಇವೆಲ್ಲವೂ ನಾಗರಿಕ ಪ್ರಜ್ಞೆಯ ಭಾಗವೇ ಆಗಿವೆ. ರಸ್ತೆ ಮೇಲೆ ಶಿಸ್ತಿನಿಂದ ವರ್ತಿಸುವ ವ್ಯಕ್ತಿಯೇ ನಿಜವಾದ ಜವಾಬ್ದಾರಿಯುತ ನಾಗರಿಕ.

ನಾಗರಿಕ ಪ್ರಜ್ಞೆ ಎಂಬುದು ಕೇವಲ ಸಂಚಾರಿ ನಿಯಮ ಮತ್ತು ಸ್ವಚ್ಛತೆಗೆ ಸೀಮಿತವಲ್ಲ. ಪರಿಸರವನ್ನು ಕಾಪಾಡುವುದೂ ಪ್ರತಿಯೊಬ್ಬರ ಹೊಣೆಗಾರಿಕೆ. ನೀರನ್ನು ಮಿತವಾಗಿ ಬಳಸುವುದು, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು, ಮರಗಳನ್ನು ನೆಡುವುದು, ವಿದ್ಯುತ್ ಉಳಿತಾಯ ಮಾಡುವುದು.... ಇವೆಲ್ಲವೂ ಉತ್ತಮ ನಾಗರಿಕನ ಲಕ್ಷಣಗಳು. ಅದರಲ್ಲೂ ಇಂದು ಪರಿಸರ ಮಾಲಿನ್ಯ, ಹವಾಮಾನ ಬದಲಾವಣೆ, ನೀರಿನ ಕೊರತೆ ಮುಂತಾದ ಸಮಸ್ಯೆಗಳು ಜಗತ್ತನ್ನು ಕಾಡುತ್ತಿರುವ ಸಂದರ್ಭಗಳಲ್ಲಿ ನಾಗರಿಕ ಪ್ರಜ್ಞೆ ಇರುವ ಜನರು ಮಾತ್ರ ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಬಲ್ಲರು.

ಡಿಜಿಟಲ್ ಯುಗದಲ್ಲಿ ನಾಗರಿಕ ಪ್ರಜ್ಞೆ ಸಾಮಾಜಿಕ ಜಾಲತಾಣಗಳಲ್ಲಿಯೂ ಅಗತ್ಯವಾಗಿದೆ. ಸುಳ್ಳು ಸುದ್ದಿಗಳನ್ನು ಹಂಚುವುದು, ದ್ವೇಷಭರಿತ ಸಂದೇಶಗಳನ್ನು ಹರಡುವುದು, ಇತರರನ್ನು ಅವಹೇಳನ ಮಾಡುವುದು.... ಇವುಗಳೂ ಸಮಾಜದ ಅಶಾಂತಿಗೆ ಕಾರಣವಾಗುತ್ತವೆ. ಆದ್ದರಿಂದ ಆನ್‌ಲೈನ್‌ನಲ್ಲಿ ಜವಾಬ್ದಾರಿಯುತವಾಗಿ ವರ್ತಿಸುವುದೂ ನಮ್ಮೆಲ್ಲರ ಕರ್ತವ್ಯವಾಗಿದೆ.

ಒಂದು ದೇಶದ ಭವಿಷ್ಯ ಯುವಜನರ ಕೈಯಲ್ಲಿದೆ. ಸಾಮಾಜಿಕ ಹೊಣೆಗಾರಿಕೆಯನ್ನು ಅರಿತು ಕಾರ್ಯನಿರ್ವಹಿಸುವ ಯುವಶಕ್ತಿಯೇ ದೇಶದ ಬಹುದೊಡ್ಡ ಸಂಪತ್ತು. ಯುವಜನತೆ ನಾಗರಿಕ ಪ್ರಜ್ಞೆಯನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಎಂತಹ ಬದಲಾವಣೆ ಬೇಕಿದ್ದರೂ ತರಬಹುದು. ಆದುದರಿಂದ ಮೊದಲು "ನಾನು ಬದಲಾದರೆ ಸಮಾಜ ಬದಲಾಗುತ್ತದೆ" ಎಂಬ ಮನೋಭಾವ ಬೆಳೆಯಬೇಕು.

ನಾಗರಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಸರ್ಕಾರದ ಪಾತ್ರವೂ ಮಹತ್ವದ್ದಾಗಿದ್ದು, ಶಾಲಾ ಶಿಕ್ಷಣದಲ್ಲಿ ಮೌಲ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಬೇಕು. ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಬೇಕು. ಮಾತ್ರವಲ್ಲ, ಕಾನೂನು ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಹಾಗೆಂದು ಈ ನಿಟ್ಟಿನಲ್ಲಿ ಕೇವಲ ಸರ್ಕಾರದ ಪ್ರಯತ್ನ ಸಾಕಾಗುವುದಿಲ್ಲ; ಜನರ ಸಹಭಾಗಿತ್ವವೂ ಅಗತ್ಯ. ಆದುದರಿಂದ ನಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಅಭ್ಯಾಸಗಳನ್ನು ಕಲಿಸೋಣ. ಆ ಮೂಲಕ ಅವರನ್ನು ದೇಶದ ಉತ್ತಮ ಪ್ರಜೆಗಳನ್ನಾಗಿಸಿ ಜವಾಬ್ದಾರಿಯುತ ನಾಗರಿಕರನ್ನಾಗಿಸೋಣ.

ಒಂದು ರಾಷ್ಟ್ರದ ಪ್ರಗತಿಯ ಅಳತೆಗೋಲುಗಳು ಕೇವಲ ಗಗನಚುಂಬಿ ಕಟ್ಟಡಗಳು, ತಂತ್ರಜ್ಞಾನ ಅಥವಾ ಆರ್ಥಿಕ ಬೆಳವಣಿಗೆಯಷ್ಟೇ ಅಲ್ಲ. ಅಲ್ಲಿನ ನಾಗರಿಕರ ಶಿಸ್ತು, ಸಂಸ್ಕೃತಿ ಮತ್ತು ಸಾಮಾಜಿಕ ಜವಾಬ್ದಾರಿಗಳು ಆ ದೇಶದ ನಿಜವಾದ ಪ್ರಗತಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆದುದರಿಂದ "ದೇಶ ನನ್ನದು" ಎಂಬ ಭಾವದಿಂದ 'ಮೊದಲು ಸಮಾಜ ಬದಲಾಗಲಿ, ಮತ್ತೆ ನಾನು ಬದಲಾಗುತ್ತೇನೆ ಎಂದು ಯೋಚಿಸುವ ಬದಲು "ಮೊದಲು ನಾನು ಬದಲಾಗುತ್ತೇನೆ, ಆಗ ಸಮಾಜವೂ ಬದಲಾಗುತ್ತದೆ" ಎಂಬ ಸಂಕಲ್ಪದಿಂದ ಮುನ್ನಡೆದಾಗ ಸಂಸ್ಕೃತಿ ಹಾಗೂ ಸಂಸ್ಕಾರಯುತ ಭಾರತ ನಿರ್ಮಾಣ ಸಾಧ್ಯವಾಗುತ್ತದೆ.

# ಟ್ರಂಪ್ ಇರುವ ತನಕ ಮೋದಿಯವರು ಅಮೆರಿಕಕ್ಕೆ ಭೇಟಿ ನೀಡಬಾರದು...

▸ ಮೈಕೆಲ್ ರೂಬಿನ್

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಭಾರತಕ್ಕೆ ನೀಡಿದ ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಶ್ವೇತ ಭವನಕ್ಕೆ ಭೇಟಿ ನೀಡುವಂತೆ ಆಹ್ವಾನ ನೀಡಿದ್ದಾರೆ. ಆದರೆ ಪ್ರಧಾನಿ ಮೋದಿಯವರು ಈ ಆಹ್ವಾನ ಸ್ವೀಕರಿಸಲು ಆತುರ ತೋರಬಾರದು. ಟ್ರಂಪ್ ಅಧ್ಯಕ್ಷ ಪದವಿಯಿಂದ ಇಳಿಯುವ ತನಕ ಮೋದಿಯವರು ಅಮೆರಿಕಕ್ಕೆ ಭೇಟಿ ನೀಡದಿರುವುದೇ ಒಳ್ಳೆಯದು.

ಭಾರತ ಮತ್ತು ಅಮೆರಿಕ ನಡುವೆ ಸುದೀರ್ಘ ಕಾಲಾವಧಿಯಲ್ಲಿ ಬೆಳೆದು ಬಂದ ಸೌಹಾರ್ದ ಸಂಬಂಧವು ಇದೀಗ ಟ್ರಂಪ್ 2ನೇ ಅವಧಿಯಲ್ಲಿ ಕೆಡತೊಡಗಿದೆ. ಟ್ರಂಪ್ ಇತರರನ್ನು ಬಹಿರಂಗವಾಗಿ ಅವಹೇಳನ ಮಾಡುವವರಾದರೆ, ರೂಬಿಯೋ ಈ ವಿಷಯದಲ್ಲಿ ತುಸು ಮಂದಗತಿಯವರೆನ್ನುವುದು ನಿಜವಾದರೂ ಟ್ರಂಪ್ ತಾಳಕ್ಕೆ ಕುಣಿಯುವುದಕ್ಕೆ ಅವರು ತಪ್ಪುವವರಲ್ಲ.

ರೂಬಿಯೋ ವಿದೇಶಾಂಗ ಕಾರ್ಯದರ್ಶಿಯಾಗಿ ಭಾರತಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು. ಅವರು ಈಗಾಗಲೇ ಇತರ 31 ರಾಷ್ಟ್ರಗಳಿಗೆ ಭೇಟಿ ನೀಡಿದ್ದಾರೆ. ಭಾರತವು ವಿಶ್ವದ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ಮತ್ತು ಅತ್ಯಂತ ದೊಡ್ಡ ಪ್ರಜಾತಾಂತ್ರಿಕ ರಾಷ್ಟ್ರವಾಗಿದ್ದರೂ ರೂಬಿಯೋಗೆ ಇದಕ್ಕಿಂತ ಮುನ್ನ ಭಾರತಕ್ಕೆ ಭೇಟಿ ನೀಡಲು ಅವಕಾಶ ಸಿಗದಿದ್ದುದು ಆಶ್ಚರ್ಯ. ಸೈಂಟ್ ಕಿಟ್ಸ್, ಸುರಿನಾಮ್‌ನಂತಹ ಸಣ್ಣ ರಾಷ್ಟ್ರಗಳಿಗೂ ಭೇಟಿ ನೀಡಲು ಅವರಿಗೆ ಸಮಯವಿತ್ತು. ಜಪಾನ್ ಮತ್ತು ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಿದಾಗಲೇ ಭಾರತಕ್ಕೂ ಬರಬಹುದಿತ್ತು. ಮಲೇಷ್ಯಾಕ್ಕೆ ಕೂಡಾ ಎರಡು ಬಾರಿ ಭೇಟಿ ನೀಡಿದ್ದಾರೆ. ಭಾರತಕ್ಕೆ ಬರಲು ಅವರಿಗೆ ಅವಕಾಶವೇ ಸಿಗಲಿಲ್ಲವೆ?

ನಿಜವಾಗಿ ರೂಬಿಯೋ ಎದುರಿನಿಂದ ಒಂದು, ಹಿಂದಿನಿಂದ ಮತ್ತೊಂದು ಎಂಬುದಕ್ಕೆ ಅನ್ವರ್ಥವಾಗಿದ್ದಾರೆ. ತಮ್ಮನ್ನು ಪ್ರಶ್ನಿಸುವ ಆಪ್ತರನ್ನು ಕೂಡಾ ಟ್ರಂಪ್ ಬದಿಗೆ ಸರಿಸುವ ಜಾಯಮಾನ ಹೊಂದಿರುವುದರಿಂದ ಟ್ರಂಪ್‌ರ ಬಾಲವಾಗಿಯೇ ಉಳಿಯಲು ರೂಬಿಯೋ ಪ್ರಯತ್ನಿಸುತ್ತಿದ್ದಾರೆ. ಇದೊಂದು ರೀತಿಯಲ್ಲಿ ಹಳೆಯ ಇರಾಕಿ ಜೋಕ್‌ನ್ನು ನೆನಪಿಸುತ್ತದೆ. ಇರಾಕಿನ ವಿದೇಶಾಂಗ ಸಚಿವ ತಾರೀಖ್ ಅಜೀಜ್‌ರನ್ನು ಓರ್ವ ಪತ್ರಕರ್ತ "ಆನೆಗಳು ಹಾರುತ್ತವೆಯೇ" ಎಂದು ಪ್ರಶ್ನಿಸಿದನಂತೆ. "ಅದು ಹೇಗೆ ಸಾಧ್ಯ. ಖಂಡಿತಾ ಹಾರಲಾರದು" ಎಂದು ಅವರು ಉತ್ತರಿಸಿದರಂತೆ. ಆಗ ಆ ಪತ್ರಕರ್ತ "ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನ್ ಆನೆಗಳು ಹಾರುತ್ತವೆ ಎಂದಿದ್ದಾರಲ್ಲ" ಎಂದು ಉದ್ಗರಿಸಿದಾಗ ತಾರೀಖ್ ಅಜೀಜ್ ಕೂಡಲೇ "ನಿಜ, ಆನೆಗಳು ಹಾರುತ್ತವೆ. ಆದರೆ ತುಂಬಾ ನಿಧಾನವಾಗಿ" ಎಂದು ಉತ್ತರಿಸಿದರಂತೆ. ರೂಬಿಯೋ ಕೂಡಾ ಹಾಗೆಯೇ. ಟ್ರಂಪ್ ಏನೇ ಮೂರ್ಖತನದ ಮಾತನಾಡಿದರೂ ಅದನ್ನೆಲ್ಲಾ ಸಮರ್ಥಿಸುವವರು. ರೂಬಿಯೋಗೆ ಕೂಡಾ ಭವಿಷ್ಯದಲ್ಲಿ ಅಧ್ಯಕ್ಷರಾಗಬೇಕೆಂಬ ಮಹತ್ವಾಕಾಂಕ್ಷೆಯಿದೆ. ಹಾಗಾಗಿ ಟ್ರಂಪ್‌ರ ವಿರೋಧ ಕಟ್ಟಿಕೊಳ್ಳಲಾರರು.

ತಮ್ಮ ತತ್ವ ಮತ್ತು ಮಹತ್ವಕಾಂಕ್ಷೆಯ ವಿಷಯ ಬಂದಾಗ ರೂಬಿಯೋ ಮಹತ್ವಾಕಾಂಕ್ಷೆಗೇ ಆದ್ಯತೆ ಕೊಡುತ್ತಾರೆ. ಅದಕ್ಕಾಗಿಯೇ ಮೋದಿಯವರು ಎಚ್ಚರಿಕೆ ವಹಿಸಬೇಕಾದುದು. ಪಾಕಿಸ್ತಾನದ ಸೇನಾ ಮುಖ್ಯಸ್ಥ ಮುನೀರ್‌ನನ್ನು ಟ್ರಂಪ್ ಅಲಂಗಿಸಿಕೊಳ್ಳುವುದನ್ನು ಹಾಗೂ ಭಾರತದ ಮೇಲೆ ತೆರಿಗೆ ಹೇರುವುದನ್ನು ರೂಬಿಯೋಗೆ ತಪ್ಪಿಸಲಾಗಲಿಲ್ಲ. ಸೆನೆಟರ್ ಆಗಿ ರೂಬಿಯೋ ಬಹುಕಾಲದಿಂದ ಉಕ್ರೇನ್‌ನನ್ನು ಸಮರ್ಥಿಸುತ್ತಿದ್ದರು. ಆದರೆ ಟ್ರಂಪ್ ಈ ವಿಷಯದಲ್ಲಿ ಅವರನ್ನು ತರಾಟೆಗೆ ತೆಗೆದುಕೊಂಡ ಬಳಿಕ ರೂಬಿಯೋ ಕೂಡಾ ಜೆಲೆನ್‌ಸ್ಕಿ ವಿರುದ್ಧವಾಗಿ ವರ್ತಿಸಿ ಟ್ರಂಪ್ ಜತೆ ಕ್ಷಮೆ ಕೇಳಬೇಕೆಂದು ಜೆಲೆನ್‌ಸ್ಕಿಗೆ ಹೇಳಿದ್ದರು. ಪಶ್ಚಿಮ ಏಷ್ಯಾದಲ್ಲಿ ಕೂಡಾ ರೂಬಿಯೋ ಹಮಾಸ್ ಮತ್ತು ಇರಾನನ್ನು ವಿರೋಧಿಸುವವರಾದರೂ ಟ್ರಂಪ್‌ರ ಸೂಚನೆಯಂತೆ ಅವುಗಳೊಡನೆ ಸಂಧಾನಕ್ಕೆ ಮುಂದಾಗಿದ್ದರು. ರೂಬಿಯೋ ತಮ್ಮ ವೈಯಕ್ತಿಕ ನಂಬಿಕೆಯಲ್ಲಿ ಪ್ರಾಮಾಣಿಕರಾಗಿರಬಹುದು ಹಾಗೂ ಭಾರತ – ಅಮೆರಿಕ ಸಂಬಂಧ ಉತ್ತಮಗೊಳ್ಳಬೇಕೆಂದು ಬಯಸುತ್ತಿರಬಹುದು. ಆದರೆ ಅದಕ್ಕೆ ಅವರು ಅಧ್ಯಕ್ಷರಾಗುವ ತನಕ ಕಾಯಬೇಕಾಗುತ್ತದೆ. ಟ್ರಂಪ್ ಅಧ್ಯಕ್ಷತೆಯಲ್ಲಿ ಅದು ಸಾಧ್ಯವಾಗದು.

ಮೋದಿ ಅಮೆರಿಕಕ್ಕೆ ಬಂದು ಟ್ರಂಪ್‌ರನ್ನು ಭೇಟಿಯಾದರೆ ಜೆಲೆನ್‌ಸ್ಕಿ ಸಿಲುಕಿಕೊಂಡ ಬಲೆಯಲ್ಲೇ ಸಿಕ್ಕಿಬೀಳಬಹುದು. ಪಾಕಿಸ್ತಾನದ ಪರವಾಗಿ ಟ್ರಂಪ್‌ರ ಕಿವಿಯೂದುವ ಅವರ ಹಳೆಯ ಮಿತ್ರರು ಈಗಲೂ ಟ್ರಂಪ್‌ರಿಗೆ ಆಪ್ತರಾಗಿಯೇ ಇದ್ದಾರೆ. ಟ್ರಂಪ್ ಆಡಳಿತದ ರಚನೆಯಲ್ಲಿ ವಿದೇಶಾಂಗ ಕಾರ್ಯದರ್ಶಿ ಅಥವಾ ರಾಷ್ಟ್ರೀಯ ಭದ್ರತಾ ಸಲಹೆಗಾರರಿಗಿಂತ ಟ್ರಂಪ್‌ರ ಈ ಹಳೆಯ ಸ್ನೇಹಿತರೇ ಹೆಚ್ಚು ಪ್ರಬಲರಾಗಿದ್ದಾರೆ. ಮೋದಿ ಜತೆಗಿನ ಭೇಟಿ ವೇಳೆ ಟ್ರಂಪ್ ಹಠಾತ್ತನೆ ಕಾಶ್ಮೀರಕ್ಕೆ ಸಂಬಂಧಿಸಿ ರಾಜೀಸೂತ್ರವನ್ನು ಮಂಡಿಸಿದರೂ ಅಚ್ಚರಿಪಡಬೇಕಾಗಿಲ್ಲ. ಭಾರತ ಮತ್ತು ಪಾಕಿಸ್ತಾನ ನಡುವಿನ '1500 ವರ್ಷಗಳ' ಗಡಿ ವಿವಾದವನ್ನು ಪರಿಹರಿಸುವುದಾಗಿ ಘೋಷಿಸಿದರೂ ಅಚ್ಚರಿಯಿಲ್ಲ. ಮೋದಿಯವರು ಟ್ರಂಪ್ ಹೇಳಿಕೆ ಸರಿಯಿಲ್ಲ ಎಂದು ಹೇಳಿ ಅವರನ್ನು ಸರಿಪಡಿಸಲೆತ್ನಿಸಿದರೆ ಜೆಲೆನ್‌ಸ್ಕಿಗೆ ಮಾಡಿದಂತೆ ಮೋದಿ ಕೂಡಾ ಕ್ಷಮೆ ಕೋರಬೇಕೆಂದು ಇದೇ ರೂಬಿಯೋ ಹೇಳಿಯಾರು.

ಟ್ರಂಪ್ ತಮ್ಮ ಸಹಾಯಕರ ನಿಷ್ಠೆಯನ್ನು ಪರೀಕ್ಷಿಸುವುದು ಹೇಗೆಂದರೆ ಅವರು ತಮ್ಮ ಸ್ನೇಹಿತರಿಗೇ ವಿಶ್ವಾಸ ದ್ರೋಹ ಬಗೆಯುವಂತೆ ಮಾಡುವುದು. ಅದೇ ರೀತಿ, ರೂಬಿಯೋ ಕೂಡಾ ಇಂತಹುದೇ ಪರೀಕ್ಷೆಗೆ ಒಳಪಡಬೇಕೆಂದು ಟ್ರಂಪ್ ಬಯಸಿ ಭಾರತವನ್ನು ಹೀಯಾಳಿಸಿ ಪಾಕಿಸ್ತಾನವನ್ನು ಹೊಗಳುವಂತೆ ಒತ್ತಡ ಹೇರಲೂಬಹುದು. ಅಂತಹ ಪರಿಸ್ಥಿತಿ ಏರ್ಪಡಲು ಮೋದಿ ಅವಕಾಶ ಕೊಡಬಾರದು. ಮಾತುಕತೆಯಾಡುವುದರಿಂದ ಯಾವುದೇ ಹಾನಿಯಾಗದು ಎಂಬ ಮಿಥ್ಯೆಯೊಂದು ಪಾಶ್ಚಿಮಾತ್ಯ ದೇಶಗಳಲ್ಲಿದೆ. ಅದು ಸುಳ್ಳು. ನಿಜವಾಗಿ, ಕೆಟ್ಟ ರಾಜತಾಂತ್ರಿಕತೆಯು ದೀರ್ಘಾವಧಿ ಹಾನಿಯನ್ನು ತರಬಲ್ಲದು. ಪಾಕಿಸ್ತಾನದ ಮುನೀರ್‌ಗೆ ಅಮೆರಿಕವು ಕೆಂಪು ಹಾಸಿನ ಸ್ವಾಗತ ನೀಡಿದ್ದು ಭಾರತೀಯರಿಗೆ ಅಸಹನೆ ಸೃಷ್ಟಿಸಿರುವುದು ಸಹಜವೇ ಆಗಿದೆ. ಅದಕ್ಕಾಗಿ ತಾವು ಕೂಡಾ ಟ್ರಂಪ್‌ರಿಂದ ಅದಕ್ಕಿಂತ ಹೆಚ್ಚಿನ ಆತಿಥ್ಯ ಪಡೆಯಬೇಕೆಂದು ಹಾತೊರೆಯುವುದು ಸರಿಯಲ್ಲ. ಅದರ ಬದಲಾಗಿ ಮೋದಿಯವರು ದೀರ್ಘಾವಧಿ ಸಹನೆಯ ಆಟವಾಡಬೇಕು.

ಮೋದಿಯವರು ಅಮೆರಿಕಕ್ಕೆ ಭೇಟಿ ನೀಡುವುದೆಂದರೆ ಅದು ಅಮೆರಿಕದ ಪಾಲಿಗೇ ಘನತೆಯ ವಿಷಯ. ಆದರೆ ಟ್ರಂಪ್ ಇದಕ್ಕೆ ಅರ್ಹರಾಗಿಲ್ಲ. ಟ್ರಂಪ್ ಕಾಲಾವಧಿಯಲ್ಲಿ ಮೋದಿಯವರು ಅಮೆರಿಕಕ್ಕೆ ಭೇಟಿ ನೀಡದಿರುವುದೇ ಒಳ್ಳೆಯದು.

(ಲೇಖಕರು ಅಮೆರಿಕನ್ ರಾಜಕೀಯ ವಿಶ್ಲೇಷಕರು)

ಕೇಂದ್ರ ಸಂಪುಟ ಸಭೆಯಲ್ಲಿ ಮಂಜೂರಾತಿ

# ಸಾರ್ಥಕ್ ಪಿಡಿಎಸ್ ಪ್ಯಾಕೇಜ್‌ಗೆ ಅಸ್ತು

**ಹೊಸದಿಲ್ಲಿ:** ಮುಂದಿನ 5ವರ್ಷಗಳಲ್ಲಿ ಭಾರತದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅತ್ಯಾಧುನೀಕರಿಸುವ ಮತ್ತು ಬಲಪಡಿಸುವ ಆಶಯದ, ಮಹತ್ವದ 25ಸಾವಿರ ಕೋಟಿ ರೂ. ಮೊತ್ತದ ಸಾರ್ಥಕ್ ಪಿಡಿಎಸ್ ಪ್ಯಾಕೇಜ್‌ನ್ನು ಕೇಂದ್ರ ಸರಕಾರ ಮಂಜೂರು ಮಾಡಿದೆ. ದೇಶದ ಮೆಗಾ ಆಹಾರ ಸುರಕ್ಷತಾ ಜಾಲದಲ್ಲಿ ಬರುವ, ದೇಶದ 80ಕೋಟಿ ಬಡವರ್ಗಕ್ಕೆ ಪಡಿತರ ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ಸುಲಲಿತಗೊಳಿಸುವುದು ಪ್ರಸ್ತುತ ಪ್ಯಾಕೇಜ್‌ನ ಆಶಯವಾಗಿದೆ. ಪಡಿತರ ಸಾಗಣೆ ಮತ್ತು ನಿರ್ವಹಣೆ ಮತ್ತು ಪಡಿತರ ವಿತರಣಾ ವ್ಯವಸ್ಥೆಗಳಿಗೆ ಸ್ವಯಂಚಾಲಿತ ಆದಾಯಕ್ಕೆ ಪ್ರಸ್ತುತ ಪ್ಯಾಕೇಜ್ ಉತ್ತೇಜಕವಾಗಲಿದೆ.



ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಯೋಜನೆಗೆ ಮಂಜೂರಾತಿ ನೀಡಲಾಗಿದೆ. 25,530 ಕೋಟಿ. ರೂ ಕೇಂದ್ರೀಯ ಅಂದಾಜುವೆಚ್ಚದ ಪ್ರಸ್ತುತ ಪ್ಯಾಕೇಜ್ 2026ರ ಏಪ್ರಿಲ್‌ನಿಂದ ಅನ್ವಯಿಸುವಂತೆ ಜಾರಿಗೆ ಬರಲಿದೆ ಮತ್ತು 2031 ಮಾರ್ಚ್‌ವರೆಗೆ ಚಾಲ್ತಿಯಲ್ಲಿರುವುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

**ಅಂತರ್ಗತ ಬೆಳವಣಿಗೆ:** ಸಮಸ್ತರ ಅಂತರ್ಗತ ಬೆಳವಣಿಗೆ ಮತ್ತು ಜನ ಕಲ್ಯಾಣಕ್ಕೆ ಜಾಗತಿಕ ಮಾದರಿಯಾಗಿದೆ ಪ್ರಸ್ತುತ ಉಪಕ್ರಮ ಮತ್ತು ಜಗತ್ತಿನ ಬೃಹತ್ ಆಹಾರ ಸುರಕ್ಷತಾ ಯೋಜನೆಯಾಗಿದೆ. ಪ್ರಧಾನಿಯವರ ಗರೀಬ್ ಕಲ್ಯಾಣ್ ಅನ್ನ ಯೋಜನೆ ಮತ್ತಿತರ ಆಹಾರ ಹಂಚಿಕೆ ಕಾರ್ಯಕ್ರಮಗಳ ಜಾರಿ ವ್ಯವಸ್ಥೆಯನ್ನು ಬಲಪಡಿಸಲು ಪ್ರಸ್ತುತ ಪ್ಯಾಕೇಜ್ ಪೂರಕವಾಗಲಿದೆ. ಭಾರತ ಆಹಾರ ನಿಗಮದ ಗೋದಾಮುಗಳಿಂದ ಆಹಾರಧಾನ್ಯಗಳನ್ನು ಜಿಲ್ಲೆಗಳಿಗೆ ಮತ್ತು ಪಡಿತರ ಅಂಗಡಿಗಳಿಗೆ ಸಾಗಿಸುವಲ್ಲಿ ರಾಜ್ಯಸರಕಾರಗಳಿಗೆ ಸಾರ್ಥಕ್-ಪಿಡಿಎಸ್ ಯೋಜನೆ ನೆರವಾಗಲಿದೆ. ಪಡಿತರ ವಿತರಣಾ ವ್ಯವಸ್ಥೆಯಲ್ಲಿ ತಾಂತ್ರಿಕ ಸುಧಾರಣೆಗಳ ಅನುಷ್ಠಾನಕ್ಕೂ ಯೋಜನೆ ಪೂರಕವಾಗಲಿದೆ ಎಂದು ಸಚಿವರು ವಿವರಿಸಿದ್ದಾರೆ.

**ಕಡಿಮೆಯಾಗಲಿದೆ ಸಾಗಣೆ ಹೊರೆ:** ಅತ್ಯಧಿಕ ವೆಚ್ಚದ ಕಾರಣ ರಾಜ್ಯದೊಳಗೇ ಆಹಾರಧಾನ್ಯಗಳ ಸಾಗಣೆಯು ಹಲವು ರಾಜ್ಯ ಏಜೆನ್ಸಿಗಳಿಗೆ ಹೊರೆಯಾಗಿ ಪರಿಣಮಿಸಿದೆ. ಈ ನಿಟ್ಟಿನಲ್ಲಿ ಅಂತರ್ ರಾಜ್ಯ ಸಾರಿಗೆ ಮತ್ತು ನಿರ್ವಹಣೆಗೆ ಹೊಸ ಪ್ಯಾಕೇಜ್ ನಡಿ ಕೇಂದ್ರ ಸರಕಾರವು ಹಣಕಾಸು ನೆರವು ನೀಡಲಿದೆ. ತನ್ಮೂಲಕ ರಾಜ್ಯಗಳ ಹೊರೆ ಕುಗ್ಗಿಸಿ , ಪೂರೈಕೆ ವ್ಯವಸ್ಥೆಯಲ್ಲಿ ದಕ್ಷತೆಗೆ ನೆರವಾಗಲಿದೆ.

ಇದಲ್ಲದೆ ಪಾರದರ್ಶಿತ್ವ,ಫಲಾನುಭವಿ ಕೇಂದ್ರೀಕೃತ ಮತ್ತು ನಿಗಾ ವ್ಯವಸ್ಥೆ ಸುಧಾರಣೆ ಆಶಯದ ನಿರ್ಮಲ್, ಆಶಾ ಮತ್ತು ಸಕ್ಷಮ್ ಎಂಬ ಮೂರು ತಂತ್ರಜ್ಞಾನ ಆಧಾರಿತ ವೇದಿಕೆ ಅಥವಾ ವ್ಯವಸ್ಥೆಗಳನ್ನು ಪ್ರಸ್ತುತ ಪ್ಯಾಕೇಜ್‌ನಡಿ ಜಾರಿಗೊಳಿಸಲಾಗುವುದು.

**ಫಲಾನುಭವಿ ರಿಜಿಸ್ಟ್ರಿ:** ನಿರ್ಮಲ್ ವ್ಯವಸ್ಥೆಯಡಿ ಸರಕಾರವು ಪಡಿತರ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತಾಗಲು ತಂತ್ರಜ್ಞಾನ ಆಧಾರಿತ ಫಲಾನುಭವಿ ರಿಜಿಸ್ಟ್ರಿಯನ್ನು ರೂಪಿಸಲು ಸರಕಾರ ಯೋಜಿಸಿದೆ. ನೈಜ ಫಲಾನುಭವಿಗಳನ್ನು ಗುರುತಿಸಿ, ವ್ಯವಸ್ಥೆಯಲ್ಲಿನ ಸೋರಿಕೆ ತಡೆಯಲು ಕೃತಕ ಬುದ್ಧಿಮತ್ತೆ ಸಹಿತ ಅತ್ಯಾಧುನಿಕ ತಂತ್ರಜ್ಞಾನ ಬಳಸಲಾಗುವುದು. ವಿವಿಧ ಖಾತೆಗಳು ಮತ್ತು ಇಲಾಖೆಗಳ ನಡುವೆ ಸಮನ್ವಯತೆಗೂ ಪ್ರಸ್ತಾವಿತ ಪ್ಯಾಕೇಜ್ ಪೂರಕವಾಗಿರುವುದು.

**ಅಹವಾಲು ಆಲಿಸಲಿದೆ ಆಶಾ:** ಪಡಿತರ ಚೀಟಿದಾರರ ಅಹವಾಲುಗಳನ್ನು ಆಲಿಸುವ ಎಐ ಆಧಾರಿತ ವೇದಿಕೆಯಾಗಿದೆ ಆಶಾ. ಪ್ರಸಕ್ತ ಪಡಿತರ ವ್ಯವಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ಮಾಹಿತಿ ಪಡೆಯುವನ್ವಯ ತಿಂಗಳಿಗೆ ಬರೋಬ್ಬರಿ ಎರಡು ಲಕ್ಷ ಕರೆಗಳನ್ನು ಮಾಡಲಾಗುತ್ತಿದೆ. ಆಶಾ ವೇದಿಕೆ ಮುಖೇನ ಪಡಿತರ ವ್ಯವಸ್ಥೆಗಳ ಹೊಣೆಗಾರಿಕೆ , ವಿಶ್ವಾಸಾರ್ಹತೆ ಬಲಪಡಿಸುವುದು ಸರಕಾರದ ಆಶಯವಾಗಿದೆ. ಸಂಪೂರ್ಣ ಡಿಜಿಟಲೀಕರಣ ಮತ್ತು ಆಹಾರಧಾನ್ಯ ಪೂರೈಕೆ ಸರಪಳಿಯ ಮೇಲೆ ನಿಗಾ ವಹಿಸುವುದು ಸಕ್ಷಮ್ ವೇದಿಕೆಯ ಆಶಯವಾಗಿದೆ. ಇದರಡಿ ಆಹಾರ ಧಾನ್ಯ ತುಂಬಿದ ಚೀಲಗಳು ಕ್ಯೂಆರ್ ಕೋಡ್ ಹೊಂದಿರುತ್ತವೆ ಮತ್ತು ಆಹಾರಧಾನ್ಯ ಸಾಗಿಸುವ ವಾಹನಗಳು ಜಿಪಿಎಸ್ ಹೊಂದಿರಲಿವೆ. ಪಡಿತರ ವಿತರಣೆಯಲ್ಲಿ ವಿಳಂಬ ಪತ್ತೆಯಲ್ಲಿ ಅಧಿಕಾರಿಗಳಿಗೆ ನೆರವಾಗಲು ಮತ್ತು ವ್ಯವಸ್ಥೆಯನ್ನು ಸಂಪೂರ್ಣ ದಕ್ಷಗೊಳಿಸಲು ಡಿಜಿಟಲ್ ಮಾಧ್ಯಮಗಳನ್ನು ಬಳಸಲಾಗುವುದು.

## ತ್ರಿಭಾಷಾ ನೀತಿ: ಕೇಂದ್ರಕ್ಕೆ ನೋಟಿಸ್

**ಹೊಸದಿಲ್ಲಿ:** ಜುಲೈ 1 ರಿಂದ 9 ನೇ ತರಗತಿ ವಿದ್ಯಾರ್ಥಿಗಳಿಗೆ ಎರಡು ಸ್ಥಳೀಯ ಭಾರತೀಯ ಭಾಷೆಗಳು ಸೇರಿದಂತೆ ಮೂರು ಭಾಷೆಗಳನ್ನು ಕಡ್ಡಾಯಗೊಳಿಸುವ ಸಿಬಿಎಸ್‌ಇ ನೀತಿಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ, ಕೇಂದ್ರ ಸರ್ಕಾರ, ಸಿಬಿಎಸ್‌ಇ ಮತ್ತು ಎನ್‌ಸಿಇಆರ್‌ಟಿಗೆ ನೋಟಿಸ್ ಜಾರಿ ಮಾಡಿದ್ದು, ಎರಡು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಕೋರಿದೆ.






# ಅಕ್ರಮ ವಲಸಿಗರ ಸಕ್ರಮ ಗಡಿಪಾರಿಗೆ ಉನ್ನತ ಸಿದ್ಧತೆ

## ಒಳನುಸುಳುವಿಕೆ, ಜನಸಂಖ್ಯೆಯ ಅಸ್ವಾಭಾವಿಕ ಬದಲಾವಣೆ ಅಧ್ಯಯನಕ್ಕಾಗಿ ಉನ್ನತ ಮಟ್ಟದ ಸಮಿತಿ ರಚನೆ

ಅಕ್ರಮ ನುಸುಳುವಿಕೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದ ಜನಸಂಖ್ಯೆಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಅಧ್ಯಯನ ನಡೆಸಲು ಕೇಂದ್ರ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಈ ವಿಚಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ. ಕಳೆದ ವರ್ಷ ಆ.15ರಂದು ಪ್ರಧಾನಿ ನರೇಂದ್ರ ಮೋದಿ, ಜನಸಂಖ್ಯಾ ಬದಲಾವಣೆಯ ಅಧ್ಯಯನಕ್ಕಾಗಿ ಉನ್ನತ ಮಟ್ಟದ ತಂಡದ ರಚನೆಯನ್ನು ಘೋಷಿಸಿದ್ದರು. ಒಳನುಸುಳುವಿಕೆ ಮತ್ತು ಇತರ ಕಾರಣಗಳಿಂದಾಗಿ ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆಯು ರಾಷ್ಟ್ರದ ವರ್ತಮಾನ ಮತ್ತು ಭವಿಷ್ಯಕ್ಕೆ ದೊಡ್ಡ ಸವಾಲೊಡ್ಡುತ್ತದೆ. ಸವಾಲನ್ನು ಎದುರಿಸಲು ಪ್ರಧಾನಿ ಮೋದಿ ಉನ್ನತ ಮಟ್ಟದ ಸಮಿತಿ ರಚನೆಯನ್ನು ಘೋಷಿಸಿದ್ದರು. ಭಾಷಣದ ಮುಂದುವರಿದ ಭಾಗವಾಗಿ ಸರ್ಕಾರ ಸಮಿತಿಯನ್ನು ರಚಿಸಿದೆ ಎಂದು ನಿಮಗೆ ತಿಳಿಸಲು ನನಗೆ ಬಹಳ ಸಂತೋಷವಾಗುತ್ತಿದೆ ಎಂದು ಶಾ ತಿಳಿಸಿದ್ದಾರೆ. ಉನ್ನತ ಮಟ್ಟದ ಸಮಿತಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವಲೇಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಅಕ್ರಮ ಒಳನುಸುಳುವಿಕೆ, ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆ ಹಾಗೂ ಉನ್ನತ ಮಟ್ಟದ ಸಮಿತಿ ಕೆಲಸವೇನು? ಇತ್ಯಾದಿ ವಿಚಾರಗಳ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

### ಏನು ಮಾಡಲಿದೆ ಸಮಿತಿ?

ಜನಸಂಖ್ಯಾ ಬದಲಾವಣೆಯು ಕೇವಲ ನಮ್ಮ ಸಾರ್ವಭೌಮತ್ವಕ್ಕೆ ಮಾತ್ರವಲ್ಲದೆ ರಾಷ್ಟ್ರೀಯ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ, ಸಾಮಾಜಿಕ ರಚನೆಯಲ್ಲಿನ ಪ್ರಮುಖ ಬದಲಾವಣೆಗಳು ಹಾಗೂ ಬುಡಕಟ್ಟು ಸಮುದಾಯಗಳ ರಕ್ಷಣೆಗೆ ಸಂಬಂಧಿಸಿದ ಗಂಭೀರ ಸಮಸ್ಯೆಯಾಗಿದೆ. ಅಕ್ರಮ ವಲಸೆ ಮತ್ತು ಅಸ್ವಾಭಾವಿಕ ಕಾರಣಗಳಿಂದಾಗಿ ದೇಶಾದ್ಯಂತ ಸಂಭವಿಸುತ್ತಿರುವ ಜನಸಂಖ್ಯಾ ಬದಲಾವಣೆಗಳ ಸಮಗ್ರ ಮೌಲ್ಯಮಾಪನವನ್ನು ಈ ಸಮಿತಿಯು ನಡೆಸಲಿದೆ. ಮೌಲ್ಯಮಾಪನದ ನಂತರ ಸೂಕ್ತವಾದ ನೀತಿ, ಶಾಸಕಾಂಗ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಸಮಿತಿ ಶಿಫಾರಸು ಮಾಡಲಿದೆ. ಸಮಿತಿಯ ಉದ್ದೇಶಿತ ರಚನೆ ಮತ್ತು ಅಧ್ಯಯನ ನಡೆಸುವ ಪ್ರಮುಖ ಅಂಶಗಳು ಈ ಕೆಳಗಿನಂತಿವೆ:

1. ಅಕ್ರಮ ವಲಸೆ ಸೇರಿ ಜನಸಂಖ್ಯಾ ಬದಲಾವಣೆಗಳಿಂದ ಉಂಟಾಗುವ ಸವಾಲುಗಳ ಸಮಗ್ರ ಪರಿಶೀಲನೆ
2. ಗಡಿಯಾಚೆಗಿನ ಚಟುವಟಿಕೆಗಳು (ಅಕ್ರಮ ವಲಸೆ ಸೇರಿದಂತೆ), ಆರ್ಥಿಕ ಅವಕಾಶ, ಇತರ ಸಾಮಾಜಿಕ-ಪರಿಸರ ಅಂಶಗ ಳಂತಹ ಜನಸಂಖ್ಯಾ ಬದಲಾವಣೆಗಳ ಸಂಭಾವ್ಯ ಕಾರಣ ಬಗ್ಗೆ ಅಧ್ಯಯನ
3. ಅಕ್ರಮ ವಲಸೆ, ಅಸಹಜ ನೆಲೆಸುವಿಕೆಯ ಮಾದರಿಗಳು ಮತ್ತು ವ್ಯವಸ್ಥಿತ ವಲಸೆಯನ್ನು ಒಳಗೊಂಡಿರುವ ಈ ಬದಲಾವಣೆಗಳ ಹಿಂದಿನ ಮೂಲಭೂತ ಅಂಶಗಳನ್ನು ಗುರುತಿಸುವುದು.
4. ಧಾರ್ಮಿಕ ಅಥವಾ ಸಾಮಾಜಿಕ ಸಮುದಾಯಗಳ ಮಟ್ಟದಲ್ಲಿ, ವಿಶೇಷವಾಗಿ ಅವು ವಿಶಾಲವಾದ ಪ್ರವೃತ್ತಿಗಳಿಂದ ಭಿನ್ನವಾಗಿರುವ ಕಡೆಗಳಲ್ಲಿ, ಜನಸಂಖ್ಯೆಯ ರಚನಾತ್ಮಕ ಬದಲಾವಣೆಗಳ ವಿಶ್ಲೇಷಣೆ
5. ದೇಶದಲ್ಲಿ ಈಗಾಗಲೇ ತುಂಬಿರುವ ಅಕ್ರಮ ವಲಸಿಗರನ್ನು ಕಾನೂನುಬದ್ಧ, ನ್ಯಾಯಯುತ ಮತ್ತು ಕಾಲಮಿತಿಯೊಳಗೆ ಗುರುತಿಸಿ ಬಂಧಿಸಲು ಮತ್ತು ಗಡೀಪಾರು ಮಾಡಲು ಸುಗಮ ಹಾಗೂ ಶಾಶ್ವತ ಕಾರ್ಯಾಚರಣಾ ವಿಧಾನವನ್ನು (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್) ಶಿಫಾರಸು ಮಾಡುವುದು.
6. ಇಂತಹ ಪ್ರವೃತ್ತಿಗಳ ನಿರಂತರ ಮೇಲ್ವಿಚಾರಣೆಗಾಗಿ ಗಡಿ ನಿರ್ವಹಣೆ, ಜನಸಂಖ್ಯಾ ಸ್ಥಿರೀಕರಣ ಮತ್ತು ಗುರುತಿಸುವಿಕೆ ವ್ಯವಸ್ಥೆಗಳನ್ನು ಬಲಪಡಿಸಲು ಸೂಕ್ತವಾದ ಸಾಂಸ್ಥಿಕ ಕಾರ್ಯವಿಧಾನವನ್ನು ಶಿಫಾರಸು ಮಾಡುವುದು.
7. ಅಕ್ರಮ ವಲಸೆ ಮತ್ತು ಅದರ ಪರಿಣಾಮದಿಂದ ಉಂಟಾಗುವ ಜನಸಂಖ್ಯಾ ಅಸಮತೋಲನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯತೆಯನ್ನು ಹೆಚ್ಚಿಸಲು ಸಮಗ್ರ ನೀತಿ ಚೌಕಟ್ಟನ್ನು ಪ್ರಸ್ತಾಪಿಸುವುದು.
8. ಅಕ್ರಮ ವಲಸೆ ಸೇರಿದಂತೆ ಜನಸಂಖ್ಯಾ ಬದಲಾವಣೆಗಳಿಂದ ಉಂಟಾಗುವ ಸವಾಲುಗಳನ್ನು ನಿಭಾಯಿಸಲು ಸಮಿತಿಯು ಸೂಕ್ತವೆಂದು ಭಾವಿಸುವ ಯಾವುದೇ ಇತರ ಕ್ರಮಗಳನ್ನು ಶಿಫಾರಸು ಮಾಡುವುದು.

### ಸಮಿತಿಯಲ್ಲಿ ಯಾರಿದ್ದಾರೆ?

ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆಯ ಅಧ್ಯಯನಕ್ಕಾಗಿ ರಚಿಸಿದ ಉನ್ನತ ಮಟ್ಟದ ಸಮಿತಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವೊಲೇಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಭಾರತದ ಜನಗಣತಿ ಆಯುಕ್ತರು, ನಿವೃತ್ತ ಐಎಎಸ್ ದುರ್ಗಾ ಶಂಕರ್ ಮಿಶ್ರಾ, ನಿವೃತ್ತ ಐಪಿಎಸ್ ಬಾಲಾಜಿ ಶ್ರೀವಾಸ್ತವ ಮತ್ತು ಡಾ.ಶಮಿಕಾ ರವಿ ಅವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ.

### ಸಮಿತಿಗೆ ನೀಡಿದ ಕಾಲಾವಧಿ?

ಜನಸಂಖ್ಯೆಯಲ್ಲಿನ ಅಸ್ವಾಭಾವಿಕ ಬದಲಾವಣೆಗಳ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಉನ್ನತ ಮಟ್ಟದ ಸಮಿತಿಗೆ ಕೇಂದ್ರ ಸರ್ಕಾರ ಒಂದು ವರ್ಷದ ಕಾಲಾವಧಿ ನೀಡಿದೆ. ಅಗತ್ಯ ಬಿದ್ದರೆ ಸಮಿತಿಯ ಅಧ್ಯಯನ ಅವಧಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದಾಗಿದೆ.

### ಎಲ್ಲೆಲ್ಲಿ ಅಕ್ರಮ ವಲಸೆ?

ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಹಲವು ವರ್ಷಗಳಿಂದ ಅಕ್ರಮ ವಲಸಿಗರು ಅಥವಾ ಒಳನುಸುಳುಕೋರರನ್ನು ಕಳ್ಳ ಮತದಾನದಲ್ಲಿ ಬಳಸಿಕೊಳ್ಳುವ ರಾಜಕೀಯ ಆರೋಪಗಳಿವೆ. ಹೀಗೆ ಅಕ್ರಮ ವಲಸೆಯು ರಾಜಕೀಯ ಸೂಕ್ಷ್ಮತೆಗಳಿಂದ ಕೂಡಿದೆ. ಈ ಕೆಳಗಿನ ರಾಜ್ಯಗಳ ಮೇಲೆ ಅಕ್ರಮ ವಲಸೆ ಭಾರೀ ಪರಿಣಾಮ ಬೀರಿದೆ:

- ಅಸ್ಸಾಂ, ಪಶ್ಚಿಮ ಬಂಗಾಳ, ತ್ರಿಪುರಾ, ಮಿಝೋರಾಂ, ಮಣಿಪುರ

### ಸಮಿತಿ ರಚನೆಗೆ ಪ್ರಮುಖ ಕಾರಣಗಳೇನು?

ಈ ಕೆಳಗಿನ ಕಾರಣಗಳಿಂದ ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ:

- ರಾಷ್ಟ್ರೀಯ ಭದ್ರತೆ
- ಸಾರ್ವಭೌಮತ್ವ
- ಗಡಿ ನಿರ್ವಹಣೆ
- ಕಾನೂನು ಪಾಲನೆ
- ಸಾಮಾಜಿಕ ಸಮತೋಲನ
- ಬುಡಕಟ್ಟು ಮತ್ತು ಮೂಲನಿವಾಸಿ ಸಮುದಾಯಗಳ ಸಂರಕ್ಷಣೆ



### ಏನಿದು ಅಸ್ವಾಭಾವಿಕ ಬದಲಾವಣೆ?

ಅಕ್ರಮ ವಲಸೆ, ಒಳನುಸುಳುವಿಕೆ, ಪ್ರಾದೇಶಿಕ ಜನಸಂಖ್ಯಾ ವರ್ಗಾವಣೆ ಮತ್ತು ಸಾಮಾಜಿಕ ಪರಿಣಾಮಗಳಿಂದಾಗಿ ಉಂಟಾಗುವ ಜನಸಂಖ್ಯೆಯಲ್ಲಿನ ದಿಢೀರ್ ಬದಲಾವಣೆಯನ್ನು ಅಸ್ವಾಭಾವಿಕ ಬದಲಾವಣೆ ಎನ್ನಲಾಗುತ್ತದೆ. ಈ ಕೆಳಗಿನವುಗಳಲ್ಲಿ ಬದಲಾವಣೆಗಳು ಆಗುವುದೇ ಜನಸಂಖ್ಯಾ ಬದಲಾವಣೆಯಾಗಿದೆ.

- ಜನಸಂಖ್ಯಾ ಗಾತ್ರ
- ಜನನ ಮತ್ತು ಮರಣ ಪ್ರಮಾಣ
- ವಲಸೆ (ಆಂತರಿಕ ಮತ್ತು ಅಂತಾರಾಷ್ಟ್ರೀಯ)
- ಧಾರ್ಮಿಕ ಅಥವಾ ಸಾಮಾಜಿಕ ಸಂಯೋಜನೆ
- ನಗರೀಕರಣ ಮತ್ತು ವಯೋಮಾನದ ರಚನೆ

## ಕಿರುಸುದ್ದಿ

### ಜೂ.1-4ರವರೆಗೆ ಭಾರತ-ಅಮೆರಿಕ ವ್ಯಾಪಾರ ಚರ್ಚೆ

**ಹೊಸದಿಲ್ಲಿ:** ಭಾರತ ಜತೆಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಅಂತಿಮಗೊಳಿಸಲು ಅಮೆರಿಕ ನಿಯೋಗವು ಭಾರತಕ್ಕೆ ಭೇಟಿ ನೀಡಲಿದ್ದು, ಜೂ.1ರಿಂದ 4ರವರೆಗೆ ಚರ್ಚೆ ನಡೆಸಲಿದ್ದಾರೆ. ಮಾರುಕಟ್ಟೆ ವ್ಯಾಪ್ತಿ, ತೆರಿಗೇತರ ಕ್ರಮಗಳು, ಸುಂಕ ವ್ಯವಸ್ಥೆಗಳು ಸೇರಿ ಹಲವು ವಿಚಾರಗಳ ಬಗ್ಗೆ ಉಭಯ ರಾಷ್ಟ್ರಗಳ ನಿಯೋಗಗಳು ದ್ವಿಪಕ್ಷೀಯ ವ್ಯಾಪಾರ ಚರ್ಚೆ ನಡೆಯಲಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

### ಇಸ್ರೇಲ್ ದಾಳಿಗೆ ಹಮಾಸ್ ಮುಖ್ಯಸ್ಥನ ಹತ್ಯೆ

**ಟೆಲ್ ಅವೀವ್:** ಗಾಜಾದಲ್ಲಿನ ಹಮಾಸ್ ಉಗ್ರ ಸಂಘಟನೆಯ ಹೊಸ ನಾಯಕ ಮೊಹಮ್ಮದ್ ಒಡೆಹ್ ಅನ್ನು ಹೊಡೆದುರುಳಿಸಿದ್ದೇವೆ ಎಂಬ ಇಸ್ರೇಲ್ ಹೇಳಿಕೆಯನ್ನು ಹಮಾಸ್ ಒಪ್ಪಿಕೊಂಡಿದೆ. ಉತ್ತರ ಗಾಜಾದಲ್ಲಿ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ಮೊಹಮ್ಮದ್ ಸಾವಿಗೀಡಾಗಿದ್ದಾನೆ. ದಾಳಿಯಲ್ಲಿ ತನ್ನ ನಾಯಕ ಒಡೆಹ್, ಆತನ ಪತ್ನಿ ಮತ್ತು ಇಬ್ಬರು ಪುತ್ರರು ಮೃತಪಟಿದ್ದಾರೆ ಎಂದು ಹಮಾಸ್ ಹೇಳಿದೆ

## ಗಡಿ ಸಮೀಪದ ಅಕ್ರಮ ರಚನೆ ತೆರವಿಗೆ ಸೂಚನೆ

**ಹೊಸದಿಲ್ಲಿ:** ನೆರೆಯ ದೇಶಗಳೊಂದಿಗಿನ ಭಾರತದ ಅಂತಾರಾಷ್ಟ್ರೀಯ ಗಡಿಗಳ 15 ಕಿಮೀ ವ್ಯಾಪ್ತಿಯಲ್ಲಿರುವ ಎಲ್ಲಾ ಕಾನೂನುಬಾಹಿರ ನಿರ್ಮಾಣಗಳನ್ನು ಧ್ವಂಸಗೊಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ರಾಜಸ್ಥಾನದ ಬಿಕಾನೇರ್ ಜಿಲ್ಲೆಯಲ್ಲಿ ನಡೆದ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆಯಲ್ಲಿ ಈ ನಿರ್ದೇಶನ ನೀಡಲಾಗಿದೆ. ಸೂಕ್ಷ್ಮ ಗಡಿ ಪ್ರದೇಶಗಳಲ್ಲಿನ ಅತಿಕ್ರಮಣಗಳ ವಿರುದ್ಧ ಶೂನ್ಯ-ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಳ್ಳಲು ಶಾ ಕರೆ ನೀಡಿದರು ಮತ್ತು ಭಾರತ-ಪಾಕಿಸ್ತಾನ ಗಡಿಯುದ್ದಕ್ಕೂ ಇರುವ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಈ ಸಭೆಯಲ್ಲಿ ರಾಜಸ್ಥಾನದ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ, ಹಿರಿಯ ಅಧಿಕಾರಿಗಳು, ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಭಾಗವಹಿಸಿದ್ದರು.

ಗಡಿ ಭದ್ರತೆಗಾಗಿ ನಾಗರಿಕರು, ರಾಜ್ಯ ಏಜೆನ್ಸಿಗಳು ಮತ್ತು ಭದ್ರತಾ ಪಡೆಗಳ ನಡುವೆ ಬಲವಾದ ಸಮನ್ವಯದ ಅಗತ್ಯವನ್ನು ಶಾ ಒತ್ತಿಹೇಳಿದ್ದಾರೆ ಎಂದು ಗೃಹ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಅಪರಾಧ, ಮಾದಕ ದ್ರವ್ಯ ಸಾಗಣೆ ಮತ್ತು ಗಡಿಯಾಚೆಗಿನ ಕಳ್ಳಸಾಗಣೆ ಜಾಲಗಳ ಬಗ್ಗೆ ಅಧ್ಯಯನ ನಡೆಸಲು ಮತ್ತು ದೀರ್ಘಕಾಲೀನ ತಡೆ ಕ್ರಮಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾಡಳಿತಗಳಿಗೆ ಸೂಚನೆ ನೀಡಲಾಗಿದೆ. ಅನುಮಾನಾಸ್ಪದ ಹಣಕಾಸು ವಹಿವಾಟುಗಳನ್ನು ಮೇಲ್ವಿಚಾರಣೆ ಮಾಡಲು, ದೊಡ್ಡ ವ್ಯಾಪಾರ ಸಂಸ್ಥೆಗಳನ್ನು ಪರಿಶೀಲಿಸಲು, ಮ್ಯೂಲ್ ಬ್ಯಾಂಕ್ ಖಾತೆಗಳು ಮತ್ತು ಶೆಲ್ ಕಂಪನಿಗಳನ್ನು ಪತ್ತೆಹಚ್ಚಲು ಹಾಗೂ ನಕಲಿ ಆಧಾರ್ ಕಾರ್ಡ್‌ಗಳನ್ನು ಗುರುತಿಸಲು ಗೃಹ ಸಚಿವಾಲಯ ಜಿಲ್ಲಾಧಿಕಾರಿಗಳ ಜವಾಬ್ದಾರಿಗಳನ್ನು ವಿಸ್ತರಿಸಿದೆ.

## ಅಲ್-ಫಲಾ ಸ್ಥಾಪಕನ ವಿರುದ್ಧ ಆರೋಪಪಟ್ಟಿ

**ಹೊಸದಿಲ್ಲಿ:** ದಕ್ಷಿಣ ದಿಲ್ಲಿಯ ಮದನ್‌ಪುರ ಖಾದರ್ ಪ್ರದೇಶದಲ್ಲಿನ ಸುಮಾರು 46 ಕೋಟಿ ರೂ. ಮೌಲ್ಯದ ಭೂಮಿಯನ್ನು ನಕಲಿ ದಾಖಲೆಗಳ ಮೂಲಕ ಅಕ್ರಮವಾಗಿ ಪಡೆದುಕೊಂಡ ಆರೋಪಕ್ಕೆ ಸಂಬಂಧಿಸಿ ಅಲ್-ಫಲಾಹ್ ವಿಶ್ವವಿದ್ಯಾಲಯದ ಸ್ಥಾಪಕ ಜವಾದ್ ಅಹ್ಮದ್ ಸಿದ್ದಿಕಿ ಸೇರಿದಂತೆ ನಾಲ್ವರು ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ಆರೋಪಪಟ್ಟಿ ಸಲ್ಲಿಸಿದೆ.

**46 ಕೋಟಿ ರೂ. ಭೂ ಹಗರಣ**

ಸಾಕೇತ್‌ನ ವಿಶೇಷ ಪಿಎಂಎಲ್‌ಎ ನ್ಯಾಯಾಲಯಕ್ಕೆ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಜವಾದ್ ಅಹ್ಮದ್ ಸಿದ್ದಿಕಿ, ಅವರಿಂದ ಪ್ರೋತ್ಸಾಹಿತ ಟರ್ಬಿಯಾ ಎಜುಕೇಶನ್ ಫೌಂಡೇಶನ್, ವಿನೋದ್ ಕುಮಾರ್ ಹಾಗೂ ಶ್ರೀಓಂ ಚೌಹಾಣ್ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಈ ಪ್ರಕರಣದಲ್ಲಿ ಸಿದ್ದೀಕಿ, ವಿನೋದ್ ಕುಮಾರ್ ಮತ್ತು ಶ್ರೀಓಂ ಚೌಹಾಣ್ ಅವರನ್ನು ಇಡಿ ಈಗಾಗಲೇ ಬಂಧಿಸಿದೆ. ದಿಲ್ಲಿ ಪೊಲೀಸ್ ದಾಖಲಿಸಿದ್ದ ಎಫ್‌ಐಆರ್‌ಗಳ ಆಧಾರದಲ್ಲಿ ಇಡಿ ತನಿಖೆ ಆರಂಭಿಸಿತ್ತು. ಮದನ್‌ಪುರ ಖಾದರ್‌ನ ಭೂಮಿಯನ್ನು ನಕಲಿ ಸಾಮಾನ್ಯ ಅಧಿಕಾರ ಪತ್ರಗಳು (ಜಿಪಿಎ), ಕೃತಕ ಹಕ್ಕುಪತ್ರಗಳು ಹಾಗೂ ಸುಳ್ಳು ದಾಖಲೆಗಳ ಮೂಲಕ ಕಬಳಿಸಲಾಗಿದೆ ಎಂದು ಆರೋಪಿಸಲಾಗಿದೆ.

ಈ ಮಧ್ಯೆ ಅಲ್-ಫಲಾಹ್ ವಿಶ್ವವಿದ್ಯಾಲಯದ ಹೆಸರು ಈ ಹಿಂದೆ ದಿಲ್ಲಿಯ ಕೆಂಪುಕೋಟೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ವೈಟ್ ಕಾಲರ್ ಟೆರರ್ ತನಿಖೆಯಲ್ಲೂ ಕೇಳಿಬಂದಿತ್ತು. 2025ರ ನವೆಂಬರ್ 10ರಂದು ನಡೆದ ಆ ಸ್ಫೋಟದಲ್ಲಿ 15 ಮಂದಿ ಮೃತಪಟ್ಟಿದ್ದರು.

## ಆನ್‌ಲೈನ್ ಗೇಮಿಂಗ್ ಕಂಪನಿಗಳಿಗೆ ಶಾಕ್

**ಹೊಸದಿಲ್ಲಿ:** ಆನ್‌ಲೈನ್ ಗೇಮಿಂಗ್ ಕಂಪನಿಗಳ ಮೇಲೆ ಪೂರ್ವಾನ್ವಯವಾಗುವಂತೆ ಶೇ.28 ಜಿಎಸ್‌ಟಿ ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಬುಧವಾರ ಮಾನ್ಯಗೊಳಿಸಿದೆ. ಈ ತೆರಿಗೆ ವಿಧಾನ ಸಂವಿಧಾನಬದ್ಧವಾಗಿದ್ದು, ಆನ್‌ಲೈನ್ ಗೇಮಿಂಗ್ ವೇದಿಕೆಗಳು ಕೇವಲ ಮಧ್ಯವರ್ತಿಗಳಲ್ಲ, ಜಿಎಸ್‌ಟಿ ವ್ಯಾಪ್ತಿಗೆ ಬರುವ ಸೇವಾ ಪೂರೈಕೆದಾರರು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಆರ್. ಮಹಾದೇವನ್ ಅವರಿದ್ದ ಪೀಠ ಈ ಮಹತ್ವದ ತೀರ್ಪು ನೀಡಿತು. ಡಿಜಿಟಲ್ ವೇದಿಕೆಗಳಲ್ಲಿ ನಡೆಯುವ ಫ್ಯಾಂಟಸಿ ಸ್ಪೋರ್ಟ್ಸ್ ಸೇರಿದಂತೆ ಅನಿಶ್ಚಿತ ಫಲಿತಾಂಶಗಳ ಮೇಲೆ ಹಣ ಹೂಡಿ ಆಡುವ ಎಲ್ಲಾ ಆಟಗಳು 'ಬೆಟ್ಟಿಂಗ್ ಮತ್ತು ಜೂಜು' ವ್ಯಾಪ್ತಿಗೆ ಬರುತ್ತವೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಬೆಟ್ಟಿಂಗ್ ಹಾಗೂ ಜೂಜಿನಿಂದ ಉಂಟಾಗುವ ಆಕ್ಷನಬಲ್ ಕ್ಲೇಮ್ಸ್ ಮೇಲೆ ಜಿಎಸ್‌ಟಿ ವಿಧಿಸುವುದು ಸಂವಿಧಾನಬದ್ಧವಾಗಿದೆ. ಇದು ಸಂವಿಧಾನದ 366(12) ಮತ್ತು 366(12ಎ) ವಿಧಿಗಳನ್ನು ಉಲ್ಲಂಘಿಸುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ.

ಇದೇ ವೇಳೆ, ಹಣ ಪಣಕ್ಕಿಟ್ಟು ಆಡುವ ಆನ್‌ಲೈನ್ ಆಟಗಳನ್ನು ನಿಷೇಧಿಸುವ ಉದ್ದೇಶದಿಂದ ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳು ಜಾರಿಗೆ ತಂದಿದ್ದ ಕಾನೂನುಗಳನ್ನೂ ನ್ಯಾಯಾಲಯ ಮಾನ್ಯಗೊಳಿಸಿದೆ. ರಮ್ಮಿ, ಪೋಕರ್ ಮೊದಲಾದ ಕೌಶಲ್ಯಾಧಾರಿತ ಆಟಗಳೂ ಇದರಲ್ಲಿ ಸೇರಿವೆ ಎಂದು ಕೋರ್ಟ್ ತಿಳಿಸಿದೆ.

## ಕೇರಳ: ಮುಂಗಾರು ಪ್ರವೇಶ ವಿಳಂಬ

**ಹೊಸದಿಲ್ಲಿ:** ನಿರೀಕ್ಷಿತ ದಿನಾಂಕವಾದ ಮೇ 26ರಂದು ಕೇರಳಕ್ಕೆ ನೈಋತ್ಯ ಮುಂಗಾರು ಪ್ರವೇಶಿಸದಿದ್ದರೂ, ಅರಬ್ಬಿ ಸಮುದ್ರ, ಲಕ್ಷದ್ವೀಪ ಪ್ರದೇಶ ಹಾಗೂ ಬಂಗಾಳಕೊಲ್ಲಿಯ ಹಲವು ಭಾಗಗಳಿಗೆ ಮುಂಗಾರು ಮತ್ತಷ್ಟು ಮುಂದುವರಿದಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ತಿಳಿಸಿದೆ. ಈ ಹಿಂದೆ ಐಎಂಡಿ, 4 ದಿನಗಳ ವ್ಯತ್ಯಾಸದ ಸಾಧ್ಯತೆಯೊಂದಿಗೆ ಮೇ 26ರಂದು ಕೇರಳಕ್ಕೆ ಮುಂಗಾರು ಆಗಮಿಸಬಹುದು ಎಂದು ಅಂದಾಜಿಸಿತ್ತು. ಸಾಮಾನ್ಯವಾಗಿ ಜೂನ್ 1ರ ಸುಮಾರಿಗೆ ಕೇರಳದಲ್ಲಿ ಮುಂಗಾರು ಆರಂಭವಾಗುತ್ತದೆ. ಐಎಂಡಿ ಪ್ರಕಟಣೆಯ ಪ್ರಕಾರ, ಮುಂದಿನ 2-3 ದಿನಗಳಲ್ಲಿ ನೈಋತ್ಯ ಮತ್ತು ಆಗ್ನೇಯ ಅರಬ್ಬಿ ಸಮುದ್ರದ ಇನ್ನಷ್ಟು ಭಾಗಗಳು, ಲಕ್ಷದ್ವೀಪ ಪ್ರದೇಶ, ನೈಋತ್ಯ, ಪೂರ್ವ-ಮಧ್ಯ ಹಾಗೂ ಪಶ್ಚಿಮ-ಮಧ್ಯ ಬಂಗಾಳಕೊಲ್ಲಿ, ಆಗ್ನೇಯ ಬಂಗಾಳಕೊಲ್ಲಿಯ ಉಳಿದ ಭಾಗಗಳು ಹಾಗೂ ಈಶಾನ್ಯ ಬಂಗಾಳಕೊಲ್ಲಿಯ ಕೆಲವು ಭಾಗಗಳಿಗೆ ಮುಂಗಾರು ವಿಸ್ತರಿಸಲು ಅನುಕೂಲಕರ ವಾತಾವರಣವಿದೆ.

ಆರೋಪ ತಳ್ಳಿಹಾಕಿದ ದೇಗುಲ ಆಡಳಿತ | ವರದಿ ಕೇಳಿದ ಸರ್ಕಾರ

# ಪದ್ಮನಾಭಸ್ವಾಮಿ ದೇಗುಲದಲ್ಲಿ ಚಿನ್ನಾಭರಣ ನಾಪತ್ತೆ ಆರೋಪ!

**ತಿರುವನಂತಪುರಂ:** ದೇಶದ ಅತ್ಯಂತ ಶ್ರೀಮಂತ ದೇವಾಲಯಗಳಲ್ಲಿ ಒಂದಾದ ಅನಂತಪದ್ಮನಾಭ ದೇವಸ್ಥಾನದಲ್ಲಿ ಭದ್ರತಾ ಲೋಪ ಹಾಗೂ ಅಮೂಲ್ಯ ವಸ್ತುಗಳ ನಿರ್ವಹಣೆಯಲ್ಲಿ ಗಂಭೀರ ಅವ್ಯವಸ್ಥೆ ನಡೆದಿದೆ ಎಂಬ ಆತಂಕಕಾರಿ ಮಾಹಿತಿ ಬಹಿರಂಗವಾಗಿದೆ. ರಾಜ್ಯ ಪೊಲೀಸ್ ಮುಖ್ಯಸ್ಥರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಹಲವು ಅಕ್ರಮಗಳು, ಭದ್ರತಾ ವೈಫಲ್ಯಗಳು ಹಾಗೂ ದಾಖಲೆರಹಿತ ವಸ್ತು ಚಲಾವಣೆಗಳ ಬಗ್ಗೆ ಉಲ್ಲೇಖಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ದೇವಸ್ಥಾನಕ್ಕೆ ಭಕ್ತರು ಸಮರ್ಪಿಸಿದ್ದ ಸುಮಾರು 78 ಗ್ರಾಂ ಚಿನ್ನದ ನಾಣ್ಯಗಳು ಮತ್ತು ಚಿನ್ನದ ತುಂಡುಗಳು ನಾಪತ್ತೆಯಾಗಿರುವ ಶಂಕೆ ವ್ಯಕ್ತವಾಗಿದೆ. ಅಲ್ಲದೆ, ದುರಸ್ತಿಗಾಗಿ ತೆಗೆದುಕೊಂಡು ಹೋಗಿದ್ದ ಬಹುಮಟ್ಟಿನ ಚಿನ್ನದ ದೀಪವನ್ನು ದಾಖಲೆ ಇಲ್ಲದೆ ಬೆಳ್ಳಿಯ ದೀಪದಿಂದ ಬದಲಾಯಿಸಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ವರದಿಯ ಪ್ರಕಾರ, ದೇವಸ್ಥಾನದ ಒಳಭಾಗದಲ್ಲಿ ಅಳವಡಿಸಿದ್ದ ಕೆಲವು ಅಮೂಲ್ಯ ವಸ್ತುಗಳು ತಿಂಗಳಿನಿಂದ ಕಾಣೆಯಾಗಿದ್ದು, ಅವುಗಳ ಚಲನವಲನದ ಕುರಿತು ಯಾವುದೇ ಸಮರ್ಪಕ ದಾಖಲೆ ಇಲ್ಲ ಎನ್ನಲಾಗಿದೆ. ದೇವಾಲಯದ ಭದ್ರತಾ ತಪಾಸಣೆಯನ್ನು ಮೀರಿ ಕೆಲ ಸಿಬ್ಬಂದಿ ಹಾಗೂ ರಾಜಕುಟುಂಬದ ಆಪ್ತರು ಪ್ರವೇಶಿಸುತ್ತಿದ್ದರು ಎಂಬ ಗಂಭೀರ ಆರೋಪವೂ ವರದಿಯಲ್ಲಿ ಉಲ್ಲೇಖವಾಗಿದೆ.ದೇವಸ್ಥಾನದಲ್ಲಿರುವ ಚಿನ್ನ-ಬೆಳ್ಳಿ ವಸ್ತುಗಳನ್ನು ಕೇಂದ್ರಿಕೃತ ಭದ್ರ ಕೋಣೆಗೆ ಸ್ಥಳಾಂತರಿಸಬೇಕು. ಭಕ್ತರ ಕಾಣಿಕೆಗಳನ್ನು ಕಟ್ಟುನಿಟ್ಟಿನ ಪೊಲೀಸ್ ನಿಗಾದಲ್ಲಿ ದಾಖಲಿಸಿ ಸಂಗ್ರಹಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಇದರ ಮಧ್ಯೆ, ದೇವಸ್ಥಾನ ಆಡಳಿತವು ಎಲ್ಲಾ ಆರೋಪಗಳನ್ನು ತಳ್ಳಿಹಾಕಿದೆ. ಯಾವುದೇ ಅಮೂಲ್ಯ ವಸ್ತು ಕಳುವಾಗಿಲ್ಲ, ಭದ್ರತೆಯಲ್ಲಿ ಲೋಪವಿಲ್ಲ ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಸ್ಪಷ್ಟನೆ ನೀಡಿದ್ದಾರೆ. ದೇವಾಲಯದಲ್ಲಿ ಸಿಸಿಟಿವಿ ನಿಗಾವಿದ್ದು, ಅಮೂಲ್ಯ ವಸ್ತುಗಳ ಸ್ಥಳಾಂತರವನ್ನು ಕಟ್ಟುನಿಟ್ಟಿನ ಕ್ರಮಗಳೊಂದಿಗೆ ಮಾತ್ರ ಮಾಡಲಾಗುತ್ತದೆ ಎಂದು ಆಡಳಿತ ಹೇಳಿದೆ. ಇದೇ ವೇಳೆ ಕೇರಳ ಸರ್ಕಾರವೂ ಪ್ರತಿಕ್ರಿಯೆ ನೀಡಿದ್ದು, ಪೊಲೀಸರಿಂದ ಚಿನ್ನ ನಾಪತ್ತೆಯಾಗಿರುವ ಬಗ್ಗೆ ನಮಗೆ ಮಾಹಿತಿ ಬಂದಿದೆ. ಈ ಬಗ್ಗೆ ವರದಿ ನೀಡುವಂತೆ ದೇಗುಲ ಆಡಳಿತ ಮಂಡಳಿಗೆ ಸೂಚಿಸಿದ್ದೇವೆ ಎಂದು ಹೇಳಿದೆ.

10 ಬೋಗಿಗಳ ರೈಲು | ಶೀಘ್ರದಲ್ಲಿ ಪರಿಸರ ಸ್ನೇಹಿ ರೈಲು ಸಂಚಾರ ಕಾರ್ಯಾರಂಭ

# ಹೈಡ್ರೋಜನ್ ರೈಲು ಸಂಚಾರಕ್ಕೆ ಕೇಂದ್ರ ಅಸ್ತು

**ಹೊಸದಿಲ್ಲಿ:** ರೈಲ್ವೆ ಸಚಿವಾಲಯವು ದೇಶದ ಮೊದಲ ಹೈಡ್ರೋಜನ್ ಚಾಲಿತ 10 ಕೋಚ್‌ಗಳ ಡಿಇಎಂಯು(ಡೀಸೆಲ್ ಎಲೆಕ್ಟ್ರಿಕ್ ಮಲ್ಟಿಪಲ್ ಯೂನಿಟ್) ರೈಲಿನ ಸಂಚಾರಕ್ಕೆ ಅನುಮತಿ ನೀಡಿದೆ.

ಈ ರೈಲು ಉತ್ತರ ರೈಲ್ವೆ ವಲಯದ ಅನ್ವಯ ಜಿಂದ್ ಮತ್ತು ಸೋನಿಪತ್ ನಡುವೆ ಗರಿಷ್ಠ ಗಂಟೆಗೆ 75 ಕಿ.ಮೀ. ವೇಗದಲ್ಲಿ ಸಂಚರಿಸಲಿದೆ ಎಂದು ಮೇ 26ರ ಪಿಟಿಐ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಅನುಮೋದನೆಗೆ ಮುನ್ನ, ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ತಾಂತ್ರಿಕ ಅನುಮತಿ ನೀಡಿದ್ದು, ರೈಲ್ವೆ ಸುರಕ್ಷತೆಯ ಆಯುಕ್ತರ (ಸಿಸಿಆರ್‌ಎಸ್) ಸುರಕ್ಷತಾ ಪರೀಕ್ಷೆಗಳನ್ನು ಪೂರ್ಣಗೊಳಿಸಿತ್ತು.

ಉತ್ತರ ರೈಲ್ವೆಯ ಮಹಾಪ್ರಬಂಧಕರಿಗೆ ಕಳುಹಿಸಲಾದ ಅನುಮತಿ ಪತ್ರದಲ್ಲಿ, ಅಂತಿಮ ವೇಗ ಪ್ರಮಾಣಪತ್ರ (ಎಫ್‌ಎಸ್‌ಸಿ) ಅನುಸರಿಸುವುದರ ಜತೆಗೆ ಆರ್‌ಡಿಎಸ್‌ಒ ಹೊರಡಿಸಿರುವ ನಿರ್ವಹಣಾ ನಿಯಮಗಳು ಮತ್ತು ಸಿಸಿಆರ್‌ಎಸ್ ಸೂಚಿಸಿರುವ ಎಲ್ಲಾ ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.



- **ಗರಿಷ್ಠ ವೇಗ:** ಪ್ರತಿ ಗಂಟೆಗೆ 75 ಕಿ.ಮೀ.
- **ಶಕ್ತಿ ವ್ಯವಸ್ಥೆ:** ಹೈಡ್ರೋಜನ್ ಫ್ಯೂಯೆಲ್ ಸೆಲ್‌ಗಳ ಮೂಲಕ 1,200 ಕಿಲೋವ್ಯಾಟ್ ಶಕ್ತಿ ಉತ್ಪಾದನೆ
- **ಪ್ರಾಮುಖ್ಯತೆ:** ಹೈಡ್ರೋಜನ್ ಬಳಕೆಯಿಂದ ಕಾರ್ಬನ್ ಹೊರಸೂಸುವಿಕೆ ಕಡಿಮೆ.

### ಪರಿಸರ ಸ್ನೇಹಿ ಶಕ್ತಿ ಸಾಮರ್ಥ್ಯ

10 ಕೋಚ್‌ಗಳ ಡಿಇಎಂಯು ರೈಲು 1,200 ಕಿಲೋವ್ಯಾಟ್ ಸಾಮರ್ಥ್ಯದ ಹೈಡ್ರೋಜನ್ ಫ್ಯೂಯೆಲ್ ಸೆಲ್‌ಗಳ ಸಹಾಯದಿಂದ ಕಾರ್ಯನಿರ್ವಹಿಸಲಿದೆ. ಇದು ಡೀಸೆಲ್ ಮತ್ತು ಸಾಂಪ್ರದಾಯಿಕ ವಿದ್ಯುತ್ ಬದಲಾಗಿ ಡಿಪಿಆರ್‌ಎಸ್ ತಂತ್ರಜ್ಞಾನವನ್ನು ಬಳಸಲಿದೆ. ಮಾಲಿನ್ಯ ಕಡಿಮೆಯಾಗುವುದಲ್ಲದೆ ಹಸಿರು ಇಂಧನ ಬಳಕೆಗೆ ಉತ್ತೇಜನ ಸಿಗಲಿದೆ.

**ಮಾರ್ಗ ಮತ್ತು ಕಾರ್ಯಾಚರಣೆ :** ಈ ರೈಲು ಜಿಂದ್-ಸೋನಿಪತ್ ಮಾರ್ಗದಲ್ಲಿ ಮಾತ್ರ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಇದರ ನಿರ್ವಹಣಾ ಕಾರ್ಯಗಳನ್ನು ದಿಲ್ಲಿಯ ಶಕೂರ್‌ಬಸ್ತಿ ಕೇಂದ್ರದಲ್ಲಿ ಮಾಡಲಾಗುವುದು.

**ಸುರಕ್ಷತೆ ಮತ್ತು ತರಬೇತಿ:** ಉತ್ತರ ರೈಲ್ವೆಯ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸುವ ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗುವುದು. ಎಲ್ಲಾ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು. ಆರಂಭಿಕ 3 ತಿಂಗಳುಗಳ ಕಾಲ ರೈಲಿನೊಂದಿಗೆ ತಾಂತ್ರಿಕ ತಜ್ಞರ ತಂಡ ಪ್ರಯಾಣಿಸಿ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡಲಿದೆ.

ದೇಶದ ಮೊದಲ ಹೈಡ್ರೋಜನ್ ಚಾಲಿತ ರೈಲಿನ ಸಂಚಾರ ಆರಂಭ ಯಾವಾಗ ಎಂಬ ಪ್ರಶ್ನೆಗೆ ಇನ್ನೂ ಸ್ಪಷ್ಟತೆಯಿಲ್ಲ. ರೈಲ್ವೆ ಸಚಿವಾಲಯ ಇನ್ನೂ ರೈಲು ಸಂಚಾರದ ಅಧಿಕೃತ ದಿನಾಂಕ ಘೋಷಿಸಿಲ್ಲ.

## ಪತ್ನಿಗೆ ಹಲ್ಲೆ: ಪತಿ ವಿರುದ್ಧ ಕೇಸು

ಕುಂಬಳೆ: ಪತ್ನಿಗೆ ಹಲ್ಲೆ ನಡೆಸಿದ ದೂರಿನಂತೆ ಪತಿ ವಿರುದ್ಧ ಕುಂಬಳೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಂದ್ಯೋಡು ಅಡ್ಕದ ಆಯಿಷಾಸ್ ಹೌಸ್‌ನ ಖದೀಜತ್ ಕುಬ್ರಾ (41) ನೀಡಿದ ದೂರಿನಂತೆ ಪತಿ ಕರೀಂ (46) ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ.

### ಕಳೆದು ಹೋಗಿದೆ

ಬಂಟ್ವಾಳ ತಾಲೂಕು, ನರಿಕೊಂಬು ಗ್ರಾಮ ಮತ್ತು ಅಂಚೆ ವ್ಯಾಪ್ತಿಯ 2-16 ಬೂಡಾಡಿ ಮನೆಯಲ್ಲಿ ವಾಸಿಸುತ್ತಿರುವ, ದಿ. ಮಹಾಬಲ ಶೆಟ್ಟಿಯವರ ಮಗನಾದ, ಸುಮಾರು 46 ವರ್ಷ ಪ್ರಾಯದ ರಂಜನ್ ಶೆಟ್ಟಿ ಆದ ನಾನು ಮೂಲಕ ಪ್ರಮಾಣೀಕರಿಸುವುದೇನೆಂದರೆ, ಬೆಂಗಳೂರು ಪಾಸ್‌ಪೋರ್ಟ್ ಕಚೇರಿಯಲ್ಲಿ ನೋಂದಣಿಯಾದ ನಂಬ್ರ B2494104 ಪಾಸ್‌ಪೋರ್ಟ್ ತಾ. 24-02-2026ರಂದು ಬಸ್ಸಿನಲ್ಲಿ ಸರಪಾಡಿಯಿಂದ ಬಂಟ್ವಾಳಕ್ಕೆ ಪ್ರಮಾಣಿಸುವಾಗ ಬ್ಯಾಗ್‌ನಲ್ಲಿದ್ದ ಪಾಸ್ ಪೋರ್ಟ್ ಕಳೆದು ಹೋಗಿದೆ. ಸಿಕ್ಕಿದವರು ಮೇಲಿನ ವಿಳಾಸಕ್ಕೆ ಹಿಂತಿರುಗಿಸಬೇಕಾಗಿ ವಿನಂತಿ.

---

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ**

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಟೆಂಡರ- 04/ 2026-27/876 ದಿನಾಂಕ: 22.05.2026

**ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)**

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಸಿ-8) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 04-06-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 05-06-2026 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 06-06-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: 4059-80-051-42-386 (8443 Deposit Contribution) During 2025-26 ವರ್ಷ ಇಂಡೆಂಟ್ (1) PWD/2026-27/SE1177

(ಕೆಸಿ-8) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 91802550121 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/166/26-27 dt. 26.05.2026

---

**ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,**
ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್,ಬಳ್ಳಾರಿ-583105
ಕುಲಸಚಿವರು(ಮೌಲ್ಯಮಾಪನ) ದೂಸಂ:08392241011

ಸಂಖ್ಯೆ:ವಿಶ್ರೀಕೃವಿಬ/ಪರೀಕ್ಷಾ/2026-27/330 ದಿನಾಂಕ: 22.05.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**
**( ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯವಿರುವ ಉತ್ತರ ಪತ್ರಿಕೆಗಳನ್ನು ಈ ಕೆಳಕಂಡಂತೆ ಮುದ್ರಿಸಿ ಸರಬರಾಜು ಮಾಡವ ನಿಮಿತ್ತ ಅರ್ಹ ಟೆಂಡರ್‌ದಾರರಿಂದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ದಿನಾಂಕ: 22.05.2026 ರಂದು ಆಹ್ವಾನಿಸಲಾಗಿದೆ.

**ಕೆಲಸದ ಹೆಸರು:** ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡವ ಕುರಿತು. **ಕೆಲಸದ ಅಂದಾಜು ಮೊತ್ತ ರೂ.ಗಳಲ್ಲಿ:** 1,58,62,500/-. **EMD (ರೂ.ಗಳಲ್ಲಿ):** 2,35,937/- **ಟೆಂಡರ್ ಪ್ರಕ್ರಿಯೆ ಶುಲ್ಕ (ರೂ.ಗಳಲ್ಲಿ):** ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ. **ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ:** 07 ದಿನಗಳು

ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು. ಇ-ಪ್ರೊಕ್ಯೂರ್‌ಮೆಂಟ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ದಿನಾಂಕ:29.05.2026ರ 04.00 ಗಂಟೆಯವರೆಗೆ ವೆಬ್‌ಸೈಟ್ **www.e-proc.karnataka.gov.in** ನಲ್ಲಿ ಹಾಗೂ ಇತರೆ ಮಾಹಿತಿಯನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.

ಸಹಿ/-ಕುಲಸಚಿವರು(ಮೌಲ್ಯಮಾಪನ)
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ-583105.

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/185

---

**ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ**
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ತುಮಕೂರು.

ಸಂಖ್ಯೆ : ಕಾ.ಇಂ./ಪಂ.ರಾ.ಇಂ.ವಿ./ತುಮ/ತಾಂ.ಶಾ./ಟೆಂಡರ್/2026-27/234
ದಿನಾಂಕ : 26-05-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 05/2026-27**
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿ)

**ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ** ಐಟಂವಾರು ಟೆಂಡರ್‌ಗಳನ್ನು KW-3 & KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ **1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು - 560 025, ದೂರವಾಣಿ : 080-2248 5867, 080-2248 5927** ರಲ್ಲಿ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್ / ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಅರ್ಹ (ಸಿವಿಲ್) ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಡಿ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ-ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

**Indent No : 1) RDPR/2025-26/RD/WORK_INDENT22840/Call-2, 2) RDPR/2025-26/RD/WORK_INDENT22063/Call-2, ಕಾಮಗಾರಿಗಳ ಟೆಂಡರ್‌ನನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.**

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು **ವೆಬ್‌ಸೈಟ್ : http://www.kppp.karnataka.gov.in** ಮುಖಾಂತರ **ದಿನಾಂಕ : 26-05-2026 ರಿಂದ 02-06-2026 ರ ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ. ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ.** ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. **ದೂರವಾಣಿ ಸಂಖ್ಯೆ : 0816-2272620** ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

ಡಿಐಪಿಆರ್/ತುಮಕೂರು/19/ಮಣಿಪಾಲ್/2026-27

---

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ,
ಬೆಂಗಳೂರು-560065

ಸಂಖ್ಯೆ : ಆಅ/ಟಿ.ಎನ್/5/2026-27 ದಿನಾಂಕ : 22-05-2026

**ಟೆಂಡರ್ ಪ್ರಕಟಣೆ**
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-4ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ.1ರ ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://www.kppp.karnataka.gov.in. ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ದತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ದತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.kppp.karnataka.gov.in ಇಂದ ಪಡೆಯಬಹುದು. ಪ್ರಿ-ಬಿಡ್ ನಡೆಯುವ ದಿನಾಂಕ : 03-06-2026 ಬೆಳಗ್ಗೆ 10.30ಕ್ಕೆ, ಟೆಂಡರ್ ಸಲ್ಲಿಸುವ ಕೊನೆ ದಿನಾಂಕ : 04-06-2026ರಂದು ಸಾಯಂಕಾಲ 4.00 ಗಂಟೆಯವರೆಗೆ ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ : 06-06-2026 ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು ದಿನಾಂಕ: 16-06-2026ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ.080-23332765ರಲ್ಲಿ ಸಂಪರ್ಕಿಸುವುದು. ಇ-ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ-support@eprochelpdesk.com ಅಥವಾ 8046010000 ಮತ್ತು 8068948777.

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/840/NR/2026-27

---

**ನಗರಸಭಾ ಕಾರ್ಯಾಲಯ, ಚಳ್ಳಕೆರೆ.(ಚಿತ್ರದುರ್ಗ ಜಿಲ್ಲೆ)**
ಫೋ ನಂ. 08195-250094 ka.challakere.cmc@gmail.com

ಸಂಖ್ಯೆ: ಚ.ನ/ತಾಂತ್ರಿಕ/ಎಸ್.ಎಫ್.ಸಿ & ನ.ನಿ/ಟೆಂಡರ್/ಸಿ.ಆರ್ 28/2026-27
ದಿನಾಂಕ: 26/05/2026

**ಟೆಂಡರ್ ಪ್ರಕಟಣೆ**

2026-27ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಲ್ಲಿ, 2026-27ನೇ ಸಾಲಿನ ಎಸ್.ಎಫ್.ಸಿ ಬಂಡವಾಳ ಆಸ್ತಿ ಸೃಜನ ಅನುದಾನದಲ್ಲಿ, 2025-26ನೇ ಸಾಲಿನ ನಗರಸಭಾ ನಿಧಿಯ ಶೇ 7.25ರ ಅನುದಾನದಲ್ಲಿ ಮತ್ತು 2025-26ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ-2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆ/ಅಧಿಕೃತ ಏಜೆನ್ಸಿದಾರರಿಂದ ಕೆ.ಪಿ.ಪಿ-ಪೋರ್ಟಲ್ (http://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿನಾಂಕ: 09/06/2026 ರ ಸಂಜೆ 5:00 ಗಂಟೆವರೆಗೆ ಕೆ.ಪಿ.ಪಿ-ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.challakerecity.mrc.gov.in ಮತ್ತು http://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

| SL NO | INDENT NUMBER | ESTIMATED AMOUNT (in lakhs) |
|---|---|---|
| 1 | DMA/2026-27/WS/WORK_INDENT58732 | 9.32 |
| 2 | DMA/2026-27/RD/WORK_INDENT58733 | 13.16 |
| 3 | DMA/2025-26/OW/W_IND43680/CALL-3 | 5.00 |
| 4 | DMA/2025-26/OW/W_IND48576/CALL-2 | 15.00 |
| 5 | DMA/2026-27/OW/W_INDENT58909 | 7.10 |

RO.No.126:DIPR/CTA/KSMCA/2026-27

ಸಹಿ/- ಪೌರಾಯುಕ್ತರು,
ನಗರಸಭೆ, ಚಳ್ಳಕೆರೆ

---

**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
**ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1**
**ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು**

**ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 01/2026-27 ದಿನಾಂಕ:25/05/2026**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 07 ಕಾಮಗಾರಿಗಳಿಗೆ ಟೆಂಡರ್‌ಅನ್ನು ಕೆ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 4.24 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.12.63 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕೆ ಪಿ ಪಿ-portal ನಂತೆ ಇರುತ್ತದೆ. ಕೆ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ:26/05/2026 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ:03/06/2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು https://kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ಅನ್ನು ದಿನಾಂಕ:04/06/2026 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.1
ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/171/ಕೆಎಸ್‌ಎಂಸಿಎ/2026-27

---

ಕರ್ನಾಟಕ ಸರಕಾರ
**ಕಾರ್ಯಪಾಲಕ ಇಂಜಿನಿಯರವರ ಕಛೇರಿ,**
**ಲೋಕೋಪಯೋಗಿ ಇಲಾಖೆ ವಿಭಾಗ, ಮಂಗಳೂರು**

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(56ಇ/2025-26):2026-27:ಜೆಇ-1
ದಿನಾಂಕ: 26.05.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)/ 3ನೇ ಕರೆ/ 5ನೇ ಕರೆ

**"ಲೆಕ್ಕಶೀರ್ಷಿಕೆ:- 4059-80-051-0-29-386 ಇಲಾಖಾ ಕಟ್ಟಡಗಳ ಯೋಜನೆಯಡಿ** ಇಂಡೆಂಟ್ ನಂ: 34106 ಈ ಕಾಮಗಾರಿಗೆ **3ನೇ ಕರೆಯಾಗಿ** ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 03.06.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

**ಲೆಕ್ಕಶೀರ್ಷಿಕೆ:- 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ" ಹೊಸ ಕಾಲುಸೇತುವೆ** ಇಂಡೆಂಟ್ ನಂ: 32621 ಈ ಕಾಮಗಾರಿಗೆ **5ನೇ ಕರೆಯಾಗಿ** ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 10.06.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.6.00ಲಕ್ಷ ಮತ್ತು ಗರಿಷ್ಠ ಮೊತ್ತ ರೂ.38.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-1 & KW-2 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/284/26-27 dt.27.05.2026

---

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
**ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ**

ಕನೀನಿನಿ/ಘಟಕಾನಿ/ವಿ-5/ಡಿಬಿ/ಫೀಡರ್ ಚಾನಲ್/ಮರು ಟೆಂಡರ್/2026-27/260 ದಿನಾಂಕ:26-05-2026

**ಅಲ್ಪಾವಧಿ ಶೇಕಡಾವಾರು ಮರುಟೆಂಡರ್ ( Call-2) ಪ್ರಕಟಣೆ**
**(ಕೆ.ಪಿ.ಪಿ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ)**

ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ ವಿಭಾಗ ಅಡಿಯಲ್ಲಿ ಅಲ್ಪಾವಧಿ ಶೇಕಡಾವಾರು ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ (ದ್ವಿಲಕೋಟೆಯಲ್ಲಿ) ಸ್ಟ್ಯಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಲೆಕ್ಕ ಶೀರ್ಷಿಕೆ 4701 ರ ಅಡಿಯಲ್ಲಿ ಒಂದು (1) ಕಾಮಗಾರಿಗೆ ಮರು ಟೆಂಡರ್ ಕರೆಯಲಾಗಿದ್ದು ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು 336.87 ಲಕ್ಷಗಳು ಇದ್ದು ಮುಂಗಡ ಠೇವಣಿ ಮೊತ್ತವು 5,05,000.00 ರೂಗಳು ಇರುತ್ತದೆ. ಟೆಂಡರನ್ನು ಸ್ವೀಕರಿಸುವ ದಿನಾಂಕ:27-05-2026 ರಿಂದ 04-06-2026 ರ ಸಂಜೆ 05.00 ಘಂಟೆಯವರೆಗೆ ಮತ್ತು ಟೆಂಡರನ್ನು ತೆರೆಯುವ ದಿನಾಂಕ:06-06-2026 ರ ಮುಂಜಾನೆ 11.00 ಘಂಟೆ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ:-www.kppp.karnataka.gov.in ರಲ್ಲಿ ದಿನಾಂಕ:-27-05-2026 ರ ನಂತರ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ.

DIPR/BGM/RO-NO-322/KSMCA/2026-27

---

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ**

ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ-4/ಟೆಂಡರ್:03/2026-27/206
ದಿನಾಂಕ : 27-05-2026.

**ಅಲ್ಪಾವಧಿ ಟೆಂಡರ ಪ್ರಕಟಣೆ**
**(E-GOK ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)**

ಹಾವೇರಿ ತಾಲೂಕಿನ ಈ ಕೆಳಕಂಡ ಗ್ರಾಮದಲ್ಲಿ ಟೆಂಡರ್ ಕರೆಯಲಾಗಿದೆ. 1) Tender queries/ Clarifications ಗೆ ಕೊನೆಯ ದಿನ ಮತ್ತು ಸಮಯ ದಿನಾಂಕ : **02-06-2026** ರ 11:00 ಗಂಟೆವರೆಗೆ 2) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. : ದಿನಾಂಕ : **03-06-2026** ರ 11:00 ಗಂಟೆವರೆಗೆ 3) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ ದಿನಾಂಕ : **08-06-2026** ರ 17:00 ಗಂಟೆವರೆಗೆ 4) ಇ-ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) : ದಿನಾಂಕ : **09-06-2026**ರ 17:30 ಗಂಟೆ ನಂತರ 5) ಇ-ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) : ದಿನಾಂಕ : **10-06-2026**ರ 10:00 ಗಂಟೆ ನಂತರ

ಇಂಡೆಂಟ್ ನಂ :- (1) Shifting of Devagiri MVS Existing Jackwell at IR to Chowdammann Tank of Haveri Taluka Haveri District. (RWSSD/2026-27/WS/WORK_INDENT10092)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/114/2026-27

---

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಲೋ.ಇ ವಿಭಾಗ, ಶಿವಮೊಗ್ಗ**

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ-1&2/ಜೆಇ-1&2/ಐಎಫ್‌ಟಿ-08/2026-27 ದಿನಾಂಕ: 26.05.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)**

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 2,3 & 4 ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:29-05-2026 ರಿಂದ 08-06-2026

**ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು**
1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:36337)
2. ಸೊರಬ ತಾಲ್ಲೂಕು 2 ಕಾಮಗಾರಿ (ಇ.ನಂ:36318, 36333)

**ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು**
1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:36343)

**ಪ್ರವರ್ಗ-1 ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು**
1. ಹೊಸನಗರ ತಾಲ್ಲೂಕು 1 ಕಾಮಗಾರಿ (ಇ.ನಂ:36314)

**ಪ್ರವರ್ಗ-2(ಎ) ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು**
1. ಸಾಗರ ತಾಲ್ಲೂಕು 1 ಕಾಮಗಾರಿ (ಇ.ನಂ:36339)
2. ಶಿಕಾರಿಪುರ ತಾಲ್ಲೂಕು 1 ಕಾಮಗಾರಿ (ಇ.ನಂ:36348)

**ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು**
1. ಹೊಸನಗರ ತಾಲ್ಲೂಕು 2 ಕಾಮಗಾರಿ (ಇ.ನಂ:36312, 36313)
2. ಸಾಗರ ತಾಲ್ಲೂಕು 3 ಕಾಮಗಾರಿ (ಇ.ನಂ:36344, 36336, 36316)
3. ಸೊರಬ ತಾಲ್ಲೂಕು 3 ಕಾಮಗಾರಿ (ಇ.ನಂ:36331, 36332, 36319)

ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 09 ತಿಂಗಳುಗಳು ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಂಯೇ ಪ್ರಕಟಿಸಲಾಗುವುದು, ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182- 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/122/05/293

---

**ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ**

ಉನಪ್ರಾ:ಭೂಬ: 12/2025-26 ದಿನಾಂಕ: 26 ಮೇ2026

**ಪ್ರಕಟಣೆ**

**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ 69(2) ಪ್ರಕಾರ**

ವಿಷಯ:- **ಉಡುಪಿ ತಾಲೂಕು ಉದ್ಯಾವರ ಗ್ರಾಮದ ಸರ್ವೆ ನಂ 237/4, 181/19, 241/54 ರಲ್ಲಿರುವ ಒಟ್ಟು 0.19 ಎಕ್ರೆ ಜಾಗವನ್ನು ಉದ್ಯಾನವನ ಮತ್ತು ಬಯಲುಜಾಗದ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ನಿಗಧಿಪಡಿಸುವ ಬಗ್ಗೆ.**

ಮೆ। ಜಯಲಕ್ಷ್ಮೀ ಅಸೋಸಿಯೇಟ್ಸ್, ಉದ್ಯಾವರ ಗ್ರಾಮ, ಉಡುಪಿ ಇವರು ಉಡುಪಿ ತಾಲೂಕು ಉದ್ಯಾವರ ಗ್ರಾಮದ ಸರ್ವೆ ನಂ 237/4, 181/19, 241/54 ರಲ್ಲಿರುವ ಒಟ್ಟು 0.19 ಎಕ್ರೆ ಜಾಗವನ್ನು ಉದ್ಯಾನವನ ಮತ್ತು ಬಯಲುಜಾಗದ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ನಿಗಧಿಪಡಿಸಲು ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುವರು. ಸದರಿ ಜಾಗವು ಮಾಸ್ಟರ್ ಪ್ಲಾನ್ ಪರಿಷ್ಕೃತ-1 ರಂತೆ ಉದ್ಯಾನವನ ಮತ್ತು ಬಯಲುಜಾಗದ ವಲಯದಲ್ಲಿದ್ದು, ಸದರಿ ಜಾಗಕ್ಕೆ 8.00 ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡುವ ಹಿನ್ನಲೆಯಲ್ಲಿ ಭೂ ಬದಲಾವಣೆ ಕೋರಿರುವರು

ಮೇಲ್ಕಂಡ ಭೂ ಉಪಯೋಗ ಬದಲಾವಣೆಗೆ ಕೆ.ಟಿ.ಸಿ.ಪಿ ತಿದ್ದುಪಡಿ ಕಾಯ್ದೆ 69(2) ರನ್ವಯ ಪ್ರಾಧಿಕಾರದಿಂದ ಕ್ರಮ ವಹಿಸಬಹುದಾಗಿದೆ. ಸಾರ್ವಜನಿಕರಿಂದ ಯಾವುದಾದರು ಸಲಹೆ:ಆಕ್ಷೇಪಣೆ ಇದ್ದಲ್ಲಿ ಈ ವಿಷಯ ಪ್ರಕಟಗೊಂಡ 15 ದಿನದೊಳಗೆ ಆಆಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಉಡುಪಿ ಮಲ್ಪೆ ಮೈನ್ ರೋಡ್, ಆದಿವುಡುಪಿ, ಉಡುಪಿ -1 ಇವರಿಗೆ ಲಿಖಿತ ಮೂಲಕ ತಿಳಿಸಲು ಕೋರಲಾಗಿದೆ.

ಸಹಿ/-ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಉಡುಪಿ

---

**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ.,
ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 1/2026-27 ದಿನಾಂಕ: 27-05-2026 (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ-II ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-4ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು (2) E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ: ದಿನಾಂಕ: 27-05-2026 ರಿಂದ ದಿನಾಂಕ: 03-06-2026 ವರೆಗೆ ಸಂಜೆ 4.00 ಘಂಟೆವರೆಗೆ (3) ಪ್ರೀ-ಬಿಡ್ ಮೀಟಿಂಗ್ ದಿನಾಂಕ: 30-05-2026 ಮಧ್ಯಾಹ್ನ 03.00 ಘಂಟೆಗೆ (4) ಟೆಂಡರ್ ತೆರೆಯುವ ದಿನಾಂಕ: 05-06-2026 ಬೆಳಿಗ್ಗೆ 11.00 ಘಂಟೆಗೆ (5) ಕಾಮಗಾರಿಗಳ ಸಂಖ್ಯೆ: 02 (ಎರಡು) (6) ಕೆಲಸದ ಕಾಲಮಿತಿ : 11 ತಿಂಗಳು (ಮಳೆಗಾಲ ಸೇರಿ) (7) ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಮೊತ್ತ: ರೂ.421.27 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (8) ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ: ರೂ. 421.23 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (9) ಇ.ಎಂ.ಡಿ. ಮೊತ್ತ ರೂ. 6.32 ಲಕ್ಷಗಳು (10)ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆ ದರ್ಜೆ-II ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1. ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2. ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು KPP portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/173/ಕೆಎಸ್‌ಎಂಸಿಎ/2026-27

---

## ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

**ತಿರುವನಂತಪುರಂ:** ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-54) ಡ್ರಾ ಮೇ 27ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

**1st Prize Rs.1,00,00,000/- [1 Crore]**
**DZ 498197 (NEYYATTINKARA)**

**Consolation Prize Rs.5,000/-**
DN 498197 DO 498197 DP 498197 DR 498197
DS 498197 DT 498197 DU 498197 DV 498197
DW 498197 DX 498197 DY 498197

**2nd Prize Rs.30,00,000/- [30 Lakhs]**
**DY 753477 THRISSUR**

**3rd Prize Rs.5,00,000/- [5 Lakhs]**
**DW 193659 (PALAKKAD)**

FOR THE TICKETS ENDING WITH THE FOLLOWING NUMBERS

**4th Prize Rs.5,000/-**
0690 1311 1690 1930 2036 3451 3523 3722 4498 4875
5559 5858 6073 6296 6372 7138 7816 8096 9316

**5th Prize Rs.2,000/-**
0555 1395 2519 2975 5463 6406

**6th Prize Rs.1,000/-**
0301 0317 0424 0578 1188 1520 1533 3455 3807 4074
4317 4549 4678 4683 6135 6279 6373 6621 6656 6824
7133 7563 8380 9167 9627

**7th Prize Rs.500/-**
0027 0061 0117 0195 0444 0473 0509 0531 0584 0746
0903 1029 1039 1345 1435 1602 1645 1715 1807 1892
2348 2361 2430 2501 2535 2741 2780 3058 3107 3166
3292 3535 3593 3862 3985 4059 4260 4318 4719 4812
4990 4997 5055 5277 5308 5620 5634 5647 5664 5860
6301 6476 6611 6724 6756 6758 6851 7264 7490 7503
7806 8277 8413 8430 8742 8874 8876 8950 8967 9150
9542 9721 9750 9817 9853 9979

**8th Prize Rs.200/-**
0029 0038 0091 0167 0364 0548 0551 0645 0723 0844
0921 0972 1147 1150 1172 1180 1291 1393 1411 1427
1634 1664 1831 1895 2170 2362 2633 2779 2919 2963
2966 2981 2992 3032 3204 3361 3384 3385 3406 3485
3603 3714 3994 4148 4311 4383 4409 4497 4505 4668
4794 5107 5183 5388 5599 5652 5653 5723 5953 6139
6207 6283 6328 6409 6429 6494 6591 6813 6816 6820
6907 7104 7143 7172 7189 7392 7553 7562 7753 7791
7863 8041 8409 8528 8550 9060 9129 9131 9213 9269
9304 9313 9374 9666 9682 9800

**9th Prize Rs.100/-**
0017 0024 0035 0043 0055 0067 0068 0213 0214 0277
0305 0318 0470 0503 0507 0654 0710 0830 0845 0894
0932 0941 0990 0997 1092 1093 1224 1253 1255 1301
1409 1445 1618 1646 1662 1763 1765 1783 2019 2101
2405 2426 2457 2759 2770 2809 2826 2854 2907 3098
3242 3300 3434 3605 3692 3814 3853 3916 4044 4055
4077 4177 4182 4190 4191 4205 4315 4378 4574 4581
4622 4654 4721 4728 4814 4925 5016 5110 5168 5209
5245 5263 5283 5506 5623 5847 5879 5931 5940 5955
5980 6005 6148 6177 6181 6188 6223 6334 6443 6619
6700 6711 6720 6877 6995 7005 7095 7412 7466 7473
7609 7669 7723 7821 7841 7852 7986 8421 8448 8536
8663 8699 8712 8720 8766 8899 8912 9134 9161 9171
9220 9265 9427 9540 9568 9573 9702 9735

---

### ಪುತ್ತೂರು ಮಾರುಕಟ್ಟೆ ಧಾರಣೆ

27-05-2026
**ಅಡಿಕೆ ಧಾರಣೆ ಕೆ.ಜಿ.ಗೆ**

| | |
|---|---|
| ಹೊಸ ಅಡಿಕೆ | 415 - 450 |
| ಚೋಲ್ ಅಡಿಕೆ | 510 - 535 |
| ಡಬಲ್ ಚೋಲ್ | 510 - 535 |
| ಹೊಸ ಪಟೋರ | 340 - 390 |
| ಹಳೆ ಪಟೋರ | 360 - 390 |
| ಹೊಸ ಉಳ್ಳಿ | 140 - 290 |
| ಹಳೆ ಉಳ್ಳಿ | 130 - 290 |
| ಹೊಸ ಕೋಕಾ | 315 - 335 |
| ಹಳೆ ಕೋಕಾ | 315 - 335 |
| ಹೊಸ ಕರಿಗೋಟು | 255 - 285 |
| ಹಳೆ ಕರಿಗೋಟು | 255 - 285 |
| ಹಸಿ ಕೊಕ್ಕೋ | 70 - 105 |
| ಒಣ ಕೊಕ್ಕೋ | 270 - 320 |
| **ಕಾಳುಮೆಣಸು ಧಾರಣೆ** | |
| ಕಾಳುಮೆಣಸು | 450 - 680 |
| **ರಬ್ಬರ್ ಧಾರಣೆ : ಗ್ರೇಡ್** | |
| ಆರ್‌ಎಸ್‌ಎಸ್ 1 | 245.00 |
| ಆರ್‌ಎಸ್‌ಎಸ್ 2 | 211.00 |
| ಸ್ಕ್ರಾಪ್ 1 | 142.00 |
| ಸ್ಕ್ರಾಪ್ 2 | 140.00 |

---

ಕರ್ನಾಟಕ ಸರ್ಕಾರ
**ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು,**
**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.**

ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ-1/2026-27/251 ದಿನಾಂಕ: 27.05.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ, (ಇ-ಪ್ರೊಕ್ಯೂರಮೆಂಟ್)**

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ 5054 ಯೋಜನೆಯಡಿ ಮಂಜೂರಾದ 03 ಕಾಮಗಾರಿಗಳಿಗೆ (**ಕನಿಷ್ಠ ರೂ. 221,34,101.01** (Rupees Two Crore Twenty One Lakhs Thirty Four Thousand One Hundred One and paise one only) ಮತ್ತು **ಗರಿಷ್ಠ 309,47,853.51 ಮೊತ್ತದ** (Rupees Three Crore Nine Lakhs Forty Seven Thousand Eight Hundred Fifty Three and paise fifty one only) ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕೆ.ಡಬ್ಲ್ಯೂ-04ರ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp.karnataka.gov.inನ್ನು ಸಂಪರ್ಕಿಸಬಹುದು. (Work Indent No:- RDPR/2026-27/RD/WORK_INDENT26836, RDPR/2026-27/RD/WORK_INDENT26595 & RDPR/2026-27/RD/WORK_INDENT26680). **ಟೆಂಡರ್ ಪ್ರಕ್ರಿಯೆ ದಿನಾಂಕಗಳು:** 1. ಇ-ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:27.05.2026 ರಿಂದ 10.06.2026 16:00 ಗಂಟೆವರೆಗೆ. 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ :11.06.2026 ರಂದು 16:00 ಗಂಟೆ ನಂತರ, 3. ಆರ್ಥಿಕ ಬಿಡ್ ತೆರೆಯುವ ದಿನಾಂಕ:17.06.2026 ರಂದು 11:00 ಗಂಟೆ ನಂತರ

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/42/ಕೆ.ಎಸ್.ಎಂ.ಸಿ.&ಎ/2026-27

## ಕಿರುಸುದ್ದಿ

### ಮಂಗಳೂರಿನಲ್ಲಿ ಹೊಟೇಲ್ ಕೆಲಸಕ್ಕೆಂದು ತೆರಳಿದ ಯುವಕ ಎರಡು ವರ್ಷಗಳಿಂದ ನಾಪತ್ತೆ

**ಮಂಜೇಶ್ವರ:** ಮಂಗಳೂರಿನಲ್ಲಿ ಹೊಟೇಲ್ ಕೆಲಸಕ್ಕೆಂದು ತಿಳಿಸಿ ತೆರಳಿದ ವ್ಯಕ್ತಿಯೋರ್ವ ಎರಡು ವರ್ಷಗಳಿಂದ ನಾಪತ್ತೆಯಾದ ಬಗ್ಗೆ ದೂರಲಾಗಿದೆ. ಉಪ್ಪಳ ಬಳಿಯ ಕೋಡಿಬೈಲು ಕೊಡಂಗೆ ನಿವಾಸಿ ಕೋಚಣ್ಣ ಶೆಟ್ಟಿಯವರ ಪುತ್ರ ಸಚಿನ್ ಕುಮಾರ್ (34) ನಾಪತ್ತೆಯಾದ ವ್ಯಕ್ತಿ. ಈಬಗ್ಗೆ ಅವರ ಸಹೋದರಿ, ಮುಂಬೈಯಲ್ಲಿರುವ ಸಾರಿಕಾ ರೂಪರಾಜ್ ಶೆಟ್ಟಿ ನೀಡಿದ ದೂರಿನಂತೆ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಸಚಿನ್ ಕುಮಾರ್ ತಂದೆಯ ಜೊತೆ ಬಂದ್ಯೋಡು ಕರವೂರಿನಲ್ಲಿರುವ ತಂದೆಯ ಸಹೋದರಿ ಮನೆಯಲ್ಲಿ ವಾಸಿಸುತ್ತಿದ್ದರು. ಈ ಮಧ್ಯೆ 2024ನೇ ಮಾರ್ಚ್ ತಿಂಗಳಲ್ಲಿ ಮಂಗಳೂರಿನಲ್ಲಿ ಹೊಟೇಲ್ ಕೆಲಸಕ್ಕೆಂದು ತಿಳಿಸಿ ಸಚಿನ್ ಕುಮಾರ್ ತೆರಳಿದ್ದರೆನ್ನಲಾಗಿದೆ. ನಂತರ ಸಚಿನ್ ಕುಮಾರ್ ಮನೆಗೆ ಬಂದಿಲ್ಲ. ಇದರಿಂದ ಅವರ ಮೊಬೈಲ್‌ಗೆ ಕರೆ ಮಾಡಿದರೂ ಸಂಪರ್ಕಕ್ಕೆ ಸಿಗುತ್ತಿಲ್ಲವೆನ್ನಲಾಗಿದೆ. ಈ ಹಿನ್ನಲೆಯಲ್ಲಿ ಸಹೋದರಿ ಸಾರಿಕಾ ರೂಪರಾಜ್ ಶೆಟ್ಟಿ ಅವರು ಆಗಾಗ ಊರಿಗೆ ಆಗಮಿಸಿ ಸಹೋದರನಿಗಾಗಿ ಹುಡುಕಾಟ ನಡೆಸುತ್ತಿದ್ದರು. ಇತ್ತೀಚೆಗೆ ಊರಿಗೆ ಬಂದ ಸಹೋದರಿ ಸಚಿನ್ ಕುಮಾರ್ ಕೆಲಸಕ್ಕಿದ್ದ ಹೊಟೇಲ್‌ಗೆ ತೆರಳಿ ವಿಚಾರಿಸಿದಾಗ ಅವರು ಕೆಲಸ ಬಿಟ್ಟು ಬೇರೆಲ್ಲಿಗೋ ತೆರಳಿರುವುದಾಗಿ ತಿಳಿಸಿದ್ದರೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ವಿವಿಧೆಡೆ ಹುಡುಕಾಡಿದರೂ ಪತ್ತೆಹಚ್ಚಲಾಗದಿರುವುದರಿಂದ ಮಂಜೇಶ್ವರ ಪೊಲೀಸರಿಗೆ ದೂರು ನೀಡಲಾಯಿತು.

### ವಿಮಾನಯಾನ ಮತ್ತು ವಿಮಾನ ನಿಲ್ದಾಣ ನಿರ್ವಹಣಾ ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

**ಕಾಸರಗೋಡು:** ರಾಜ್ಯ ಸಾಮಾನ್ಯ ಶಿಕ್ಷಣ ಇಲಾಖೆಯಡಿ ಸಂಪನ್ಮೂಲ ಕೇಂದ್ರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಎಸ್‌ಆರ್‌ಸಿ ಸಮುದಾಯ ಕಾಲೇಜಿನಲ್ಲಿ ಜುಲೈಯಿಂದ ವಿಮಾನಯಾನ ಮತ್ತು ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ ಡಿಪ್ಲೊಮಾ ಕೋರ್ಸ್‌ಗಳ ಅಧ್ಯಯನ ಆರಂಭಿಸಲಿದೆ. ಪ್ಲಸ್ ಟು ಅಥವಾ ತತ್ಸಮಾನ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಜುಲೈ 20ರ ವರೆಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆ ಮತ್ತು ಪ್ರಾಸ್ಪೆಕ್ಟಸ್‌ಗಳನ್ನು ತಿರುವನಂತಪುರದ ನಂದವನಂ ಪೊಲೀಸ್ ಶಿಬಿರದ ಬಳಿಯಿರುವ ಎಸ್‌ಆರ್‌ಸಿ ಕಚೇರಿಯಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗೆ 0471 2570471 ಅಥವಾ 9846033001 ಕರೆ ಮಾಡಬಹುದು.

### ಬಸ್ಸಿಗೆ ಟಿಪ್ಪರ್ ಲಾರಿ ಡಿಕ್ಕಿ: ಎಂಟು ಮಂದಿಗೆ ಗಾಯ

**ಮುಲ್ಕಿ:** ಕಿನ್ನಿಗೋಳಿ ಹಳೆಯಂಗಡಿ ಹೆದ್ದಾರಿಯ ಇಂದ್ರ ನಗರ ಬಳಿ ಬಸ್‌ಗೆ ಟಿಪ್ಪರ್ ಲಾರಿ ಡಿಕ್ಕಿಯಾಗಿ ಬಸ್ಸಿನಲ್ಲಿದ್ದ ಸುಮಾರು ಎಂಟು ಮಂದಿ ಪ್ರಯಾಣಿಕರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಗಾಯಾಳುಗಳನ್ನು ವೈಷ್ಣವಿ ಹಳೆಯಂಗಡಿ (25), ಅನುಶ್ರೀ ಅತಿಕಾರಿಬೆಟ್ಟು (21), ವಾಣಿಶ್ರೀ ಮುಚ್ಚೂರು (23), ಸ್ಟಾನ್ಲಿ ವೇಗಸ್ ಕೆಮ್ರಾಲ್ (43), ರೇಣುಕಾ ಕುಜಿಂಗಿರಿ (42), ಪ್ರತೀಕ್ಷಾ ಕೊಯಿಕುಡೆ (27), ದೇವಿಕಾ ಕಡಪು ಪಾವಂಜೆ (27), ಮಾಲತಿ ಎಡಪದವು (43) ಎಂದು ಗುರುತಿಸಲಾಗಿದೆ. ಕಿನ್ನಿಗೋಳಿ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಖಾಸಗಿ ಬಸ್ಸಿಗೆ, ಹಳೆಯಂಗಡಿ ಸಮೀಪದ ಇಂದಿರಾನಗರದ ಬಳಿ ಅದೇ ದಿಕ್ಕಿನಲ್ಲಿ ಅತಿ ವೇಗದಿಂದ ಬಂದ ಟಿಪ್ಪರ್ ಲಾರಿ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಬಸ್ಸಿನ ಹಿಂಭಾಗಕ್ಕೆ ಹಾನಿಯಾಗಿದ್ದು ಬಸ್ಸಿನೊಳಗಿದ್ದ ಪ್ರಯಾಣಿಕರಿಗೆ ತಲೆಗೆ ಕಾಲಿಗೆ ಗಾಯಗಳಾಗಿದ್ದು ಕೂಡಲೇ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಘಾತದಿಂದ ಕೆಲ ಹೊತ್ತು ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಗಿದ್ದು ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಅಪಘಾತಕ್ಕಿಡಾದ ಎರಡು ವಾಹನಗಳನ್ನು ತೆರವುಗೊಳಿಸಿದ್ದಾರೆ. ಅತಿ ವೇಗ ಹಾಗೂ ನಿರ್ಲಕ್ಷ ಚಾಲನೆ ಬಗ್ಗೆ ಟಿಪ್ಪರ್ ಲಾರಿ ಚಾಲಕನ ವಿರುದ್ಧ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




### ವಾಮಂಜೂರು ಶಾಲೆಯಲ್ಲಿ ಶಿಕ್ಷಕರ ಹುದ್ದೆಗಳಿಗೆ ಸಂದರ್ಶನ

**ಹೊಸಂಗಡಿ:** ಜಿ.ಎಲ್. ಪಿ.ಯಸ್ ವಾಮಂಜೂರು ಶಾಲೆಯಲ್ಲಿ 2026–27ನೇ ಶೈಕ್ಷಣಿಕ ವರ್ಷದಲ್ಲಿ ವಿವಿಧ ಅಧ್ಯಾಪಕ ಹುದ್ದೆಗಳಿಗಾಗಿ ಸಂದರ್ಶನ ಮೇ 30 ರಂದು ಶನಿವಾರ ಬೆಳಗ್ಗೆ 10:30ಕ್ಕೆ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಹತೆ ಸಾಬೀತು ಪಡಿಸುವ ಮೂಲ ಪ್ರಮಾಣ ಪತ್ರಗಳೊಂದಿಗೆ ಹಾಜರಾಗಬಹುದು ಎಂದು ಪ್ರಕಟಣೆ ತಿಳಿಸಿದೆ. 1.ಫುಲ್ ಟೈಮ್ ಜೂನಿಯರ್ ಲಾಂಗ್ವೆಜ್ ಅರಬಿಕ್.,y (KTET COMPULSORY) ಪ್ರೀ ಪ್ರೈಮರಿ ಟೀಚರ್.,y (NTTC COMPULSORY)



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಹೆಮ್ಮಾಡಿ ವಲಯದ ಉಪ್ಪಿನಕುದ್ರು ಒಕ್ಕೂಟದ ಶಾರದಾ ಸಂಘದ ಕಮಲ ಎಂಬವರ ಪುತ್ರ ಚರ್ಮರೋಗ ಸಮಸ್ಯೆಯಿಂದ ಬಳಲುತ್ತಿದ್ದು, ಈತನ ವೈದ್ಯಕೀಯ ಚಿಕಿತ್ಸೆಗಾಗಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು 25000 ರೂ.ಗಳನ್ನು ಮಂಜೂರು ಮಾಡಿದ್ದು, ಅನುದಾನದ ಚೆಕ್‌ನ್ನು ತಾಲೂಕು ಜನಜಾಗೃತಿ ಸದಸ್ಯರಾದ ಭಾಸ್ಕರ್, ತಾಲೂಕು ಕೃಷಿ ಅಧಿಕಾರಿ ಸಂಜು, ಒಕ್ಕೂಟದ ಸೇವಾ ಪ್ರತಿನಿಧಿ ಮಂಜುನಾಥ, ಒಕ್ಕೂಟದ ಪದಾಧಿಕಾರಿಗಳು ಹಾಗೂ ಸದಸ್ಯರು ವಿತರಿಸಿದರು

## ಜೂ. 6-7: ನಂತೂರು ಶ್ರೀ ಭಾರತೀ ಕಾಲೇಜ್ ಆವರಣದಲ್ಲಿ 'ಹಲಸುಮೇಳ- ಆಹಾರೋತ್ಸವ'

**ಮಂಗಳೂರು:** ನಗರದ ನಂತೂರು ಶ್ರೀ ಭಾರತೀ ಸಮೂಹ ಸಂಸ್ಥೆಗಳ ಆವರಣದಲ್ಲಿ ಜೂ.6 ಮತ್ತು 7 ರಂದು ಎರಡು ದಿನ ಹಲಸುಮೇಳ- ಆಹಾರೋತ್ಸವ ಆಯೋಜಿಸಲಾಗಿದೆ. ಹಲಸು, ಮಾವು ಹಾಗೂ ತಾಜಾ ತರಕಾರಿಗಳು ಲಭ್ಯವಿರುತ್ತವೆ. ಕೇವಲ ಹಲಸು ಮಾತ್ರವಲ್ಲದೆ, ಮಾವಿನ ಹಣ್ಣಿನ ಪ್ರಿಯರಿಗಾಗಿ ಮಲ್ಲಿಕಾ, ಅಲ್ಫೋನ್ಸ್, ದಶ್ಹೇರಿ ಸೇರಿದಂತೆ ವಿವಿಧ ತಳಿಯ ಉತ್ಕೃಷ್ಟ ಗುಣಮಟ್ಟದ ಮಾವಿನಹಣ್ಣುಗಳು ಲಭ್ಯವಿರಲಿವೆ. ಗ್ರಾಹಕರಿಗೆ ನೇರವಾಗಿ ತಲುಪಿಸುವ ನಿಟ್ಟಿನಲ್ಲಿ ಮಲೆನಾಡಿನ ತಾಜಾ ತರಕಾರಿಗಳ ವಿಶೇಷ ಮಾರಾಟ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

**ಸ್ಥಳದಲ್ಲೇ ಆಹಾರ ತಯಾರಿ: ತೆಂಗಿನೆಣ್ಣೆಯ ವಿಶೇಷತೆ**

ಆಹಾರ ಪ್ರಿಯರಿಗಾಗಿ ಮೇಳದ ಆವರಣದಲ್ಲೇ ಬಿಸಿಬಿಸಿಯಾದ ಹಲಸಿನಕಾಯಿ ದೋಸೆ, ಬೋಂಡಾ, ಪೋಡಿ, ಉಪ್ಪುಸೊಳೆ ರೊಟ್ಟಿ, ಗುಳಿ ಅಪ್ಪ, ರಸಾಯನ, ಗುಜ್ಜೆ ಮಂಚೂರಿ, ಹಲಸಿನಹಣ್ಣಿನ ಪಾಯಸ, ಬೆರಟಿ ಪಾಯಸ, ಹಾಗೂ ಹಲಸಿನ ಹಣ್ಣಿನ ಜಿಲೇಬಿ ಸೇರಿದಂತೆ ಹತ್ತಾರು ಬಗೆಯ ತಿಂಡಿ–ತಿನಿಸುಗಳನ್ನು ಸ್ಥಳದಲ್ಲೇ ಸಿದ್ಧಪಡಿಸಿ ನೀಡಲಾಗುತ್ತದೆ. ಸಾರ್ವಜನಿಕರ ಆರೋಗ್ಯ ಮತ್ತು ಸಾಂಪ್ರದಾಯಿಕ ರುಚಿಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ, ಎಲ್ಲಾ ಆಹಾರ ಪದಾರ್ಥಗಳ ತಯಾರಿಕೆಗೆ ಕೇವಲ ತೆಂಗಿನೆಣ್ಣೆಯನ್ನು ಮಾತ್ರ ಬಳಸುತ್ತಿರುವುದು ಆಹಾರೋತ್ಸವದ ಪ್ರಮುಖ ವಿಶೇಷತೆಯಾಗಿದೆ. ಅಲ್ಲದೇ ಹಪ್ಪಳ, ಸೋಂಟೆ, ಉಂಡ್ಳಕಾಳು, ಚಿಪ್ಸ್, ಬಾಳೆಹಣ್ಣು ಹಲ್ವ, ಹಲಸಿನಹಣ್ಣಿನ ಹಲ್ವ ಕೂಡಾ ಲಭ್ಯವಿದೆ. ಗುಣಮಟ್ಟಕ್ಕೆ ಇಲ್ಲಿ ಮೊದಲ ಆದ್ಯತೆ ನೀಡಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

**ಸಾಂಸ್ಕೃತಿಕ ವೈಭವ**

ಆಹಾರ ಮತ್ತು ಕೃಷಿ ಮೇಳಕ್ಕೆ ಪೂರಕವಾಗಿ ಎರಡು ದಿನಗಳ ಕಾಲ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ನಂತೂರಿನ ಶ್ರೀ ಭಾರತೀ ಸಮೂಹ ಸಂಸ್ಥೆಯ ಆವರಣದಲ್ಲಿ ಈ ಸಾಂಸ್ಕೃತಿಕ ಸೌರಭ ಅನಾವರಣಗೊಳ್ಳಲಿದೆ.

## ರಾಜ್ಯ ಸರಕಾರದ ವಿರುದ್ಧ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ತೀವ್ರ ಅಸಮಾಧಾನ

# ಪ್ರವಾಸಿ ತಾಣಗಳಿಗೆ ನಿರ್ಬಂಧ ಬೇಡ

**ಮಡಿಕೇರಿ:** ಜಿಲ್ಲೆಯ ದುಬಾರೆ, ಮಾಂದಲಪಟ್ಟಿ, ತಡಿಯಂಡಮೋಳ್‌ನಂತಹ ಪ್ರಮುಖ ಪ್ರವಾಸಿ ತಾಣಗಳಿಗೆ ಪ್ರವಾಸಿಗರು ತೆರಳದಂತೆ ನಿರ್ಬಂಧ ಹೇರಿರುವ ಅರಣ್ಯ ಇಲಾಖೆಯ ಕ್ರಮಕ್ಕೆ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಈ ನಿಯಮವನ್ನು ಕೂಡಲೇ ಹಿಂಪಡೆಯಬೇಕು ಎಂದು ಒತ್ತಾಯಿಸಿದೆ.

ನಗರದ ವ್ಯಾಲಿವ್ಯೂ ಹೊಟೇಲ್ ಸಭಾಂಗಣದಲ್ಲಿ ಕೂರ್ಗ್ ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ವತಿಯಿಂದ ಆಯೋಜಿಸ ಲಾಗಿದ್ದ ಪ್ರವಾಸೋದ್ಯಮ ಸಂಬಂಧಿತ ವಿವಿಧ ಸಂಘ–ಸಂಸ್ಥೆಗಳೊಂದಿಗಿನ ಸಭೆಯಲ್ಲಿ ಈ ಒತ್ತಾಯ ಕೇಳಿ ಬಂದಿತು.

ಸಭೆಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಕುಂಡ್ಯೊಳಂಡ ದಿನೇಶ್ ಕಾರ್ಯಪ್ಪ ಅವರು, ಕೊಡಗು ಜಿಲ್ಲೆಯು ಪ್ರವಾಸಿಗರಿಗೆ ಸುರಕ್ಷಿತವಾಗಿದ್ದು, ಆತಿಥ್ಯಕ್ಕೆ ಎಂದಿನಂತೆ ಹೆಸರುವಾಸಿಯಾಗಿದೆ. ಆದರೂ ಕೆಲವರು ಅನಗತ್ಯವಾಗಿ ಕೊಡಗಿನ ಪ್ರವಾಸೋದ್ಯಮದ ಬಗ್ಗೆ ಇಲ್ಲಸಲ್ಲದ ಟೀಕೆ, ದೂರುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಬ್ಬಿಸುತ್ತಾ ಕೊಡಗಿನ ಆತಿಥ್ಯ ಸಂಸ್ಕೃತಿಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಆಧಾರ ರಹಿತ ಹೇಳಿಕೆಗಳನ್ನು ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡಿರುವ ಸರ್ವರೂ ಖಂಡಿಸಬೇಕಾಗಿದೆ. ವದಂತಿಗಳಿಗೆ ಪ್ರವಾಸಿಗರು ಕಿವಿಗೊಡಬಾರದು ಎಂಬ ಸಂದೇಶವನ್ನು ಪ್ರವಾಸಿಗರಿಗೆ ಮನದಟ್ಟು ಮಾಡುವ ನಿಟ್ಟಿನಲ್ಲಿ ನಾಡಿನ ಪ್ರವಾಸೋದ್ಯಮಿಗಳು, ಸಂಘಸಂಸ್ಥೆಗಳ ಸಹಕಾರ ಅತ್ಯಗತ್ಯವಾಗಿದೆ ಎಂದರು.



ಕೊಡಗು ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಬಿ.ಆರ್. ನಾಗೇಂದ್ರ ಪ್ರಸಾದ್ ಮಾತನಾಡಿ, ಕೊಡಗಿನ ವ್ಯಾಪಾರಸ್ಥರು ಇತ್ತೀಚಿನ ವರ್ಷಗಳಲ್ಲಿ ಪ್ರವಾಸಿಗರನ್ನು ನಂಬಿಕೊಂಡು ವಹಿವಾಟು ನಡೆಸುತ್ತಿದ್ದಾರೆ. ಹೀಗಿರುವಾಗ ಜಿಲ್ಲೆಗೆ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಮುಖವಾದಲ್ಲಿ ಅದು ವರ್ತಕರ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಈಗಾಗಲೇ ಪ್ರವಾಸೋದ್ಯಮ ಇಲಾಖೆಯು ಜಿಲ್ಲೆಯಾದ್ಯಂತ 12 ಹೊಸ ತಾಣಗಳೂ ಸೇರಿ 36 ಪ್ರವಾಸಿತಾಣಗಳ ಅಭಿವೃದ್ಧಿಗೆ ಯೋಜನೆ ರೂಪಿಸಿದೆ. ಜಿಲ್ಲೆಗೆ ಬರುವ ಪ್ರವಾಸಿಗರ ವಾಹನ ನಿಲುಗಡೆಯ ಸಮಸ್ಯೆಯನ್ನೂ ಸಂಬಂಧಿಸಿದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ಪರಿಹರಿಸಬೇಕಾಗಿದೆ. ವಾಹನ ನಿಲುಗಡೆ ಸಮಸ್ಯೆಯೂ ವ್ಯಾಪಾರಸ್ಥರಿಂದ ಪ್ರವಾಸಿಗರನ್ನು ದೂರ ಮಾಡಿದೆ ಎಂದೂ ನಾಗೇಂದ್ರ ಪ್ರಸಾದ್ ಅಭಿಪ್ರಾಯಪಟ್ಟರು.

ಕೊಡಗು ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ಗೌರವ ಸಲಹೆಗಾರ ಜಿ.ಚಿದ್ವಿಲಾಸ್ ಮಾತನಾಡಿ, ಕೊಡಗು ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳನ್ನು ವಿಳಂಬ ರಹಿತವಾಗಿ ಅಭಿವೃದ್ಧಿ ಮಾಡುವುದು ಮುಖ್ಯ. ಅನೇಕ ತಾಣಗಳಲ್ಲಿ ಮೂಲಸೌಲಭ್ಯವೇ ಇಲ್ಲ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿನ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಸಂಘಸಂಸ್ಥೆಗಳು ಒಗ್ಗೂಡಿ ತಮ್ಮ ವ್ಯಾಪ್ತಿಯಲ್ಲಿನ ಪ್ರವಾಸಿ ತಾಣಗಳಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬಜೆಟ್ ಸಹಿತವಾಗಿ ವರದಿ ನೀಡಿದರೆ ಸರ್ಕಾರದ ಮಟ್ಟದಲ್ಲಿ ಈ ನಿಟ್ಟಿನಲ್ಲಿ ಚರ್ಚಿಸಲು ಅನುಕೂಲವಾಗಲಿದೆ ಎಂದರು.

ಲೇಖಕ ಅನಿಲ್ ಹೆಚ್.ಟಿ. ಮಾತನಾಡಿ, ರಾಜ್ಯದ ಪ್ರವಾಸೋದ್ಯಮಕ್ಕೆ ಕೊಡಗು ಜಿಲ್ಲೆಯು ಮಹತ್ವದ ಕೊಡುಗೆ ನೀಡಿದ್ದರೂ ಅನೇಕ ವರ್ಷಗಳಿಂದ ಪ್ರವಾಸೋದ್ಯಮ ಖಾತೆ ಸಚಿವರು ಜಿಲ್ಲೆಗೆ ಭೇಟಿ ನೀಡಲೇ ಇಲ್ಲ. ಜಿಲ್ಲೆಗೆ ಭೇಟಿ ನೀಡಿದರೆ ಮಾತ್ರ ಸಚಿವರಿಗೆ, ಉನ್ನತ ಅಧಿಕಾರಿಗಳಿಗೆ ಕೊಡಗಿನ ಪ್ರವಾಸೋದ್ಯಮದ ಬೇಕು ಬೇಡಿಕೆ ತಿಳಿಯಲು ಸಾಧ್ಯ ಎಂದರು.

> **ತೀವ್ರ ಹಿನ್ನಡೆಯಾಗಿದೆ**
> ಪ್ರವಾಸಿ ತಾಣಗಳಲ್ಲಿ ಅಥವಾ ಯಾವುದೇ ಪ್ರವಾಸೋದ್ಯಮ ಸಂಬಂಧಿತ ಚಟುವಟಿಕೆಗಳಲ್ಲಿ ಅಹಿತಕರ ಘಟನೆ ಸಂಭವಿಸಿದ ಕೂಡಲೇ ಪೂರ್ವಾಪರ ತಿಳಿಯದೆ ಪ್ರವಾಸೀ ಚಟುವಟಿಕೆಗಳಿಗೆ ನಿರ್ಬಂಧ ಹೇರುವ ಸರ್ಕಾರದ ಕ್ರಮದಿಂದಾಗಿ ಜಿಲ್ಲೆಯ ಪ್ರವಾಸೋದ್ಯಮಕ್ಕೆ ತೀವ್ರ ಹಿನ್ನಡೆಯಾಗಿದೆ
> ■ ದಿನೇಶ್ ಕಾರ್ಯಪ್ಪ, ಕುಂಡ್ಯೊಳಂಡ

ಶೀಘ್ರವೇ ದುಬಾರೆಯಲ್ಲಿ ಚಟುವಟಿಕೆಗಳನ್ನು ಪುನರಾರಂಭಿಸಬೇಕೆಂದು ದುಬಾರೆಯ ರ್‍ಯಾಫ್ಟಿಂಗ್ ಅಸೋಸಿಯೇಷನ್ ಸಲಹೆಗಾರ ರತೀಶ್ ಒತ್ತಾಯಿಸಿದರು. ಮಾಂದಲಪಟ್ಟಿ ಜೀಪು ಮಾಲೀಕರ ಮತ್ತು ಚಾಲಕರ ಸಂಘದ ಅಧ್ಯಕ್ಷ ಪಿ.ಟಿ. ಉಣ್ಣಿಕೃಷ್ಣ ಮಾತನಾಡಿ, ಅರಣ್ಯ ಇಲಾಖೆಯ ನಿರ್ಬಂಧದಿಂದಾಗಿ ಮಾಂದಲಪಟ್ಟಿಯನ್ನೇ ನಂಬಿಕೊಂಡಿರುವ 600ಕ್ಕೂ ಅಧಿಕ ಜೀಪು ಮಾಲಕರು, ಅಂಗಡಿ ಮಾಲಕರ ಕುಟುಂಬಗಳಿಗೆ ಸಂಕಷ್ಟ ಎದುರಾಗಿದೆ ಎಂದರು.

ಕೊಡಗು ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್, ಕೊಡಗು ಹೊಟೇಲ್, ರೆಸಾರ್ಟ್ ಅಸೋಸಿಯೇಷನ್ ಪದಾಧಿಕಾರಿ ಮೋಹನ್ ದಾಸ್, ಕೊಡಗು ಚೇಂಬರ್ ಆಫ್ ಕಾಮರ್ಸ್ ಉಪಾಧ್ಯಕ್ಷ ಎ.ಕೆ. ನವೀನ್, ಮಡಿಕೇರಿ ಪ್ರವಾಸಿ ವಾಹನ ಮಾಲಕರ ಮತ್ತು ಚಾಲಕರ ಸಂಘದ ಅಧ್ಯಕ್ಷ ತೆಕ್ಕಡೆ ಸಂತೋಷ್, ಕೂರ್ಗ್ ಹೊಟೇಲ್ ಮತ್ತು ರೆಸಾರ್ಟ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ನಾಸಿರ್ ಅಹಮ್ಮದ್, ಖಜಾಂಚಿ ಸಾಗರ್ ಗಣಪತಿ, ಜಂಟಿ ಕಾರ್ಯದರ್ಶಿ ಡಿ.ಕೆ. ಮಂಜುನಾಥ್, ಕೊಡಗು ಟ್ರಾವಲ್ಸ್ ಅಸೋಸಿಯೇಷನ್ ಅಧ್ಯಕ್ಷ ವಸಂತ್, ಸೋಮವಾರಪೇಟೆ ತಾಲೂಕು ಹೋಂಸ್ಟೇ ಅಸೋಸಿಯೇಷನ್ ನಿರ್ದೇಶಕ ಕಾರ್ತಿಕ್ ಸದಾನಂದ್, ಕಾವೇರಿ ಕಾರು ಚಾಲಕ ಮತ್ತು ಮಾಲಕರ ಸಂಘದ ಅಧ್ಯಕ್ಷ ಗೌತಮ್, ಕಾಫಿನಾಡು ಕಾರು ಚಾಲಕ ಮತ್ತು ಮಾಲಕರ ಸಂಘದ ಅಧ್ಯಕ್ಷ ಮಹೇಂದ್ರ, ಸೇರಿದಂತೆ ವಿವಿಧ ಸಂಘಸಂಸ್ಥೆಗಳ ಪ್ರಮುಖರು ಹಾಜರಿದ್ದರು.



## ಪುತ್ತೂರು ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕರಿಗಾಗಿ ಶೈಕ್ಷಣಿಕ ಪುನಶ್ಚೇತನಾ ಕಾರ್ಯಾಗಾರ

**ಪುತ್ತೂರು:** ಶೈಕ್ಷಣಿಕ ಬೆಳವಣಿಗೆಗೆ ಹೊಸ ಹೊಸ ವಿಚಾರಗಳು ಪೂರಕ. ತರಬೇತಿ ಪಡೆದವರು ಭವಿಷ್ಯದಲ್ಲಿ ತರಬೇತುದಾರರಾದಾಗ ಕಾರ್ಯಾಗಾರ ಯಶಸ್ವಿ ಎನಿಸುತ್ತದೆ. ನಮ್ಮಲ್ಲಿರುವ ಶಕ್ತಿ ಮಕ್ಕಳ ಬೆಳವಣಿಗೆಗೆ ಬಳಕೆಯಾಗಲಿ ಎಂದು ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹಕಾರ್ಯ ನಿರ್ವಹಣಾಧಿಕಾರಿ ವೆಂಕಟರಮಣ ರಾವ್ ಮಂಕುಡೆ ಹೇಳಿದರು.

ನಗರದ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕರಿಗಾಗಿ 5 ದಿನಗಳ ಕಾಲ ಏರ್ಪಡಿಸಲಾಗಿರುವ ಶೈಕ್ಷಣಿಕ ಪುನಶ್ಚೇತನ ಕಾರ್ಯಾಗಾರವನ್ನು ಅವರು ದೀಪ ಬೆಳಗಿ ಉದ್ಘಾಟಿಸಿ ಮಾತನಾಡಿದರು.

ವಿವೇಕಾನಂದ ಆಂಗ್ಲ ಮಾಧ್ಯಮ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಡಾ. ಶಿವಪ್ರಕಾಶ್ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕರ ಜ್ಞಾನ ಮಕ್ಕಳಿಗೆ ಉಪಯೋಗವಾಗಲಿ. ಪರಿಣಾಮವಾಗಿ ನಿರಂತರವಾಗಿ ಉತ್ತಮ ಫಲಿತಾಂಶ ಬರುವಂತಾಗಲಿ ಎಂದು ಆಶಿಸಿದರು.




> ▸ ಶೈಕ್ಷಣಿಕ ಬೆಳವಣಿಗೆಗೆ ಹೊಸ ಹೊಸ ವಿಚಾರಗಳು ಪೂರಕ.
> ▸ ಭವಿಷ್ಯದಲ್ಲಿ ತರಬೇತುದಾರರಾದಾಗ ಕಾರ್ಯಾಗಾರ ಯಶಸ್ವಿ ಎನಿಸುತ್ತದೆ.
> ▸ ನಮ್ಮಲ್ಲಿರುವ ಶಕ್ತಿ ಮಕ್ಕಳ ಬೆಳವಣಿಗೆಗೆ ಬಳಕೆಯಾಗಲಿ

ಶಾಲಾ ಮುಖ್ಯೋಪಾಧ್ಯಾಯ ಸತೀಶ್ ಕುಮಾರ್ ರೈ ಪ್ರಾಸ್ತಾವಿಸಿದರು. ವೇದಿಕೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರಿನ ಎಚ್‌ಇಎಡಿ, ಶಿಕ್ಷಕ ಸಂಸ್ಥೆಯ ನಿರ್ದೇಶಕಿ ಪರಿಮಳಾ ಮೂರ್ತಿ, ಸಮಾಜಶಾಸ್ತ್ರಜ್ಞ ಬಸವಣ್ಣ, ಐಐಟಿ ತರಬೇತುದಾರ ಡಾ.ಎಂ.ಎಸ್. ರಾಮಚಂದ್ರ, ಅತೀರಾ ಉಪಸ್ಥಿತರಿದ್ದರು.

ವಿವೇಕಾನಂದ ಆಂಗ್ಲ ಮಾಧ್ಯಮ ಶಾಲಾ ಆಡಳಿತ ಮಂಡಳಿ ಕೋಶಾಧಿಕಾರಿ ಕೃಷ್ಣಮೋಹನ್ ಸಂಪನ್ಮೂಲ ವ್ಯಕ್ತಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಜ್ಯೋತಿಲಕ್ಷ್ಮಿ ಪ್ರಾರ್ಥಿಸಿದರು. ಅಖಿಲಾ ಸ್ವಾಗತಿಸಿ, ಆಶಾ ಶೆಟ್ಟಿ ವಂದಿಸಿದರು. ಸಹನಾ ಪೈ ಕಾರ್ಯಕ್ರಮ ನಿರ್ವಹಿಸಿದರು.

## ವೀರಾಜಪೇಟೆಯಲ್ಲಿ ಮೊದಲ ಬಾರಿಗೆ ಇಂದಿನಿಂದ ಮಾವು ಮೇಳ

**ಮಡಿಕೇರಿ:** ವೀರಾಜಪೇಟೆಯ ರೋಟರಿ ಕ್ಲಬ್ ಮತ್ತು ಮಡಿಕೇರಿಯ ಕೊಡಗು ಜಿಲ್ಲಾ ಹಾಪ್ ಕಾಮ್ಸ್ ಜಂಟಿ ಆಶ್ರಯದಲ್ಲಿ, ಸಾರ್ವಜನಿಕ ಬೇಡಿಕೆಯ ಮೇರೆಗೆ ವೀರಾಜಪೇಟೆಯಲ್ಲಿ ಇದೇ ಮೊದಲ ಬಾರಿಗೆ ಮೇ 28ರಿಂದ 30ರವರೆಗೆ ಮೂರು ದಿನಗಳ ಮಾವು ಮೇಳ ನಡೆಯಲಿದೆ.

ನೈಸರ್ಗಿಕವಾಗಿ ಮಾಗಿಸಿದ ಕಾರ್ಬೈಡ್ ಮುಕ್ತ ಹಣ್ಣುಗಳನ್ನು ರೈತರಿಂದ ಗ್ರಾಹಕರಿಗೆ ಸುಲಭವಾಗಿ ಸಿಗುವಂತೆ ಮಾಡುವುದು ಹಾಗೂ ಮಾವು ಪ್ರಿಯರಿಗೆ ಉತ್ತಮ ದರ್ಜೆಯ ಹಣ್ಣುಗಳು ಸಿಗುವಂತೆ ಮಾಡುವುದು ಮೇಳದ ಉದ್ದೇಶವಾಗಿದೆ.

ಈ ಮೇಳವನ್ನು ಕ್ಯಾಲ್ಸಿಯಂ ಕಾರ್ಬೈಡ್ ಮುಕ್ತ ಹಾಗೂ 'ನೈಸರ್ಗಿಕವಾಗಿ ಮಾಗಿಸಿದ ಹಣ್ಣುಗಳು' ಮತ್ತು ರೈತರಿಂದ ನೇರ ಗ್ರಾಹಕರಿಗೆ ಎಂಬ ಪರಿಕಲ್ಪನೆಯಡಿ ರೂಪಿಸಲಾಗಿದೆ. ಮಾವಿನ ಕಾಯಿಯನ್ನು ಬೇಗನೆ ಮಾಗಿಸಲು ಕ್ಯಾಲ್ಸಿಯಂ ಕಾರ್ಬೈಡ್ ಸೇರಿದಂತೆ ಕೆಲವು ವಿಷಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತಿದೆ. ಇವುಗಳಿಂದ ಕ್ಯಾನ್ಸರ್ ಸೇರಿದಂತೆ ಇತರೆ ಕಾಯಿಲೆಗಳು ಬರುವ ಸಂಭವ ಅಧಿಕವಾಗಿರುತ್ತದೆ. ಕೊಡಗಿನದ್ಯಾಂತ (ಎಲ್ಲಾ ಕಡೆ) ಈ ರೀತಿ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದ್ದು ಆರೋಗ್ಯಕ್ಕೆ ಹಾನಿಕಾರಕವಾಗಿರುತ್ತದೆ. ರೈತರು ತಾವೇ ಬೆಳೆದು ನೇರವಾಗಿ ವಿಷಮುಕ್ತ ಹಣ್ಣುಗಳನ್ನು ತಂದು ಮೇಳದಲ್ಲಿ ಮಾರಾಟ ಮಾಡುತ್ತಾರೆ.



ಈ ಮೇಳದಲ್ಲಿ ಮಾವು ಪ್ರಿಯರಿಗೆ ಮಾವಿನ ಹಣ್ಣಿನ ವಿವಿಧ ತಳಿಗಳಾದ ಮಲಗೋವ, ಸಿಂಧೂರ, ರಸಪುರಿ, ತೋತಪುರಿ, ಬಾದಾಮಿ, ಮಲ್ಲಿಕ, ದಶೇರಿ, ಇಮಾಮ್ ಪಸಂದ್, ಸಕ್ಕರೆ ಗುತ್ತಿ ಇತರೆ ತಳಿಗಳ ಜೊತೆ ಸ್ಥಳೀಯ ಕಾಡು ಮಾವಿನ ಹಣ್ಣುಗಳನ್ನು ಯೋಗ್ಯ ಬೆಲೆಗೆ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಕೊಡಗು ಜಿಲ್ಲಾ ಹಾಪ್ ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಹಾಯಕ ತೋಟಗಾರಿಕಾ ನಿರ್ದೇಶಕರು ತಿಳಿಸಿದ್ದಾರೆ.

ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕಿನ ಸಾರ್ವಜನಿಕರ ಬೇಡಿಕೆಯ ಮೇರೆಗೆ ಆಯೋಜಿಸಲಾಗಿರುವ ಈ ಮಾವು ಮೇಳದಲ್ಲಿ ಗ್ರಾಹಕರಿಗೆ ಸುಮಾರು 10–15 ತಳಿಯ (ಮಾವು) ಹಣ್ಣುಗಳನ್ನು ರಾಜ್ಯದ ವಿವಿಧ ಜಿಲ್ಲೆಗಳ ಬೆಳೆಗಾರರು ಮಾರಾಟ ಮಾಡಲಿದ್ದಾರೆ ಎಂದು ಅವರು ಹೇಳಿದ್ದಾರೆ.

## ಚೇರ್ಕಾಡಿ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ವಿದ್ಯಾರಂಭ | ಸೂರಾಲು ದೇವಿಪ್ರಸಾದ ತಂತ್ರಿ

# ಮಕ್ಕಳು ವಿದ್ಯೆ ಕಲಿಯುವುದರೊಂದಿಗೆ ಸಂಸ್ಕಾರವಂತರಾಗಬೇಕು

**ಬ್ರಹ್ಮಾವರ:** ಇಲ್ಲಿನ ಚೇರ್ಕಾಡಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 2026 – 27ನೇ ಶೈಕ್ಷಣಿಕ ವರ್ಷದ ವಿದ್ಯಾರಂಭ ಕಾರ್ಯಕ್ರಮ ಶಾಲಾ ಸಭಾಭವನದಲ್ಲಿ ನಡೆಯಿತು.

ವೇದಬ್ರಹ್ಮ ಶ್ರೀ ಸೂರಾಲು ದೇವಿ ಪ್ರಸಾದ ತಂತ್ರಿಗಳು ದೀಪ ಬೆಳಗಿಸಿ, ವಿದ್ಯಾರಂಭ ಶ್ಲೋಕವನ್ನು ಪಠಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಹಾಗೂ ಪದವಿ ಪೂರ್ವ ಕಾಲೇಜುಗಳ ಕರಸ್ಪಾಂಡೆಂಟ್ ವಸಂತ್ ಕುಮಾರ್ ಎಂ. ಎಸ್. ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಾಹಿತ್ಯ, ಶಿಕ್ಷಣ, ಸೇವೆ ಮತ್ತು ಆರೋಗ್ಯ ಈ ನಾಲ್ಕು ಆಯಾಮಗಳಲ್ಲಿ ರಾಷ್ಟ್ರೋತ್ಥಾನ ತನ್ನ ಸಾಮಾಜಿಕ ಸೇವೆಯನ್ನು ಮಾಡುತ್ತಿದೆ. ಪಂಚಮುಖಿ ಶಿಕ್ಷಣದ ಮೂಲಕ ವಿದ್ಯಾರ್ಥಿಗಳನ್ನು ದೇಶದ ಸದೃಢ ಪ್ರಜೆಯನ್ನಾಗಿಸುವುದು ರಾಷ್ಟ್ರೋತ್ಥಾನದ ಮುಖ್ಯ ಉದ್ದೇಶ ಎಂದು ತಿಳಿಸಿ, ವಿದ್ಯಾ ಕೇಂದ್ರದ ಶೈಕ್ಷಣಿಕ ಚಟುವಟಿಕೆಯ ಕುರಿತು ಮಾಹಿತಿ ನೀಡಿದರು.

ಸೂರಾಲು ದೇವಿಪ್ರಸಾದ ತಂತ್ರಿ ಮಾತನಾಡಿ, ಆಗುವುದೆಲ್ಲ ಒಳ್ಳೆಯದಕ್ಕೆ ಎಂಬ ಆಶಾಭಾವನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಒಳ್ಳೆಯ ಹೃದಯ, ಒಳ್ಳೆಯ ಮನಸ್ಸು, ಹಿರಿಯರನ್ನು ಗೌರವಿಸುವ ಭಾವವನ್ನು ಬೆಳೆಸಿಕೊಂಡು ದೇಶಕ್ಕೆ ಸತ್ಪ್ರಜೆಯಾಗಿ ಇಲ್ಲಿನ ವಿದ್ಯಾರ್ಥಿಗಳು ಪ್ರಜ್ವಲಿಸಬೇಕು. ಮಕ್ಕಳು ಕೇವಲ ವಿದ್ಯೆ ಕಲಿತರೆ ಸಾಲದು, ಜ್ಞಾನವಂತರಾಗಬೇಕು, ಸಂಸ್ಕಾರವಂತರಾಗಬೇಕು. ಶಾಲೆಯಲ್ಲಿ ಕಲಿತ ಸಂಸ್ಕಾರಗಳು ಮನೆಯಲ್ಲಿ ಅಭ್ಯಾಸವಾಗಬೇಕು ಎಂದು ಹೇಳಿದರು.




ಸಂಚಾಲನ ಸಮಿತಿಯ ಅಧ್ಯಕ್ಷ ಸಾಧು ಸಾಲಿಯಾನ್, ಕಾರ್ಯದರ್ಶಿ ರಿಷಿರಾಜ್, ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಾಂಶುಪಾಲೆ ಪೂರ್ಣಿಮಾ, ಸಂಚಾಲನ ಸಮಿತಿ ಸದಸ್ಯ ಮಿಥುನ್ ಕುಂದರ್, ರಾಘವೇಂದ್ರ ಕುಂದರ್, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಭಾಗ್ಯಶ್ರೀ ಐತಾಳ್ ಉಪಸ್ಥಿತರಿದ್ದರು.

ಸಂಯೋಜಕಿ ಅನಿತಾ ಮಜುಂದಾರ್ ಶಾಲೆಯ ನಿಯಮ ಮತ್ತು ಕಾರ್ಯವಿಧಾನಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಶಾಲೆಯ ಬೋಧಕ ವರ್ಗದವರಾದ ಪ್ರಜ್ಞಾ ಕಾಮತ್ ಸ್ವಾಗತಿಸಿದರು. ಚಿತ್ರ ಬೆಂಡೆ ನಿರೂಪಿಸಿದರು. ರಾಘವೇಂದ್ರ ವಂದಿಸಿದರು.

## ಕಿರುಸುದ್ದಿ

### ಮೇ 30: ಲೋಕ ಗೆಂದಿನ ಗಾಂಧಿಯೆರ್ - ಪಾತೆರಕತೆ

• **ಮಂಗಳೂರು:** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಡಾ.ಉದಯ ಕುಮಾರ್ ಇರ್ವತ್ತೂರು ಬರೆದಿರುವ 'ಲೋಕ ಗೆಂದಿನ ಗಾಂಧಿಯೆರ್' ಪುಸ್ತಕದ ಕುರಿತಾಗಿ ವಿಚಾರ ಸಂಕಿರಣವನ್ನು ಮೇ 30ರಂದು ಸಂಜೆ 4ಗಂಟೆಗೆ ಮಂಗಳೂರಿನ ಬಾವುಟ ಗುಡ್ಡೆಯ ಮಹಾತ್ಮ ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿ ಆಯೋಜಿಸಲಾಗಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಕಾರ್ಯಕ್ರಮ ಉದ್ಘಾಟಿಸುವರು. ಮಹಾತ್ಮ ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ.ಎ. ಸದಾನಂದ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದು, ರಂಗಕರ್ಮಿ ಮತ್ತು ಸಾಹಿತಿ ಪ್ರಸಾದ್ ರಕ್ಷಿದಿ ವಿಷಯ ಪ್ರಸ್ತುತಿ ಮಾಡುವರು, ಗಾಂಧಿ ಚಿಂತಕ ಅರವಿಂದ ಚೊಕ್ಕಾಡಿ ಸಂವಾದ ನಡೆಸಿಕೊಡುವರು. ಕಾರ್ಯಕ್ರಮದಲ್ಲಿ ಲೋಕ ಗೆಂದಿನ ಗಾಂಧಿಯೆರ್ ಪುಸ್ತಕದ ಲೇಖಕ ಡಾ.ಉದಯ ಕುಮಾರ್ ಇರ್ವತ್ತೂರು ಮತ್ತು ಬಿ.ಪ್ರಭಾಕರ ಶ್ರೀಯಾನ್ ಭಾಗವಹಿಸುವರು ಎಂದು ಅಕಾಡೆಮಿ ಪ್ರಕಟಣೆ ತಿಳಿಸಿದೆ.

### ಮೇ 29 ರಂದು ಶನಿವಾರಸಂತೆ ಸುತ್ತಮುತ್ತ ವಿದ್ಯುತ್ ವ್ಯತ್ಯಯ

• ಮಡಿಕೇರಿ: ಶನಿವಾರಸಂತೆ 66/11 ಕೆ.ವಿ ವಿದ್ಯುತ್ ವಿತರಣಾ ಉಪ ಕೇಂದ್ರದಿಂದ ಹೊರಹೊಮ್ಮುವ ಎಫ್2–ಹಂಡ್ಲಿ ಹಾಗೂ ಎಫ್3–ಶನಿವಾರಸಂತೆ ಟೌನ್ ಫೀಡರ್‌ನಲ್ಲಿ ಮೇ 29 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಜಾಲದ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಈ ಫೀಡರ್‌ನಿಂದ ಹೊರಹೊಮ್ಮುವ ಶನಿವಾರಸಂತೆ ಪಟ್ಟಣ, ತ್ಯಾಗರಾಜ ಕಾಲೋನಿ, ಗುಂಡೂರಾವ್ ಬಡಾವಣೆ, ಸಂಪಿಗೆದಾಳು, ಕಿತ್ತೂರು, ಹಂಡ್ಲಿ, ಮಣಗಲಿ, ಕಿತ್ತೂರುಕೊಪ್ಪಲು, ಬೆಳ್ಳಾರಳ್ಳಿ, ಮಾದ್ರವಳ್ಳಿ, ಬಾಗೇರಿ, ಹುಲ್ಸೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ ಅವರು ತಿಳಿಸಿದ್ದಾರೆ.

## ನಿಧನ ಸುದ್ದಿ

### ಸಾವಿತ್ರಿ ಅಮ್ಮ ಪಜ್ಜ



• **ಬದಿಯಡ್ಕ:** ಕೊಲ್ಲಂಗಾನ ಸಮೀಪದ ಪಜ್ಜ ಶಿವನಿಲಯದ ದಿ.ರಾಮಕೃಷ್ಣ ಭಟ್ ಅವರ ಪತ್ನಿ ಸಾವಿತ್ರಿ ಅಮ್ಮ ಪಜ್ಜ (81) ಸೋಮವಾರ ರಾತ್ರಿ ಅಲ್ಪಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಪುತ್ರರಾದ ಗೋವಿಂದ ಶರ್ಮ (ಹರಿಹರ), ಸದಾಶಿವ ಶರ್ಮ ಕೋಳಾರಿ, ತಿರುಮಲೇಶ್ವರ ಭಟ್ ಪಜ್ಜ, ಪುತ್ರಿ ಶೈಲಜಾ ಮಲಪ್ಪುರಂ ಕೋಟೆಕ್ಕಡವು ಅವರನ್ನು ಆಗಲಿದ್ದಾರೆ.

### ವಿಶ್ವನಾಥ ರಾವ್




**ಮಂಗಳೂರು:** ಇಲ್ಲಿನ ಜಪ್ಪಿನಮೊಗರು ನಿವಾಸಿ ಬಿ.ವಿಶ್ವನಾಥ ರಾವ್ (74) ಅವರು ಮೇ 24ರಂದು ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರನ್ನು ಆಗಲಿದ್ದಾರೆ. ವೃತ್ತಿಯಲ್ಲಿ ಕಟ್ಟಡ ಗುತ್ತಿಗೆದಾರರಾಗಿದ್ದ ಅವರು, ಮಂಗಳೂರು ಕೋಟೆ ಕ್ಷತ್ರಿಯ ಸಂಘದ ಸದಸ್ಯರಾಗಿದ್ದರು. ಕಾಸರಗೋಡಿನ ಕೊರಕೋಡು ಶ್ರೀ ದುರ್ಗಾ ಪರಮೇಶ್ವರಿ ಮಹಾಕಾಳಿ ಕಾಳ ಭೈರವೇಶ್ವರ ದೇವಸ್ಥಾನದಲ್ಲಿ ಈ ಹಿಂದೆ ಜೊತೆ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದರು.

### ಶಿವಪ್ಪ ಪೂಜಾರಿ ಕಡಂಬಿಲು




**ಬೆಳ್ತಂಗಡಿ:** ಉಜಿರೆ ಗ್ರಾಮದ ಕಡಂಬಿಲು ದುರ್ಗಾಪ್ರಸಾದ್ ನಿವಾಸದ ಶಿವಪ್ಪ ಪೂಜಾರಿ (90 ) ಮೇ 27 ರಂದು ನಿಧನರಾದರು. ಮೃತರು ಪತ್ನಿ, ಪುತ್ರ ತಾಲೂಕು ಪಂಚಾಯತ್ ಮಾಜಿ ಸದಸ್ಯ, ಉಜಿರೆ ಗ್ರಾ. ಪಂ. ಮಾಜಿ ಅಧ್ಯಕ್ಷ ವಸಂತ ಪೂಜಾರಿ ಸಹಿತ ಇಬ್ಬರು ಪುತ್ರಿಯರನ್ನು ಆಗಲಿದ್ದಾರೆ.

### ಮೋಹನ್ ಬಿ. ಕುಂದರ್




**ಮುಲ್ಕಿ:** ಪಡುಪಣಂಬೂರು ಬೆಳ್ಳಾಯರು ವಳಲಂಕೆ ನಿವಾಸಿ ಮೋಹನ್ ಬಿ. ಕುಂದರ್ (62) ಹೃದಯಾಘಾತಕ್ಕೀಡಾಗಿ ಬುಧವಾರ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಆಗಲಿದ್ದಾರೆ. ಕೃಷಿಕರಾಗಿದ್ದ ಅವರು ಪಡುಪಣಂಬೂರು ಹಾಗೂ ಹಳೆಯಂಗಡಿ ಪರಿಸರದಲ್ಲಿ ಸಾಮಾಜಿಕ ಕಾರ್ಯಕ್ರಮಗಳು ಹಾಗೂ ದಾನ ಧರ್ಮಗಳ ಮೂಲಕ ಜನಾನುರಾಗಿಯಾಗಿದ್ದರು ಅವರ ನಿಧನಕ್ಕೆ ಕೆಪಿಸಿಸಿ ಸದಸ್ಯ ವಸಂತ್ ಬೆರ್ನಾಡ್, ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ್ ಭಟ್, ಪಡುಪಣಂಬೂರು ಗ್ರಾಪಂ ಮಾಜಿ ಅಧ್ಯಕ್ಷ ವಿನೋದ್ ಸಾಲ್ಯಾನ್ ಮತ್ತಿತರರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

### ಇಸ್ಮಾಯಿಲ್ ಮುಸ್ಲಿಯಾರ್



**ಬಂಟ್ವಾಳ:** ಸುರಿಬೈಲು ಮಸೀದಿ ಬಳಿಯ ನಿವಾಸಿ ಇಸ್ಮಾಯಿಲ್ ಮುಸ್ಲಿಯಾರ್ (87) ಅವರು ಅಲ್ಪಕಾಲದ ಅನಾರೋಗ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಹಿರಿಯ ದಫ್ ಉಸ್ತಾದ್ ಆಗಿದ್ದ ಇವರು ಆಧ್ಯಾತ್ಮಿಕ ಮಹತ್ವ ಹೊಂದಿರುವ ಸಾಂಪ್ರದಾಯಿಕ ದಫ್ ರಾತಿಬುಗೆ ನೇತೃತ್ವ ವಹಿಸುತ್ತಿದ್ದರು. ಇವರ ದಫ್ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಸುರಿಬೈಲು ಕೇಂದ್ರ ಜುಮಾ ಮಸೀದಿಯಲ್ಲಿ ಹಲವು ವರ್ಷಗಳ ಕಾಲ ಮುಹರ್ಬ್ಬಿನ್ (ಮುಕ್ರಿ) ಆಗಿ ಸೇವೆ ಸಲ್ಲಿಸಿದ್ದರು ಮೃತರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರ ಸಹಿತ ಬಂಧುಗಳನ್ನು ಅಗಲಿದ್ದಾರೆ. ದ.ಕ ಮತ್ತು ಉಡುಪಿ ಜಿಲ್ಲಾ ದಫ್ ಅಸೋಸಿಯೇಷನ್ ಅಧ್ಯಕ್ಷ ಲತೀಫ್ ನೇರಳಕಟ್ಟೆ ಹಾಗೂ ಪ್ರಧಾನ ಕಾರ್ಯದರ್ಶಿ ಪಿ.ಎಂ.ಅಶ್ರಫ್ ಪಾಣೆಮಂಗಳೂರು ಇವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

### ಶುಭಾ ಆರ್.ಹೆಬ್ಬಾರ್



**ಮೂಡುಬಿದಿರೆ:** ಪುತ್ತಿಗೆ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷೆ, ಮೂಡುಬಿದಿರೆ ಸ್ವಸ್ತಿಕ್ ಗ್ರಾಫಿಕ್ಸ್ ಮಾಲಕ ರಾಘವೇಂದ್ರ ಹೆಬ್ಬಾರ್ ಅವರ ಪತ್ನಿ, ಶುಭಾ ಆರ್.ಹೆಬ್ಬಾರ್ (44) ಅನಾರೋಗ್ಯದಿಂದ ಪುತ್ತಿಗೆಯ ನಿವಾಸದಲ್ಲಿ ಬುಧವಾರ ನಿಧಾನರಾದರು. ಅವರು ಪತಿ, ಪುತ್ರಿ, ಪುತ್ರನನ್ನು ಆಗಲಿದ್ದಾರೆ.



ಕಟೀಲು ಕ್ಷೇತ್ರದ ಏಳೂ ಮೇಳಗಳ ಕೊನೆಯ ಸೇವೆಯಾಟ ಮಂಗಳವಾರ ಕ್ಷೇತ್ರದಲ್ಲಿ ನಡೆದಿದ್ದು, ಕಲಾವಿದರು ದೇವರ ಎದುರು ಗೆಜ್ಜೆ ಬಿಚ್ಚುವುದರೊಂದಿಗೆ ತಿರುಗಾಟ ಸಮಾಪ್ತಿ ಆಯಿತು.

### ಮೇ 30–31: ಮಣೇಲ್ ಗ್ರಾಮೊಡೊಂಜಿ ಚಿತ್ರ ಕೂಟೊ ಕುಂಚದಲ್ಲಿ

# ಗ್ರಾಮದ ವೈಶಿಷ್ಟ್ಯ ದಾಖಲೀಕರಣ

• **ಮಂಗಳೂರು:** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ವತಿಯಿಂದ ಅಬ್ಬಕ್ಕ ರಾಣಿಯ ಅರಮನೆ ಇದ್ದಂತಹ ಮಣೇಲ್ ಗ್ರಾಮದಲ್ಲಿ 'ಮಣೇಲ್ ಗ್ರಾಮೊಡೊಂಜಿ ಚಿತ್ರ ಕೂಟೊ' ಕಾರ್ಯಕ್ರಮ ಮೇ 30 ಹಾಗೂ 31 ರಂದು ನಡೆಯಲಿದೆ.

ಮಂಗಳೂರು ತಾಲೂಕಿನ ಗುರುಪುರ ಸಮೀಪದ ಮಣೇಲ್ ಗ್ರಾಮದ ಚಾರಿತ್ರಿಕ ಹಾಗೂ ಮಹತ್ವದ ಸ್ಥಳಗಳನ್ನು ಮತ್ತು ಗ್ರಾಮದ ಕುಲ ಕಸುಬುಗಳನ್ನು ಚಿತ್ರಗಳ ಮೂಲಕ ದಾಖಲೀಕರಣ ಮಾಡುವ ಈ ಕಾರ್ಯಕ್ರಮದ ಉದ್ಘಾಟನೆಯು ಮೇ 30ರ ಬೆಳಗ್ಗೆ 10ಗಂಟೆಗೆ ಮಣೇಲ್ ಶ್ರೀ ಲಕ್ಷ್ಮಿ ವೆಂಕಟರಮಣ ದೇವಸ್ಥಾನದ ಸಭಾಂಗಣದಲ್ಲಿ ನಡೆಯಲಿದೆ.

ಇಂಟಾಕ್ ಮಂಗಳೂರು ವಿಭಾಗ ಹಾಗೂ ರಾಣಿ ಅಬ್ಬಕ್ಕ ಚಾವಡಿ ಮಣೇಲ್ ಸಹಯೋಗದಲ್ಲಿ ನಡೆಯುವ ಈ ಕಾರ್ಯಕ್ರಮವನ್ನು ಹಿರಿಯ ಚಿತ್ರ ಕಲಾವಿದ ಗಣೇಶ್ ಸೋಮಯಾಜಿ ಉದ್ಘಾಟಿಸುವರು. ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸುವರು. ಕಟ್ಟೆಮಾರ್ ವಂಶಸ್ಥ ಪ್ರಶಾಂತ್ ಕುಮಾರ್ ಕಟ್ಟೆಮಾರ್, ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಟ್ರಸ್ಟಿ ವಾಮನ ನಾಯಕ್ , ಮಣೇಲ್ ಜುಮ್ಮಾ ಮಸೀದಿಯ ಅಧ್ಯಕ್ಷ ಅಬ್ದುಲ್ ರಜಾಕ್, ಅಕಾಡೆಮಿ ಸದಸ್ಯ ಬೂಬ ಪೂಜಾರಿ ಮಣೇಲ್ ಭಾಗವಹಿಸುವರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಇತಿಹಾಸ ತಜ್ಞ ಡಾ.ಪುಂಡಿಕಾಯ್ ಗಣಪಯ್ಯ ಭಟ್ ಅವರು 'ಮಣೇಲ್ ಗ್ರಾಮದಲ್ಲಿ ಅಬ್ಬಕ್ಕನ ಚರಿತ್ರೆ' ಹಾಗೂ ನಿವೃತ್ತ ಉಪನ್ಯಾಸಕ ಪ್ರೊ.ಅಕ್ಷಯ ಕುಮಾರ್ ಅವರು ಮಣೇಲ್ ಗ್ರಾಮದ ಸಾಮಾಜಿಕ ಸಾಂಸ್ಕೃತಿಕ ನೆಲೆಯ ಕುರಿತು ಉಪನ್ಯಾಸ ನೀಡಲಿದ್ದಾರೆ.

2 ದಿನಗಳ ಕಾಲ ನಡೆಯುವ ಚಿತ್ರ ಕೂಟದಲ್ಲಿ ಜಿಲ್ಲೆಯ 15 ಮಂದಿ ಚಿತ್ರ ಕಲಾವಿದರು ಭಾಗವಹಿಸಲಿದ್ದಾರೆ ಎಂದು ಅಕಾಡೆಮಿ ಪ್ರಕಟಣೆ ತಿಳಿಸಿದೆ.

### ಉಪ್ಪಿನಂಗಡಿಯಲ್ಲಿ ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣಾ ಕಾರ್ಯಕ್ರಮ | ಸಂಸದ ಕೋಟ ಶ್ರೀನಿವಾಸ ಪೂಜಾರಿ ಅಭಿಮತ

# ಬ್ರಿಟೀಷರ ವಿರುದ್ಧ ಹೋರಾಡಿದ್ದ ಸಾಹಸಿ

• **ಉಪ್ಪಿನಂಗಡಿ:** ಮೊದಲ ಸ್ವಾತಂತ್ರ್ಯ ಸಂಗ್ರಾಮ ಎಂದೇ ದಾಖಲಾಗಿದ್ದ 1857ರ ಹೋರಾಟಕ್ಕಿಂತ 20 ವರ್ಷ ಮೊದಲೇ ಅರ್ಥಾತ್ 1837ರಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ಹುತಾತ್ಮನಾದ ಉಪ್ಪಿನಂಗಡಿಯ ಮಂಜ ಬೈದ್ಯ ಅವರ ದೇಶಪ್ರೇಮ ಭರಿತ ಹೋರಾಟ 190 ವರ್ಷಗಳ ಬಳಿಕ ಮುನ್ನಲೆಗೆ ಬರುವಂತಾಗಿರುವುದು ವಿಶೇಷ ಎನಿಸಿದರೂ ಅವರ ಹೆಸರನ್ನು ಶಾಶ್ವತಗೊಳಿಸುವ ಕಾರ್ಯದತ್ತ ಚಿತ್ತವಿರಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ ಎಂದು ಸಂಸದ, ಮಾಜಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಉಪ್ಪಿನಂಗಡಿಯ ನೇತ್ರಾವತಿ ಸಭಾ ಭವನದಲ್ಲಿ ಬುಧವಾರದಂದು ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣಾ ಸಮಿತಿ ಮತ್ತು ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಬೆಳ್ತಂಗಡಿ ಆಶ್ರಯದಲ್ಲಿ ನಡೆದ ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣಾ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡುತ್ತಿದ್ದರು.

1837ರಲ್ಲಿ ಅಂದಿನ ತಾಲೂಕು ಕೇಂದ್ರವಾಗಿದ್ದ ಉಪ್ಪಿನಂಗಡಿಯ ಖಜಾನೆಯಲ್ಲಿ ಗುಮಾಸ್ತನಾಗಿದ್ದ ಮಂಜ ಬೈದ್ಯ ಬ್ರಿಟೀಷ್ ಕಂಪನಿ ಸರಕಾರದ ಅಮಾನುಷ ನಡೆಗಳನ್ನು ಸಹಿಸಲಾರದೆ, ತಾನು ಕರ್ತವ್ಯ ನಿರ್ವಹಿಸುತ್ತಿದ್ದ ಖಜಾನೆಯ ಅಧಿಕಾರಿಗಳನ್ನು ಕಟ್ಟಿ ಹಾಕಿ ಖಜಾನೆಯಲ್ಲಿನ ಧನಕನಕಗಳನ್ನು ಬಾಚಿಕೊಂಡು ಆ ವೇಳೆ ಬ್ರಿಟೀಷರ ವಿರುದ್ಧ ಹೋರಾಟ ನಡೆಸುತ್ತಿದ್ದ ಕಲ್ಯಾಣಸ್ವಾಮಿಗೆ ನೀಡಿ 13 ದಿನಗಳ ಕಾಲ ತುಳುನಾಡನ್ನು ಬ್ರಿಟೀಷರಿಂದ ಮುಕ್ತಗೊಳಿಸಿದ್ದು, ಬಳಿಕ ಬ್ರಿಟೀಷರಿಗೆ ಸೆರೆ ಸಿಕ್ಕಿ 1837 ಮೇ 27ರಂದು ಮಂಗಳೂರಿನ ಬಿಕರ್ಣಕಟ್ಟೆಯಲ್ಲಿ ನೇಣುಗಂಬವನ್ನೇರುವ ಮೂಲಕ ತಾಯ್ನಾಡ ದಾಸ್ಯ ಮುಕ್ತಿಗಾಗಿ ಬಲಿದಾನಗೈದ ಮಂಜು ಬೈದ್ಯರ ಹೋರಾಟ ಇತಿಹಾಸದಲ್ಲಿ ಪುಟದಲ್ಲಿ ಮರೆಯಾಗಿದ್ದ ಬಗ್ಗೆ ಹಾಗೂ ಮತ್ತೆ 190 ವರ್ಷಗಳ ಬಳಿಕ ಅವರ ತ್ಯಾಗ ಮುನ್ನಲೆಗೆ ಬಂದ ಬಗ್ಗೆ ಪ್ರಮುಖರು ಸಭೆಯಲ್ಲಿ ವಿಚಾರ ಮಂಡಿಸಿದರು.




ಸ್ವಾತಂತ್ರ್ಯ ಹೋರಾಟಗಾರ ಮಂಜ ಬೈದ್ಯರ ಹೆಸರು ಉಳಿಸುವ ನಿಟ್ಟಿನಲ್ಲಿ 8 ಬೇಡಿಕೆಗಳನ್ನು ಸಭೆಯಲ್ಲಿ ಮಂಡಿಸಿ ಸರಕಾರಕ್ಕೆ ಸಲ್ಲಿಸಲಾಯಿತು.

ಶಾಸಕ ಹರೀಶ್ ಪೂಂಜ, ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್, ಮಾಜಿ ಶಾಸಕ ಸಂಜೀವ ಮಠಂದೂರು, ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ, ವೈದ್ಯ ಡಾ. ಸುಪ್ರೀತ್ ಲೋಬೋ, ಸಾಮಾಜಿಕ ಮುಂದಾಳು ಅಜೀಜ್ ಬಸ್ತಿಕಾರ್, ಮಹಮ್ಮದ್ ಬಡಗನ್ನೂರು ಮತ್ತಿತರರು ಮಾತನಾಡಿದರು.

ಶ್ರೀ ಸಹಸ್ರಲಿಂಗೇಶ್ವರ ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ರಾಧಾಕೃಷ್ಣ ನ್ಾಯಕ್ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಸುನಿಲ್ ಕುಮಾರ್ ದಡ್ಡು, ಉಮಾನಾಥ ಶೆಟ್ಟಿ ಪೆರ್ನೆ, ಜಯವಿಕ್ರಮ್ ಕಲ್ಲಾಪು, ಕೃಷ್ಣರಾವ್ ಅರ್ತಿಲ, ಆರ್.ಸಿ. ನಾರಾಯಣ, ಕರುಣಾಕರಸುವರ್ಣ, ಯು.ರಾಮ, ರಾಮಚಂದ್ರ ಪೂಜಾರಿ, ವೆಂಕಪ್ಪ ಪೂಜಾರಿ ಮರುವೇಲು, ಅಜಿತ್ ಕುಮಾರ್ ಪಾಲೇರಿ, ಮುರಳೀಧರ್ ರೈ ಮಠಂತಬೆಟ್ಟು, ಅಪ್ಪಯ್ಯ ಮಣಿಯಾಣಿ, ಶಯನಾ ಜಯಾನಂದ, ರಾಮಚಂದ್ರ ಮಣಿಯಾಣಿ, ಪ್ರಸನ್ನ ದರ್ಬೆ, ಪ್ರಸಾದ್ ಕೌಶಲ್ ಶೆಟ್ಟಿ, ವಿದ್ಯಾಧರ ಜೈನ್, ಚಂದಪ್ಪ ಮೂಲ್ಯ, ಸುಧಾಕರ ಶೆಟ್ಟಿ, ಡಾ. ರಮ್ಯ ರಾಜಾರಾಮ್, ವಂದನಾ ಶರತ್, ಉಷಾ ಮುಳಿಯ, ಗಂಗಾಧರ ಗೌಡ ನೆಕ್ಕರಾಜೆ, ಅನಿಲ್ ದಡ್ಡು, ಜಯಾನಂದ ಕಲ್ಲಾಪು, ಸುನಿಲ್ ಅನಾವು, ಯು.ಜಿ. ರಾಧಾ, ಎನ್. ಉಮೇಶ್ ಶೆಣೈ, ಸುಂದರ ಶೆಟ್ಟಿ ಎಂಜಿರಪಳಿಕೆ ಮತ್ತಿತರರು ಉಪಸ್ಥಿತರಿದ್ದರು.

ಸಂಪತ್ ಬಿ. ಸುವರ್ಣ ಪ್ರಸ್ತಾವಿಸಿದರು. ಪತ್ರಕರ್ತ ಉದಯ ಕುಮಾರ್ ಮಂಜ ಬೈದ್ಯರ ಬಗ್ಗೆ ಅಧ್ಯಯನ ವರದಿ ಮಂಡಿಸಿದರು. ಡಾ. ರಾಜಾರಾಮ ಕೆ.ಬಿ. ಸ್ವಾಗತಿಸಿ, ಸುರೇಶ್ ಅತ್ರಮಜಲು ವಂದಿಸಿದರು. ಲೋಕೇಶ್ ಬೆತ್ತೋಡಿ ಕಾರ್ಯಕ್ರಮ ನಿರ್ವಹಿಸಿದರು.

**ಮಂಜ ಬೈದ್ಯರ ಹೆಸರು**

**ಉಪ್ಪಿನಂಗಡಿಯ ವೇದಶಂಕರ ನಗರ ದಲ್ಲಿನ ಶ್ರೀರಾಮ ಶಾಲೆಯಲ್ಲಿ ಹೊಸ ದಾಗಿ ನಿರ್ಮಿಸಲಾದ ಕ್ರೀಡಾಂಗಣಕ್ಕೆ ಉಪ್ಪಿನಂಗಡಿಯ ಹುತಾತ್ಮ ಸ್ವಾತಂತ್ರ್ಯ ಹೋರಾಟಗಾರ ಮಂಜ ಬೈದ್ಯರ ಹೆಸರನ್ನು ಇಡುವ ಬಗ್ಗೆ ಶಾಲಾ ಆಡಳಿತವು ನಿರ್ಣಯವನ್ನು ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ ಕರತಾಡನದ ಬೆಂಬಲ ವ್ಯಕ್ತವಾಯಿತು.**

### ಮಾಧವಜೀ ಜನ್ಮ ಶತಮಾನೋತ್ಸವದಲ್ಲಿ ಟಿ.ಪಿ. ಸೇನ್‌ಕುಮಾರ್

# ದೇಗುಲಗಳು ಜ್ಞಾನವೃದ್ಧಿಯ ಕೇಂದ್ರಗಳಾಗಬೇಕು

• **ಕಾಸರಗೋಡು:** ದೇವಸ್ಥಾನಗಳು ಆಧ್ಯಾತ್ಮಿಕತೆ ಜೊತೆಗೆ ಜ್ಞಾನವೃದ್ಧಿಯ ಕೇಂದ್ರಗಳಾಗಬೇಕು. ಅಲ್ಲದೆ ದೇಗುಲಗಳ ಮೂಲಕ ಸಾಮರಸ್ಯ ಬೆಳೆದು ಸಾಮಾಜಿಕ ಪರಿವರ್ತನೆ ಸಾಧ್ಯವಾಗಬೇಕು ಎಂದು ನಿವೃತ್ತ ಡಿಜಿಪಿ ಟಿ.ಪಿ.ಸೇನ್‌ಕುಮಾರ್ ಹೇಳಿದ್ದಾರೆ.



ಕಲ್ಲಿಕೋಟೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕೇರಳ ಕ್ಷೇತ್ರ ಸಂರಕ್ಷಣಾ ಸಮಿತಿಯ ವಾರ್ಷಿಕ ಸಮ್ಮೇಳನ ಹಾಗೂ ಮಾಧವಜೀ ಅವರ ಜನ್ಮ ಶತಮಾನೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜ್ಞಾನ ವರ್ಧನೆಯ ಕೇಂದ್ರಗಳಾದರೆ ಮಾತ್ರವೇ ಯುವಕರು ದೇವಾಲಯಗಳಿಗೆ ಆಕರ್ಷಿತರಾಗುವರು. ಯುವ ಜನತೆಗೆ ನೇತೃತ್ವ ನೀಡಲು ಉತ್ತಮ ರೀತಿಯಲ್ಲಿ ಕಾರ್ಯಾಚರಿಸಬೇಕಾದರೆ ಜ್ಞಾನವೂ ಅನಿವಾರ್ಯವಾಗಿದೆ. ದೇಗುಲಗಳಲ್ಲಿ ಯಾವುದೇ ರೀತಿಯ ತಾರತಮ್ಯ ತೋರ್ಪಡಿಸಬಾರದು ಎಂದು ಅವರು ಆಶಿಸಿದರು.

ಕೇಂದ್ರ ಸರಕಾರವು ಯುವಜನತೆಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಈ ಕುರಿತು ತಿಳುವಳಿಕೆ ಮೂಡಿಸುವುದರೊಂದಿಗೆ ಸನಾತನ ಧರ್ಮದ ಕುರಿತು ಶಿಕ್ಷಣ ಒದಗಿಸಬೇಕು. ಅಂತಹ ವ್ಯವಸ್ಥೆ ಜಾರಿಗೆ ಬಂದರೆ ಮಾತ್ರವೇ ಮುಂದಿನ ದಿನಗಳಲ್ಲಿ ಕ್ಷೇತ್ರಗಳಿಗೆ ಉಳಿಗಾಲವಿದೆಯೆಂದು ಟಿ.ಪಿ.ಸೇನ್ ಕುಮಾರ್ ಅಭಿಪ್ರಾಯಪಟ್ಟರು.

ದೇವಾಲಯಗಳ ನಿಯಂತ್ರಣ ಭಕ್ತರಿಗೆ ವಹಿಸಬೇಕು. ಈ ನಿಟ್ಟಿನಲ್ಲಿ ಸಂವಿಧಾನದ ಪ್ರಕಾರ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಬೇಕು. ಅಲ್ಲದಿದ್ದಲ್ಲಿ ದೇವಾಲಯಗಳು ಅನ್ಯರ ಪಾಲಾಗಲಿವೆ. ಹಿಂದು ದೇಗುಲಗಳ ಸಂರಕ್ಷಣೆ ಹಿಂದುಗಳ ಆದ್ಯ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಮಧ್ಯವರ್ತಿಗಳ (ಸರಕಾರಗಳ) ಹಸ್ತಕ್ಷೇಪ ಅಗತ್ಯವಿಲ್ಲ ಎಂದು ಅವರು ನುಡಿದರು.

ಸಮಾರಂಭದಲ್ಲಿ ಕೇರಳ ಕ್ಷೇತ್ರ ಸಂರಕ್ಷಣಾ ಸಮಿತಿಯ ರಕ್ಷಾಧಿಕಾರಿ ಡಾ.ವಿಜಯ ರಾಘವನ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ನಾರಾಯಣನ್ ವಾರ್ಷಿಕ ವರದಿ ಮಂಡಿಸಿದರು. ರಾಜ್ಯ ಕೋಶಾಧಿಕಾರಿ ವಿ.ಎಸ್. ರಾಮಸ್ವಾಮಿ ಲೆಕ್ಕಪತ್ರ ಮಂಡಿಸಿದರು. ಹಲವಾರು ಮಂದಿ ಗಣ್ಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಬಿದ್ದು ಸಿಕ್ಕಿದ ಚಿನ್ನಾಭರಣವನ್ನು ವಾರೀಸುದಾರರಿಗೆ ಹಿಂತಿರುಗಿಸಿ ಆದರ್ಶ ಮೆರೆದ ಕೂಲಿ ಕಾರ್ಮಿಕ

• **ಬದಿಯಡ್ಕ:** ದಾರಿ ಮಧ್ಯೆ ಬಿದ್ದು ಸಿಕ್ಕಿದ ಒಂದೂವರೆ ಪವನ್ ಚಿನ್ನದ ಸರವನ್ನು ಬದಿಯಡ್ಕ ಪೊಲೀಸ್ ಠಾಣೆಯ ಮೂಲಕ ನೈಜ ವಾರೀಸುದಾರರಿಗೊಪ್ಪಿಸಿದ ಕೂಲಿ ಕಾರ್ಮಿಕರೊಬ್ಬರು ಮಾದರಿಯಾಗಿದ್ದಾರೆ. ಕೂಲಿ ಕಾರ್ಮಿಕರಾದ ಮಹಾಲಿಂಗ ನಿಡುಗಳ ಅವರಿಗೆ ಸುಮಾರು ಒಂದೂವರೆ ಪವನ್‌ನ ಚಿನ್ನದ ಸರ ಕಿಳಿಂಗಾರು - ನೀರ್ಚಾಲು ರಸ್ತೆಯಲ್ಲಿ ಬಿದ್ದು ಸಿಕ್ಕಿತ್ತು. ಚಿನ್ನಾಭರಣದ ನೈಜ ವಾರೀಸುದಾರರಾದ ಮಹೇಶ್ ಪೆರಿಯಡ್ಕ ಅವರು ಅದನ್ನು ಒತ್ತೆ ಇಡಲು ಕೊಂಡೊಯ್ಯುತ್ತಿದ್ದ ಮಧ್ಯೆ ಜೇಬಿನಿಂದ ಹೊರಬಿದ್ದು ಕಳೆದು ಹೋಗಿತ್ತು. ಈ ಬಗ್ಗೆ ಪೊಲೀಸರಿಗೆ ವಿಷಯ ತಿಳಿಸಲಾಗಿತ್ತು. ಬಳಿಕ ಕೂಲಿಕಾರ್ಮಿಕರಾದ ಮಹಾಲಿಂಗ ಎಂಬವರಿಗೆ ಚಿನ್ನಾಭರಣ ದೊರಕಿದ್ದು ಅವರು ಬದಿಯಡ್ಕ ಪೊಲೀಸ್ ಠಾಣೆಯಲ್ಲಿ ನೈಜ ವಾರೀಸುದಾರರಾದ ಮಹೇಶ್ ಅವರಿಗೆ ಹಸ್ತಾಂತರಿಸಿದರು.



### ಮೇ 29: ಆಳ್ವಾಸ್‌ನಲ್ಲಿ ಬೊಳುವಾರರ 'ಸ್ವಾತಂತ್ರ್ಯದ ಓಟ' ಶಿವಮೊಗ್ಗ ರಂಗಾಯಣ ಕಲಾವಿದರಿಂದ ವಿಶೇಷ ನಾಟಕ

• **ಮೂಡುಬಿದಿರೆ:** ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಮೇ 29 ರಂದು ಸಂಜೆ 6.30 ರಿಂದ ರಾತ್ರಿ 9.30ರವರೆಗೆ ವಿದ್ಯಾಗಿರಿಯ ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ನೀನಾಸಂ ನಟರಾಜ ಹೊನ್ನವಳ್ಳಿ ನಿರ್ದೇಶನದ ರಂಗಾಯಣ ಶಿವಮೊಗ್ಗ ಪ್ರಸ್ತುತ ಪಡಿಸುವ ಸ್ವಾತಂತ್ರ್ಯದ ಓಟ ಎಂಬ ನಾಟಕವನ್ನು ಏರ್ಪಡಿಸಲಾಗಿದೆ.



ತನ್ನ ಸೃಜನಶೀಲ ಗದ್ಯಕೃತಿಗಳಿಗಾಗಿ ಎರಡು ಬಾರಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಬೊಳುವಾರು ಮಹಮ್ಮದ್ ಕುಂಞಿ ಅವರ ಕಾದಂಬರಿಯನ್ನು ಆಧರಿಸಿದ ಈ ನಾಟಕವು ವಿಭಜನೆಯ ಕರಾಳ ದಿನಗಳನ್ನು ಅನಾವರಣಗೊಳಿಸುತ್ತದೆ. ನೆಲೆ ಕಳೆದುಕೊಂಡ ಜನರ ನೋವು, ನಿರಾಶ್ರಿತ ಜೀವನ, ಪರಸ್ಪರ ಸೋದರರಂತೆ ಬದುಕುತ್ತಿದ್ದ ಜನಗಳಲ್ಲಿ ಎದುರಾಗುವ ಜನ್ಮಭೂಮಿ ಮತ್ತು ಕರ್ಮಭೂಮಿಯ ನಡುವಿನ ಅಂತರಂಗದ ಸಂಘರ್ಷವನ್ನು ಆಳವಾಗಿ ಬಿಂಬಿಸುತ್ತದೆ. ಭಿನ್ನತೆಗಳ ನಡುವೆ ಸಾಮರಸ್ಯ ಸಹಬಾಳ್ವೆ ಮತ್ತು ಮಾನವೀಯತೆ ಹೇಗೆ ಸೇತುವೆಯಾಗುತ್ತದೆ ಎಂಬ ಸಂದೇಶವನ್ನು ಈ ನಾಟಕ ತೋರಿಸುತ್ತದೆ.

ಸರ್ವ ಜಾತಿ ಧರ್ಮದ ಪ್ರತಿಯೊಬ್ಬರೂ ನೋಡಬೇಕಾದ ವಿಶೇಷ ನಾಟಕವಾಗಿದ್ದು, 1111 ಪುಟಗಳ ಈ ಬೃಹತ್ ಕಾದಂಬರಿಯನ್ನು 3 ಗಂಟೆಯ ಪ್ರಯೋಗವನ್ನಾಗಿ ಮಾಡಲಾಗಿದೆ. ಕಲಾವಿದರ ಭಾವನಾತ್ಮಕ ಅಭಿನಯ, ಕವ್ವಾಲಿ, ಗಝಲ್ ಮುಂತಾಗಿ ಭಾರತೀಯ ಸಂಗೀತದಿಂದ ಕೂಡಿದ ಸ್ವಾತಂತ್ರ್ಯದ ಓಟವು ಪ್ರತಿಕ್ಷಣವೂ ಪ್ರೇಕ್ಷಕರಿಗೆ ಹೊಸ ಅನುಭವ ನೀಡಲಿದೆ.

ಪ್ರವೇಶ ಉಚಿತವಾಗಿರುವ ಈ ಕಾರ್ಯಕ್ರಮದಲ್ಲಿ ಯಾವುದೇ ಸಭಾ ಕಾರ್ಯಕ್ರಮ ಇರದೆ ಸಮಯಕ್ಕೆ ಸರಿಯಾಗಿ ನಾಟಕ ಆರಂಭವಾಗಲಿದೆ ಎಂದು ಆಳ್ವಾಸ್ ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಡುಪಿಯಲ್ಲಿ ಅತ್ಯಾಧುನಿಕ 'ಮೆಡಿಕ್ವೆಸ್ಟ್ ಹೆಲ್ತ್ ಕೇರ್' ಪೇಜಾವರ ಶ್ರೀಗಳಿಂದ ಇಂದು ಚಾಲನೆ

• **ಉಡುಪಿ:** ಕರಾವಳಿಯ ಪ್ರಸಿದ್ಧ ವೈದ್ಯಕೀಯ ಪ್ರಯೋಗಾಲಯ ಸಂಸ್ಥೆಯಾದ ಮೆಡಿಕ್ವೆಸ್ಟ್ ಹೆಲ್ತ್ ಕೇರ್ ತನ್ನ ಅತ್ಯಾಧುನಿಕ ನೂತನ ಕೇಂದ್ರವನ್ನು ಉಡುಪಿಯಲ್ಲಿಇಂದು ಆರಂಭಿಸುತ್ತಿದೆ.

ಉಡುಪಿ ನಗರದ ಹೃದಯ ಭಾಗದ ಕೆ.ಎಂ. ಮಾರ್ಗದಲ್ಲಿರುವ ಆಂದ್ರಾದೆ ಆರ್ಕೇಡ್‌ನಲ್ಲಿ ನೂತನವಾಗಿ ಸಜ್ಜುಗೊಂಡಿರುವ ಈ ಸುಸಜ್ಜಿತ ಪ್ರಯೋಗಾಲಯವನ್ನು ಇಂದು ಬೆಳಗ್ಗೆ 9 ಗಂಟೆಗೆ ಪೇಜಾವರ ಅಧೋಕ್ಷಜ ಮಠದ ಪರಮ ಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ.




ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣ, ಕಾಪು ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಪ್ರಸಾದ್ ನೇತ್ರಾಲಯ ಸಮೂಹ ಕಣ್ಣಿನ ಆಸ್ಪತ್ರೆಗಳ ವೈದ್ಯಕೀಯ ನಿರ್ದೇಶಕ ನಾಡೋಜ ಡಾ. ಕೃಷ್ಣಪ್ರಸಾದ್ ಕೂಡ್ಲು ವಹಿಸಲಿದ್ದಾರೆ ಎಂದು ಸಂಸ್ಥೆಯ ಪತ್ರಿಕಾ ಪ್ರಕಟಣೆ ತಿಳಿಸಿದೆ.

### ಕೊಡಗು ಜಿಲ್ಲೆಯಲ್ಲಿ ಶಿಥಿಲ ಸ್ಥಿತಿಯಲ್ಲಿರುವ ಶಾಲಾ ಹಾಗೂ ಅಂಗನವಾಡಿ ಕಟ್ಟಡಗಳ ಕಾಮಗಾರಿ ಪೂರ್ಣಗೊಳಿಸಿ

# ಮುಂಗಾರು ಸಂದರ್ಭದಲ್ಲಿ ಅಗತ್ಯ ಮುನ್ನೆಚ್ಚರ ವಹಿಸಿ: ಡಾ.ಎನ್.ವಿ.ಪ್ರಸಾದ್

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮುಂಗಾರು ಪ್ರಾರಂಭವಾಗುವ ಲಕ್ಷಣಗಳು ಕಾಣುತ್ತಿದ್ದು, ಅಗತ್ಯ ಪೂರ್ವ ತಯಾರು ಮಾಡಿಕೊಳ್ಳುವಂತೆ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಅವರು ಸೂಚಿಸಿದ್ದಾರೆ.

ಪೊನ್ನಂಪೇಟೆ ತಾಲೂಕು ಪಂಚಾಯತ್‌ನ ಸಾಮರ್ಥ್ಯ ಸೌಧದಲ್ಲಿ ನಡೆದ ಸಭೆಯಲ್ಲಿ ಮಾಹಿತಿ ಪಡೆದು ಅವರು ಮಾತನಾಡಿದರು.

ಜಿಲ್ಲೆಯ ಸೂಕ್ಷ್ಮ ಪ್ರದೇಶಗಳಲ್ಲಿ ಅಗತ್ಯ ಎಚ್ಚರ ವಹಿಸಬೇಕು. ಪ್ರವಾಹ ಪೀಡಿತ ಪ್ರದೇಶಗಳ ಕುಟುಂಬಗಳಿಗೆ ಕಾಲಕಾಲಕ್ಕೆ ಮಾಹಿತಿ ನೀಡುವಂತಾಗಬೇಕು. ಕಾಳಜಿ ಕೇಂದ್ರದಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬೇಕೆಂದು ಅವರು ಜಿಲ್ಲೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಜಿಲ್ಲೆಯಲ್ಲಿ ಶಿಥಿಲ ಸ್ಥಿತಿಯಲ್ಲಿರುವ ಶಾಲಾ ಹಾಗೂ ಅಂಗನವಾಡಿ ಕಟ್ಟಡಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ಯಾವುದೇ ಅವಘಡಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದರು.

ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಯಾವೆಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಜೆಜೆಎಂ ಯೋಜನೆಯಡಿ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಪ್ರಸಾದ್ ತಿಳಿಸಿದರು.

**ರೈತರಿಗೆ ಸಮಸ್ಯೆಯಾಗದಿರಲಿ**

ಮಳೆಗಾಲ ಪ್ರಾರಂಭವಾಗುತ್ತಿರುವ ಹಿನ್ನೆಲೆ ಕೃಷಿ ಇಲಾಖೆಯಡಿ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಮತ್ತು ಬಿತ್ತನೆ ಬೀಜ, ಯೂರಿಯಾ, ಕೃಷಿ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ಪಡೆದು ರೈತರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ನೋಡಿಕೊಳ್ಳುವಂತೆ ಸಲಹೆ ನೀಡಿದರು.

ಜಿಲ್ಲೆಯಲ್ಲಿ ಈಗಾಗಲೇ ಮಳೆಗಾಲಕ್ಕೆ ಎಲ್ಲಾ ರೀತಿಯ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಸಹಾಯವಾಣಿ ಕೇಂದ್ರ ತೆರೆಯಲಾಗಿದೆ. ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಮುಂಗಾರು ಸಂಬಂಧ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ಕೊಡಗು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ತಿಳಿಸಿದರು.

ಪಶುಸಂಗೋಪನೆ, ತೋಟಗಾರಿಕೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಇದೇ ಸಂದರ್ಭದಲ್ಲಿ ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಹಲವು ವಿಷಯಗಳ ಕುರಿತು ಮಾತನಾಡಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಎನ್.ಹೆಚ್, ವೀರಾಜಪೇಟೆ ತಹಶೀಲ್ದಾರ್ ಪ್ರವೀಣ್ ಕುಮಾರ್, ಪೊನ್ನಂಪೇಟೆ ತಹಶೀಲ್ದಾರ್ ಸಿ.ಎಸ್.ಸಂಜನಾ, ವೀರಾಜಪೇಟೆ ತಾ.ಪಂ. ಇಒ ರಾಜೇಶ್ ಕೆ.ಆರ್, ಮಡಿಕೇರಿ ತಾ.ಪಂ. ಇಒ ಶೇಖರ್, ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಕಂದಾಯ ಇಲಾಖೆಯ ಸಿಬ್ಬಂದಿ ವರ್ಗದವರು ಹಾಗೂ ಇತರರು ಉಪಸ್ಥಿತರಿದ್ದರು.




## ಕಿರುಸುದ್ದಿ

### ಏಷ್ಯನ್ ರಿಲೇಸ್, ಇಂಡೋರ್ ಅಥ್ಲೆಟಿಕ್ಸ್‌ಗೆ ಭಾರತ ಆತಿಥ್ಯ

**ಹೊಸದಿಲ್ಲಿ:** 2027ರ ಏಷ್ಯನ್ ರಿಲೇಸ್ ಚಾಂಪಿಯನ್‌ಶಿಪ್ ಚಂಡೀಗಢದಲ್ಲಿ ಹಾಗೂ 2028ರ ಏಷ್ಯನ್ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಅನ್ನು ಭುವನೇಶ್ವರದಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಸಂಸ್ಥೆ ಘೋಷಿಸಿದೆ. ಹಾಂಗ್ ಕಾಂಗ್‌ನಲ್ಲಿ ಬುಧವಾರ ನಡೆದ ಏಷ್ಯನ್ ಅಥ್ಲೆಟಿಕ್ಸ್ ಸಂಸ್ಥೆಯ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು. ಈ ಎರಡು ಏಷ್ಯಾ ಮಟ್ಟದ ಪ್ರಮುಖ ಅಥ್ಲೆಟಿಕ್ಸ್ ಸ್ಪರ್ಧೆಗಳು ಮೊದಲ ಬಾರಿಗೆ ಭಾರತದಲ್ಲಿ ನಡೆಯಲಿವೆ. 2027ರ ಮೇ ತಿಂಗಳಲ್ಲಿ ನಡೆಯಲಿರುವ ಏಷ್ಯನ್ ರಿಲೇಸ್ ಚಾಂಪಿಯನ್‌ಶಿಪ್ ಚಂಡೀಗಢದ ಸೆಕ್ಟರ್-7 ಕ್ರೀಡಾಂಗಣದಲ್ಲಿ ನಡೆಯಲಿದೆ. ಪುರುಷರ 4100 ಮೀ., 4400 ಮೀ., ಮಹಿಳೆಯರ 4100 ಮೀ., 4400 ಮೀ. ಹಾಗೂ ಮಿಶ್ರ ವಿಭಾಗದ 4100 ಮೀ. ಮತ್ತು 4400 ಮೀ. ಸೇರಿ ಒಟ್ಟು ಆರು ಸ್ಪರ್ಧೆಗಳು ನಡೆಯಲಿವೆ. ಏಷ್ಯಾದ ವಿವಿಧ ರಾಷ್ಟ್ರಗಳಿಂದ 200ಕ್ಕೂ ಹೆಚ್ಚು ಅಥ್ಲೀಟ್‌ಗಳು ಭಾಗವಹಿಸುವ ನಿರೀಕ್ಷೆಯಿದೆ. 2028ರ ಜನವರಿಯಲ್ಲಿ ನಡೆಯಲಿರುವ ಏಷ್ಯನ್ ಇಂಡೋರ್ ಚಾಂಪಿಯನ್‌ಶಿಪ್‌ಗೆ ಭುವನೇಶ್ವರದ ಕಳಿಂಗ ಕ್ರೀಡಾಂಗಣದ ಅತ್ಯಾಧುನಿಕ ಒಳಾಂಗಣ ವೇದಿಕೆಯಾಗಲಿದೆ. ಇದೇ ಕ್ರೀಡಾಂಗಣದಲ್ಲಿ 2028ರ ವಿಶ್ವ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಡ ನಡೆಯಲಿದೆ.

### ಹಾಕಿ: ಮಹಿಳೆಯರಿಗೆ ರೋಚಕ ಗೆಲುವು



**ಹೊಸದಿಲ್ಲಿ:** ಆಸ್ಟ್ರೇಲಿಯಾ ವಿರುದ್ಧದ ಫ್ರೆಂಡ್ಲಿ ಹಾಕಿ ಸರಣಿಯ ಎರಡನೇ ಪಂದ್ಯದಲ್ಲಿ ಭಾರತೀಯ ಮಹಿಳಾ ಹಾಕಿ ತಂಡ ರೋಚಕ ಗೆಲುವು ದಾಖಲಿಸಿದೆ. ಪರ್ಥ್ ಹಾಕಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಭಾರತ ಶೂಟೌಟ್‌ನಲ್ಲಿ 4-2 ಅಂತರದಲ್ಲಿ ಆಸ್ಟ್ರೇಲಿಯಾವನ್ನು ಮಣಿಸಿ ನಾಲ್ಕು ಪಂದ್ಯಗಳ ಸರಣಿಯನ್ನು 1-1ರಿಂದ ಸಮಬಲಗೊಳಿಸಿದೆ. ಪಂದ್ಯದ ಆರಂಭದಲ್ಲೇ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತು. ಒಲಿವಿಯಾ ಡೌನ್ಸ್ 10ನೇ ನಿಮಿಷದಲ್ಲಿ ಗೋಲು ಬಾರಿಸಿ ಆತಿಥೇಯರಿಗೆ ಮುನ್ನಡೆ ತಂದರು. ಬಳಿಕ ಭಾರತೀಯ ತಂಡ ದಾಳಿಯ ತೀವ್ರತೆಯನ್ನು ಹೆಚ್ಚಿಸಿ ಪೆನಾಲ್ಟಿ ಕಾರ್ನರ್‌ಗಳ ಮೂಲಕ ನಿರಂತರ ಒತ್ತಡ ಹೇರಿತು. ಆದರೆ ಆಸ್ಟ್ರೇಲಿಯಾ ರಕ್ಷಣಾ ಆಟಗಾರರು ಭಾರತದ ಪ್ರಯತ್ನಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದರು. ಕೊನೆ ಕ್ವಾರ್ಟರ್‌ನಲ್ಲಿ ಭಾರತದ ಹೋರಾಟಕ್ಕೆ ಫಲ ಸಿಕ್ಕಿತು. 46ನೇ ನಿಮಿಷದಲ್ಲಿ ಸುಶೀಲಾ ಚಾನು ಪುಖ್ರಂಬಮ್ ಗೋಲು ಬಾರಿಸಿ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ನಂತರ ನಡೆದ ಶೂಟೌಟ್‌ನಲ್ಲಿ ಭಾರತ ಮೇಲುಗೈ ಸಾಧಿಸಿತು. ನವ್ನೀತ್ ಕೌರ್, ಇಶಿಕಾ ಚೌಧರಿ, ಅನ್ನು ಹಾಗೂ ರುತುಜಾ ದಾದಾಸೋ ಪಿಸಾಳ್ ಗೋಲು ಬಾರಿಸಿ ತಂಡಕ್ಕೆ 4-2 ಅಂತರದ ಜಯ ತಂದುಕೊಟ್ಟರು.

ಸಿಕ್ಸರ್‌ಗಳ ಸುರಿಮಳೆಗೈದ ಸೂರ್ಯವಂಶಿ | ಕ್ವಾಲಿಫೈಯರ್-2ರಲ್ಲಿ ಗುಜರಾತ್ ಎದುರಾಳಿ

# ಸನ್ ಎಲಿಮಿನೇಟ್, ಸೆಮಿಗೆ ಆರ್‌ಆರ್!

**ಚಂಡೀಗಢ:** ಹೈದರಾಬಾದ್ ತಂಡದ ಗೆಲುವಿನೋಟದ ಐಪಿಎಲ್ ಅಭಿಯಾನಕ್ಕೆ ವೈಭವ್ ತೆರೆ ಎಳೆದರು. ಸಿಕ್ಸರ್‌ಗಳ ಸುರಿಮಳೆಗೈದ 15 ವರ್ಷದ ಸೂರ್ಯವಂಶಿ ತಮ್ಮ ತಂಡವನ್ನು ಸೆಮಿಫೈನಲ್ ಅಂದರೆ ಕ್ವಾಲಿಫೈಯರ್‌ಗೆ ಕೊಂಡೊಯ್ದರು. ಕ್ವಾಲಿಫೈಯರ್ 2ರಲ್ಲಿ ರಾಜಸ್ಥಾನ ಗುಜರಾತ್ ತಂಡವನ್ನು ಶುಕ್ರವಾರದ ಪಂದ್ಯದಲ್ಲಿ ಎದುರಿಸಲಿದೆ.

ಎಲಿಮಿನೇಟರ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 243 ರನ್ ಗಳಿಸಿತು. ಸೂರ್ಯವಂಶಿ 12 ಸಿಕ್ಸರ್, 5 ಬೌಂಡರಿಗಳೊಂದಿಗೆ 97 ರನ್ ಗಳಿಸಿದರು. ಜುರೇಲ್ 21 ಬಾಲ್‌ಗಳಲ್ಲಿ 50 ರನ್ ಗಳಿಸಿದರು. ಪ್ರಫುಲ್ ಹಿಂಗೆ ಹೈದರಾಬಾದ್ ಪರ 3 ವಿಕೆಟ್ ಪಡೆದುಕೊಂಡರು. ಹೈದರಾಬಾದ್ ಪರ ಯಾರೊಬ್ಬರೂ ಹೇಳಿಕೊಳ್ಳುವ ಪ್ರದರ್ಶನ ನೀಡದ ಕಾರಣ ಸೋಲೊಪ್ಪಿಕೊಂಡಿತು.

**ಹೈದರಾಬಾದ್ ಹೈರಾಣು:** ಮೊದಲ ಬಾಲ್‌ನಿಂದಲೂ ವೈಭವ್ ಅಬ್ಬರ ನಡೆಯಿತು. ಬಂದ ಬಾಲ್‌ಗಳನ್ನೆಲ್ಲಾ ಮನ ಬಂದ ಜಾಗದಲ್ಲಿ, ಮನ ಬಂದ ಸ್ಟೈಲ್‌ನಲ್ಲಿ, ಮನ ಬಂದಂತೆ ದಂಡಿಸಿದರು. 16 ಬಾಲ್‌ಗಳಲ್ಲಿ 50 ರನ್ ದಾಟಿ 28 ಬಾಲ್‌ಗಳಲ್ಲಿ 97 ರನ್ ಬಾರಿಸಿದರು. ಜೈಸ್ವಾಲ್ ಕೂಡ ಆಗಾಗ ಬೌಂಡರಿ ಬಾರಿಸಿದರು. ಮೊದಲ ವಿಕೆಟ್‌ಗೆ ಈ ಜೋಡಿ 125 ರನ್ ಜೊತೆಯಾಟ ನಿರ್ಮಿಸಿತು. 97 ರನ್ ಗಳಿಸಿದ ವೈಭವ್ ವಿಕೆಟ್ ಒಪ್ಪಿಸಿ ಶತಕ ವಂಚಿತರಾದರು. ಮೂರನೇ ಕ್ರಮಾಂಕದಲ್ಲಿ ಬಂದ ಜುರೇಲ್ ಕೂಡ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಮಾಡಿದರು. 20 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ವಿಕೆಟ್ ಒಪ್ಪಿಸಿದರು. ಜೈಸ್ವಾಲ್ ಆಟ 29 ರನ್‌ಗೆ ನಿಂತಿತು. ಮಧ್ಯಮ ಕ್ರಮಾಂಕದಲ್ಲಿ ನಾಯಕ ರಿಯಾನ್ 26 ರನ್‌ಗಳಿಸಿದರು. ಅಂತಿಮದಲ್ಲಿ ಯಾವುದೇ ಬ್ಯಾಟಿಗರೂ ಹೇಳಿಕೊಳ್ಳುವ ಸ್ಕೋರ್ ಗಳಿಸದ ನಿಟ್ಟಿನಲ್ಲಿ ರಾಜಸ್ಥಾನ 243 ರನ್‌ಗೆ ನಿಂತಿತು. ಹೈದರಾಬಾದ್ ಪರ ಪ್ರಫುಲ್ 3 ವಿಕೆಟ್ ಪಡೆದುಕೊಂಡರು.



### ಕ್ರಿಸ್ ಗೇಲ್ ದಾಖಲೆ ಉಡೀಸ್

ಐಪಿಎಲ್ ಇತಿಹಾಸದ ಪ್ರಮುಖ ದಾಖಲೆಗಳಲ್ಲಿ ಒಂದಾಗಿದ್ದ ಕ್ರಿಸ್ ಗೇಲ್ ಅವರ 58 ಸಿಕ್ಸರ್ ದಾಖಲೆ ವೈಭವ್ ಮುರಿದರು. 15 ವರ್ಷದ ಅವರು, ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಒಟ್ಟು 65 ಸಿಕ್ಸರ್‌ಗಳನ್ನು ಬಾರಿಸಿದ ವೈಭವ್ ಗೇಲ್ ಅವರ 58 ಸಿಕ್ಸರ್‌ಗಳ ದಾಖಲೆ ಮುರಿದರು.

### ದಾಖಲೆಯ ಪರ್ವ

ಪ್ರತಿ ಎಸತವನ್ನು ಸ್ಟ್ಯಾಂಡ್‌ಗಳತ್ತ ಬಾರಿಸುತ್ತಾ ಬಂದ ವೈಭವ್ ಸೂರ್ಯವಂಶಿ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಸಿಕ್ಸರ್‌ಗಳ ಬೆಟ್ಟವೇ ಕಟ್ಟಿದರು. ಬಾಲಿಗೆ ಮೈದಾನದ ಪ್ರತಿ ದಿಕ್ಕು ತೋರಿಸುತ್ತಾ, ಲೀಲಾಜಾಲವಾಗಿ ಸಿಕ್ಸರ್‌ಗಳನ್ನು ಬಾರಿಸಿದರು. ಇನ್ನಿಂಗ್ಸ್‌ನಲ್ಲಿ 12 ಸಿಕ್ಸರ್ ಬಾರಿಸಿದರು. ಬಹುತೇಕ ಪ್ರತಿ ಬಾಲ್ ಬೌಂಡರಿ ಬಾರಿಸಿದ ವೈಭವ್ ದಾಖಲೆಗಳ ಸುರಿಮಳೆಗೈದರು. ವೈಭವ್ ಬಾರಿಸಿದ ಪ್ರತಿಯೊಂದು ಸಿಕ್ಸರ್‌ಗೂ ಒಂದೊಂದು ದಾಖಲೆ ಮುರಿಯುತ್ತಿತ್ತು. ಪ್ರತಿಯೊಂದು ಬೌಂಡರಿ ಇತಿಹಾಸ ನಿರ್ಮಿಸುತಿತ್ತು. ಐಪಿಎಲ್‌ನಲ್ಲಿ ಹಿಂದೆಂದೂ ಆಗದ ದಾಖಲೆಗಳು ವೈಭವ್ ಬ್ಯಾಟ್‌ನಿಂದ ಮೂಡಿಬಂದವು.

### ಕುಸಿದ ಹೈದರಾಬಾದ್

ಗುರಿ ಬೆನ್ನತ್ತಿದ ಹೈದರಾಬಾದ್‌ಗೆ ಆರಂಭಿಕ ಆಘಾತ ಎದುರಾಯಿತು. ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮ ಶೂನ್ಯಕ್ಕೆ ಔಟಾದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಇಶಾನ್ ಕಿಶನ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 11 ಬಾಲ್ ಎದುರಿಸಿದ ಕಿಶನ್ 33 ರನ್ ಬಾರಿಸಿದರು. ಇನ್ನೇನು ಪಂದ್ಯದ ರೋಚಕ ಹಂತಕ್ಕೆ ತಲುಪಿತು ಅನ್ನುವಷ್ಟರಲ್ಲಿ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಯಾರೊಬ್ಬರೂ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಿಲ್ಲ. ಸಲೀಲ್ ಆರೋರಾ, ನಿತೀಶ್‌ಕುಮಾರ್ ರೆಡ್ಡಿ ಹೋರಾಡಿದರು. ಉಳಿದ ಬ್ಯಾಟರ್‌ಗಳು ಬೇಗನೇ ವಿಕೆಟ್ ಒಪ್ಪಿಸಿದರು.

### ಅನ್‌ಕ್ಯಾಪ್ಡ್ ಸಾಧನೆ

ಈಗಾಗಲೇ 680 ರನ್ ರನ್ ಗಳಿಸಿರುವ ವೈಭವ್ ಸೂರ್ಯವಂಶಿ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ಯಾರೂ ಮಾಡದ ದಾಖಲೆಯೊಂದನ್ನು ಮಾಡಿದ್ದು, ಅನ್‌ಕ್ಯಾಪ್ಡ್ ಆಟಗಾರ ಗಳಿಸಿದ ಅತಿ ಹೆಚ್ಚು ಸ್ಕೋರ್ ಅನ್ನು ಮಾಡಿದರು.

### 12 ಸಿಕ್ಸರ್, ದಾಖಲೆ

ಐಪಿಎಲ್ ಇತಿಹಾಸದ ಪ್ಲೇಆಫ್‌ಗಳಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ದಾಖಲೆ ವೈಭವ್ ಸೂರ್ಯವಂಶಿ ಮಾಡಿದರು.

## ನಾರ್ವೆ ಚೆಸ್: ದಿವ್ಯಾಗೆ ಜಯ

**ಒಸ್ಲೋ (ನಾರ್ವೆ):** ನಾರ್ವೆ ಚೆಸ್ 2026 ಟೂರ್ನಿಯ ಎರಡನೇ ಸುತ್ತು ಮತ್ತೊಮ್ಮೆ ರೋಚಕ ಪೈಪೋಟಿಗಳಿಗೆ ಸಾಕ್ಷಿಯಾಯಿತು. ಕಠಿಣ ಹೋರಾಟಗಳು ನಡೆದವು, ದಿವ್ಯಾ ದೇಶಮುಖ್ ಸೇರಿದಂತೆ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಗಮನಾರ್ಹ ಪ್ರದರ್ಶನ ನೀಡಿದ್ದಾರೆ.

ದಿನದ ಏಕೈಕ ಕ್ಲಾಸಿಕಲ್ ಗೆಲುವಿನಲ್ಲಿ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ, ಭಾರತದ ತಾರೆ ಆರ್. ಪ್ರಜ್ಞಾನಂದ ಅವರನ್ನು ಮಣಿಸಿದರು. ಮಧ್ಯ ಹಂತದಿಂದಲೇ ಒತ್ತಡ ಹೆಚ್ಚಿಸುತ್ತ ಬಂದ ಫಿರೋಜ್ಜಾ, ಶಾಂತ ಹಾಗೂ ನಿಖರ ಆಟದ ಮೂಲಕ ಮುನ್ನಡೆಯನ್ನು ಗೆಲುವಿಗೆ ಪರಿವರ್ತಿಸಿದರು. ಇದರಿಂದ ಟೂರ್ನಿಯಲ್ಲಿ ಸತತ ಎರಡನೇ ಕ್ಲಾಸಿಕಲ್ ಜಯ ದಾಖಲಿಸಿದರು.

ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಹಾಗೂ ಜರ್ಮನಿಯ ಅಗ್ರ ಆಟಗಾರ ವಿನ್ಸೆಂಟ್ ಕೀಮರ್ ನಡುವಿನ ಬಹುನಿರೀಕ್ಷಿತ ಹಣಾಹಣಿ ಡ್ರಾದಲ್ಲಿ ಅಂತ್ಯವಾಯಿತು. ಬಹುತೇಕ ಸಮಯ ಕಾರ್ಲ್‌ಸನ್ ಮೇಲುಗೈ ಸಾಧಿಸಿದ್ದರೂ, ಸಂಕಷ್ಟದ ಸ್ಥಿತಿಯಲ್ಲಿ ಕೈಮರ್ ಅದ್ಭುತ ರಕ್ಷಣಾತ್ಮಕ ಆಟವಾಡಿ ಡ್ರಾ ಉಳಿಸಿಕೊಂಡರು. ಬಳಿಕ ನಡೆದ ಆರ್ಮಗೆಡನ್ ಪಂದ್ಯದಲ್ಲಿ ಕಾರ್ಲ್‌ಸನ್ ಗೆದ್ದು ಹೆಚ್ಚುವರಿ ಅಂಕ ಪಡೆದರು.

**ಗುಕೇಶ್ ಪಂದ್ಯ ಡ್ರಾ:** ಮತ್ತೊಂದು ಪಂದ್ಯದಲ್ಲಿ ವೇಸ್ಲಿ ಸೋ ಹಾಗೂ ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ನಡುವಿನ ಕಠಿಣ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರದ ಆರ್ಮಗೆಡನ್ ಪಂದ್ಯದಲ್ಲಿ ವೆಸ್ಲಿ ಸೋ ಗೆದ್ದು ಹೆಚ್ಚುವರಿ ಅಂಕಗಳನ್ನು ತಮ್ಮದಾಗಿಸಿಕೊಂಡರು. ಎರಡನೇ ಸುತ್ತಿನ ಬಳಿಕ ಸತತ ಎರಡು ಸಾಂಪ್ರದಾಯಿಕ ಗೆಲುವು ದಾಖಲಿಸಿರುವ



ಫಿರೋಜ್ಜಾ ಅಂಕಪಟ್ಟಿಯಲ್ಲಿ ತನ್ನ ಮುನ್ನಡೆಯನ್ನು ಮತ್ತಷ್ಟು ಬಲಪಡಿಸಿದ್ದಾರೆ.

**ದಿವ್ಯಾ ದೇಶಮುಖ್‌ಗೆ ಗೆಲುವು:** ಅಖಿಲ ಭಾರತ ಮುಖಾಮುಖಿಯಲ್ಲಿ ಭಾರತದ ದಿವ್ಯಾ ದೇಶಮುಖ್, ಕೊನೆರು ಹಂಪಿ ವಿರುದ್ಧ ಆರ್ಮಗೆಡನ್‌ನಲ್ಲಿ ಗೆಲುವು ಸಾಧಿಸಿದರು. ಕ್ಲಾಸಿಕಲ್ ಪಂದ್ಯ ಸಮಬಲದಲ್ಲಿ ಅಂತ್ಯಗೊಂಡಿತ್ತು. ಎರಡನೇ ಸುತ್ತಿನ ಬಳಿಕ ಮಹಿಳಾ ವಿಭಾಗದಲ್ಲಿ ಅಸ್ಸಾಬಯೇವಾ ಅಂಕಪಟ್ಟಿಯಲ್ಲಿ ತನ್ನ ಮುನ್ನಡೆಯನ್ನು ಕಾಯ್ದುಕೊಂಡಿದ್ದಾರೆ. ಮಹಿಳಾ ವಿಭಾಗದಲ್ಲೂ ಮತ್ತೊಂದು ರೋಚಕ ಸುತ್ತು ನಡೆಯಿತು. ಎಲ್ಲಾ ಮೂರು ಸಾಂಪ್ರದಾಯಿಕ ಪಂದ್ಯಗಳು ಡ್ರಾದಲ್ಲಿ ಅಂತ್ಯಗೊಂಡ ಬಳಿಕ ಫಲಿತಾಂಶ ಆರ್ಮಗೆಡನ್‌ನಲ್ಲಿ ನಿರ್ಧಾರವಾಯಿತು. ಟೂರ್ನಿಯ ಮುಂಚೂಣಿಯಲ್ಲಿರುವ ಬಿಬಿಸಾರಾ ವಿರುದ್ಧ ಆರ್ಮಗೆಡನ್‌ನಲ್ಲಿ ಗೆದ್ದು ತಮ್ಮ ಅದ್ಭುತ ಆರಂಭವನ್ನು ಮುಂದುವರಿಸಿದರು. ವೇಗದ ಸಮಯ ನಿಯಂತ್ರಣದಲ್ಲಿ ಆತ್ಮವಿಶ್ವಾಸದ ಆಟವಾಡಿದ ಅವರು ಹೆಚ್ಚುವರಿ ಅಂಕ ಕಲೆಹಾಕಿದರು.

ಸತತ 2ನೇ ಕಪ್‌ನತ್ತ ಆರ್‌ಸಿಬಿ | ಸಾಂಘಿಕ ಆಟಕ್ಕೆ ಜಿಟಿ ತತ್ತರ

## ರಜತ್ ಪಾಟಿದಾರ್ ಪರಾಕ್ರಮ

**ಧರ್ಮಶಾಲಾ:** ಐಪಿಎಲ್ ಪ್ರಾರಂಭಕ್ಕೆ ಸ್ವಲ್ಪೇ ದಿನವಿತ್ತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲಿಂಗ್ ಪಡೆಯತ್ತ ಅಲ್ಪ ಗಮನ ಹರಿಸಿದ್ದರೆ, ಹೆಚ್ಚಿನ ಅನುಭವ ಇರಲಿಲ್ಲ. ಆಸ್ಟ್ರೇಲಿಯಾದ ಜೋಶ್ ಹ್ಯಾಜೆಲ್ವುಡ್ ಸ್ವಲ್ಪ ಪಂದ್ಯಗಳಿಗೆ ಅಲಭ್ಯರಂದರೆ, ಯಶ್ ದಯಾಳ್ ಇಲ್ಲದೆ ಕಣಕ್ಕಿಳಿಯಬೇಕಾಗಿತ್ತು ಆರ್‌ಸಿಬಿ. ಭುವನೇಶ್ವರ್ ಕುಮಾರ್ ಜತೆಗೆ ಐಪಿಎಲ್‌ನಲ್ಲಿ ಅನುಭವ ಇಲ್ಲದ ಜೇಕಬ್ ಡಫಿ, ರೋಮಾರಿಯೋ ಶೇಫರ್ಡ್ ಹೀಗೆ ಹೆಚ್ಚಿನ ಅನುಭವ ರಹಿತ ಬೌಲರ್‌ಗಳೊಂದಿಗೆ ಮೈದಾನದಲ್ಲಿ ಮಿಂಚಬೇಕಿತ್ತು.

ಮೊದಲ ಪಂದ್ಯದಲ್ಲೇ ದೊಡ್ಡ ಪ್ರಯೋಗ. ಡಫಿ ಅವರೊಂದಿಗೆ ಕಣಕ್ಕಿಳಿದ ಆರ್‌ಸಿಬಿ ಗೆಲುವಿನ ನಗೆ ಬೀರಿತು. ಅಲ್ಲಿಂದ ಹೊಸ ಆರ್‌ಸಿಬಿ ಆಟ ಶುರು. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಫೈನಲ್‌ಗೇರಿದ ಮೊದಲ ತಂಡವಾಗಿ ಬೆಂಗಳೂರು ಹೊರಹೊಮ್ಮಿದೆ. ಮಂಗಳವಾರ ನಡೆದ ಕ್ವಾಲಿಫೈಯರ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 254 ರನ್ ಗಳಿಸಿತು. ನಾಯಕ ರಜತ್ ಪಾಟಿದಾರ್ 33 ಬಾಲ್‌ಗಳಲ್ಲಿ ಔಟಾಗದೇ 93 ರನ್ ಗಳಿಸಿದರು. ಕೊಹ್ಲಿ ಹಾಗೂ ಕೃಣಾಲ್ 43 ರನ್ ಗಳಿಸಿದರು. ಗುಜರಾತ್ ಪರ ಹೋಲ್ಡರ್ ಮತ್ತು ರಬಾಡ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಗುಜರಾತ್ 162 ರನ್‌ಗಳಿಗೆ ಪತನಗೊಂಡಿತು. ಆರಂಭದಿಂದಲೂ ಪಂದ್ಯದ ಮೇಲೆ ಪ್ರಾಬಲ್ಯ ಸಾಧಿಸಿದ ಆರ್‌ಸಿಬಿ, ಸಮಯಕ್ಕೂ ಮೊದಲೇ ವಿಕೆಟ್ ಪಡೆಯಿತು. ಆದಾಗ್ಯೂ ಬ್ಯಾಟರ್ ರಾಹುಲ್ ತೇವಾಟಿಯ ಹೋರಾಟ ನಡೆಸಿದ ಬೆನ್ನಲ್ಲೇ ಪಂದ್ಯ ಕೊನೆಯ ಓವರ್‌ಗಳವರೆಗೂ ಹೋಯಿತು. ಆರ್‌ಸಿಬಿ ಪರ ಜೇಕಬ್ ಡಫಿ 3, ಭುವನೇಶ್ವರ್, ರಸೀಖ್ ತಲಾ 2 ವಿಕೆಟ್ ಪಡೆದರೆ, ಹ್ಯಾಜೆಲ್ವುಡ್ 1 ವಿಕೆಟ್ ಕಿತ್ತರು.

**ರಜತ್- ಪ್ಲೇಆಫ್‌ಗಳ ಬೆಸ್ಟ್ ಬ್ಯಾಟರ್:** ಮಧ್ಯಮ ಕ್ರಮಾಂಕದಲ್ಲಿ ರಜತ್ ಪಾಟಿದಾರ್ ಅಬ್ಬರದ ಬ್ಯಾಟಿಂಗ್ ಮಾಡುತ್ತಿವುದೇ ಆರ್‌ಸಿಬಿ ಗೆಲುವಿನ ಮೂಲವಾಗಿದೆ. ಆದರಲ್ಲೂ ಪ್ಲೇಆಫ್‌ಗಳಲ್ಲಿ ಪಾಟಿದಾರ್ ಆಡುತ್ತಿರುವ ಆಟ ಗಮನಾರ್ಹ. ಬ್ಯಾಟಿಂಗ್ ಇಳಿದ ನಂತರ ಸಾಮಾನ್ಯ ಬ್ಯಾಟರ್‌ಗಳಂತೆ ಸಿಂಗಲ್-ಡಬಲ್‌ಗಳ ಮೂಲಕ ಸೆಟ್ ಆಗದ ಅವರು, ಬರುತ್ತಲೇ ಹೊಡೆಯಲಾರಂಭಿಸುತ್ತಾರೆ. ಕ್ವಾಲಿಫೈಯರ್‌ನಲ್ಲೂ ಅವರು ಮಾಡಿದ್ದು ಅದನ್ನೆ. 33 ಬಾಲ್‌ಗಳಲ್ಲಿ 9 ಸಿಕ್ಸರ್, 5 ಬೌಂಡರಿ ಚಚ್ಚಿದ ಅವರು, 93★ ರನ್ ಗಳಿಸಿದರು. ಇದರೊಂದಿಗೆ ಆರ್‌ಸಿಬಿ ದೊಡ್ಡ ಸ್ಕೋರ್ ನಿರ್ಮಿಸಿತು.



### ಪ್ಲೇಆಫ್‌ನಲ್ಲಿ ಪಾಟಿದಾರ್

- 2022ರ ಎಲಿಮಿನೇಟರ್(ಎಲ್‌ಎಸ್‌ಜಿಯೊಂದಿಗೆ): 112*(54)
- 2022ರ ಕ್ವಾಲಿಫೈಯರ್ (ರಾಜಸ್ಥಾನದೊಂದಿಗೆ): 58(44)
- 2024ರ ಎಲಿಮಿನೇಟರ್ (ರಾಜಸ್ಥಾನದೊಂದಿಗೆ): 34(22)
- 2025ರ ಕ್ವಾಲಿಫೈಯರ್ (ಪಂಜಾಬ್‌ನೊಂದಿಗೆ): 15*(8)
- 2025ರ ಫೈನಲ್: 26(16)
- 2026ರ ಕ್ವಾಲಿಫೈಯರ್ (ಗುಜರಾತ್‌ನೊಂದಿಗೆ): 93*(33)

**ಸಂಕ್ಷಿಪ್ತ ಸ್ಕೋರ್: ಆರ್‌ಸಿಬಿ 20 ಓವರ್‌ಗಳಲ್ಲಿ 254/5:** ರಜತ್ 93★, ಕೊಹ್ಲಿ 43, ಕೃಣಾಲ್ 43; ಹೋಲ್ಡರ್ 39/2, **ಗುಜರಾತ್ 19.3 ಓವರ್‌ಗಳಲ್ಲಿ 162/10:** ರಾಹುಲ್ 68, ಬಟ್ಲರ್ 29; ಡಫಿ 39/3

ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ 2ನೇ ದಿನವೂ ಪದಕ ಬೇಟೆ | ರನ್ನಿಂಗ್‌ನಲ್ಲಿ ಮಿಂಚಿನೋಟ

## ಮುಂದುವರಿದ ಕನ್ನಡಿಗರ ಪಾರುಪತ್ಯ

**ಬೆಂಗಳೂರು:** ಇಲ್ಲಿ ನಡೆಯುತ್ತಿರುವ 8ನೇ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಕೂಟದಲ್ಲಿ ಕರ್ನಾಟಕ ಅಥ್ಲೀಟ್‌ಗಳ ಪಾರುಪತ್ಯ ಮುಂದುವರೆದಿದೆ. ಬುಧವಾರದ ಕೂಟದ ಎಫ್-12/13 ವಿಭಾಗ ಮಹಿಳೆಯರ ಜಾವೆಲಿನ್ ಸ್ಪರ್ಧೆಯಲ್ಲಿ ಕನ್ನಡತಿ ಗಂಗವ್ವಾ ನೀಲಪ್ಪ ಹರಿಜರ್ ಚಿನ್ನದ ಪದಕ ಗೆದ್ದರು.

22.85 ಮೀ. ದೂರ ಎಸೆದ ಅವರು, ಅರುಣಾಚಲ ಪ್ರದೇಶದ ಕಿಪಾ ಮೇರೊ ಅವರನ್ನು ಹಿಂದಿಕ್ಕಿದರು. ಮಹರಾಷ್ಟ್ರದ ರಾಜೇಶ್ವರಿ 19.94 ಮೀ. ದೂರದೊಂದಿಗೆ ಕಂಚಿನ ಪದಕ ಗೆದ್ದರು.

**ಓಟದಲ್ಲಿ ಪ್ರಾಬಲ್ಯ:** ಪುರುಷರ 400 ಮೀ. ಟಿ11 ಓಟದಲ್ಲಿ ಗುರು ಕೇಶವ ಬೆಳ್ಳಿ ಪದಕ ಗೆದ್ದರು. 59.72 ಸೆಕೆಂಡುಗಳಲ್ಲಿ ಓಟ ಮುಗಿಸಿದ ಅವರು, ಒಡಿಶಾದ ಮಜ್ಜಿ ಅವರ ಹಿಂದಿದ್ದರು. ಈ ವಿಭಾಗದಲ್ಲಿ ಮೂರ್ತಿ ಮೂರನೇ ಸ್ಥಾನ ಪಡೆದರು. ಅಷ್ಟೇ ಅಲ್ಲದೆ ಟಿ11 400 ಮೀ. ಓಟದಲ್ಲಿ 59.72 ಸೆಕೆಂಡುಗಳಲ್ಲಿ ಓಟ ಮುಗಿಸಿ ಬೆಳ್ಳಿ ಪದಕ ಗೆದ್ದುಕೊಂಡರು. ಟಿ47 400 ಮೀ. ಓಟ ವಿಭಾಗದಲ್ಲಿ ಬಾಬು ಜಾನು ಬೆಳ್ಳಿ ಗೆದ್ದುಕೊಂಡರು. ಟಿ 38 ವಿಭಾಗದಲ್ಲಿ ದೇವ ಸಚ್ಚಿದಾನಂದ ಅವರು, 1:02.25 ನಿಮಿಷಗಳಲ್ಲಿ ಓಟ ಮುಗಿಸಿ ಕಂಚಿನ ಪದಕ ಗೆದ್ದರು.

ಮಂಗಳವಾರದಂದು ಪದಕ ಗೆದ್ದಿದ್ದ ಹರ್ಷಿತಾ ಮತ್ತು ಭಾರತಿ ಭಾರತೇಶ್ ಮಹಿಳೆಯರ ಟಿ37/38 ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಹರ್ಷಿತಾ 3.13 ಮೀ. ದೂರ ಜಿಗಿದರೆ, ಭಾರತಿ 2.98 ಮೀ. ದೂರ ಜಿಗಿದರು. ಇನ್ನು ಮಹಿಳೆಯರ 400 ಮೀ. ಟಿ12 ಓಟದಲ್ಲಿ ಸೌಮ್ಯ ಎರಡನೇ ಸ್ಥಾನ ಪಡೆದುಕೊಂಡರು. 1;06 ನಿಮಿಷಗಳಲ್ಲಿ ಓಟ ಕ್ರಮಿಸಿದ ಅವರು, 56.42 ಸೆಕೆಂಡುಗಳಲ್ಲಿ ಓಟ ಮುಗಿಸಿದ ತೇಜಲ್‌ಬೇನ್ ಅವರ ಹಿಂದಿದ್ದರು.

ಚಿತ್ರ: ಮೋಹನ್ ಕುಮಾರ್ ಬಿ.ಎನ್.



### ಶಾಟ್‌ಪುಟ್‌ನಲ್ಲಿ ಕನ್ನಡಿಗರ ಪಾರಮ್ಯ

ಇನ್ನು ಶಾಟ್‌ಪುಟ್‌ನಲ್ಲಿ ಮಂಜುಳಾ, ಗಂಗವ್ವಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಎಫ್ 11/12 ವಿಭಾಗದಲ್ಲಿ ಮಂಜುಳಾ 7.42 ಮೀ. ದೂರ ಎಸೆದರೆ, ಗಂಗವ್ವಾ 7.19 ಮೀ. ದೂರ ಎಸೆದು ಕಂಚಿನ ಪದಕ ಗೆದ್ದುಕೊಂಡರು.



ಫ್ರೆಂಚ್ ಓಪನ್ | ನಂಬರ್ 1 ಆಟಗಾರ ಶುಭಾರಂಭ

## ಎರಡನೇ ಸುತ್ತಿಗೆ ಯಾನಿಕ್ ಸಿನ್ನರ್

**ಪ್ಯಾರಿಸ್:** ವಿಶ್ವದ ನಂಬರ್ ಒನ್ ಆಟಗಾರ, ಫ್ರೆಂಚ್ ಓಪನ್ ಪಂದ್ಯಾವಳಿಯ ಗೆಲುವಿನ ಫೇವರಿಟ್ ಯಾನಿಕ್ ಸಿನ್ನರ್ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ. ಮಂಗಳವಾರ ತಡ ರಾತ್ರಿ ನಡೆದ ಪಂದ್ಯದಲ್ಲಿ ಫ್ರೆಂಚ್‌ನ ಕ್ಲೆಮೆಂಟ್ ತಾಬುರ್ ಎದುರಿಸಿದ ಅವರು, 6-1, 6-3, 6-4ರಿಂದ ಗೆಲುವು ಸಾಧಿಸಿದರು.

ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡ ಸಿನ್ನರ್ ಏಸ್, ಸರ್ವ್ ಮತ್ತು ಬ್ರೇಕ್‌ನಲ್ಲಿ ಮಿಂಚಿ ಪದಕ ಗೆದ್ದುಕೊಂಡರು. ಇದರೊಂದಿಗೆ ಎರಡನೇ ಸುತ್ತಿಗೆ ಲಗ್ಗೆ ಹಾಕಿದ್ದಲ್ಲದೆ, 29 ಪಂದ್ಯಗಳ ಗೆಲುವಿನ ಸ್ಟ್ರೀಕ್ ವಿಸ್ತರಿಸಿಕೊಂಡಿದ್ದಾರೆ. ಮಹಿಳೆಯರ ಪ್ರಮುಖ ಪಂದ್ಯದಲ್ಲಿ ಎರಡನೇ ಸೀಡ್‌ನ ಜೆಸ್ಸಿಕಾ ಪೇಗುಲಾ ಆಸ್ಟ್ರೇಲಿಯಾದ ಬಿರ್ರೆಲ್ ಅವರೊಂದಿಗೆ 1-6, 6-3, 6-3ರಿಂದ ಸೋತು ಹೊರಬಿದ್ದರು. ಮೊದಲನೇ ಸೆಟ್‌ನಲ್ಲಿ ಮುನ್ನಡೆ ಸಾಧಿಸಿದ್ದರೂ ಎರಡನೇ ಹಾಗೂ ಮೂರನೇ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ



ಅವರು, ಅಭಿಯಾನ ಅಂತ್ಯಗೊಳಿಸಿದ್ದಾರೆ. ಈಗಾ ಸ್ವಿಯಾಟೆಕ್ ಎರಡನೇ ಸುತ್ತಿನ ಪಂದ್ಯದಲ್ಲಿ ಬೆಜ್ಲೆಕ್ ಅವರೊಂದಿಗೆ ಗೆದ್ದು ಮುನ್ನಡೆ ಸಾಧಿಸಿದ್ದಾರೆ. ನೇರ ಸೆಟ್ ಪಂದ್ಯದಲ್ಲಿ ಈಗಾ 6-2, 6-3ರಿಂದ ಗೆಲುವು ಸಾಧಿಸಿದರು.

**ಕೊಕೊ ಗೌಫ್ ಕಾರ್ ಅಪಘಾತ:** ಪಂದ್ಯವಾಡಲು ಬರುತ್ತಿರುವಾಗ ಹಾಲಿ ಫ್ರೆಂಚ್ ಓಪನ್ ಚಾಂಪಿಯನ್ ಕೊಕೊ ಗೌಫ್ ಅವರಿದ್ದ ಕಾರು ಅಪಘಾತಕ್ಕೊಳಗಾಗಿದೆ. ಸ್ಥಳೀಯ ವರದಿಗಳ ಪ್ರಕಾರ ಚಿಕ್ಕ ಅಪಘಾತಕ್ಕೀಡಾದ ಅವರಿಗೆ ಯಾವುದೇ ಗಾಯಗಳಾಗಿಲ್ಲ.

ಸಿಂಗಾಪುರ್ ಓಪನ್‌ನಲ್ಲಿ ಮುನ್ನಡೆ | ಕ್ರಿಸ್ಟಿ ಸೋಲಿಸಿದ ಭಾರತೀಯ

## ಬ್ಯಾಡ್ಮಿಂಟನ್: ಪ್ರಣಯ್‌ಗೆ ಭರ್ಜರಿ ಗೆಲುವು

**ಸಿಂಗಾಪುರ್:** ಬ್ಯಾಡ್ಮಿಂಟನ್‌ನಲ್ಲಿ ಭಾರತದ ಪಾರುಪತ್ಯ ಸಿಂಗಾಪುರ್ ಓಪನ್‌ಗೂ ವಿಸ್ತರಿಸಿದ್ದು, ಟೂರ್ನಿಯಲ್ಲಿ ಭಾರತದ ಅನುಭವಿ ಶಟ್ಲರ್ ಎಚ್. ಎಸ್. ಪ್ರಣಯ್ ಭರ್ಜರಿ ಗೆಲುವು ಸಾಧಿಸಿದ್ದಾರೆ. ಬುಧವಾರ ನಡೆದ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ ಐದನೇ ಸ್ಥಾನದಲ್ಲಿರುವ ಇಂಡೋನೇಷ್ಯಾದ ಜೊನಾಥನ್ ಕ್ರಿಸ್ಟಿಯನ್ನು ಪ್ರಣಯ್ 10-21, 21-12, 21-18 ಅಂತರದಲ್ಲಿ ಮಣಿಸಿ ಎರಡನೇ ಸುತ್ತಿಗೆ ಪ್ರವೇಶಿಸಿದರು.

**ಪ್ರಣಯಗೆ ರೋಚಕ ಗೆಲುವು:** ಪ್ರಣಯ್ ರೋಚಕ ಗೆಲುವು ಸಾಧಿಸಿದರು. ಪಂದ್ಯದಲ್ಲಿ ಸಂಪೂರ್ಣ ಹಿಡಿತ ಯಾರಿಂದಲೂ ಸಾಧ್ಯವಾಗಿಲ್ಲ. ಮೊದಲನೇ ಸೆಟ್‌ನಲ್ಲಿ ಎದುರಾಳಿ ಕ್ರಿಸ್ಟಿ ಮುನ್ನಡೆ ಸಾಧಿಸಿದರು. ಮೊದಲಿನಿಂದಲೂ ಮುನ್ನಡೆ ಸಾಧಿಸಿದ ಅವರು, ಆ ಸೆಟ್ ಅನ್ನು 21-10ರಿಂದ ಗೆದ್ದರು. ಎರಡನೇ ಸುತ್ತಿನಲ್ಲಿ ಕಂಬ್ಯಾಕ್ ಮಾಡಿದ ಪ್ರಣಯ್ ಆಕ್ರಮಣಕಾರಿ ಆಟದೊಂದಿಗೆ




ಮುನ್ನಡೆ ಸಾಧಿಸಿದರು. ಪಂದ್ಯದುದ್ದಕ್ಕೂ ಮುನ್ನಡೆ ಕಾಯ್ದುಕೊಂಡ ಅವರು, 21-12ರಿಂದ ಸೆಟ್ ಗೆದ್ದರು. ಅದೇ ಭರವಸೆ ಮತ್ತು ಆಕ್ರಮಣಕಾರಿ ಆಟದೊಂದಿಗೆ ನಿರ್ಣಾಯಕ ಸೆಟ್‌ನಲ್ಲೂ ಉತ್ತಮ ಪ್ರದರ್ಶನ ನೀಡಿದ ಅವರು, 21-18ರಿಂದ ಗೆಲುವು ಸಾಧಿಸಿದರು. ಇನ್ನೊಂದೆಡೆ ಭಾರತದ ಕಿಡಂಬಿ ಶ್ರೀಕಾಂತ್ ಹೋರಾಟದ ನಡುವೆಯೂ ಸೋಲು ಅನುಭವಿಸಿದರು. ಸಿಂಗಾಪುರ್‌ನ ಲೋ ಕೀನ್ ಯೂ ವಿರುದ್ಧ ನಡೆದ ಮೂರು ಗೇಮ್‌ಗಳ ಪೈಪೋಟಿಯಲ್ಲಿ ಶ್ರೀಕಾಂತ್ 20-22, 21-19, 17-21 ಅಂತರದಲ್ಲಿ ಮಣಿದರು

**ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ನಿರಾಸೆ:** ಆದರೆ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಮಾಳವಿಕಾ ಬನ್ಸೋದ್ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಚೈನೀಸ್ ತೈಪೆಯ ಲಿನ್ ಹ್ಸಿಯಾಂಗ್ ಟಿ ವಿರುದ್ಧ 21-11, 19-21, 12-21 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೊ ಜೋಡಿ ಉತ್ತಮ ಪ್ರದರ್ಶನ ನೀಡಿತು. ಮಲೇಷ್ಯಾದ ವಾಂಗ್ ಟಿಯನ್ ಸಿ ಹಾಗೂ ಲಿಮ್ ಚೀವ್ ಸಿಯೆನ್ ಜೋಡಿಯನ್ನು 21-14, 20-22, 21-13 ಅಂತರದಲ್ಲಿ ಸೋಲಿಸಿ ಮುಂದಿನ ಸುತ್ತಿಗೆ ಲಗ್ಗೆಯಿಟ್ಟರು.

## ಪದಬಂಧ

ರಾಜಾ ಸಂಗಮೇಶ ಹಿರೇಮಠ



**5997**

ಎಡದಿಂದ ಬಲಕ್ಕೆ
1.ವಿವಾಹವಾದ ಮಹಿಳೆ (3)
3.ಚುಚ್ಚುಮಾತು-ಕಟಕಿಯಾಡುವಿಕೆ (4)
5.ದೊಡ್ಡಗಾತ್ರದ ಈ ಮೀನು ಸಸ್ತನಿ (4)
7.ಹಸುವಿನ ಹಾಲನ್ನು ಹೀಗೂ ಹೇಳುತ್ತೇವೆ (3)
8.ಹಾಕಿದ ಸಹಿ, ಗುರುತು (3)
10.ಇಲ್ಲದಿರುವಿಕೆ (3)
12.ಮನೆಯ ಮುಂದೆ ಹಾಕುವ ಹಿಟ್ಟಿನ ಚಿತ್ತಾರ (3)
16.ಕೆಟ್ಟ ಮಾರ್ಗವನ್ನು ಹಿಡಿ (4)
17.ದಳ ನಡುವೆ ಇರುವ ಸೀಳುವಿಕೆ (4)
18.ಉಗುರು ಮುಂತಾದವುಗಳಿಂದ ಕೆದರು (3)

ಮೇಲಿನಿಂದ ಕೆಳಕ್ಕೆ
1.ಅಡಿಗೆಗಾಗಿ ತಂದ ಮಣ್ಣಿನ ಪಾತ್ರೆ (3)
2.ಅತಿರೇಕಿಯೂ ತಿಳಿದುಕೊಳ್ಳದ ತಾಳ್ಮೆ (3)
4.ಸುಬ್ರಹ್ಮಣ್ಯನನ್ನು ಹೀಗೆ ಮಗನೆಂದೂ ಹೇಳುತ್ತೇವೆ (3)
6.ಚಕ್ರಾಕಾರವಾಗಿ ಸುತ್ತುವಿಕೆ (3)
7.ದೇವಾಲಯದ ಮೇಲಿನ ಶಿಖರ (3)
9.ಹಿಂದುಮುಂದಿಲ್ಲದ ಅನಾಥ (3)
11.ಮಹಮ್ಮದೀಯರ ಕಾಲಗಣನೆ (3)
13.ಇದು ಸಾರ್ವಜನಿಕ ಹುಲ್ಲುಗಾವಲು (3)
14.ತಬ್ಬಿಕೊಳ್ಳುವಿಕೆ (3)
15.ತುಂಬ ಸೂಕ್ಷ್ಮತೆಯಿಂದ ಕೂಡಿದ್ದು (3)

**5996 ಉತ್ತರ**

ಎಡದಿಂದ ಬಲಕ್ಕೆ:
2.ತಿವಾಸಿ 5.ರಣಹದ್ದು
6.ದಾರಿಕೆಡು 7.ಕುಲವಾಡಿ
9.ದೇಶಪ್ರೇಮ 11.ತಿಂಡಿಪೋತ 13.ದಾರುಕರ್ಮ
14.ಪರೀಕ್ಷಿತ 15.ಗಾಳಿಮಾತು 17.ಮಗ್ಗುಲು

ಮೇಲಿನಿಂದ ಕೆಳಕ್ಕೆ :
1.ಹಾರ 2.ತಿದ್ದುಪಡಿ
3.ದೇವದಾಸಿ
4.ಬೆಂಡು 8.ಲಗಡಿ
10.ಪ್ರೇರಕ 12.ತರತಮ
13.ದಾಮುಗಾಲು 14.ಪತ್ತೆ
16.ತುದಿ

## ಕಿರುಸುದ್ದಿ

### ಕಾಡಾನೆ ದಾಳಿ: ಬೆಳೆಗಾರನಿಗೆ ಗಂಭೀರ ಗಾಯ

**ಮಡಿಕೇರಿ:** ಕಾಡಾನೆ ದಾಳಿಗೆ ಸಿಲುಕಿ ಬೆಳೆಗಾರರೊಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ವಾಲ್ನೂರು ತ್ಯಾಗತ್ತೂರು ಗ್ರಾ.ಪಂ ವ್ಯಾಪ್ತಿಯ ಅಭ್ಯತ್ ಮಂಗಲ ಒಂಟಿಯಂಗಡಿಯಲ್ಲಿ ನಡೆದಿದೆ. ಅಭ್ಯತ್ ಮಂಗಲ ಒಂಟಿಯಂಗಡಿ ನಿವಾಸಿ ಅಂಚೆಮನೆ ಸುಧಾಕರ್ (56) ಎಂಬವರೇ ಆನೆ ದಾಳಿಯಿಂದ ಗಾಯಗೊಂಡವರು. ಮಂಗಳವಾರ ರಾತ್ರಿ ತಮ್ಮ ಮನೆಯ ಸಮೀಪ ನಡೆದುಕೊಂಡು ಹೋಗುತ್ತಿರುವಾಗ ಏಕಾಏಕಿ ಎದುರಾದ ಕಾಡಾನೆ ಸುಧಾಕರ್ ಮೇಲೆ ದಾಳಿ ನಡೆಸಿದೆ. ವ್ಯಕ್ತಿಯ ಕಿರುಚಾಟ ಕೇಳಿ ಸ್ಥಳೀಯರು ಹೊರಬಂದು ಕಾಡಾನೆಯನ್ನು ಓಡಿಸಿದ್ದಾರೆ. ಕಾಡಾನೆ ದಾಳಿಯಿಂದ ಗಂಭೀರವಾದ ಗಾಯಗೊಂಡಿರುವ ಸುಧಾಕರ್ ಅವರನ್ನು ಕುಶಾಲನಗರ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳು ಪ್ರಾಣಾಪಾಯದಿಂದ ಪಾರಾಗಿರುವುದಾಗಿ ತಿಳಿದುಬಂದಿದೆ.

### ಆನ್‌ಲೈನ್ ಟ್ರೇಡಿಂಗ್ ಹೆಸರಲ್ಲಿ 12,16,770 ರೂ. ಲಪಟಾವಣೆ

**ಕಾಸರಗೋಡು:** ಆನ್‌ಲೈನ್ ಟ್ರೇಡಿಂಗ್ ನಡೆಸಿ ಅಪಾರ ಲಾಭ ಗಳಿಸಬಹುದೆಂದು ಭರವಸೆಯೊಡ್ಡಿ ವ್ಯಕ್ತಿಯೋರ್ವರಿಂದ 12,16,770 ರೂಪಾಯಿ ಲಪಟಾಯಿಸಿರುವುದಾಗಿ ಆರೋಪಿಸಲಾಗಿದೆ. ಈ ಬಗ್ಗೆ ನೀಲೇಶ್ವರ ಕಕ್ಕಾಟ್ ಕೊಳವಲ್‌ನ ಕೆ.ಎಂ.ರಮೇಶನ್ (57) ನೀಡಿದ ದೂರಿನಂತೆ ಕಾಸರಗೋಡು ಸೈಬರ್ ಸೆಲ್ ಪೊಲೀಸರು ಕೇಸು ದಾಖಲಿಸಿ ತನಿಖೆ ಆರಂಭಿಸಿದ್ದಾರೆ. 2026ನೇ ಫೆಬ್ರವರಿ 11ರಿಂದ ಮೇ 7ರ ಮಧ್ಯೆಗಿನ ದಿನಗಳಲ್ಲಿ ವಂಚನೆ ನಡೆಸಲಾಗಿದೆ.

### ಎಂಡಿಎಂಎ, ನಗದು ಹಣ ಸಹಿತ ಆರೋಪಿ ಸೆರೆ

**ಮಂಜೇಶ್ವರ:** ಎಂಡಿಎಂಎ, ನಗದು ಹಣ ಸಹಿತ ಆರೋಪಿಯೋರ್ವನನ್ನು ಮಂಜೇಶ್ವರ ಪೊಲೀಸರು ಬಂಧಿಸಿದ್ದಾರೆ. ಉಪ್ಪಳ ರೈಲ್ವೆ ನಿಲ್ದಾಣ ರಸ್ತೆ ಬಳಿಯ ಬೈಲ್ಲಾ ಮಂಜಿಲ್‌ನ ಮೊಹಮ್ಮದ್ ಸಮೀರ್ (30) ಎಂಬಾತ ಬಂಧಿತ ಆರೋಪಿ. ಆತನ ಬಳಿಯಿಂದ 5.080 ಗ್ರಾಂ ಎಂಡಿಎಂಎ ಹಾಗೂ 55,860 ರೂ. ನಗದು ಹಣವನ್ನು ವಶಪಡಿಸಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಮಂಗಳವಾರ ರಾತ್ರಿ ಮಂಜೇಶ್ವರ ಎಸ್‌ಐ ವೈಷ್ಣವ್ ನೇತೃತ್ವದ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಎಂಡಿಎಂಎ ಸಹಿತ ಆತನನ್ನು ಬಂಧಿಸಲಾಗಿದೆ. ಆರೋಪಿಯ ವಿರುದ್ಧ ಕಾಸರಗೋಡು ನಗರ ಠಾಣೆ ಹಾಗೂ ವಿದ್ಯಾನಗರ ಠಾಣೆಯಲ್ಲಿ ಎಂಡಿಎಂಎ ಪ್ರಕರಣಗಳಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

### ಗಬ್ಬದ ಹಸುವನ್ನು ಕಳವುಗೈದು ಕಾರಿನಲ್ಲಿ ಸಾಗಾಟ

**ಮುಳ್ಳೇರಿಯ:** ಹಟ್ಟಿಯ ಸಮೀಪ ಕಟ್ಟಿ ಹಾಕಿದ್ದ ಗಬ್ಬದ (ಗರ್ಭಿಣಿ) ಹಸುವನ್ನು ಕಳವುಗೈದು ಕಾರಿನಲ್ಲಿ ಸಾಗಿಸಿರುವುದಾಗಿ ದೂರಲಾಗಿದೆ. ಮಲ್ಲ ನಿವಾಸಿ ಎ.ಎಂ.ವಿಜಯಲಕ್ಷ್ಮೀ ಎಂಬವರ ಹಸು ಇದಾಗಿದೆ. ಕಾರಿನ ದೃಶ್ಯ ಸಮೀಪದ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಆದರೆ ಕಾರಿನ ನಂಬ್ರ ಪ್ಲೇಟ್ ನಕಲಿ ಆಗಿದ್ದು, ಇದರಿಂದ ಕಳ್ಳರನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಆದೂರು ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

### ಚಲಿಸುತ್ತಿದ್ದ ರೈಲಿನಿಂದ ಬಿದ್ದು ವ್ಯಕ್ತಿಗೆ ಗಾಯ

**ಪಡುಬಿದ್ರಿ:** ಮಂಗಳೂರಿನಿಂದ ಮುಂಬೈ ಕಡೆ ತೆರಳುತ್ತಿದ್ದ ನೇತ್ರಾವತಿ ಎಕ್ಸ್‌ಪ್ರೆಸ್ ರೈಲಿನಿಂದ ಆಯತಪ್ಪಿ ಅದಮಾರು ಗೇಟ್ ಬಳಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದ ಛತ್ತೀಸ್‌ಗಢ ಮೂಲದ ಸಂದೀಪ್‌ಕುಮಾರ್ ಪೈಕ್ರೈ (34) ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೇ 26ರ ಮಧ್ಯರಾತ್ರಿಯ ವೇಳೆ ಗೇಟಿನಿಂದ ಸುಮಾರು 200 ಮೀಟರ್ ದೂರದಲ್ಲಿ ಮಂಗಳೂರು ಕಡೆಯಲ್ಲಿ ಬಿದ್ದಿದ್ದ ಈ ವ್ಯಕ್ತಿಯನ್ನು ರೈಲ್ವೇ ಗಾರ್ಡ್ ಮುಂಬಾವಿನ ವೇಳೆ ಗಮನಿಸಿದ್ದು ಸ್ಥಳಕ್ಕಾಗಮಿಸಿದ ಎಸ್‌ಎಚ್‌ಒ, ಎಚ್‌ಸಿ ರಾಘು ಶೆಟ್ಟಿ, ಸ್ಥಳೀಯರು, ಆ್ಯಂಬುಲೆನ್ಸ್ ಮೂಲಕ ಉಡುಪಿಯ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಸರಕಾರಿ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿದೆ.

### ಜಾನುವಾರು ಅಕ್ರಮ ಸಾಗಾಟ ಪತ್ತೆ

**ಬಂಟ್ವಾಳ:** ಕಾಡಬೆಟ್ಟು ಗ್ರಾಮದ ಅಲಂಪುರಿ ಎಂಬಲ್ಲಿ ಗೂಡ್ಸ್ ಟೆಂಪೋ ವಾಹನವೊಂದರಲ್ಲಿ ಅಕ್ರಮವಾಗಿ ಜಾನುವಾರು ಒಂದನ್ನು ಸಾಗಾಟ ಮಾಡುತ್ತಿರುವುದನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಪತ್ತೆ ಹಚ್ಚಿದ್ದಾರೆ. ಈ ಸಂದರ್ಭ ಟೆಂಪೋ ಚಾಲಕ ಪರಾರಿಯಾಗಿದ್ದು, ವಾಹನ ಹಾಗೂ ಜಾನುವಾರನ್ನು ಸ್ವಾಧೀನಪಡಿಸಿ, ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

---

ಶಾಲಾ ಕಾಲೇಜುಗಳಲ್ಲಿ ಜಾರಿ ಮಾಡಿ: ಕೊಡಗು ಜಿಲ್ಲಾಧಿಕಾರಿ ಸೂಚನೆ

## 'ಡ್ರಗ್ ಫ್ರೀ ಕ್ಯಾಂಪಸ್' ನೀತಿ

**ಮಡಿಕೇರಿ:** ಕೊಡಗು ಜಿಲ್ಲೆಯ ಎಲ್ಲಾ ಶಾಲಾ, ಕಾಲೇಜುಗಳಲ್ಲಿ 'ಡ್ರಗ್ ಫ್ರೀ ಕ್ಯಾಂಪಸ್' ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಮಾದಕ ದ್ರವ್ಯ ಸಮನ್ವಯ ಕೇಂದ್ರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಅವರು ಮಾತನಾಡಿ, ಪೊಲೀಸ್ ಇಲಾಖೆಯು ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟ, ಸಾಗಾಟ ಹಾಗೂ ಸೇವನೆ ಮಾಡುವವರ ವಿರುದ್ಧ ಇಲ್ಲಿಯವರೆಗೂ 186 ಎನ್‌ಡಿಪಿಎಸ್ ಪ್ರಕರಣ ದಾಖಲಿಸಿದೆ ಎಂದರು.

**ಪುನರ್ವಸತಿ ಕೇಂದ್ರ ಅಗತ್ಯ**

ಜಿಲ್ಲೆಯಲ್ಲಿರುವ ಪುನರಾವರ್ತಿತ ಪೆಡ್ಲರ್‌ಗಳ ಮೇಲೆ ಠಾಣಾ ವ್ಯಾಪ್ತಿಯಲ್ಲಿ ನಿಗಾ ಇಡಲಾಗಿದೆ. ಜಿಲ್ಲೆಯಲ್ಲಿ ವ್ಯಸನ ಮುಕ್ತರಿಗೆ ಹೆಚ್ಚಿನ ಚಿಕಿತ್ಸೆ ನೀಡಲು ಪುನರ್ವಸತಿ ಕೇಂದ್ರದ ಅಗತ್ಯ ಇದೆ ಎಂದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ಮಾತನಾಡಿ, ಜಿಲ್ಲೆಯಲ್ಲಿರುವ ಹೋಂಸ್ಟೇ, ರೆಸಾರ್ಟ್, ಹೋಟೆಲ್‌ಗಳಲ್ಲಿ ಕೆಲಸ ಮಾಡುವವರು ಹೆಚ್ಚು ಹೊರ ರಾಜ್ಯದ ಕಾರ್ಮಿಕರಾಗಿದ್ದು, ಪ್ರವಾಸೋದ್ಯಮ, ಕಂದಾಯ ಮತ್ತು ಪೊಲೀಸ್ ಇಲಾಖೆಯವರು ಜಂಟಿಯಾಗಿ ಅನಿರೀಕ್ಷಿತವಾಗಿ ದಾಳಿ ನಡೆಸಿ ಮಾಲಕರೊಂದಿಗೆ ಸಭೆ ನಡೆಸಿ ಅನುಮಾನಾಸ್ಪದ ಕೆಲಸಗಾರರ ಬಗ್ಗೆ ಮಾಹಿತಿ ಪಡೆದು ಮಾದಕ ವಸ್ತು ಸೇವನೆಯ ಬಗ್ಗೆ ಪರೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾತನಾಡಿ, ಈ ಸಂಬಂಧ ಪೋಷಕರಿಂದ ಮುಚ್ಚಳಿಕೆ ಪತ್ರವನ್ನು ಪಡೆಯುವ ಪ್ರಕ್ರಿಯೆಯನ್ನು ಜಾರಿಗೆ ತರಲು ಸಂಬಂಧಪಟ್ಟ ಕಾಲೇಜುಗಳ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರಿಗೆ ಸೂಕ್ತ ಮಾರ್ಗದರ್ಶನ ನೀಡುವ ಬಗ್ಗೆ ಆಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

ಜಿಲ್ಲಾ ಔಷಧ ನಿಯಂತ್ರಣ ಇಲಾಖೆ ಸಿಬ್ಬಂದಿ ಮಾತನಾಡಿ, ಜಿಲ್ಲೆಯಲ್ಲಿರುವ ಮೆಡಿಕಲ್ ಶಾಪ್‌ಗಳಲ್ಲಿ ನಿಷೇಧಿತ ಔಷಧ ಮಾರಾಟ ಮತ್ತು ವೈದ್ಯಾಧಿಕಾರಿಗಳ ಸಲಹೆ ಚೀಟಿಯಿಲ್ಲದೆ ಔಷಧ ವಿತರಣೆಯಿಲ್ಲದಿರುವ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಿರುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ನಿಷೇಧಿತ ಔಷಧಿಗಳ ಮಾರಾಟ ಮಾಡುವ ಮೆಡಿಕಲ್ ಶಾಪ್‌ಗಳಿಗೆ ದಾಳಿ ಮಾಡಿ ಕಾನೂನು ಕ್ರಮ ಕೈಗೊಳ್ಳುತ್ತಿರುವುದಾಗಿ ಮಾಹಿತಿ ನೀಡಿದರು. ಅಬಕಾರಿ ಇಲಾಖೆಯ ನಿರೀಕ್ಷಕ ಹೆಚ್.ಸಂತೋಷ್ ಕುಮಾರ್ ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿರುವ ಮದ್ಯದಂಗಡಿಗಳು, ಬಾರ್‌ಗಳು, ಕ್ಲಬ್‌ಗಳು, ರೆಸಾರ್ಟ್‌ಗಳಲ್ಲಿ ತಪಾಸಣೆ ಕೈಗೊಳ್ಳಲಾಗುತ್ತಿದೆ. ಗುಪ್ತವಾಗಿ ಮಾಹಿತಿ ಸಂಗ್ರಹಿಸಿ ಪೊಲೀಸ್ ಇಲಾಖೆಯೊಂದಿಗೆ ಜಂಟಿಯಾಗಿ ಕಾರ್ಯಾಚರಣೆ ಕೈಗೊಳ್ಳಲಾಗುವುದು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಅರಣ್ಯ ಇಲಾಖೆಯ ಅಧೀಕ್ಷಕ ಅಭಿಷೇಕ್, ಅಪರ ಜಿಲ್ಲಾಧಿಕಾರಿ ಸಹನಾ ಎಸ್.ಹಾದಿಮನಿ, ಡಿಡಿಪಿಯು ಪಿ.ಆರ್.ವಿಜಯ, ಡಿಡಿಪಿಐ ಬಸವರಾಜು, ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿ ಪಿ.ಎನ್.ಸೋಮಣ್ಣ, ಕಾರಾಗೃಹ ಅಧಿಕಾರಿ ಸಂಜಯ್ ಕುಮಾರ್, ಸಹಾಯಕ ಡ್ರಗ್ ನಿಯಂತ್ರಕ ಹೆಚ್.ಎಂ.ಹರೀಶ್, ಹಿರಿಯ ಪೊಲೀಸ್ ಅಧಿಕಾರಿ ಮೇದಪ್ಪ,ಇತರರು ಇದ್ದರು.



> ಮಾದಕ ವಸ್ತುಗಳ ಸೇವನೆಗೆ ಒಳಪಟ್ಟ ವ್ಯಕ್ತಿಗಳನ್ನು ದುಶ್ಚಟದಿಂದ ವಿಮುಕ್ತಿಗೊಳಿಸುವ ಉದ್ದೇಶದಿಂದ ಜಿಲ್ಲಾಸ್ಪತ್ರೆಯಲ್ಲಿ ತಾತ್ಕಾಲಿಕ ಸ್ಥಾಪಿತಗೊಂಡಿರುವ ವ್ಯಸನಮುಕ್ತ ಕೇಂದ್ರಕ್ಕೆ ನಿಯೋಜಿತ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿವರವನ್ನು ಪೊಲೀಸ್ ಇಲಾಖೆಗೆ ಸಲ್ಲಿಸಲಾಗಿದೆ. ಪೊಲೀಸ್ ಇಲಾಖೆಯಿಂದ ಈಗಾಗಲೇ ಗುರುತಿಸಲ್ಪಟ್ಟಿರುವ ಮಾದಕ ವ್ಯಸನಿಗಳನ್ನು ಸಂಬಂಧಿತ ವ್ಯಸನಮುಕ್ತ ಕೇಂದ್ರಕ್ಕೆ ಹಾಜರುಪಡಿಸಿ, ಅವರಿಗೆ ನಿಯಮಿತ ಸಮಾಲೋಚನೆ ಹಾಗೂ ಚಿಕಿತ್ಸೆ ನೀಡಲು ಅಗತ್ಯ ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು.
>
> ■ **ಡಾ.ಸತೀಶ್ ಕುಮಾರ್**, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

---

## ಪೊಲೀಸರ ಮೇಲೆ ಹಲ್ಲೆಗೈದು ಪರಾರಿಯಾದವರ ಬಂಧನ

**ಮಂಗಳೂರು:** ಉರ್ವ ಪೊಲೀಸ್ ಠಾಣಾ ವ್ಯಾಪ್ತಿಯ ಕೋಡಿಕಲ್ ನಾರಾಯಣಗುರು ಸಮುದಾಯ ಭವನ ರಸ್ತೆಯ ಎದುರು ಬೀಟ್ ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ ಹಲ್ಲೆಗೈದು ಕೇರಳಕ್ಕೆ ಪರಾರಿಯಾಗಿದ್ದ ಆರೋಪಿಗಳನ್ನು ಮಂಗಳೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬೆಳ್ತಂಗಡಿ ತಾಲೂಕಿನ ಕೊಕ್ಕಡ ಅರಸಿನಮಕ್ಕಿಯ ಸಚಿನ್ ಕೆ.ಆರ್. (24 )ಮತ್ತು ಪುತ್ತೂರು ತಾಲೂಕಿನ ನೆಲ್ಯಾಡಿಯ ಚಂದನ್ (24) ಬಂಧಿತ ಆರೋಪಿಗಳು.

ಅಶೋಕನಗರದ ಫಲ್ಗುಣಿ ನಗರದ ಬಾಡಿಗೆ ಮನೆಯಲ್ಲಿ ಆರೋಪಿಗಳು ವಾಸವಾಗಿದ್ದರು. ಆರೋಪಿಗಳ ಪೈಕಿ ಸಚಿನ್ ಕೆ.ಆರ್. ಎಂಬಾತನು ಕುಂಟಿಕಾನದ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ. ಮತ್ತೊಬ್ಬ ಆರೋಪಿ ಚಂದನ್ ಕೂಳೂರಿನ ಶೋ ರೂಮ್‌ವೊಂದರಲ್ಲಿ ಟೆಕ್ನಿಷಿಯನ್ ಆಗಿದ್ದ.

ಮೇ 24ರಂದು ತಡರಾತ್ರಿ 2.10ರ ವೇಳೆಗೆ ದ್ವಿಚಕ್ರ ವಾಹನದಲ್ಲಿ ಬಂದ ಈ ಇಬ್ಬರು ಆರೋಪಿಗಳ ಪೈಕಿ ಹಿಂಬದಿಯಲ್ಲಿ ಕುಳಿತಿದ್ದವ ಏಕಾಏಕಿ ಸಿಮೆಂಟ್ ಶೀಟ್‌ನ ತುಂಡಿನಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಸಿಬ್ಬಂದಿಯ ತಲೆಗೆ ಹೊಡೆದಿದ್ದ. ಇದರಿಂದ ಪೊಲೀಸ್ ಸಿಬ್ಬಂದಿಯ ತಲೆಗೆ ಗಾಯವಾಗಿತ್ತು. ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಕೊಲೆಗೆ ಯತ್ನಿಸಿದ ಆರೋಪದ ಮೇಲೆ ಇಬ್ಬರ ವಿರುದ್ಧ ಉರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕೃತ್ಯ ನಡೆಸಿದ ಬಳಿಕ ಆರೋಪಿಗಳು ಕೇರಳದ ಕಾಂಞಂಗಾಡ್ ಪ್ರದೇಶದಲ್ಲಿ ತಲೆಮರೆಸಿಕೊಂಡಿರುವ ಬಗ್ಗೆ ಮಾಹಿತಿ ಪಡೆದ ಸಿಸಿಬಿ ಪೊಲೀಸರು ಮಂಗಳವಾರ ಬಂಧಿಸಿ ಮುಂದಿನ ಕ್ರಮಕ್ಕಾಗಿ ಉರ್ವ ಪೊಲೀಸ್ ಠಾಣೆಗೆ ಹಸ್ತಾಂತರಿಸಿದ್ದಾರೆ. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆಯಲಾಗಿದೆ.



» ಅಶೋಕನಗರದ ಫಲ್ಗುಣಿ ನಗರದ ಬಾಡಿಗೆ ಮನೆಯಲ್ಲಿ ಆರೋಪಿಗಳು ವಾಸವಾಗಿದ್ದರು.

» ಸಿಮೆಂಟ್ ಶೀಟ್‌ನ ತುಂಡಿನಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಸಿಬ್ಬಂದಿಯ ತಲೆಗೆ ಹೊಡೆದಿದ್ದ.

---

ಸರಕಾರ ಗಮನ ಹರಿಸಲು ಮೀನುಗಾರರ ಆಗ್ರಹ

## ನಾಶವಾಗುತ್ತಿರುವ ಕೆಎಫ್‌ಡಿ ಆಸ್ತಿ

**ಕುಂದಾಪುರ:** ಗಂಗೊಳ್ಳಿ ಮೀನುಗಾರಿಕೆ ಬಂದರು ಸನಿಹದಲ್ಲೇ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸೇರಿದ ಆಸ್ತಿಗಳು ಮೂಲೆಗುಂಪಾಗಿ ಪಾಳುಕೊಂಪೆಯಂತೆ ಗೋಚರಿಸುತ್ತಿದೆ. ಕಟ್ಟಡಗಳು ಅತ್ಯಂತ ದುರ್ಬಲ ಸ್ಥಿತಿಗೆ ತಲುಪಿದ್ದು, ಅಪಾಯ ಎದುರಾಗಿದೆ.

ಅಂದಾಜು 3 ಎಕರೆ ಜಾಗದಲ್ಲಿ ವಿಸ್ತರಿಸಿಕೊಂಡಿರುವ ಮೀನುಗಾರಿಕಾ ತರಬೇತಿ ಕೇಂದ್ರದ ಕಟ್ಟಡ, ವಸತಿಗೃಹಗಳ ಕಟ್ಟಡ ನೆಲಕ್ಕೊರಗುವ ಸ್ಥಿತಿಯಲ್ಲಿವೆ. ಕಾರ್ಯ ಸ್ಥಗಿತಗೊಳಿಸಿದ್ದ ಮಂಜುಗಡ್ಡೆ ಸ್ಥಾವರ ಕಟ್ಟಡ ನೆಲಸಮಗೊಳಿಸಲಾಗಿದ್ದರೂ ಎದುರಿರುವ ಮೀನುಗಾರಿಕೆ ತರಬೇತಿ ಕೇಂದ್ರ ಕಟ್ಟಡ ನೆಲಕ್ಕೊರಗುವ ಸನ್ನಾಹದಲ್ಲಿದೆ. 1985ರಲ್ಲಿ ಮೀನುಗಾರಿಕಾ ತರಬೇತಿ ಸಲುವಾಗಿ ನಿರ್ಮಿಸಲಾದ ಈ ಕಟ್ಟಡದ ಬಾಗಿಲು, ಕಿಟಕಿ, ಮೇಲ್ಛಾಡು ಕಳಚಿ ಬಿದ್ದಿದೆ.

**ಕ್ವಾಟ್ರರ್ಸ್ ಅಪಾಯದಲ್ಲಿ**

ಕೆಎಫ್‌ಡಿಸಿ ಕ್ವಾರ್ಟರ್ಸ್ (ವಸತಿಗೃಹಗಳ ಸಮುಚ್ಚಯ) ಅಪಾಯ ಎದುರಿಸುತ್ತಿದೆ. ಹಂಚಿನ ಮಾಡಿನ ಹಳೆ ಕಾಲದ ಕಟ್ಟಡಗಳು ಈಗಲೂ ನಾಳೆಯೊ ಎಂಬಂತಿವೆ. ಮೇಲ್ಛಾಡು ಜರ್ಜರಿತಗೊಂಡಿದೆ. ಕಿಟಕಿ, ಬಾಗಿಲುಗಳಿಗೆ ಗೆದ್ದಲು ಹಿಡಿದಿದೆ. ಸುತ್ತಲೂ ಆವರಿಸಿರುವ ಗಿಡಮರ, ಪೊದೆಗಳು ನಿವಾಸಿಗಳ ಸಂಕಟ ಹೆಚ್ಚಿಸಿದೆ. ಕತ್ತಲಾಗುತ್ತಿರುವಂತೆಯೇ ನಿವಾಸಕ್ಕೆ ಸೇರುವ ಹಾವು, ಚೇಳು ಓಡಿಸುವುದೇ ಕಾಯಕವಾಗಿಬಿಟ್ಟಿದೆ. ಕ್ವಾರ್ಟರ್ಸ್ ಮೊದಲು ಇಲಾಖಾ ಸಿಬ್ಬಂದಿಗಳಿಗೆ ಮೀಸಲಾಗಿತ್ತು. ಪ್ರಸ್ತುತ ಅನ್ಯರಿಗೆ ಬಾಡಿಗೆ ಆಧಾರದಲ್ಲಿ ನೀಡಲಾಗಿದೆ. ಹಂಚಿನ ಮಾಡಿನ ಮನೆಗಳಿಗೆ ಹೆಚ್ಚು ಕಡಿಮೆ 35 ವರ್ಷ ಸಂದುಹೋಗಿದೆ. ಸುಣ್ಣ ಬಣ್ಣ ಕಾಣದೆ ವರ್ಷಗಳೆ ಸಂದು ಹೋಗಿವೆ. ಹೆಚ್ಚಿನ ಟಾಯ್ಲೆಟ್‌ಗಳು ಬಿದ್ದುಹೋಗಿವೆ. ವಸತಿಗೃಹದ ನೆಲ ಕಿತ್ತುಹೋಗಿದೆ. ಬಾಡಿಗೆಗೆ ನೆಲೆಸಿರುವವರು ಅವ್ಯವಸ್ಥೆಯ ನಡುವೆಯೂ ಬದುಕುತ್ತಿದ್ದಾರೆ. ಇಲ್ಲಿರುವ 24 ವಸತಿಗೃಹಗಳು ಅತ್ಯಂತ ದುರ್ಬಲ ಸ್ಥಿತಿಗೆ ತಲುಪಿವೆ.



ಮರಮಟ್ಟುಗಳ ನಡುವೆ ಹುದುಗಿಹೋಗಿರುವ ಕೆಎಫ್‌ಡಿಸಿ ತರಬೇತಿ ಕೇಂದ್ರ ಕಟ್ಟಡ

> ಕೆಎಫ್‌ಡಿಸಿಗೆ ಸೇರಿದ ಆಸ್ತಿಗಳು ಪೂರ್ಣ ನಿರ್ಲಕ್ಷಕ್ಕೊಳಪಟ್ಟಿದೆ. ಜಾಗದ ಅತಿಕ್ರಮಣವು ನಡೆದಿದೆ. ಮೀನುಗಾರರ ಅನುಕೂಲಕ್ಕೆಂದಿದ್ದ ಸರಕಾರಿ ಆಸ್ತಿಗೆ ಹೇಳುವವರು ಕೇಳುವವರಿಲ್ಲ ಎಂಬಷ್ಟರ ಮಟ್ಟಿಗೆ ಹೋಗಿದೆ. ಸಂಬಂಧಿತರು ಗಮನಿಸಬೇಕಿದೆ.
>
> ■ **ಕೃಷ್ಣ ಕೋಟ್ಯಾನ್**, ಗ್ರಾ.ಪಂ ಮಾಜಿ ಸದಸ್ಯ, ಗಂಗೊಳ್ಳಿ

> **ಮುತುವರ್ಜಿ ವಹಿಸಲಿ**
>
> ಸರಕಾರಿ ಆಸ್ತಿಗೆ ಸೂಕ್ತ ರಕ್ಷಣೆಯಿಲ್ಲದ ಪರಿಸ್ಥಿತಿ ತಲೆದೋರಿದೆ. ಮೀನುಗಾರಿಕೆ ವಲಯದಲ್ಲಿನ ನಿರ್ಲಕ್ಷ್ಯ ಸಲ್ಲ. ಕೆಎಫ್‌ಡಿಸಿ ಸಂಬಂಧಿಸಿದ ಆಸ್ತಿಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಸರಕಾರ ಮುತುವರ್ಜಿ ವಹಿಸಬೇಕು.
>
> ■ **ರಾಮಪ್ಪ ಖಾರ್ವಿ**, ಮೀನುಗಾರ ಮುಖಂಡ, ಗಂಗೊಳ್ಳಿ

---

ಬಿಜೆಪಿ ಕೇರಳ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್


## ಯುಡಿಎಫ್ ಸರಕಾರದ ನಿಯಂತ್ರಣ ಜಮಾತೆ ಇಸ್ಲಾಮಿ,ಎಸ್‌ಡಿಪಿಐಯಲ್ಲಿ

**ಕಾಸರಗೋಡು:** ಕೇರಳದಲ್ಲಿ ವಿ.ಡಿ.ಸತೀಶನ್ ನೇತೃತ್ವದ ಯುಡಿಎಫ್ ಸರಕಾರವನ್ನು ನಿಯಂತ್ರಿಸುವುದು ಜಮಾತೆ ಇಸ್ಲಾಮಿ ಮತ್ತು ಎಸ್‌ಡಿಪಿಐ ಆಗಿದೆ. ಈ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಬೆನ್ನು ಮೂಳೆ ಮುರಿದಂತಾಗಿದೆ. ಮಾತ್ರವಲ್ಲದೆ ಕಾಂಗ್ರೆಸ್ ಪಕ್ಷವು ಕೇರಳದಲ್ಲಿ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವುದು ಈ ಬಾರಿಯ ವಿಧಾನಸಭಾ ಚುನಾವಣೆಯೇ ಸಾಕ್ಷಿಯಾಗಿದೆ. ಅದರ ಬದಲು ಯುಡಿಎಫ್‌ನ ಮಿತ್ರಪಕ್ಷ ಮುಸ್ಲಿಂಲೀಗ್ ಮತೀಯವಾದಿಯಾಗಿ ಬೆಳೆಯುತ್ತಿರುವುದು ಆತಂಕಕಾರಿಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ತಿರುವನಂತಪುರದಲ್ಲಿ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಇದೇ ವೇಳೆ ನಿಜವಾದ ಜನಪರ ಪಕ್ಷ ಯಾವುದೇ ಎಂಬುದನ್ನು ಮುನಂಬಂ ಭೂ ವಿವಾದದಿಂದ ಇಡೀ ನಾಡು ಅರಿತುಕೊಳ್ಳುವ ಸಮಯ ಬಂದಿದೆ ಎಂದು ಅವರು ತಿಳಿಸಿದ್ದಾರೆ.

ವೋಟ್ ಬ್ಯಾಂಕ್ ರಾಜಕೀಯ ಬಲದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ ರಾಜ್ಯದಲ್ಲಿ ಅಧಿಕಾರಕ್ಕೇರಿದ ಕೂಡಲೇ ಕೃಷಿಕರಿಗೆ ಸೇರಿದ ಮುನಂಬಂ ಭೂಮಿಯನ್ನು ಉಮೇದ್ ಪೋರ್ಟ್‌ನಲ್ಲಿ ನೋಂದಾಯಿಸಲಾಗಿದೆ. ಮುನಂಬಂ ಭೂಮಿ ನಮಗೆ ಸೇರಿದ್ದಾಗಿದೆ ಎಂಬ ವಾದವನ್ನು ಕೇರಳ ವಕ್ಫ್ ಮಂಡಳಿ ಮುಂದಿರಿಸಿದೆ. ಯುಡಿಎಫ್ ಸರಕಾರದ ಮೇಲೆ ವಕ್ಫ್ ಮಂಡಳಿ ನಿಯಂತ್ರಣ ಹೇರುತ್ತಿದೆ ಎಂದು ರಾಜೀವ್ ಚಂದ್ರಶೇಖರ್ ವಿವರಿಸಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಸರಕಾರದ ಇಬ್ಬರು ಕೇಂದ್ರ ಸಚಿವರು, ನಾಲ್ವರು ಸಂಸದರು ಮತ್ತು ಮೂವರು ಶಾಸಕರು ಒಳಗೊಂಡಂತೆ 30 ಲಕ್ಷದಷ್ಟು ಮಂದಿ ಕೇರಳೀಯ ಮತದಾರರ ಬೆಂಬಲ ಸದಾ ಮುನಂಬಂ ನೈಜ ನಿವಾಸಿಗಳ ಜೊತೆಗಿರಲಿದೆ. ಇದರಿಂದಾಗಿ ಮುನಂಬಂ ಭಾಗದ ಒಂದು ಇಂಚು ಜಮೀನು ಕೂಡಾ ಅಲ್ಲಿನ ನಿವಾಸಿಗಳಿಗೆ ನಷ್ಟ ಹೊಂದದೆಂದು ಅವರು ಸ್ಪಷ್ಟಪಡಿಸಿದ್ದಾರೆ. ಮುನಂಬಂ ಭೂಮಿಯು ಅಲ್ಲಿನ ನಿವಾಸಿಗಳಿಗೆ ಸೇರಿದ್ದು ಹಾಗೂ ಫಲವತ್ತಾದ ಪ್ರದೇಶವಾಗಿದ್ದು, ಅದನ್ನು ಷಡ್ಯಂತ್ರದ ಮೂಲಕ ಸ್ವಾಧೀನಪಡಿಸಿಕೊಳ್ಳಲು ವಕ್ಫ್ ಮಂಡಳಿ ಯೋಜನೆ ರೂಪಿಸಿದೆ ಎಂದು ಅವರು ತಿಳಿಸಿದರು.



---

## ಜೂ.28-ಜು.1ರವರೆಗೆ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಕಡ್ಡಾಯ

**ಮಂಗಳೂರು:** ಜೂನ್ 28ರಿಂದ ಜುಲೈ 1 ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವು ನಡೆಯಲಿರುವುದರಿಂದ ಜಿಲ್ಲೆಯಲ್ಲಿ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಲು ಕ್ರಮವಹಿಸಬೇಕು. ಈ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ರಾಜು ಕೆ. ಸೂಚಿಸಿದ್ದಾರೆ.

ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಜಿಲ್ಲಾ ಮಟ್ಟದ ಚಾಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕರು ಲಸಿಕಾ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಮನೆಯಲ್ಲಿರುವ ನವಜಾತ ಶಿಶುಗಳನ್ನು ಗುರುತಿಸಿ ಅಂತಹ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆಯನ್ನು ನೀಡಬೇಕು. ತಾಯಂದಿರ ಸಭೆಗಳಲ್ಲಿ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಅರಿವು ಮೂಡಿಸಬೇಕು ಎಂದು ಅವರು ಹೇಳಿದರು.

ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಲಸಿಕಾ ದಿನ ಮತ್ತು ಸ್ಥಳಗಳ ಮಾಹಿತಿಯನ್ನು ಪ್ರಚಾರ ಮಾಡಬೇಕು. ಎಲ್ಲಾ ಶಾಲೆಗಳು ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ಪೋಲಿಯೋ ದಿನದ ಮುಂಚಿತವಾಗಿ ಜಾಥಾ ಮಾಡಿ ಜನರಲ್ಲಿ ಜಾಗೃತಿ ಮೂಡಿಸಬೇಕು. ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳು, ಗಣಿಗಾರಿಕೆ ಕಾರ್ಮಿಕರ ಮಕ್ಕಳು, ಹಾಗೂ ಇತರೇ ವಲಸೆ ಪ್ರದೇಶಗಳಲ್ಲಿ 0–5 ವರ್ಷದೊಳಗಿನ ಮಕ್ಕಳನ್ನು ಗುರುತಿಸಿ, ಆದ್ಯತೆ ನೀಡಿ ಲಸಿಕೆ ಹಾಕಿಸುವಂತೆ ಕ್ರಮವಹಿಸಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮದ ಮೊದಲನೇ ದಿನ ಪೋಲಿಯೋ ಬೂತ್‌ಗಳಲ್ಲಿ ಹಾಗೂ 2 ದಿನ ಗ್ರಾಮಾಂತರ ಮತ್ತು 3 ದಿನ ನಗರ ಪ್ರದೇಶಗಳಲ್ಲಿ ಮನೆಮನೆ ಭೇಟಿಯ ಮೂಲಕ 0–5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವಂತೆ ವ್ಯವಸ್ಥೆ ಮಾಡಲಾಗಿದೆ. ಈ ವರ್ಷ 1,40,247 ಮಕ್ಕಳಿಗೆ ಲಸಿಕೆ ನೀಡಲು ಗುರಿ ನಿಗದಿಪಡಿಸಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಆರ್.ಸಿ.ಹೆಚ್. ಅಧಿಕಾರಿ ಡಾ.ರಾಜೇಶ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನವೀನ್ ಕುಲಾಲ್, ಎಸ್.ಎಂ.ಓ ಡಾ.ಹರ್ಷಿತ್, ಮೆಡಿಕಲ್ ಕಾಲೇಜು ಹಾಗೂ ನರ್ಸಿಂಗ್ ಕಾಲೇಜು ಮುಖ್ಯಸ್ಥರು, ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.



---

ಭರತ್ ಜಯರಾಮ್ ದಾಸ್ ಮೇಲೆ ಕ್ರಿಕೆಟ್ ಬೆಟ್ಟಿಂಗ್ ಆರೋಪ

## ಗಡಿಪಾರು ಆದೇಶಕ್ಕೆ ಹೈಕೋರ್ಟ್ ತಾತ್ಕಾಲಿಕ ತಡೆ

**ಬ್ರಹ್ಮಾವರ:** ಅಕ್ರಮ ಕ್ರಿಕೆಟ್ ಬೆಟ್ಟಿಂಗ್ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದಡಿ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೊರಡಿಸಿದ್ದ ಗಡಿಪಾರು ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ತಾತ್ಕಾಲಿಕ ತಡೆ ನೀಡಿದೆ.

ನ್ಯಾಯಮೂರ್ತಿ ಲಲಿತಾ ಕನ್ನೆಗಂಟಿ ಅವರ ಏಕಸದಸ್ಯ ಪೀಠ ಈ ಆದೇಶ ಹೊರಡಿಸಿದ್ದು, ಗಡಿಪಾರು ಆದೇಶ ಜಾರಿಗೊಳಿಸುವ ಮೊದಲು ಆರೋಪಿಗೆ ಕಾನೂನುಬದ್ಧವಾಗಿ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕೆಂದು ಅಭಿಪ್ರಾಯಪಟ್ಟಿದೆ.

ಮೂಡುಬಿದಿರೆ ನಿವಾಸಿ ಭರತ್ ಜಯರಾಮ್ ದಾಸ್ ವಿರುದ್ಧ ಕೋಟ ಹಾಗೂ ಕುಂದಾಪುರ ಪೊಲೀಸ್ ಠಾಣೆಗಳಲ್ಲಿ ಅಕ್ರಮ ಕ್ರಿಕೆಟ್ ಬೆಟ್ಟಿಂಗ್‌ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿದ್ದವು. ಈ ಹಿನ್ನೆಲೆ ಉಡುಪಿ ಜಿಲ್ಲಾ ಪೊಲೀಸರು ಅವರನ್ನು ಬೆಂಗಳೂರು ಕೆಂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಉಳಿಯುವಂತೆ ಗಡಿಪಾರು ಆದೇಶ ಹೊರಡಿಸಿದ್ದರು. ಆದರೆ, ಕರ್ನಾಟಕ ಪೊಲೀಸ್ ಕಾಯ್ದೆ 1963ರ ಸೆಕ್ಷನ್ 59ರ ಪ್ರಕಾರ ಗಡಿಪಾರು ಆದೇಶದ ವಿರುದ್ಧ 30 ದಿನಗಳೊಳಗೆ ಮೇಲ್ಮನವಿ ಸಲ್ಲಿಸುವ ಹಕ್ಕು ಆರೋಪಿಗೆ ಇದೆ. ಆದೇಶ ಹೊರಡಿಸಿದ ದಿನವೇ ಅದನ್ನು ಜಾರಿಗೆ ತರುವುದು ಸರಿಯಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಮೇಲ್ಮನವಿ ಸಲ್ಲಿಸಲು ಅವಕಾಶ ನೀಡದೇ ಗಡಿಪಾರು ಆದೇಶವನ್ನು ತಕ್ಷಣ ಜಾರಿಗೆ ತಂದಿರುವುದು ನ್ಯಾಯಸಮ್ಮತವಲ್ಲ. ಅರ್ಜಿದಾರನು 2026ರ ಜೂನ್ 12ರೊಳಗೆ ಗೃಹ ಇಲಾಖೆಯ ಮುಂದೆ ಮೇಲ್ಮನವಿ ಸಲ್ಲಿಸಬಹುದು. ಅವರೆಗೆ ಗಡಿಪಾರು ಆದೇಶ ಜಾರಿಯಲ್ಲಿರಬಾರದು' ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ.

---

ಧರ್ಮಸ್ಥಳ, ಬೆಳ್ತಂಗಡಿಗೆ ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್ ಭೇಟಿ ಹಿನ್ನೆಲೆ

## ಡಿಸಿ, ಪೊಲೀಸ್ ಆಯುಕ್ತ ಪರಿಶೀಲನೆ

**ಬೆಳ್ತಂಗಡಿ:** ಭಾರತದ 15ನೇ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಬೆಳ್ತಂಗಡಿಗೆ ಭೇಟಿ ನೀಡಲಿದ್ದು ಈ ಸಮಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಸಿರಿ ಸಂಸ್ಥೆಯ ನೂತನ ಕಟ್ಟಡ ಉದ್ಘಾಟಿಸಲಿದ್ದು ಬಳಿಕ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಹಿನ್ನಲೆಯಲ್ಲಿ ದ.ಕ.ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ ಬೆಳ್ತಂಗಡಿ ತಾಲೂಕು ಪಂಚಾಯತ್‌ನಲ್ಲಿ ಮಂಗಳವಾರ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ನಡೆಸಿದರು.

ಸಭೆಯ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು ಉಪರಾಷ್ಟ್ರಪತಿಗಳ ಭೇಟಿಯ ನಿಮಿತ್ತ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಆಯಾ ಆಯಾ ಅಧಿಕಾರಿಗಳ ಕರ್ತವ್ಯದ ಬಗ್ಗೆ ಸೂಕ್ತ ಸೂಚನೆ ಹಾಗೂ ಸಲಹೆಗಳನ್ನು ನೀಡಿದ್ದೇನೆ ಎಂದರು. ಉಪರಾಷ್ಟ್ರಪತಿಗಳು ಯಾವೆಲ್ಲ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ ಮತ್ತು ಸಮಯಕ್ಕೆ ಸಂಬಂಧಪಟ್ಟಂತೆ ಮೇಲಿನ ಇಲಾಖೆ ನಿರ್ಧರಿಸಲಿದೆ ಎಂದರು.

ಬಳಿಕ ಮಧ್ಯಮದವರೊಂದಿಗೆ ಮಾತನಾಡಿದ ಅವರು, ಎಲ್ಲಾ ಜಿಲ್ಲೆಗಳಲ್ಲಿ ಮೂಡಾದ ಸಮಸ್ಯೆ ಇದೆ. ಬೆಳ್ತಂಗಡಿ ತಾಲೂಕಿನ ಮೂಡಾದ ಸಮಸ್ಯೆ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಸಭೆ ಮಾಡಿದ್ದಾರೆ. ಹೊಸ ನೇಮಕಾತಿ ಆಗುವ ತನಕ ಸ್ವಲ್ಪ ಸಮಸ್ಯೆ ಇದೆ ಎಂದರು. ಸ್ವಯಂ ಇಚ್ಛೆಯಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಒಳಗಿರುವ ಕುಟುಂಬದಿಂದ ಸ್ಥಳಾಂತರಗೊಳ್ಳಲು ಮುಂದೆ ಬರುತ್ತಾರೆ. ಅವರಿಗೆ ಪರಿಹಾರ ನೀಡಲಾಗಿದೆ ಹೊರತು ಯಾವುದೇ ಬಲವಂತ ಕ್ರಮ ಮಾಡಲಿಲ್ಲ. ಪಡಿತರ ಚೀಟಿ ಸಂಬಂಧಿಸಿದಂತೆ ಏನಾದರೂ ಸಮಸ್ಯೆ ಇದ್ದರೆ ಪರಿಶೀಲನೆ ಮಾಡಲಾಗುವುದು ಎಂದರು.

ಬಳಿಕ ಜಿಲ್ಲಾಧಿಕಾರಿ ಮತ್ತು ಪೊಲೀಸ್ ಆಯುಕ್ತ ಅರುಣ್ ಕುಮಾರ್ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಹಾಗೂ ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಡಿವೈಎಸ್ಪಿ ರೋಹಿಣಿ, ತಹಸೀಲ್ದಾರ್ ಪೃಥ್ವಿ ಸಾನಿಕಂ, ಸರ್ಕಲ್ ಇನ್‌ಸ್ಪೆಕ್ಟರ್ ರವಿ ಬಿ. ಎಸ್. ಸಿರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಜನಾರ್ಧನ್, ಟ್ರಸ್ಟಿ ರಾಜೇಶ್ ಪೈ ಇದ್ದರು.

> **ಬೆಳ್ತಂಗಡಿಗೆ ಮೊದಲ ಭೇಟಿ**
>
> 
>
> ದ.ಕ. ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಬೆಳ್ತಂಗಡಿ ತಾಲೂಕಿಗೆ ಮೊದಲ ಬಾರಿಗೆ ಭೇಟಿ ನೀಡಿದ್ದೀರಿ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಜಿಲ್ಲಾಧಿಕಾರಿಗಳು, ಈ ಹಿಂದೆ ಕೊತ್ಲೂರಿಗೆ ಬಂದಿದ್ದೆ. ಮುಂದೆ ಬರುತ್ತೇನೆ. ಮಳೆಗಾಲದ ಪೂರ್ವಭಾವಿ ಸಭೆ ನಡೆಸುತ್ತೇನೆ, ಹಾಗೇಯೆ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಲಿದ್ದೇನೆ ಎಂದರು.

---

## ಉದ್ಯೋಗಕ್ಕೆ ಸೇರಬೇಕಾದ ಯುವಕ ವಾಹನ ಅಪಘಾತದಲ್ಲಿ ದಾರುಣ ಸಾವು

**ಬಂಟ್ವಾಳ:** ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರನೋರ್ವ ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟರೆ, ಸಹಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ರಾ.ಹೆ.ಯ ಕಡೆಗೋಳಿ ಎಂಬಲ್ಲಿ ಬುಧವಾರ ಮುಂಜಾನೆಯ ವೇಳೆ ನಡೆದಿದೆ.

ಮೃತ ಬೈಕ್ ಸವಾರನನ್ನು ಬಜಪೆ ಕೈಕಂಬ ನಿವಾಸಿ ಅಭಿಜಿತ್ (28) ಎಂದು ಗುರುತಿಸಲಾಗಿದ್ದು, ಸಹಸವಾರನಾಗಿದ್ದ ಸಂದೀಪ್ ಗಂಭೀರ ಗಾಯಗೊಂಡು ಆಸ್ಪತ್ರೆ ಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತ ಅಭಿಜಿತ್ ಮತ್ತು ಗಾಯಾಳು ಸಂದೀಪ್ ಸ್ನೇಹಿತರಾಗಿದ್ದು, ಸಂದೀಪ್‌ನನ್ನು ಬೈಕಿನಲ್ಲಿ ಬಂಟ್ವಾಳ ಸಮೀಪದ ಅಮ್ಟಾಡಿ ಮನೆಗೆ ಬಿಟ್ಟು ಬರಲು ಹೋಗುತ್ತಿದ್ದ ವೇಳೆ, ಮುಂಜಾನೆ ಸುಮಾರು 3 ಗಂಟೆ ಹೊತ್ತಿಗೆ ಕಡೆಗೋಳಿ ಸಮೀಪ ಅಪರಿಚಿತ ವಾಹನವೊಂದು ಹಿಂಬದಿಯಿಂದ ಡಿಕ್ಕಿ ಹೊಡೆದು ಬಳಿಕ ಸ್ಥಳದಲ್ಲಿ ನಿಲ್ಲಿಸದೆ ಪರಾರಿಯಾಗಿದೆ. ಡಿಕ್ಕಿಯ ಪರಿಣಾಮ ಬೈಕ್ ರಸ್ತೆಗೆ ಪಲ್ಟಿಯಾಗಿದ್ದು ಅಭಿಜಿತ್ ಸ್ಥಳದಲ್ಲಿಯೇ ದಾರುಣವಾಗಿ ಮೃತಪಟ್ಟಿದ್ದರೆ, ಬಸ್‌ವೊಂದರ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದ ಆತನ ಸ್ನೇಹಿತ ಸಂದೀಪ್ ಗಂಭೀರ ಸ್ವರೂಪದ ಗಾಯಗೊಂಡಿದ್ದು ಅವರನ್ನು ಮಂಗಳೂರು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಂಟ್ವಾಳ ಟ್ರಾಫಿಕ್ ಠಾಣಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

> **ಉದ್ಯೋಗಕ್ಕೆ ಸೇರಬೇಕಾದಾತ ವಿಧಿಯ ಅಟ್ಟಹಾಸಕ್ಕೆ ಬಲಿಯಾದ**
>
> ಅಭಿಜಿತ್ ಅವರಿಗೆ ಎಂ.ಆರ್.ಪಿ.ಎಲ್.ಸಂಸ್ಥೆಯಲ್ಲಿ ಉದ್ಯೋಗ ದೊರಕಿದ್ದು, ಮೇ 27 ರಂದು ಉದ್ಯೋಗಕ್ಕೆ ಹಾಜರಾಗಬೇಕಾಗಿತ್ತು. ಆದರೆ ವಿಧಿಯಾಟ ಬೇರೇನೆ ಆಗಿದ್ದು, ಹೊಸ ಉದ್ಯೋಗಕ್ಕೆ ಸೇರಿ ಭವಿಷ್ಯದ ಕನಸು ಕಂಡಿದ್ದ ಅಭಿಜಿತ್ ವಿಧಿಯಾಟಕ್ಕೆ ಬಲಿಯಾಗಿದ್ದಾನೆ. ಉದ್ಯೋಗಕ್ಕೆ ಸೇರುವ ಮುನ್ನವೇ ರಸ್ತೆ ಅಪಘಾತಕ್ಕೆ ಬಲಿಯಾಗಿದ್ದು ಕುಟುಂಬವನ್ನು ಕಣ್ಣೀರಿನಲ್ಲಿ ಮುಳುಗುವಂತೆ ಮಾಡಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 33° 27° | ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

# ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಪುಟ 3

ಇನ್ನೂ ಕಾರ್ಯಾರಂಭಗೊಳ್ಳದ ಕ್ರೊಲ 33ಕೆ.ವಿ. ವಿದ್ಯುತ್ ಉಪಕೇಂದ್ರ!



ಪುಟ 8

ಹುಸಿಯಾದ ಭರವಸೆ: ಪುಣಚ 3 ಕುಟುಂಬದಿಂದ ಮತ್ತೆ ಅಹೋರಾತ್ರಿ ಧರಣಿ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಗುರುವಾರ 28, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

## ಸುತ್ತ ಮುತ್ತ

### ಮೇ 29ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ


**ಮಂಗಳೂರು:** ಕಂಕನಾಡಿ ಉಪಕೇಂದ್ರದಿಂದ ಹೊರಡುವ 11ಕೆವಿ ಮಿಷನ್ ಕಂಪೌಂಡ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಹೆಬಿಕ್ ಸ್ಕೂಲ್, ಬಲ್ಮಠ ನ್ಯೂ ರೋಡ್, ಎವರಿ ಜಂಕ್ಷನ್, ಶಾಂತಿನಿಲಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 29ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಕೊಳವೆಬಾವಿ: ರೂ.16.66 ಲಕ್ಷ ಅನುದಾನ ಮಂಜೂರು

**ಪುತ್ತೂರು:** ಬೇಸಿಗೆಯಲ್ಲಿ ಕುಡಿಯುವ ನೀರಿಗೆ ತತ್ವಾರ ಉಂಟಾದ ಪುತ್ತೂರು ವಿಧಾನಸಭಾ ಕ್ಷೇತ್ರದ ಹತ್ತು ವಿವಿಧ ಗ್ರಾಮಗಳಿಗೆ ಕೊಳವೆ ಬಾವಿ ನಿರ್ಮಾಣಕ್ಕೆ ರೂ.16.66 ಲಕ್ಷ ಅನುದಾನ ಮಂಜೂರಾಗಿದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ. ಗ್ರಾಮಗಳ ವಿವಿಧ ಕಡೆಗಳಲ್ಲಿ ಇದ್ದ ಕೊಳವೆ ಬಾವಿ ಬತ್ತಿ ಹೋಗಿದ್ದ ಕಾರಣ ನೀರಿಗೆ ತತ್ವಾರ ಉಂಟಾಗಿತ್ತು. ಗ್ರಾಮಸ್ಥರು ಈ ಸಮಸ್ಯೆಯನ್ನು ಶಾಸಕರ ಬಳಿ ಹೇಳಿಕೊಂಡಿದ್ದು ಬೇಡಿಕೆಗೆ ಸ್ಪಂದಿಸಲಾಗಿದೆ. ಕೊಡಿಪ್ಪಾಡಿ ಗ್ರಾಮದ ಕಲ್ಲಂದಡ್ಕ, ಬಡಗನ್ನೂರು ಗ್ರಾಮದ ಮೇಲೂರು, ಒಳಮೊಗ್ರು ಗ್ರಾಮದ ಇಡಿಂಜಿಲ, ಸರ್ವೆ ಗ್ರಾಮದ ಕಟ್ಟತ್ತಡ್ಕ, 34 ನೆಕ್ಕಿಲಾಡಿ ಗ್ರಾಮದ ಬೊಳಂತಿಲ, ಆರ್ಯಾಪು ಗ್ರಾಮದ ಕಲ್ಲರ್ಪೆ, ಹಿರೆಬಂಡಾಡಿ ಗ್ರಾಮದ ಪಾಲೆತ್ತಡಿ, ಕೆಯ್ಯೂರು ಗ್ರಾಮದ ಕಟ್ಟತ್ತಾರು, ಕೋಡಿಂಬಾಡಿ ಗ್ರಾಮದ ಕೊಡಿಮರ, ಉಪ್ಪಿನಂಗಡಿ ಗ್ರಾಮದ ನೂಜಿ ಎಂಬಲ್ಲಿಗೆ ಕೊಳವೆ ಬಾವಿ ಮಂಜೂರಾಗಿದೆ. ತುರ್ತಾಗಿ ಕೊಳವೆ ಬಾವಿಯನ್ನು ತೆಗೆದು ಆಯಾ ಪ್ರದೇಶಕ್ಕೆ ಕುಡಿಯುವ ನೀರು ಪೂರೈಕೆ ಮಾಡುವಂತೆ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದ್ದಾರೆ.

### 21 ಕೆ.ಜಿ. ತೂಕದ ಕುಂಬಳಕಾಯಿ

**ಸುಬ್ರಹ್ಮಣ್ಯ:** ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದ ಕೃಷಿ ತೋಟದಲ್ಲಿ ಬರೋಬರಿ 21 ಕೆ.ಜಿ. ತೂಕದ ಬೃಹತ್ ಕುಂಬಳಕಾಯಿ ಬೆಳೆದಿದೆ. ಸಾಧಾರಣವಾಗಿ 3 ರಿಂದ 5 ಕೆ.ಜಿ. ತೂಕದ



ಕುಂಬಳ ಬೆಳೆಯುವುದು ಸಾಮಾನ್ಯ. ಆದರೆ, 21 ಕೆ.ಜಿ. ತೂಕದ ಕುಂಬಳಕಾಯಿ ವಿಸ್ಮಯವಾಗಿದೆ. ಶ್ರೀ ಹರಿಹರೇಶ್ವರ ದೇವಳದ ಅಡಿಕೆ ತೋಟ ಪುನಶ್ಚೇತನ ಮಾಡುವ ಸಮಯದಲ್ಲಿ ಅಡಿಕೆಗೆ ಗಿಡ ನೆಟ್ಟಮೇಲೆ ಅಡಿಕೆ ಗಿಡದ ಬುಡಗಳಲ್ಲಿ ಕುಂಬಳಕಾಯಿ ಮತ್ತು ಚೀನಿಕಾಯಿ, ಸೌತೆ ಬೀಜಗಳನ್ನು ನಾಟಿ ಮಾಡಲಾಗಿತ್ತು. ಇದೀಗ ಕಾಯಿಗಳು ಆಗಿದ್ದು ಒಂದು ಕುಂಬಳಕಾಯಿ 21 ಕೆ.ಜಿ. ತೂಕ ತೂಗಿರುತ್ತದೆ. ಇದನ್ನು ದೇವಸ್ಥಾನದ ಮಧ್ಯಾಹ್ನದ ಅನ್ನ ದಾಸೋಹದ ಸಾಂಬಾರು ತಯಾರಿಕೆಗೆ ಉಪಯೋಗಿಸಲಾಗುವುದು ಎಂದು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು ತಿಳಿಸಿದ್ದಾರೆ.

### ಶಬ್ದ ಮಾಲಿನ್ಯ: ದೂರು ದಾಖಲು

**ಪುತ್ತೂರು:** ಕೃಷಿ ಯಂತ್ರೋಪಕರಣಗಳ ಮಾರಾಟ ಮತ್ತು ಸೇವೆ ಪರವಾನಿಗೆ ಪಡೆದು ಯಂತ್ರೋಪಕರಣಗಳ ರಿಪೇರಿ ಕೆಲಸ ಮಾಡಿ ಶಬ್ದ ಮಾಲಿನ್ಯ ಮಾಡುತ್ತಿದ್ದ ಕೃಷಿ ಸಲಕರಣೆಗಳ ವ್ಯಾಪಾರ ಮಳಿಗೆಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ನಗರದ ಎಪಿಎಂಸಿ ರಸ್ತೆಯಲ್ಲಿರುವ ಕೃಷಿ ಸಲಕರಣೆಗಳ ವ್ಯಾಪಾರ ಮಳಿಗೆ ಮಾರಾಟ ಮತ್ತು ಸೇವೆ ಪರವಾನಿಗೆ ಪಡೆದು ವ್ಯವಹಾರ ನಡೆಸುತ್ತಿತ್ತು. ಜತೆಗೆ, ಕೃಷಿ ಯಂತ್ರೋಪಕರಣಗಳ ರಿಪೇರಿ ಕೆಲಸ ಮಾಡುತ್ತಿದ್ದ ಕಾರಣ ಶಬ್ದ ಮಾಲಿನ್ಯ ಉಂಟಾಗುತ್ತಿತ್ತು. ಈ ಕುರಿತು ನೆಲ್ಲಿಕಟ್ಟೆಯ ಕಸ್ತೂರಿ ಬಾಳಿಗ ಅವರು ನೀಡಿದ ದೂರಿನನ್ವಯ ನ್ಯಾಯಾಲಯದ ಆದೇಶದಂತೆ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎಪಿಎಂಸಿ ರಸ್ತೆಯಲ್ಲಿರುವ ಕೃಷಿ ಸಲಕರಣೆಗಳ ವ್ಯಾಪಾರ ಮಳಿಗೆಗೆ ಮಾರಾಟ ಮತ್ತು ಸೇವೆಗಾಗಿ ಮಾತ್ರ ಪರವಾನಿಗೆ ನೀಡಲಾಗಿತ್ತು. ಅವರು ಕೃಷಿ ಯಂತ್ರೋಪಕರಣಗಳ ರಿಪೇರಿ ಕೆಲಸ ನಡೆಸುತ್ತಿದ್ದು ಇದರಿಂದ ಶಬ್ದ ಮಾಲಿನ್ಯ ಉಂಟಾಗಿ ಸ್ಥಳೀಯರಿಗೆ ತೊಂದರೆ ಉಂಟಾಗಿ ಜೀವನ ನಡೆಸುವುದು ಕಷ್ಟವಾಗಿದೆ ಎಂದು ಕಸ್ತೂರಿ ಬಾಳಿಗ ನೀಡಿದ್ದ ದೂರಿನಲ್ಲಿ ತಿಳಿಸಿದ್ದರು. ದೂರಿನ ಅನ್ವಯ ಠಾಣೆಯಲ್ಲಿ ಹಿಂಬರಹ ನೀಡಲಾಗಿದ್ದು ಕೋರ್ಟ್ ಆದೇಶದ ಮೇರೆಗೆ ದೂರು ದಾಖಲಾಗಿದೆ.

---

## ಪುತ್ತೂರು ಸಹಾಯಕ ಕಮಿಷನರ್ ಸ್ಟೆಲ್ಲಾ ವರ್ಗೀಸ್ ನೇತೃತ್ವದಲ್ಲಿ ಪ್ರಾಕೃತಿಕ ವಿಕೋಪ ಮುಂಜಾಗ್ರತಾ ಸಭೆ

# ವಿಪತ್ತು ನಿರ್ವಹಣಾ ಸಮಿತಿ ರಚನೆ, ಕಮಾಂಡರ್‌ಗಳ ನೇಮಕ

**ಪುತ್ತೂರು:** ಪುತ್ತೂರು ತಾಲೂಕಿನ ಪ್ರತಿ ಪಂಚಾಯತ್ ಹಾಗೂ ಪುತ್ತೂರು ನಗರಸಭಾ ಮಟ್ಟದಲ್ಲಿ ಈಗಾಗಲೇ ವಿಪತ್ತು ನಿರ್ವಹಣಾ ಸಮಿತಿ ಮಾಡಲಾಗಿದ್ದು ನಗರಸಭಾ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಇನ್ಸಿಡೆಂಟ್ ಕಮಾಂಡರ್‌ಗಳನ್ನಾಗಿ ನೇಮಿಸಲಾಗಿದೆ. ನಿಮ್ಮ ಸ್ಥಳೀಯವಾಗಿ ನೀವೇ ನಾಯಕರಾಗಿ ಇತರ ಅಧಿಕಾರಿಗಳನ್ನು ಜತೆ ಸೇರಿಕೊಂಡು ಮುನ್ನೆಚ್ಚರಿಕಾ ಕ್ರಮಗಳು, ವಿಪತ್ತು ನಿರ್ವಹಣೆಯ ಕಾರ್ಯ ಮಾಡಬೇಕು ಎಂದು ಪುತ್ತೂರು ಸಹಾಯಕ ಕಮಿಷನರ್ ಸ್ಟೆಲ್ಲಾ ವರ್ಗೀಸ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬುಧವಾರ ಪುತ್ತೂರು ತಾ.ಪಂ. ಸಭಾಂಗಣದಲ್ಲಿ ಪ್ರಾಕೃತಿಕ ವಿಕೋಪದ ಕುರಿತು ವಿಪತ್ತು ನಿರ್ವಹಣೆಗೆ ಸಂಬಂಧಿಸಿ ಅಧಿಕಾರಿಗಳ ಸಭೆ ನಡೆಸಿದರು.

ತಾಲೂಕಿನಲ್ಲಿ 217 ಅಂಗನವಾಡಿಗಳಿದ್ದು ಅದರಲ್ಲಿ ನಾಲ್ಕೈದು ಅಂಗನವಾಡಿಗಳ ಬಳಿ ಅಪಾಯಕಾರಿ ಮರಗಳಿದ್ದು ಅದರ ತೆರವಿಗೆ ಅರಣ್ಯ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ಸಿಡಿಪಿಒ ಹರೀಶ್ ತಿಳಿಸಿದರು. ಅಪಾಯಕಾರಿ ಮರ, ವಿದ್ಯುತ್ ತಂತಿ, ಕಟ್ಟಡಗಳ ಸ್ಥಿತಿ, ಆವರಣ ಗೋಡೆಯ ಸ್ಥಿತಿಯ ಕುರಿತು ತಿಳಿದುಕೊಂಡು ಅದು ಸುಸ್ಥಿತಿಯಲ್ಲಿದ್ದರೆ ಮೇಲ್ವಿಚಾರಕರು ದೃಢೀಕರಿಸಿ ಪತ್ರ ನೀಡಬೇಕು. ಮುಂದೆ ಅಲ್ಲಿ ಅನಾಹುತ ನಡೆದರೆ ಅವರೇ ಹೊಣೆ. ಸಮಸ್ಯೆಗಳಿದ್ದರೆ ಮೊದಲೇ ತಿಳಿಸಿ ಪರಿಹರಿಸಿಕೊಳ್ಳಬೇಕು ಎಂದು ಎಸಿ ಸೂಚಿಸಿದರು.



**ಆಚೆಕಲ್‌ನಲ್ಲಿ ಗುಡ್ಡ ಕುಸಿತ**

ಹಿರೆಬಂಡಾಡಿಯ ಅಡೆಕಲ್‌ನಲ್ಲಿ ಗುಡ್ಡ ಕುಸಿತ ಉಂಟಾಗುತ್ತಿದ್ದು ಚರಂಡಿ ಇಲ್ಲದೆ ರಸ್ತೆ ಹಾಳಾಗುತ್ತಿದೆ ಎಂದು ಪಿಡಿಒ ತಿಳಿಸಿದರು. ಅಲ್ಲಿ ಶೀಘ್ರ ದುರಸ್ತಿಗೆ ವಿನಾಯಿತಿ ಎಂದು ಪತ್ರ ಬರೆಯುವಂತೆ ಎಸಿ ಸೂಚಿಸಿದರು. ಅಲ್ಲಿ ತಡೆಗೋಡೆ ನಿರ್ಮಾಣಕ್ಕೆ ರೂ.90 ಲಕ್ಷ ಮಂಜೂರುಗೊಂಡು ನಿರ್ಮಿತಿ ಕೇಂದ್ರಕ್ಕೆ ಜವಾಬ್ದಾರಿ ನೀಡಲಾಗಿದೆ. ರೂ.12 ಕೋಟಿ ವೆಚ್ಚದ ಇದೇ ರೀತಿಯ ಕಾಮಗಾರಿ ಆರಂಭಗೊಂಡಿಲ್ಲ ಎಂದು ಇಂಜಿನಿಯರ್ ತಿಳಿಸಿದರು. ಈ ಕುರಿತು ಯೋಜನಾ ನಿರ್ದೇಶಕರಿಂದ ವಿವರಣೆ ಪಡೆಯಲು ಎಸಿಯವರು ಇಒಗೆ ಸೂಚಿಸಿದರು.

**ಮಣ್ಣು ತೆರವಿಗೆ ಅರಣ್ಯ ಇಲಾಖೆಯಿಂದ ಅಡ್ಡಿ**

ಒಳಮೊಗ್ರುವಿನ ಅಜಲಡ್ಕ ಅಂಗನವಾಡಿ ಕೇಂದ್ರದ ಹಿಂಭಾಗ ಅಪಾಯಕಾರಿ ಧರೆಯ ಮಣ್ಣು ತೆರವಿನ ವೇಳೆ ಅರಣ್ಯ ಇಲಾಖೆಯವರು ತಡೆ ಒಡ್ಡಿದ್ದಾರೆ ಎಂದು ಪಿಡಿಒ ತಿಳಿಸಿದರು. ಅಂಗನವಾಡಿ ಕೇಂದ್ರ ನಮ್ಮ ಮೀಸಲು ಅರಣ್ಯದ ವ್ಯಾಪ್ತಿಯಲ್ಲಿದ್ದು ಅಪಾಯಕಾರಿ ಧರೆಯ ಕುರಿತು ಮಾಹಿತಿ ಇರಲಿಲ್ಲ. ಜತೆಗೆ ತೆರವು ಮಾಡುವ ಕುರಿತು ನಮಗೆ ಮಾಹಿತಿ ನೀಡಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿ ತಿಳಿಸಿದರು. ಅದರ ಕುರಿತು ಗಮನಹರಿಸುವಂತೆ ಎಸಿ ಸೂಚಿಸಿದರು.

**ಸಮನ್ವಯತೆ ಸಾಧಿಸಿ**

ವಿಪತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಮಹತ್ವದ ಜವಾಬ್ದಾರಿ ಹೊಂದಿರುವ ಪಿಡಿಒಗಳು ಇತರ ಇಲಾಖೆಗಳ ಅಧಿಕಾರಿಗಳ ಜತೆ ಸಮನ್ವಯತೆ ಸಾಧಿಸಿ ಕಾರ್ಯ ನಿರ್ವಹಿಸಬೇಕು. ತಾಲೂಕು ಮಟ್ಟದಲ್ಲೇ ಈ ಸಮನ್ವಯತೆ ಆಗದಿದ್ದರೆ ರಾಜ್ಯ ಮಟ್ಟದಲ್ಲಿ ಪ್ರಧಾನಿಯವರು ಹೇಗೆ ಕಾರ್ಯ ನಿರ್ವಹಿಸುತ್ತಾರೆ ಎಂದು ಎಸಿ ಪ್ರಶ್ನಿಸಿದರು.

ಶಾಲೆಗಳ ಸ್ಥಿತಿಯ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಸಿ. ಮಾಹಿತಿ ನೀಡಿ, ಶಾಲೆಗಳ ಸ್ಥಿತಿ, ನದಿ ಹಳ್ಳ ದಾಟಿ ಬರುವ ಮಕ್ಕಳ ವಿವರಗಳ ಕುರಿತು ವರದಿ ನೀಡುವುದಕ್ಕೆ ಶಿಕ್ಷಕರಿಗೆ ಸೂಚನೆ ನೀಡಲಾಗಿದೆ. ಜತೆಗೆ ಮಳೆ ಮುಂಜಾಗ್ರತೆಯಾಗಿ ರಜೆ ಘೋಷಣೆಯಾದರೆ ಒಬ್ಬ ಶಿಕ್ಷಕರು ಶಾಲೆಯಲ್ಲೇ ಇದ್ದು ರಜೆಯ ಮಾಹಿತಿ ತಿಳಿಯದೆ ಬರುವ ಮಕ್ಕಳನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವ ಜವಾಬ್ದಾರಿ ನಿರ್ವಹಿಸಬೇಕು ಎಂಬ ನಿರ್ದೇಶನ ನೀಡಲಾಗಿದೆ. ಶಾಲೆಗಳ ದುರಸ್ತಿಗೆ ಸಂಬಂಧಿಸಿ ಈಗಾಗಲೇ ಪ್ರಸ್ತಾವನೆ ಪಡೆದು ಅನುದಾನ ಕೂಡ ಬಿಡುಗಡೆಗೊಂಡಿದೆ. ಮುಂದಿನ 15 ದಿನದೊಳಗೆ ಕಾಮಗಾರಿ ಆರಂಭಗೊಳ್ಳುತ್ತದೆ ಎಂದು ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ನವೀನ್ ಭಂಡಾರಿ ಮಾಹಿತಿ ನೀಡಿದರು. ಶಾಲೆಗಳ ಸುಸ್ಥಿತಿಯ ಕುರಿತು ಕೂಡ ಮುಖ್ಯ ಶಿಕ್ಷಕರು ದೃಢೀಕರಣ ನೀಡುವಂತೆ ಎಸಿಯವರು ಬಿಇಒಗೆ ಸೂಚಿಸಿದರು.

ತಿಂಗಳಾಡಿ ಶಾಲೆಯ ಮೇಲ್ಛಾವಣಿ ಅಪಾಯದಲ್ಲಿದ್ದು ಶೀಘ್ರ ದುರಸ್ತಿಯಾಗಬೇಕು. ಕೆದಂಬಾಡಿ ಶಾಲೆಯ ಆಟದ ಮೈದಾನಕ್ಕೆ ಮಣ್ಣು ತುಂಬು ಹಾಕಿ ಅಪಾಯಕಾರಿ ಸ್ಥಿತಿ ನಿರ್ಮಾಣವಾಗಿದೆ ಎಂದು ಪಿಡಿಒ ಸಭೆಗೆ ತಿಳಿಸಿದರು. ಈ ಕುರಿತು ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನೆ ಮಾಡಿ ತಹಶೀಲ್ದಾರ್‌ಗೆ ವರದಿ ನೀಡಬೇಕು ಎಂದು ಎಸಿ ಸೂಚಿಸಿದರು. ಚಂದ್ರಪ್ರಭಾಗ್ ಪ್ರದೇಶದಲ್ಲಿ ಕೃತಕ ನೆರೆಯ ಅಪಾಯ ಸೃಷ್ಟಿಯಾಗಿದೆ ಎಂದು ನರಿಮೊಗರು ಪಿಡಿಒ ತಿಳಿಸಿದರು. ಆ ಪ್ರದೇಶವನ್ನು ತಹಶೀಲ್ದಾರ್, ಇಒ, ಸಣ್ಣ ನೀರಾವರಿ ಇಲಾಖೆ, ಅಗ್ನಿಶಾಮಕ ದಳದವರು ಜಂಟಿ ಪರಿಶೀಲನೆ ನಡೆಸಿ ವರದಿಯ ಕ್ರಮವಹಿಸಲು ಸೂಚಿಸಿದರು.

ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ನವೀನ್ ಭಂಡಾರಿ ಉಪಸ್ಥಿತರಿದ್ದರು.

---

## ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಪುಣ್ಯಸ್ಮರಣೆ | ರಮಾನಾಥ ರೈ ಬಣ್ಣನೆ

# ಆಧುನಿಕ ಭಾರತ ನಿರ್ಮಾಣಕ್ಕೆ ಭದ್ರ ಬುನಾದಿ

**ಮಂಗಳೂರು:** ಜವಾಹರಲಾಲ್ ನೆಹರೂ ಅವರು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳ ಮಹತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೆ ತಂದು ಆಧುನಿಕ ಭಾರತ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದರು ಎಂದು ಮಾಜಿ ಸಚಿವ ಬಿ.ರಮಾನಾಥ ರೈ ಹೇಳಿದ್ದಾರೆ.

ಬುಧವಾರ ಮಲ್ಲಿಕಟ್ಟೆಯ ಕಾಂಗ್ರೆಸ್ ಭವನದಲ್ಲಿ ಆಯೋಜಿಸಿದ ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ನೆಹರೂ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಬಳಿಕ ಅವರು ಮಾತನಾಡಿದರು.

ನೆಹರೂ ಅವರು ಪ್ರಧಾನಿಗಳಾಗಿದ್ದ 17 ವರ್ಷಗಳ ಅವಧಿಯಲ್ಲಿ ಶಿಕ್ಷಣ ಸಂಸ್ಥೆಗಳು, ವಿಜ್ಞಾನ-ಸಂಶೋಧನಾ ಸಂಸ್ಥೆಗಳು, ತಾಂತ್ರಿಕ ಕಾಲೇಜುಗಳು, ವೈದ್ಯಕೀಯ ಅಧ್ಯಯನ ಸಂಸ್ಥೆಗಳು, ಅಣೆಕಟ್ಟುಗಳು, ಆಸ್ಪತ್ರೆಗಳು, ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿ ಸಾಮಾಜಿಕ ಕ್ರಾಂತಿಯ ಹರಿಕಾರರೆನಿಸಿದರು. ಭಾರತವು ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲು ನೆಹರೂ ಅವರು ಜಾರಿಗೆ ತಂದ ಪಂಚವಾರ್ಷಿಕ ಯೋಜನೆಗಳೇ



ಕಾರಣ ಎಂದರು.

**ಇತಿಹಾಸ ಮರೆಮಾಚುವ ಪ್ರಯತ್ನ**

ನೆಹರೂ ಅವರು ಸ್ವಾತಂತ್ರ್ಯ ಹೋರಾಟದಲ್ಲಿ 9 ವರ್ಷಗಳ ಕಾಲ ಜೈಲುವಾಸ ಅನುಭವಿಸಿದ್ದರು. ಬಿಜೆಪಿ ಯಾವೊಬ್ಬ ನಾಯಕರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಲ್ಲ, ನೆಹರೂ ಕುಟುಂಬದ ಬಗ್ಗೆ ಅಪಪ್ರಚಾರ ನಡೆಸುತ್ತಾ ಅವರ ಕೊಡುಗೆ, ಇತಿಹಾಸ ಮರೆಮಾಚುವ ಪ್ರಯತ್ನ ಆಗುತ್ತಿದೆ. ದೇಶದ ಚರಿತ್ರೆಯಿಂದ ನೆಹರೂ ಹೆಸರನ್ನು ಅಳಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಮುಡಾ ಅಧ್ಯಕ್ಷ ಸದಾಶಿವ್ ಉಳ್ಳಾಲ್, ಮುಖಂಡರಾದ ಸುರೇಂದ್ರ ಕಂಬಳಿ, ಆರ್.ಕೆ.ಪೃಥ್ವಿರಾಜ್, ಅಬ್ದುಲ್ ರವೂಫ್, ಜಯಶೀಲ ಅಡ್ಯಂತಾಯ, ಅಬ್ಬಾಸ್ ಅಲಿ, ಎಸ್.ಅಪ್ಪಿ, ಶುಭೋದಯ ಆಳ್ವ, ನೀರಜ್ ಚಂದ್ರಪಾಲ್, ಟಿ.ಕೆ.ಸುಧೀರ್, ಭಾಸ್ಕರ್ ರಾವ್, ವಿಕಾಸ್ ಶೆಟ್ಟಿ, ಶಬೀರ್.ಎಸ್, ಗಣೇಶ್ ಪೂಜಾರಿ, ಯೋಗಿಶ್ ಕುಮಾರ್, ಆರಿಫ್ ಬಾವಾ ಬಂದರ್, ದಿನೇಶ್ ಕುಂಪಲ, ರಮಾನಂದ ಪೂಜಾರಿ, ಸಬಿತಾ ಮಿಸ್ಕಿತ್, ನಮಿತಾ ಡಿ.ರಾವ್, ಮಂಜುಳಾ ನಾಯಕ್, ಚಂದ್ರಕಲಾ ಜೋಗಿ, ಚಂದ್ರಹಾಸ ಪೂಜಾರಿ, ಮಲ್ಲಿಕಾರ್ಜುನ ಕೋಡಿಕಲ್, ರವಿರಾಜ್ ಪೂಜಾರಿ, ಸಮರ್ಥ್ ಭಟ್, ನಝೀರ್ ಬಜಾಲ್ ಉಪಸ್ಥಿತರಿದ್ದರು. ಮಾಜಿ ಮೇಯರ್ ಶಶಿಧರ್ ಹೆಗ್ಡೆ ಸ್ವಾಗತಿಸಿದರು. ಜೋಕಿಂ ಡಿಸೋಜ ವಂದಿಸಿದರು.

---

## ಅಪ್ಪೆ ಬೇರ್ ದ ತುಳುನಾಡ್ ವಿಚಾರ ಸಂಕಿರಣ ಸಮಾರೋಪ ಕಾರ್ಯಕ್ರಮ

# ತುಳು ಹೆಮ್ಮೆಯ ಭಾಷೆ: ಡಾ. ಇಂದಿರಾ ಹೆಗ್ಗಡೆ

**ಮುಲ್ಕಿ:** ತುಳುನಾಡಿನ ಮೂಲ ಸಂಸ್ಕೃತಿ, ಆಚಾರ-ವಿಚಾರ, ದೈವ ಪರಂಪರೆ ಹಾಗೂ ತುಳು ಜೀವನ ಮೌಲ್ಯಗಳ ಸಂರಕ್ಷಣೆ ಮತ್ತು ಅದರ ಮಹತ್ವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಸದುದ್ದೇಶದಿಂದ ತುಳು ವರ್ಲ್ಡ್ ಫೌಂಡೇಶನ್, ತುಳುವ ಮಹಾಸಭೆ, ಇಂಟರ್ ನ್ಯಾಷನಲ್, ಮುಲ್ಕಿ ಬಂಟರ ಸಂಘದ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಸಹಯೋಗದಲ್ಲಿ 'ಅಪ್ಪೆ ಬೇರ್ ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರ ಸಂಕಿರಣದ ಸಮಾರೋಪ ಕಾರ್ಯಕ್ರಮ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಸಭಾಂಗಣದಲ್ಲಿ ನಡೆಯಿತು.

ಸಾಹಿತಿ ಹಾಗೂ ತುಳು ಜಾನಪದ ವಿದ್ವಾಂಸೆ ಡಾ. ಇಂದಿರಾ ಹೆಗ್ಗಡೆ ಅಧ್ಯಕ್ಷತೆ ವಹಿಸಿ, ತುಳು ಭಾಷೆಯನ್ನು ನಮ್ಮ ಹೆಮ್ಮೆಯ ಭಾಷೆ ಎಂದು ತಿಳಿದುಕೊಂಡು ತುಳು ಸಂಸ್ಕೃತಿ ಉಳಿಸಿ ಬೆಳೆಸಿ ಎಂದರು.

ಜನಪದ ವಿದ್ವಾಂಸ ಡಾ. ಗಣೇಶ್ ಅಮೀನ್ ಸಂಕಮಾರ್ ಮಾತನಾಡಿ, ತುಳುನಾಡಿನ ಕೂಡು ಕಟ್ಟಿನ ಕುಟುಂಬ ನಶಿಸುತ್ತಿದೆ. ಕೃಷಿ ಬದುಕು ನಾಶವಾಗುತ್ತಿದೆ ತುಳು ಬದುಕು ಉಳಿಸುವ ಕಾರ್ಯ



**ಪ್ರಶಸ್ತಿ ಪ್ರದಾನ**

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ವಿಜೇತೆ ಸಿಂಧು ಗುಜರನ್, ಮುಲ್ಕಿ ಬಿಲ್ಲವ ಮಹಿಳಾ ಮಂಡಳಿಯ ಗೌರವಾಧ್ಯಕ್ಷೆ ಸರೋಜಿನಿ ಸುವರ್ಣ, ಜಯಂತಿ ಬಂಗೇರ, ಸಾವಿತ್ರಿ ಶೆಟ್ಟಿ ಹಾಗೂ ಸುವಂದ ಎಂ. ಅಮೀನ್ ರವರಿಗೆ 'ತುಳು ಅಪ್ಪೆತಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಡೆಸಬೇಕಾಗಿದೆ. ತುಳು ಸಂಘಟನೆಯಲ್ಲಿ ಜಾತಿ, ಜಾತಿ ಮತ ರಾಜಕೀಯ ಬೇಡ ಎಂದು ಹೇಳಿದರು.

ಮಯೂರಿ ಫೌಂಡೇಶನ್ ಅಧ್ಯಕ್ಷ ಜಯ ಶೆಟ್ಟಿ ಮುಲ್ಕಿ ಬಿಲ್ಲವರ ಸಂಘದ ಅಧ್ಯಕ್ಷ ವಾಮನ್ ಕೋಟ್ಯಾನ್ ನಡಿಕುದ್ರು, ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ತುಳುವ ಮಹಾಸಭೆ ಇಂಟರ್ ನ್ಯಾಷನಲ್‌ನ ಪ್ರಧಾನ ಸಂಚಾಲಕಿ ಭಾನುಮತಿ ಶೆಟ್ಟಿ ಕಕ್ವಗುತ್ತು, ಪ್ರಧಾನ ಸಂಚಾಲಕ ಸುನಿಲ್ ಆಳ್ವ ತುಳುವ ಮಹಾಸಭೆ ಇಂಟರ್ನ್ಯಾಷನಲ್‌ನ ನಿರ್ದೇಶಕ ರಾಜೇಶ್ ಆಳ್ವ ಬದಿಯಡ್ಕ ತುಳುವ ಮಹಾಸಭೆ ಪ್ರಧಾನ ಸಂಚಾಲಕ ಅರವಿಂದ ಬೆಳ್ಚಡ, ಸಮಿತಿಯ ವಸಂತ್ ರೈ, ಹರಿಪ್ರಸಾದ್ ರೈ ಸರೋಜಿನಿ ಸುವರ್ಣ, ಗೀತಾ ಗಣೇಶ್ ಬಂಗೇರ, ಲತಾ ಶೇಖರ್ ಪೂಜಾರಿ, ಕಿಶೆಲ್ ಸುಶೀಲ್ ಮುತ್ತಿತರರಿದ್ದರು. ಭಾನುಮತಿ ಶೆಟ್ಟಿ ಕಕ್ವಗುತ್ತು ಸ್ವಾಗತಿಸಿ, ಪ್ರಮೋದ್ ಸಪ್ರೆ ವಂದಿಸಿದರು. ನಿರೂಪಕ ನವೀನ್ ಶೆಟ್ಟಿ ಎಡ್ಮೆಮಾರ್ ನಿರೂಪಿಸಿದರು.

---

# ಶ್ರೀ ವೀರ ಹನುಮಾನ್ ಮಂದಿರದಿಂದ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ಹಸ್ತಾಂತರ



**ಬಂಟ್ವಾಳ:** ಪುದು ಗ್ರಾಮದ ಸುಜೀರು ದತ್ತನಗರದಲ್ಲಿರುವ ಶ್ರೀ ವೀರ ಹನುಮಾನ್ ಮಂದಿರದಿಂದ ಸ್ಥಳೀಯ ವಿದ್ಯಾರ್ಥಿಗಳ ಶಾಲಾ ಕಲಿಕೆಗೆ ಪೂರಕ ವಾಗುವ ನಿಟ್ಟಿನಲ್ಲಿ ಆರ್ಥಿಕ ಸಹಾಯ ನೀಡಲಾಯಿತು.

ಮಂದಿರದ ವಠಾರದಲ್ಲಿ ಬುಧವಾರ ಬೆಳಗ್ಗೆ ನಡೆದ ಕಾರ್ಯಕ್ರಮವನ್ನು ಜಿಲ್ಲಾ ಧಾರ್ಮಿಕ ಪರಿಷತ್ ಮಾಜಿ ಸದಸ್ಯ ಪೊಳಲಿ ಗಿರಿಪ್ರಕಾಶ್ ತಂತ್ರಿ ವಿದ್ಯಾನಿಧಿಯನ್ನು ಹಸ್ತಾಂತರಿಸುವ ಮೂಲಕ ಚಾಲನೆ ನೀಡಿ, ಇಂದು ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಕಾಣುತ್ತಿದ್ದು ವಿದ್ಯಾರ್ಥಿಗಳು ಸಂಸ್ಕಾರವನ್ನು ರೂಢಿಸಿಕೊಂಡು ವಿದ್ಯಾವಂತರಾಗಬೇಕು. ಸ್ಥಳೀಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ವೀರ ಹನುಮಾನ್ ಮಂದಿರದಿಂದ ನಿರಂತರವಾಗಿ ಹಮ್ಮಿಕೊಂಡು ಬರುತ್ತಿರುವುದು ಅಭಿನಂದನೀಯ ಎಂದರು.

ಮಂದಿರದ ಆಡಳಿತ ಸಮಿತಿ ಅಧ್ಯಕ್ಷ ಸುರೇಂದ್ರ ಕಂಬಳಿ ಪ್ರಾಸ್ತಾವಿಕ ನುಡಿಗಳನ್ನಾಡಿ, ಮಂದಿರ ಬೆಳ್ಳಿ ಹಬ್ಬದ ಸಂಭ್ರಮದಲ್ಲಿದ್ದು ಕೆಲವೊಂದು ಯೋಜನೆ ಹಾಕಿಕೊಂಡಿದೆ. ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಪುಸ್ತಕಗಳು ಸಿಗುವ ಕಾರಣ ಈ ವರ್ಷ ಅದರ ಮೌಲ್ಯವನ್ನು ನಗದು ರೂಪದಲ್ಲಿ ನೀಡಲಾಗಿದೆ ಎಂದರು.

ಕುದ್ರೋಳಿ ಭಗವತಿ ಕ್ಷೇತ್ರದ ಅರ್ಚಕ ಬೀರಣ್ಣ ಆಚಾರ್, ಯಶೋಧ ಎ.ಶೆಟ್ಟಿ ಪುದು ಗ್ರಾ.ಪಂ. ಸದಸ್ಯ ವಿಠಲಕುಮಾರ್, ನಿವೃತ್ತ ಸೇನಾಧಿಕಾರಿ ದಾಮೋದರ ಸಪಲ್ಯ, ಜೆಸಿಐ ವಲಯ ತರಬೇತುದಾರ ಸಂದೀಪ್ ಸಾಲ್ಯಾನ್, ಮಹಿಳಾ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಉತ್ಸವ ಸಮಿತಿ ಅಧ್ಯಕ್ಷ ಪುರುಷೋತ್ತಮ ಇದ್ದರು. ಗಣೇಶ್ ದತ್ತನಗರ ಸ್ವಾಗತಿಸಿ, ವಂದಿಸಿದರು. ಆಡಳಿತ ಮಂಡಳಿ ಕೋಶಾಧಿಕಾರಿ ರವೀಂದ್ರ ಪ್ರಮುಖರಾದ ಸಂದೀಪ್ ದತ್ತನಗರ, ಎಸ್. ಜಯ, ಯಶೋಧರ ಬೆಳ್ಚಾಡ ಮತ್ತಿತರರು ಭಾಗವಹಿಸಿದ್ದರು. ಸ್ಥಳೀಯ 40 ಮಕ್ಕಳಿಗೆ ವಿದ್ಯಾನಿ ಹಸ್ತಾಂತರಿಸಲಾಯಿತು.

---

# ಸಿರಿ ಮಾತೃಶ್ರೀ ಪಾರ್ಕ್‌ನಲ್ಲಿ ಜಿಯೋ ಡಿಜಿಟಲ್ ಸಂಪರ್ಕದ ಬಲವರ್ಧನೆ



**ಉಜಿರೆ:** ಬೆಳ್ತಂಗಡಿ ಬಳಿ ರೆಂಕೆದಗುತ್ತು ಎಂಬಲ್ಲಿರುವ ಸಿರಿ ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್‌ನಲ್ಲಿ ಜಿಯೋ ಸಂಸ್ಥೆಯ ನೂತನ ಮೊಬೈಲ್ ಟವರನ್ನು ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಹೇಮಾವತಿ ವೀ. ಹೆಗ್ಗಡೆಯವರು ಉದ್ಘಾಟಿಸಿ, ಶುಭ ಹಾರೈಸಿದರು.

**ಗುಣಮಟ್ಟದ ಇಂಟರ್‌ನೆಟ್**

ಇದರಿಂದಾಗಿ ಇಲ್ಲಿನ ನೌಕರರು, ವಿದ್ಯಾರ್ಥಿಗಳು, ಸ್ಥಳೀಯ ನಿವಾಸಿಗಳು ಹಾಗೂ ಸಂದರ್ಶಕರಿಗೆ ಉತ್ತಮ ಗುಣಮಟ್ಟದ ಇಂಟರ್‌ನೆಟ್ ಮತ್ತು ಮೊಬೈಲ್ ಸಂಪರ್ಕ ಸೌಲಭ್ಯ ಲಭ್ಯವಾಗುತ್ತದೆ. ಇದರೊಂದಿಗೆ ಆನ್‌ಲೈನ್ ಶಿಕ್ಷಣ, ಡಿಜಿಟಲ್ ವಾಣಿಜ್ಯ, ತ್ವರಿತ ಸಂವಹನ, ಉದ್ಯಮ ನಿರ್ವಹಣೆ ಹಾಗೂ ಗ್ರಾಹಕರ ಸೇವೆಗಳ ಅಭಿವೃದ್ಧಿಗೆ ಉತ್ತೇಜನ ಸಿಗಲಿದೆ.

ಜಿಯೋ ಸಂಸ್ಥೆಯ ಹಿರಿಯ ಅಧಿಕಾರಿ ರಾಜೇಶ್ ಮತ್ತು ಡಿ.ಜಿ.ಎಂ. ಧನಂಜಯ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್, 'ಸಿರಿ' ಗ್ರಾಮೋದ್ಯೋಗ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಜನಾರ್ಧನ ಸಹಿತ ಮೊದಲಾದವರು ಉಪಸ್ಥಿತರಿದ್ದರು.

---

# ತಲಪಾಡಿ ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಮಕ್ಕಳಿಗೆ 'ಅಕ್ಷರಾಭ್ಯಾಸ'



**ಮಂಗಳೂರು:** ತಲಪಾಡಿಯ ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಎಲ್‌ಕೆಜಿ ವಿದ್ಯಾರ್ಥಿಗಳಿಗಾಗಿ 'ಅಕ್ಷರಾಭ್ಯಾಸ' ಹಾಗೂ ಪೋಷಕರಿಗಾಗಿ 'ಓರಿಯಂಟೇಶನ್ ಕಾರ್ಯಕ್ರಮ' ಆಯೋಜಿಸಲಾಯಿತು.

**ಪೋಷಕರಿಂದ ಅಕ್ಷರಪಾಠ**

ಕಾರ್ಯಕ್ರಮದ ಆರಂಭದಲ್ಲಿ ಗಣಹೋಮ ಮಾಡಲಾಯಿತು. ಬಳಿಕ ಪ್ರಾರ್ಥನೆ ನಡೆಸಿ, ಪುಟ್ಟ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು. ಮಕ್ಕಳು ತಮ್ಮ ಪೋಷಕರ ಮಡಿಲಲ್ಲಿ ಕುಳಿತು, ಅಕ್ಷರಗಳನ್ನು ಬರೆದು ತಮ್ಮ ವಿದ್ಯಾಭ್ಯಾಸದ ಮೊದಲ ಹೆಜ್ಜೆಯನ್ನು ಇಟ್ಟರು. ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಪ್ರೋತ್ಸಾಹ ನೀಡಿದರು.

ಅನಂತರ ನಡೆದ ಓರಿಯಂಟೇಶನ್ ಕಾರ್ಯಕ್ರಮದಲ್ಲಿ ಶಾಲೆಯ ನಿಯಮಗಳು, ಪಠ್ಯಕ್ರಮ, ಮಕ್ಕಳ ಆರೈಕೆ, ಶಿಸ್ತು, ಹಾಗೂ ಶಾಲೆಯ ವಿವಿಧ ಚಟುವಟಿಕೆಗಳ ಕುರಿತು ಪೋಷಕರಿಗೆ ಮಾಹಿತಿ ನೀಡಲಾಯಿತು. ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಪೋಷಕರ ಸಹಕಾರದ ಮಹತ್ವವನ್ನು ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್ ವಿವರಿಸಿ, ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರ ಹಿರಿದು ಎಂದರು. ಶಾರದಾ ಸಮೂಹ ಸಂಸ್ಥೆಗಳ ನಿರ್ದೇಶಕ ಸಮೀರ್ ಪುರಾಣಿಕ್, ಆಡಳಿತ ವ್ಯವಸ್ಥಾಪಕ ಪ್ರಫುಲ್, ಅಡ್ಮಿಶನ್ ಮ್ಯಾನೇಜರ್ ವಿವೇಕ್ ತಂತ್ರಿ, ಪ್ರಾಂಶುಪಾಲ ಸುಷ್ಮಾ ದಿನಕರ್, ವಿನಾಯಕ್ ಬಿಜಿ, ಮೋಹನ್ ದಾಸ್, ಮುಖ್ಯೋಪಾಧ್ಯಾಯನಿ ಶಾಮಲಾಮಟ್, ಶಿಕ್ಷಕ ಶಿಕ್ಷಕೇತರರು ಉಪಸ್ಥಿತರಿದ್ದರು.

---

## ಪ್ರಾಕೃತಿಕ ವಿಪತ್ತು ನಿರ್ವಹಣೆ ಕುರಿತು ಸುಳ್ಯ ತಾಲೂಕು ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆ | ಅಧಿಕಾರಿಗಳಿಗೆ ತಹಶೀಲ್ದಾರ್ ಖಡಕ್ ಸೂಚನೆ

# ಶಿಥಿಲಾವಸ್ಥೆಯಲ್ಲಿರುವ ಶಾಲಾ, ಕಾಲೇಜು ಕಟ್ಟಡಗಳ ಗುರುತಿಸಿ, ಶೀಘ್ರ ದುರಸ್ತಿಗೆ ಕ್ರಮ ಕೈಗೊಳ್ಳಿ

**ಸುಳ್ಯ:** ಮುಂಗಾರು ಮಳೆ ಸನಿಹವಾಗಿದ್ದು ಮಳೆಗಾಲದ ತುರ್ತು ಸಂದರ್ಭ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಸಂಘಟಿತರಾಗಿ ಕೆಲಸ ನಿರ್ವಹಿಸಿ ಪ್ರಾಕೃತಿಕ ವಿಕೋಪದಿಂದ ಉಂಟಾಗಬಹುದಾದ ಅನಾಹುತಗಳಿಂದ ಜನರ ಮತ್ತು ಜಾನುವಾರುಗಳ ರಕ್ಷಣೆಗೆ ಜವಾಬ್ದಾರಿಯುತ ಕೆಲಸ ಕಾರ್ಯಗಳನ್ನು ಮಾಡುವಂತೆ ಸುಳ್ಯ ತಹಶೀಲ್ದಾರ್ ಮಂಜುಳ ಎಂ. ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸುಳ್ಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ನಡೆದ ಪ್ರಾಕೃತಿಕ ವಿಕೋಪದ ಕುರಿತ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಕೈಗೊಳ್ಳಬೇಕಾದ ಪೂರ್ವ ಸಿದ್ಧತೆಯ ಬಗ್ಗೆ ಮಾಹಿತಿ ನೀಡಿದರು.

ತಾಲೂಕಿನಲ್ಲಿ ಪ್ರಕೃತಿ ವಿಕೋಪ ಹಾಗೂ ಪ್ರವಾಹ



ಪರಿಸ್ಥಿತಿ ಸಮರ್ಥವಾಗಿ ಎದುರಿಸಲು ಎಲ್ಲಾ ಅಧಿಕಾರಿಗಳು ಸರ್ವ ಸನ್ನದ್ಧರಾಗಿರಬೇಕು. ಎಲ್ಲಾ ಪಂಚಾಯತ್ ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚಿಸ ಲಾಗಿದ್ದು ಅವರವರಿಗೆ ಜವಾಬ್ದಾರಿ ನೀಡಿರುವ ಇನ್‌ಸ್ಟಂಟ್ ಕಮಾಂಡರ್‌ಗಳ ಆದೇಶವನ್ನು ಪಾಲಿಸಿ ಕೆಲಸ ನಿರ್ವಹಿಸುವಂತೆ ಆದೇಶಿಸಿದರು.

**ವಿನಾ ಕಾರಣ ರಜೆ ಬೇಡ**

ಯಾವುದೇ ಅಧಿಕಾರಿಗಳು ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡದೆ ಯಾವುದೇ ಕಾರಣಕ್ಕೂ ವಿನಾ ಕಾರಣ ರಜೆ ಮಾಡಿಕೊಂಡು ಸ್ಥಳದಿಂದ ತೆರಳಬಾರದು. ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಮುಂಜಾಗ್ರತೆ ವಹಿಸಬೇಕು. ಫಾಗಿಂಗ್ ಮಾಡಿಸಬೇಕು. ಕುಡಿಯುವ ನೀರಿನ ಬಗ್ಗೆ ಸದಾ ಎಚ್ಚರ ವಿರಬೇಕು ಎಂದು ಮಂಜುಳಾ ಎಚ್ಚರಿಸಿದ್ದಾರೆ.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಪಾಯಕಾರಿ ಮರಗಳ ರೆಂಬೆಗಳನ್ನು ಕತ್ತರಿಸುವುದು, ಅಪಾಯಕಾರಿ ವಿದ್ಯುತ್ ಕಂಬಗಳು ಮತ್ತು ತಂತಿಗಳನ್ನು ದುರಸ್ತಿಪಡಿಸುವುದು, ಕುಡಿಯುವ ನೀರಿನ ಯೋಜನೆಗಾಗಿ ತೋಡಲಾಗಿರುವ ಹೊಂಡಗಳನ್ನು ಸಮರ್ಪಕವಾಗಿ ಮುಚ್ಚುವುದು, ಶಾಲಾ ಕಾಲೇಜುಗಳು, ಸರ್ಕಾರಿ ಇನ್ನಿತರ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದರೆ ಅದನ್ನು ಗುರುತಿಸಿ ಕ್ರಮ ಕೈಗೊಳ್ಳುವುದು, ಬರೆ ಕುಸಿತ, ನದಿ ತೋಡುಗಳು ತುಂಬಿ ಹರಿಯುವ ಪ್ರದೇಶದಲ್ಲಿ ಜಾಗ್ರತೆ ಕ್ರಮ ಕೈಗೊಳ್ಳುವುದು, ಸೇತುವೆಗಳ ಗುಣಮಟ್ಟ ಮತ್ತು ರಸ್ತೆಗಳ ಹೊಂಡ ಗುಂಡಿಗಳನ್ನು ಮುಚ್ಚುವುದು ಸಹಿತ ಇನ್ನಿತರ ಕಾರ್ಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ಅಲ್ಲದೆ, ಅಂತಹ ಸಮಸ್ಯೆಗಳು ಇದ್ದಲ್ಲಿ ಅವುಗಳ ವರದಿಯನ್ನು ಫೋಟೋ ಸಮೇತ ತಾಲೂಕು ಆಡಳಿತ ಅಧಿಕಾರಿಗಳ ಯಾವುದೇ ಘಟನೆ ಸಂಭವಿಸಿದ ತಕ್ಷಣ ಸ್ಪಂದಿಸಿ ಅಧಿಕಾರಿಗಳು ಸ್ಥಳಕ್ಕೆ ಧಾವಿಸಬೇಕು. ನಿಯಂತ್ರಣ ಕೊಠಡಿ ವ್ಯವಸ್ಥಿತವಾಗಿ ನಿರ್ವಹಿಸಬೇಕು. ನದಿ ಪಾತ್ರದಲ್ಲಿ ನಿರಂತರ ನಿಗಾ ಮತ್ತು ಪ್ರವಾಹ ಮುನ್ನೆಚ್ಚರಿಕೆ ವಹಿಸಬೇಕು. ಮಳೆಯ ಮಾಹಿತಿ ಪ್ರತಿದಿನ ಸಂಗ್ರಹಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ರಕ್ಷಣಾ ಸಾಮಗ್ರಿ ಬೋಟ್, ಹಗ್ಗ ಲೈಫ್ ಜಾಕೆಟ್ ಇತ್ಯಾದಿ ಸಾಮಗ್ರಿ ಅಗ್ನಿಶಾಮಕ ಇಲಾಖೆ ಸುಸಜ್ಜಿತವಾಗಿಟ್ಟುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ತಾ.ಪಂ. ಇಒ ರಾಜಣ್ಣ ಮಾತನಾಡಿ, ಪಂಚಾಯತ್ ಆಡಳಿತ ಅಧಿಕಾರಿಗಳು ಟಾಸ್ಕ್‌ಫೋರ್ಸ್‌ನ ಕಮಾಂಡರಾಗಿ ಕಾರ್ಯಾಚರಿಸಲಿದ್ದು ಪಂಚಾಯತ್ ಮಟ್ಟದಲ್ಲಿ ಸಭೆ ಕರೆದು ವರದಿ ನೀಡುವಂತೆ ಸೂಚಿಸಿದರು. ಉಪತಹಶೀಲ್ದಾರ್ ಚಂದ್ರಕಾಂತ್ ಸ್ವಾಗತಿಸಿದರು.

> ಪಂಚಾಯತ್ ಮಟ್ಟದಲ್ಲಿ ಎಷ್ಟು ಗ್ರಾಮಗಳಿವೆ, ಅಪಾಯಕಾರಿ ಸ್ಥಳಗಳ ಬಗ್ಗೆ ಮಾಹಿತಿ, ಗ್ರಾಮದ ಜನಸಂಖ್ಯೆ, ಗರ್ಭಿಣಿಗಳು ಮತ್ತು ವಿಶೇಷ ಚೇತನರ ಬಗ್ಗೆ, ನದಿಗಳು ಮತ್ತು ತೋಡುಗಳ ಸಂಖ್ಯೆ, ಆ ಪ್ರದೇಶದಲ್ಲಿ ಲಭ್ಯವಿರುವ ಲೈನ್ ಮ್ಯಾನ್‌ಗಳು ಆರೋಗ್ಯ ಅಧಿಕಾರಿಗಳು, ಆ್ಯಂಬುಲೆನ್ಸ್ ಚಾಲಕರು, ಮೆಸ್ಕಾಂ ಅಧಿಕಾರಿಗಳ ಮಾಹಿತಿ, ತುರ್ತು ಸಂದರ್ಭದಲ್ಲಿ ಬಳಸಲು ಕಾಳಜಿ ಕೇಂದ್ರಗಳ ಬಗ್ಗೆ ಮಾಹಿತಿ ಇವೆಲ್ಲವನ್ನೂ ಶೀಘ್ರದಲ್ಲಿ ಹಿರಿಯ ಅಧಿ ಕಾರಿಗಳಿಗೆ ನೀಡಬೇಕು.
>
> ● ರಾಜಣ್ಣ, ತಾ.ಪಂ. ಇಒ

## ಸುತ್ತ ಮುತ್ತ

### ಉದ್ಯೋಗಾವಕಾಶ: ಮೇ 30ರಂದು ಸಂದರ್ಶನ

**ಮಂಗಳೂರು:** ವಿ.ಆರ್.ಎನ್ ಇನ್ಫೋಟೆಕ್ ಕಂಪೆನಿಯ ವತಿಯಿಂದ ಮಂಗಳೂರಿನಲ್ಲಿ ಖಾಲಿ ಇರುವ ಕಸ್ಟಮರ್ ಸಪೋರ್ಟ್ ಎಕ್ಸಿಕ್ಯೂಟಿವ್ ಹಾಗೂ ಟೆಲಿಕಾಲರ್ ಹುದ್ದೆಗಳಿಗೆ ನೇರ ಸಂದರ್ಶನ ಮೇ 30 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ಸಂದರ್ಶನದಲ್ಲಿ ಯಾವುದೇ ಪದವಿಹೊಂದಿರುವ ಅಭ್ಯರ್ಥಿಗಳು ಸ್ವ-ವಿವರವುಳ್ಳ ಬಯೋಡೇಟಾ ದೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಮಲಯಾಳಂ/ಹಿಂದಿ/ಇಂಗ್ಲಿಷ್/ ತಮಿಳು ಭಾಷೆ ತಿಳಿದಿರಬೇಕು. ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು. ಇಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಉದ್ಯೋಗಾವಕಾಶ: ಜೂ.1 ರಂದು ಸಂದರ್ಶನ

**ಮಂಗಳೂರು:** ಬ್ಲಿಂಕಿಟ್ ಕಂಪೆನಿಯ ವತಿಯಿಂದ ಮಂಗಳೂರಿನಲ್ಲಿ ಖಾಲಿ ಇರುವ ಪಿಕ್ಕರ್ ಹಾಗೂ ಪ್ಯಾಕರ್ ಹುದ್ದೆಗೆ ನೇರ ಸಂದರ್ಶನವನ್ನು ಜೂನ್ 1 ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ನಗರದ ಫಳ್ನೀರ್ ರಸ್ತೆಯ ಮೋತಿ ಮಹಲ್ ಎದುರುಗಡೆ ಇರುವ ಬ್ಲಿಂಕಿಟ್‌ನಲ್ಲಿ ಆಯೋಜಿಸಲಾಗಿದೆ. ಸಂದರ್ಶನದಲ್ಲಿ ಪಿ.ಯು.ಸಿ ವಿದ್ಯಾರ್ಹತೆ ಹೊಂದಿರುವ 18 ರಿಂದ 30 ವರ್ಷದ ಒಳಗಿನ ಅಭ್ಯರ್ಥಿಗಳು ಸ್ವ-ವಿವರವುಳ್ಳ ಬಯೋಡೇಟಾ ದೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಕಂಪೆನಿ ವತಿಯಿಂದ ಪಿ.ಎಫ್, ಇ.ಎಸ್.ಐ, ಬೋನಸ್ ಸೌಲಭ್ಯ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ಇಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಿಪ್ಲೋಮಾ ಕೋರ್ಸು: ಅರ್ಜಿ ಆಹ್ವಾನ

**ಮಂಗಳೂರು:** 2026–2027ನೇ ಸಾಲಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೊಂದೇಲ್, ಮಂಗಳೂರು ಇಲ್ಲಿ ಡಿಪ್ಲೊಮಾ ಪ್ರವೇಶಕ್ಕೆ ಇಲೆಕ್ಟ್ರಾನಿಕ್ ಆ್ಯಂಡ್ ಕಮ್ಯೂನಿಕೇಶನ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಕಮರ್ಷಿಯಲ್ ಪ್ರಾಕ್ಟೀಸ್ (ಇಂಗ್ಲೀಷ್ ಮತ್ತು ಕನ್ನಡ) ಹಾಗೂ ಲೈಬ್ರರಿ ಅಂಡ್ ಇನ್‌ಫರ್ಮೇಶನ್ ಸೈನ್ಸ್ ಕೋರ್ಸ್‌ಗಳಿಗೆ ಸೇರಲು ಎಸ್ಸೆಸ್ಸೆಲ್ಸಿ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಡಿಪ್ಲೋಮಾ ಕೋರ್ಸು ಸೇರಲು ಇಚ್ಚಿಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಬೊಂದೇಲ್ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಸಂಪರ್ಕಿಸಿ, ನೇರವಾಗಿ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬಹುದು. ಅರ್ಜಿ ಪಡೆಯಲು ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಮೇ 30 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಕಚೇರಿಯ ದೂ.ಸಂ. 0824–2482334/ 9611320910 / 9844744845 ನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ: ಸರ್ವಾಧ್ಯಕ್ಷರಾಗಿ ಟಿ.ಎಸ್. ಗೋಪಾಲ್



**ಮಡಿಕೇರಿ:** ಪೊನ್ನಂಪೇಟೆ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ ಮತ್ತು ಕನ್ನಡ ಉಪನ್ಯಾಸಕ ಟಿ.ಎಸ್. ಗೋಪಾಲ್ ಅವರು ಆಯ್ಕೆಯಾಗಿದ್ದಾರೆ. ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ ಕೇಶವ ಕಾಮತ್ ಅವರ ನೇತೃತ್ವದಲ್ಲಿ ನಡೆದ ಪೊನ್ನಂಪೇಟೆ ತಾಲೂಕು ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ.

ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಟಿ.ಎಸ್ ಗೋಪಾಲ್ ಅವರು ಕನ್ನಡ ಬೋಧಕ ಹಾಗೂ ಹಿರಿಯ ಸಾಹಿತಿಗಳಾಗಿದ್ದು, ನೂರಕ್ಕೂ ಹೆಚ್ಚು ವೈವಿಧ್ಯಮಯ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಕಲಿಕೆ, ಸಂಸ್ಕೃತಿ, ಶಿಲ್ಪಕಲೆ, ಪರಿಸರ ಮತ್ತು ವನ್ಯ ಜೀವನ ಕುರಿತ ಸಂವಹನಕಾರರೂ ಆಗಿರುವ ಅವರು ಕನ್ನಡ ಭಾಷೆ ಹಾಗೂ ವ್ಯಾಕರಣ ಸುಲಭವಾಗಿ ಕಲಿಸುವ ಹಲವಾರು ಪುಸ್ತಕಗಳ ರಚಿಸಿದ್ದಾರೆ. ಪರಿಸರ ವನ್ಯಜೀವನ ಕುರಿತು ಕನ್ನಡದಲ್ಲಿ ಸಾಹಿತ್ಯ ಕೃಷಿ ಮಾಡಿರುವ ಇವರು ವನ್ಯಪ್ರೇಮಿ ಕೆ.ಎಂ.ಚಿಣ್ಣಪ್ಪ ಮತ್ತು ಡಾ. ಕೆ. ಉಲ್ಲಾಸ್ ಕಾರಂತರ ಅನುಭವ ಕಥನಗಳನ್ನು ನಿರೂಪಣೆ ಮಾಡಿದ್ದಾರೆ. ಇವರ ಕಾಡು ಕಲಿಸುವ ಪಾಠ ಕೃತಿಗೆ ವಿಜ್ಞಾನ ಸಾಹಿತ್ಯ ಪ್ರಕಾರದಲ್ಲಿ 2013ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ಲಭಿಸಿದೆ. ಸಂಸ್ಕೃತಿ, ಶಿಲ್ಪ ಕಲೆಗಳ ಕುರಿತು ಅಧ್ಯಯನ ಹಾಗೂ ಸಾಹಿತ್ಯ ರಚನೆ ಮಾಡಿದ್ದಾರೆ. ಪ್ರಮುಖ ಪತ್ರಿಕೆಗಳಲ್ಲಿ ಅಂಕಣ ಬರಹ ಹಾಗೂ ಪುಸ್ತಕಗಳ ರಚನೆ ಮಾಡಿದ್ದಾರೆ. ಆಕಾಶವಾಣಿಯಲ್ಲಿ 'ಶ್ರದ್ಧೆಯ ಶಿಲ್ಪ' ಮಾಲಿಕೆಯ ಮೂಲಕ ದೇಗುಲಗಳ ಪರಿಚಯ ಮಾಡಿದ್ದಾರೆ. ಬೋಧಿವೃಕ್ಷ ಪತ್ರಿಕೆಯಲ್ಲಿ ಪುರಾತನ ದೇಗುಲಗಳು ಅಂಕಣದಲ್ಲಿ ನೂರಕ್ಕೂ ಅಧಿಕ ಬರಹಗಳ ಪ್ರಕಟವಾಗಿದೆ. ಕರ್ನಾಟಕದ ಸಾಧಕರ ಸಾಧನ ಪರಿಚಯಿಸುವ 20ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ. ಹಿರಿಯ ಸಾಹಿತಿಗಳು, ಜ್ಞಾನಪೀಠ ಪುರಸ್ಕೃತರ ಜೀವನ ಚಿತ್ರಣ ನೀಡುವ ಕೃತಿಗಳನ್ನು ರಚಿಸಿದ್ದಾರೆ. ನವ ಕರ್ನಾಟಕ ಕನ್ನಡ ಕಲಿಕೆ ಮಾಲಿಕೆಯಲ್ಲಿ ಒಟ್ಟು 3 ಲಕ್ಷಕ್ಕೂ ಹೆಚ್ಚಿನ ಪ್ರತಿಗಳ ಮಾರಾಟವಾಗಿದೆ. ಇವರು ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲದ ಪ.ಪೂ. ಕಾಲೇಜಿನ ಕನ್ನಡ ಉಪನ್ಯಾಸಕರಾಗಿ, ಪ್ರಾಂಶುಪಾಲರಾಗಿ 20 ಕ್ಕೂ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರಿಗೆ ತಮ್ಮ ಸಾಹಿತ್ಯಕ್ಕಾಗಿ ಹತ್ತು ಹಲವು ಪ್ರಶಸ್ತಿಗಳು ಬಂದಿವೆ. ಪೊನ್ನಂಪೇಟೆ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಹುದಿಕೇರಿಯ ಜನತಾ ಹೈಸ್ಕೂಲ್ ಮೈದಾನದಲ್ಲಿ ಜೂ.1ರಂದು ನಡೆಯಲಿದೆ.

---

**ರೂ.13 ಕೋ.ವೆಚ್ಚದ ಕಾಮಗಾರಿ ಪೂರ್ಣ | ವಿಳಂಬ ನೀತಿ ವಿರುದ್ಧ ಜನರ ಆಕ್ರೋಶ**

# ಇನ್ನೂ ಕಾರ್ಯಾರಂಭಗೊಳ್ಳದ ಕ್ಯೊಲ 33ಕೆ.ವಿ. ವಿದ್ಯುತ್ ಉಪಕೇಂದ್ರ

■ ತುಳಸಿ ಕಡಬ



ಸಂಗಮ ವಿಶೇಷ

**ಕಡಬ:** ವಿದ್ಯುತ್ ಕಡಿತ, ಲೋ ವೋಲ್ಟೇಜ್‌ನಂತಹ ವಿದ್ಯುತ್ ಸಮಸ್ಯೆಗಳಿಂದ ಬೆಸತ್ತಿರುವ ಕ್ಯೊಲ, ರಾಮಕುಂಜ ಪ್ರದೇಶದ ವಿದ್ಯುತ್ ಬಳಕೆದಾರರಿಗೆ ವರದಾನವಾಗಲಿರುವ ಕ್ಯೊಲ 33 ಕೆ.ವಿ. ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾಮಗಾರಿ ಮುಗಿದಿದ್ದರೂ ಅದು ಕಾರ್ಯಾರಂಭ ಮಾಡದಿರುವುದು ಪರಿಸರದ ಜನರ ಅಸಮಾಧಾನಕ್ಕೆ ಕಾರಣವಾಗಿದೆ.

**ರೂ.13 ಕೋ. ಕಾಮಗಾರಿ**

ಕ್ಯೊಲದಲ್ಲಿ ಪಶು ಸಂಗೋಪನಾ ಕೇಂದ್ರದ ಅಂಚಿನಲ್ಲಿ ರಾಜ್ಯ ಹೆದ್ದಾರಿಯ ಪಕ್ಕದಲ್ಲಿಯೇ 1 ಎಕ್ರೆ ಜಾಗದಲ್ಲಿ 33 ಸಾವಿರ ವೋಲ್ಟೇಜ್ ಸಾಮರ್ಥ್ಯದ 33 ಕೆ.ವಿ. ವಿದ್ಯುತ್ ಉಪ ಕೇಂದ್ರ ನಿರ್ಮಾಣವಾಗಿದೆ. ರಾಜ್ಯ ಸರಕಾರದಿಂದ ಈ ಕಾಮಗಾರಿಗೆ ರೂ.13 ಕೋಟಿ ಮಂಜೂರಾಗಿದ್ದು 2025 ಡಿಸೆಂಬರ್ 6ರಂದು ಕಾಮಗಾರಿ ಆರಂಭಗೊಂಡಿತ್ತು. ಬೆಂಗಳೂರಿನ ಇಟಾ ಇಂಜಿನಿಯರ್ಸ್ ಸಂಸ್ಥೆ ಕಾಮಗಾರಿಯ ನಿರ್ವಹಣೆಯನ್ನು ವಹಿಸಿಕೊಂಡಿದ್ದು ನಿರ್ಮಾಣ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ.

**ವಿಳಂಬಕ್ಕೆ ಆಕ್ರೋಶ**

ಉಪ್ಪಿನಂಗಡಿ ಸಮೀಪದ ನೆಕ್ಕಿಲಾಡಿ ಗ್ರಾಮದ ಕರ್ವೇಲ್‌ನಲ್ಲಿ 110 ಕೆ.ವಿ. ಉಪ ಕೇಂದ್ರದಿಂದ 33 ಕೆ.ವಿ. ವಿದ್ಯುತ್ ಕ್ಯೊಲ ಉಪಕೇಂದ್ರಕ್ಕೆ ಸರಬರಾಜಾಗಿ ಅಲ್ಲಿಂದ ಕ್ಯೊಲ, ರಾಮಕುಂಜ, ಹಳೆನೇರೆಂಕಿ, ಹಿರೇಬಂಡಾಡಿ, ಬಜತ್ತೂರು ಹೀಗೆ 5 ಗ್ರಾಮ ವ್ಯಾಪ್ತಿಗೆ ಹಂಚಿಕೆಯಾಗಲಿದೆ. ಆದರಿಂದಾಗಿ ಕ್ಯೊಲ, ರಾಮಕುಂಜ ಭಾಗದ ಬಳಕೆದಾರರಿಗೆ ಗುಣಮಟ್ಟದ ವಿದ್ಯುತ್ ದೊರಕುವ ಆಶಾಭಾವನೆ ವ್ಯಕ್ತವಾಗಿತ್ತು. ಕಳೆದ ಡಿಸೆಂಬರ್ ತಿಂಗಳ ಒಳಗಾಗಿ ಕಾಮಗಾರಿ ಪೂರ್ಣಗೊಂಡು ಲೋಕಾರ್ಪಣೆಯಾಗಲಿದೆ ಎಂದು ಮೆಸ್ಕಾಂ ಇಲಾಖೆ ಭರವಸೆ ನೀಡಿತ್ತು. ಆದರೆ, ಈ ಕಾಮಗಾರಿ ಮುಗಿದರೂ ಕಾರ್ಯಾಚರಣೆಗೆ ವಿಳಂಬವಾಗುತ್ತಿರುವುದು ಜನರ ಟೀಕೆಗೆ ಕಾರಣವಾಗಿದೆ.

**ಲೈನ್ ಕಾಮಗಾರಿ ಶೀಘ್ರ ಆರಂಭಿಸಿ**

**ಆಲಂಕಾರಿನಲ್ಲಿ ಪ್ರಸಕ್ತ ಕಡಬ–ಕೊಕ್ಕಡ–ವಳಲ್ಯಾಡಿ ಸಂಪರ್ಕದ ಪ್ರತ್ಯೇಕ ಹೆಚ್ಚುವರಿ 33 ಕೆ.ವಿ. ಲಿಂಕ್ ಇದ್ದು ಆದರಿಂದ ಕ್ಯೊಲ ಉಪ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಲೈನ್ ಕಾಮಗಾರಿ ಶೀಘ್ರ ಆರಂಭಿಸಿ 3 ತಿಂಗಳ ಒಳಗಾಗಿ ಮುಗಿಸಿ ತಾತ್ಕಾಲಿಕ ನೆಲೆಯಲ್ಲಿ ಕ್ಯೊಲಕ್ಕೆ ಸಂಪರ್ಕ ಕಲ್ಪಿಸಬಹುದೆಂಬುವುದು ಬಳಕೆದಾರರ ಆಗ್ರಹವಾಗಿದೆ.**

**ಕ್ರಮ ಅಗತ್ಯ**

**ಕ್ಯೊಲ ಭಾಗಕ್ಕೆ ಪುತ್ತೂರಿನಿಂದ ಬೆಳ್ಳಿಪ್ಪಾಡಿ ಮೂಲಕ ಕಾಡು ಹಾದಿಯಾಗಿ ನದಿ ದಾಟಿ ವಿದ್ಯುತ್ ಸಂಪರ್ಕದ ಲೈನ್ ಬರುತ್ತಿದ್ದು ಮಳೆಗಾಲದಲ್ಲಿ ಮರದ ರೆಂಬೆ, ಕೊಂಬೆ ತುಂಡಾಗಿ ಬಿದ್ದು ವಿದ್ಯುತ್ ಸಂಪರ್ಕ ಕಡಿತವಾಗುತ್ತಿದೆ. ಬೇಸಿಗೆಯಲ್ಲಿ ಲೋ ವೋಲ್ಟೇಜ್ ಸಮಸ್ಯೆ. ಹೀಗಾಗಿ ನಾವು ವರ್ಷದ 365 ದಿವಸ ವಿದ್ಯುತ್ ಸಮಸ್ಯೆ ಎದುರಿಸುವಂತಾಗಿದೆ. ಆದುದರಿಂದ ಶೀಘ್ರ ಸಮಸ್ಯೆ ಬಗೆಹರಿಸಲು ಮೆಸ್ಕಾಂ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಿದೆ.**

● ಲಕ್ಷ್ಮೀನಾರಾಯಣ ರಾವ್ ಆತೂರು, ಅಧ್ಯಕ್ಷರು ನಾಗರಿಕ ಹಿತರಕ್ಷಣಾ ವೇದಿಕೆ, ಕ್ಯೊಲ

**ಸಂಪರ್ಕಕ್ಕೆ ಆಗ್ರಹ**

ಕರ್ವೇಲ್‌ನಲ್ಲಿ ರೂ.30 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ 110 ಕೆ.ವಿ. ಉಪ ಕೇಂದ್ರದ ಕಾಮಗಾರಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಆ ಕಾಮಗಾರಿ ಮುಗಿದು ಕೇಂದ್ರ ಕಾರ್ಯಾಚರಿಸಲು ಇನ್ನೂ 1 ವರ್ಷ ಕಾಲಾವಕಾಶ ಬೇಕಾಗುತ್ತದೆ ಎನ್ನುವ ಮಾಹಿತಿ ಇದ್ದು ಆದರಿಂದಾಗಿ ಕ್ಯೊಲ ಉಪಕೇಂದ್ರದ ಆರಂಭಕ್ಕೆ ಅಡಚಣೆಯಾಗಿದೆ.

**ಆಗಸ್ಟ್ ಒಳಗಡೆ ಸಂಪರ್ಕ**

**ಆಲಂಕಾರು ಜಂಕ್ಷನ್‌ನಲ್ಲಿ ಮೈನ್ ಲೈನ್ ಇದ್ದು, ಅಲ್ಲಿಂದ ಕ್ಯೊಲಕ್ಕೆ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ರೂ.2 ಕೋ. ಮಂಜೂರಾಗಿ ಟೆಂಡರು ಪ್ರಕ್ರಿಯೆ ಮುಗಿದು ಕೆಲಸ ಆರಂಭಿಸಲು ಕಾರ್ಕಳ ಮೂಲದ ಗುತ್ತಿಗೆದಾರ ರೋವರ್ ರಿಗೆ ಆದೇಶ ಆಗಿರುತ್ತದೆ. ಆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ ಆಗಸ್ಟ್ ತಿಂಗಳೊಳಗಾಗಿ ತಾತ್ಕಾಲಿಕ ನೆಲೆಯಲ್ಲಿ ಕ್ಯೊಲಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.**

● ರಾಮಚಂದ್ರ ಎ., ಕಾರ್ಯನಿರ್ವಾಹಕ ಇಂಜಿನಿಯರ್ ಮೆಸ್ಕಾಂ, ಪುತ್ತೂರು ಉಪ ವಿಭಾಗ

---

## 1.35 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕಿ ಮುರುಳ್ಯರಿಂದ ಚಾಲನೆ



**ಸುಳ್ಯ:** ಸುಳ್ಯ ತಾಲೂಕಿನ ವಿವಿಧ ಗ್ರಾಮಗಳಲ್ಲಿ 1.35ಕೋಟಿ ವೆಚ್ಚದಲ್ಲಿ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕಿ ಭಾಗೀರಥಿ ಮುರುಳ್ಯ ಮಂಗಳವಾರ ಗುದ್ದಲಿಪೂಜೆ ನೆರವೇರಿಸಿದರು.

ಸುಳ್ಯ ತಾಲೂಕು ಮಡಪ್ಪಾಡಿ ಗ್ರಾಮದ ಮಡಪ್ಪಾಡಿ ನಡುಬೇಟ್ಟು ರಸ್ತೆ ಅಭಿವೃದ್ಧಿ ರೂ.10 ಲಕ್ಷ, ಮಡಪ್ಪಾಡಿ ಶೀರಡ್ಕ ರಸ್ತೆ, ಅಭಿವೃದ್ಧಿ ರೂ.10 ಲಕ್ಷ, ಮಡಪ್ಪಾಡಿ ಜೇಡಿ ಗುಂಡಿ ರಸ್ತೆ ಅಭಿವೃದ್ಧಿ ರೂ.10 ಲಕ್ಷಸುಳ್ಯ ತಾಲೂಕು ಹರಿಹರ ಗ್ರಾಮದ ಅಬಂಣ ರಸ್ತೆ ರೂ.10 ಲಕ್ಷ, ಗುಂಡಿ ಹಿತ್ಲು ರಸ್ತೆ ರೂ.10 ಲಕ್ಷ, ಬಾಳುಗೋಡು ಗ್ರಾಮದ ಬಾಳುಗೋಡು ಬೈಲು ರಸ್ತೆ ರೂ.10 ಲಕ್ಷ, ಶಿವಾಲ ಕುಡುಮುಂಡೂರು ರಸ್ತೆ ರೂ.10 ಲಕ್ಷ, ಗುತ್ತಿಗಾರು ಗ್ರಾಮದ ಪೈಕ ಸೇತುವೆ ಬಳಿ ತಡೆಗೋಡೆ ರಚನೆ ರೂ.10 ಲಕ್ಷ, ದೇವಸ್ಯ–ಕೆಂಬಾರು ರಸ್ತೆ ಅಭಿವೃದ್ಧಿ ರೂ.10 ಲಕ್ಷ, ಕಡ್ತಲ್ ಕಜೆ–ಪೈಕ ರಸ್ತೆ ಅಭಿವೃದ್ಧಿ ರೂ.10 ಲಕ್ಷ, ಉಬರಡ್ಕ ಮಿತ್ತೂರು ಗ್ರಾಮದ ನರಸಿಂಹ ದೇವಸ್ಥಾನ– ಬೆಳರಂಪಾಡಿ ರಸ್ತೆ ರೂ.10 ಲಕ್ಷ, ಉಬರಡ್ಕ–ಮಿತ್ತೂರು–ಕಲ್ಲುಪಣೆ ರಸ್ತೆ ರೂ.15 ಲಕ್ಷ, ಬಲ್ನಾಡು ರಸ್ತೆ ಅಭಿವೃದ್ಧಿ ರೂ.10 ಲಕ್ಷ ಕಾಮಗಾರಿಗಳಿಗೆ ಮಂಗಳವಾರ ಗುದ್ದಲಿಪೂಜೆ ನಡೆಸಿದರು.

ಮಂಡಲಸಮಿತಿ ಅಧ್ಯಕ್ಷವೆಂಕಟ್ ವಳಲಂಬೆ, ಪ್ರಮುಖರಾದ ಹರೀಶ ಕಂಜಿಪಿಲಿ, ಬೆಳ್ಯಪ್ಪ ಗೌಡ ಕಡ್ತಲ್ ಕಜೆ, ವೆಂಕಟ್ ದಂಬೆಕೋಡಿ, ಕೇಶವ ಭಟ್ ಮುಳಿಯ, ಕೃಷ್ಣಯ್ಯ ಮೂಲೆತೋಟ, ಕಿಶೋರ್ ಪೈಕ, ಮಾಯಿಲಪ್ಪ ಕೊಂಬೆಟ್ಟು, ಚಂದ್ರಹಾಸ ಶಿವಾಲ, ವಿಜಯ್ ಅಬಂಣ, ಸೋಮ ಶೇಖರ್ ಕಟ್ಟೆಮನೆ, ಮಾಧವ ಚಾಂತಾಲ, ರಾಕೇಶ್ ಮೆಟ್ಟಿನಡ್ಕ ಹಿಮ್ಮತ್, ವಿನಯ್ ಮುಳುಗಾಡು, ಸಂದೀಪ್ ಉಬರಡ್ಕ ಶಾರದ ಎಸ್. ರೈ, ಶಿವರಾಮ ಕಲ್ತರು, ವಿಜಯ ಉಬರಡ್ಕ ಮತ್ತಿತರರಿದ್ದರು.

## ಮಂಜೇಶ್ವರ ತುಳುಸಿರಿ ಫಾರ್ಮರ್ಸ್ ಸಂಸ್ಥೆ: ಕೃಷಿ ತರಬೇತಿ ಕಾರ್ಯಕ್ರಮ



**ಮಂಜೇಶ್ವರ:** ತುಳುಸಿರಿ ಫಾರ್ಮರ್ಸ್ ಸಂಸ್ಥೆ ಮಂಜೇಶ್ವರ ಇದರ ಆಶ್ರಯದಲ್ಲಿ ಸಿಪಿಸಿಆರ್‌ಐ ಕಾಸರಗೋಡು ಇಲ್ಲಿನ ವಿಜ್ಞಾನಿಗಳಿಂದ ಬೇಕೂರು ಉಬರ್ಲೆ ದಾಮೋದರ ಅವರ ಮನೆಯಲ್ಲಿ ಕೃಷಿ ತರಬೇತಿ ಕಾರ್ಯಕ್ರಮ ನಡೆಯಿತು.

**ಗೊಬ್ಬರ ನಿರ್ವಹಣೆಯ ಮಾಹಿತಿ**

ವಿಜ್ಞಾನಿಗಳಾದ ಡಾ.ಬೆಂಜಮಿನ್ ಮ್ಯಾಥ್ಯೂ ಮತ್ತು ಡಾ.ಮೌನಿಕ ಅವರು ಕೃಷಿಗೆ ಸಮಯಕ್ಕೆ ಸರಿಯಾಗಿ ಗೊಬ್ಬರ ನಿರ್ವಹಣೆ, ರೋಗ ನಿರ್ವಹಣೆಗೆ ಔಷಧಿ ಸಿಂಪಡಣೆ ಅಲ್ಲದೆ ಇನ್ನಿತರ ಸಂಶಯಗಳಿಗೆ ಪರಿಹಾರೋಪಾಯ ನೀಡಿದರು. ಕೃಷಿ ಚಟುವಟಿಕೆಗಳನ್ನು ಯಾವ ರೀತಿಯಲ್ಲಿ ಲಾಭದಾಯಕವನ್ನಾಗಿಸಬಹುದು ಎಂಬುದನ್ನು ಸಮಗ್ರವಾದ ವಿವರಣೆ ಮೂಲಕ ತಿಳಿಸಿದರು. ಸಹ ನಿರ್ದೇಶಕ ಪ್ರಮೋದ ಕೆ.ವಿ. ಮತ್ತು ಅರ್ಜುನ್ ಸಂತೋಷ್ ಮಾತನಾಡಿದರು. ತುಳುಸಿರಿ ಸಂಸ್ಥೆಯ ಅಧ್ಯಕ್ಷ, ಕ್ಯಾಂಪ್ಕೋ ನಿರ್ದೇಶಕ ಸದಾನಂದ ಶೆಟ್ಟಿ ಕೊಮ್ಮಂಡ ಅಧ್ಯಕ್ಷತೆ ವಹಿಸಿದ್ದರು. ತುಳುಸಿರಿ ಸಂಸ್ಥೆ ಪ್ರೊಮೋಟರ್ ಎಂ.ಪಿ. ಬಾಲಕೃಷ್ಣ ಶೆಟ್ಟಿ ಮೀನಾರು ಸ್ವಾಗತಿಸಿ, ದಾಮೋದರ ಉಬರ್ಲೆ ವಂದಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕರುಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

**ಆಧುನಿಕ ತಂತ್ರಜ್ಞಾನಗಳ ಅಳವಡಿಸಿಕೊಳ್ಳಬೇಕು**

**ಕೋಟದಲ್ಲಿ ಮಣ್ಣು ಪರೀಕ್ಷೆ, ಅದರ ವಿವರ ಮತ್ತು ಮುಂದೆ ನೀಡಲಾಗುವ ಗೊಬ್ಬರ, ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಹೆಚ್ಚೆಚ್ಚು ಅಳವಡಿಸಿಕೊಳ್ಳಬೇಕು ಸಹ ನಿರ್ದೇಶಕ ಪ್ರಮೋದ ಕೆ.ವಿ., ಅರ್ಜುನ್ ಸಂತೋಷ್ ಮಾಹಿತಿ ನೀಡಿದರು.**

## ಮರವಂತೆ ಆಸರೆ ಚಾರಿಟೇಬಲ್ ಟ್ರಸ್ಟ್: 'ಆಸರೆ ಟ್ರೋಫಿ -2026'



**ಕುಂದಾಪುರ:** ಆಸರೆ ಚಾರಿಟೇಬಲ್ ಟ್ರಸ್ಟ್ ಮರವಂತೆ ಇದರ ವತಿಯಿಂದ ದಶಯಾನದ ಅಂಗವಾಗಿ 2ನೇ ವರ್ಷದ 16 ವರ್ಷ ಒಳಗಿನ ವಯೋಮಿತಿ ಚಿಣ್ಣರ ಕ್ರಿಕೆಟ್ ಪಂದ್ಯಾಟ 'ಆಸರೆ ಟ್ರೋಫಿ -2026' ಮರವಂತೆ ನೇತಾಜಿ ಸುಭಾಷ್‌ಚಂದ್ರ ಬೋಸ್ ಸರಕಾರಿ ಪ್ರೌಢಶಾಲೆಯ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಿತು.

ಕುಂದಾಪುರ –ಬೈಂದೂರು ತಾಲೂಕು ವ್ಯಾಪ್ತಿಯ ಸುಮಾರು 15 ತಂಡಗಳು ಭಾಗವಹಿಸಿದ್ದವು.

ಕಾರ್ಯಕ್ರಮದ ಪೋಷಕರಾದ ಮರವಂತೆಯ ಉದ್ಯಮಿ ಸಂತೋಷ್ ಶೆಟ್ಟಿ ಹಾಗೂ ಕಂಬದಕೋಣೆ ಮಾತ್ರಶ್ರೀ ಜ್ಯುವೆಲರ್ಸ್ ಮಾಲಕ ಅಶೋಕ್ ಆಚಾರ್ಯ ಮರವಂತೆ ಅವರು ವಿಜೇತ ತಂಡಗಳಿಗೆ ಪ್ರಶಸ್ತಿಗಳನ್ನು ವಿತರಿಸಿ ಶುಭ ಹಾರೈಸಿದರು. ಸಂಗಮ ಯುವಕ ಮಂಡಲದ ಅಧ್ಯಕ್ಷರು ಶರತ್ ಮರವಂತೆ ಶುಭ ಕೋರಿದರು. ಆಸರೆ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿಗಳು ಉಪಸ್ಥಿತರಿದ್ದರು.

**ವಿಜೇತರು**

**ಪಂದ್ಯಾಟದಲ್ಲಿ ಕಾಳಿಕಾಂಬಾ ನ್ಯೂ ಫ್ರೆಂಡ್ ಕೋಣಿ ತಂಡ ಪ್ರಥಮ ಸ್ಥಾನ ಪಡೆದರೆ, ಕೆ.ಎಫ್.ಕೆ. ಕೋಣಿ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ಕಾಳಿಕಾಂಬಾ ನ್ಯೂ ಫ್ರೆಂಡ್ಸ್‌ನ ದರ್ಶನ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೆ, ಉತ್ತಮ ಬ್ಯಾಟ್ಸಮನ್ ಆಗಿ ಕೆಎಫ್‌ಕೆ ತಂಡದ ರಾಹುಲ್, ಉತ್ತಮ ಬೌಲರ್ ಆಗಿ ಕಾಳಿಕಾಂಬಾ ತಂಡದ ಚಿರಾಗ್ ಮೂಡಿಬಂದರು.**

## ತಲಪಾಡಿ ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಅಕ್ಷರಭ್ಯಾಸ, ಓರಿಯೆಂಟೇಶನ್ ಕಾರ್ಯಕ್ರಮ



**ಮಂಗಳೂರು:** ತಲಪಾಡಿಯ ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಎಲ್‌ಕೆಜಿ ವಿದ್ಯಾರ್ಥಿಗಳಿಗಾಗಿ 'ಅಕ್ಷರಾಭ್ಯಾಸ' ಹಾಗೂ ಪೋಷಕರಿಗಾಗಿ 'ಓರಿಯೆಂಟೇಶನ್ ಕಾರ್ಯಕ್ರಮ'ವನ್ನು ಅತ್ಯಂತ ಸಡಗರದಿಂದ ಆಯೋಜಿಸಲಾಯಿತು.

**ದೀಪ ಪ್ರಜ್ವಲನೆ**

ಕಾರ್ಯಕ್ರಮದ ಆರಂಭದಲ್ಲಿ ಗಣಹೋಮ ಮಾಡಿ, ದೀಪ ಬೆಳಗಿ, ಪ್ರಾರ್ಥನೆ ಮಾಡುವುದರ ಮೂಲಕ ಪುಟ್ಟ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು. ಮಕ್ಕಳು ತಮ್ಮ ಪೋಷಕರ ಮಡಿಲಲ್ಲಿ ಕುಳಿತು, ಅಕ್ಷರಗಳನ್ನು ಬರೆದು ತಮ್ಮ ವಿದ್ಯಾಭ್ಯಾಸದ ಮೊದಲ ಹೆಜ್ಜೆಯನ್ನು ಇಟ್ಟರು. ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಪ್ರೋತ್ಸಾಹ ನೀಡಿದರು.

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಪೋಷಕರ ಸಹಕಾರದ ಮಹತ್ವವನ್ನು ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಂ.ಬಿ. ಪುರಾಣಿಕ್ ವಿವರಿಸಿದರು. ಕಾರ್ಯಕ್ರಮದಲ್ಲಿ ಶಾರದಾ ಸಮೂಹ ಸಂಸ್ಥೆಗಳ ನಿರ್ದೇಶಕರಾದ ಸಮೀರ್ ಪುರಾಣಿಕ್, ಆಡಳಿತ ವ್ಯವಸ್ಥಾಪಕರಾದ ಪ್ರಫುಲ್, ಅಡ್ಮಿಶನ್ ಮ್ಯಾನೇಜರ್ ವಿವೇಕ್ ತಂತ್ರಿ, ಪ್ರಾಂಶುಪಾಲರಾದ ಸುಷ್ಮಾ ದಿನಕರ್, ವಿನಾಯಕ್ ಬಿಜಿ, ಮೋಹನ್ ದಾಸ್, ಮುಖ್ಯೋಪಾಧ್ಯಾಯನಿ ಶಾಮಲಾ ಭಟ್, ಶಿಕ್ಷಕ ಶಿಕ್ಷಕೇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಮಾಹಿತಿ**

**ಓರಿಯೆಂಟೇಶನ್ ಕಾರ್ಯಕ್ರಮದಲ್ಲಿ ಶಾಲೆಯ ನಿಯಮಗಳು, ಪಠ್ಯಕ್ರಮ, ಮಕ್ಕಳ ಆರೈಕೆ, ಶಿಸ್ತು, ಶಾಲೆಯ ವಿವಿಧ ಚಟುವಟಿಕೆಗಳ ಕುರಿತು ಪೋಷಕರಿಗೆ ಮಾಹಿತಿ ನೀಡಲಾಯಿತು.**

## ಸಾಧಕ ವಿದ್ಯಾರ್ಥಿನಿಗೆ ಅಭಿನಂದನೆ, ಬಡ ವಿದ್ಯಾರ್ಥಿಗಳಿಗೆ ಬ್ಯಾಗ್, ಛತ್ರಿ ವಿತರಣೆ



**ಬಂಟ್ವಾಳ:** ತಾಲೂಕಿನ ಅಮುಂಜೆ ಗ್ರಾಮದ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರೀ ಯುವಕ ಸಂಘ ಬಾರಿಂಜೆ ದಾಸಿಮಾರ್ ವತಿಯಿಂದ ಅಭಿನಂದನೆ, ಅಮುಂಜೆ ಅನುದಾನಿತ ಹಿ.ಪ್ರಾ. ಶಾಲೆ, ಸ್ಥಳೀಯ ಆಯ್ದ ಬಡ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ ವಿತರಣೆ ಅಮುಂಜೆ ಶ್ರೀ ವಿನಾಯಕ ಜನಾರ್ದನ ಸದಾಶಿವ ದೇವಳ ವಠಾರದಲ್ಲಿ ಭಾನುವಾರ ನಡೆಯಿತು.

ಅಧ್ಯಕ್ಷತೆಯನ್ನು ಸಂಘದ ಸ್ಥಾಪಕಾಧ್ಯಕ್ಷ ಚಂದ್ರಹಾಸ ಶೆಟ್ಟಿಗಾರ್ ಬೆಂಜನಪದವು ವಹಿಸಿದ್ದರು. ಶ್ರೀ ವಿನಾಯಕ ಜನಾರ್ದನ ಸದಾಶಿವ ದೇವಳ ಆಡಳಿತ ಮೊಕ್ತೇಸರ ಡಿ.ಎ.ನಾಗೇಶ್ ರಾವ್, ಅಮುಂಜೆ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಪೊಳಲಿ ರಾಧಾಕೃಷ್ಣ ತಂತ್ರಿ, ಉದ್ಯಮಿ ಉಮೇಶ್ ಸಾಲ್ಯಾನ್ ಬೆಂಜನಪದವು, ನಾಟಿ ವೈದ್ಯ ಈಶ್ವರ ಪೂಜಾರಿ ಕಲಾಯಿ, ನಿತೇಶ್ ಎಂ. ಭಂಡಾರಿ ಬಾರಿಂಜೆ ಹೊಸಮನೆ, ಕಾರ್ತಿಕ್ ಬಲ್ಲಾಳ್ ಅಮುಂಜೆ ಗುತ್ತು, ನವೀನ್ ಪೂಜಾರಿ ಬಾರಿಂಜೆ, ದಿವ್ಯರಾಜ್ ಮುಡಾಯಿಕೋಡಿ, ಪೊಳಲಿ ಕೃಷಿ ಪತ್ತಿನ ಸಹಕಾರ ಸಂಘ ನಿರ್ದೇಶಕ ಡಿ.ಎ.ಅಬೂಬಕ್ಕರ್ ಅಮುಂಜೆ, ಅ.ಹಿ.ಪ್ರಾ. ಶಾಲೆ ಅಮುಂಜೆ ಸಹಶಿಕ್ಷಕ ಬಾಲಕೃಷ್ಣ ಕೆ. ಶ್ರೀಕ್ಷೇತ್ರ ಧ. ಗ್ರಾ.ಯೋ. ಪೊಳಲಿ ವಲಯ ಮೇಲ್ವಿಚಾರಕಿ ರೂಪಾ ಜೆ. ರೈ, ವೀರ ಯೋಧ ಯಾಧವ ಫ್ರೆಂಡ್ಸ್ ಕ್ಲಬ್ ಅಧ್ಯಕ್ಷ ಉದಯ ಅಮುಂಜೆ ಅತಿಥಿಗಳಾಗಿದ್ದರು.

ಇದೇ ವೇಳೆ ಶೇ. 96.80 ಅಂಕ ಗಳಿಸಿದ ಗ್ರಾಮದ ಸಾಧಕ ಪ್ರತಿಭೆ ಕುಮಾರಿ ಸ್ತುತಿ ಕೆ.ಕುಲಾಲ್ ಅವರನ್ನು ಸನ್ಮಾನಿಸಲಾಯಿತು. ಸಿಂಚನಾ ಅವರು ಅಭಿನಂದನಾ ಪತ್ರವನ್ನು ವಾಚಿಸಿದರು. ದ್ವಿತೀಯ ಪಿ.ಯು.ಸಿ.ಯಲ್ಲಿ ಶೇ. 94 ಅಂಕ ಗಳಿಸಿದ ಕೃತಿ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಎಲ್‌ಕೆಜಿಯಿಂದ 10ರವರೆಗಿನ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್, ಛತ್ರಿ ವಿತರಿಸಲಾಯಿತು.

ಜನಾರ್ದನ ಆರ್. ಬಾರಿಂಜೆ ಸ್ವಾಗತಿಸಿ, ಜನಾರ್ದನ ಬಾರಿಂಜೆ ವಂದಿಸಿದರು, ಸಂಘಟಕ ಬಿ.. ಜನಾರ್ದನ ಅಮುಂಜೆ ನಿರೂಪಿಸಿದರು.

## ಮೂಲ್ಕಿ ವಿಜಯ ಕಾಲೇಜಿನಲ್ಲಿ ಸಾಧಕ ಮಕ್ಕಳಿಗೆ ಗೌರವಾರ್ಪಣೆ ಕಾರ್ಯಕ್ರಮ



**ಮುಲ್ಕಿ:** ವಿಜಯ ಕಾಲೇಜಿನ 1990–93 ನೇ ಸಾಲಿನ ವಿಜ್ಞಾನ ವಿಭಾಗದ ಪದವಿ ಹಳೆ ವಿದ್ಯಾರ್ಥಿಗಳಿಂದ ಪ್ರಸಕ್ತ ಸಾಲಿನ ಅಂತಿಮ ವರ್ಷದ ಪ್ರತಿಭಾನ್ವಿತ ಹಾಗೂ ಸಾಧಕ ವಿದ್ಯಾರ್ಥಿಗಳಿಗೆ ಗೌರವಾರ್ಪಣೆ ಕಾರ್ಯಕ್ರಮ ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ನಡೆಯಿತು. ಕಾಲೇಜಿನ ಹಳೆ ವಿದ್ಯಾರ್ಥಿ ಶರತ್ ಇವರು ಓಮನ್ ದೇಶದಿಂದ ಆನ್‌ಲೈನ್ ಮೂಲಕ ಭಾಗವಹಿಸಿ, ಕಾರ್ಯಕ್ರಮದ ನೇತೃತ್ವ ವಹಿಸಿಕೊಂಡು ಮಾತನಾಡಿ ಜೀವನದಲ್ಲಿ ಮಾನವೀಯ ಮೌಲ್ಯತೆಗಳನ್ನು ಬೆಳೆಸಿಕೊಂಡು ಸಾಧಕರಾಗಿ ಎಂದರು

ಸುರತ್ಕಲ್ ಎನ್‌ಐಟಿಕೆ ಇಂಜಿನಿಯರಿಂಗ್ ವಿಭಾಗದ ಡಾ. ಶ್ರೀಕಾಂತ್ ರಾವ್ ಮುಖ್ಯ ಅತಿಥಿಗಳಾಗಿ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಸಿಸಿದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪ್ರೊ. ವೆಂಕಟೇಶ್ ಭಟ್ ಮಾತನಾಡಿದರು

ಅತಿಥಿಗಳಾಗಿ ನಿವೃತ್ತ ಪ್ರಾಂಶುಪಾಲ ಪ್ರೊ. ಸ್ಯಾಮ್ ಮಾಬೆನ್, ಕಾಲೇಜಿನ ಹಳೆ ವಿದ್ಯಾರ್ಥಿಗಳಾದ ನಳಿನಿ ಚೆರುಕುರಿ, ಶ್ರೀಲತಾ, ಪ.ಪೂ.ಕಾಲೇಜಿನ ಪ್ರಾಂಶುಪಾಲ ಪ್ರೊ. ಅರುಣ್‌ಕುಮಾರ್, ಚೈತ್ರ ಶ್ರೀಕಾಂತ್ ರಾವ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಡಾ. ಶೈಲಜಾ ವೈ.ವಿ., ಐಕ್ಯುಎಸಿ ಸಂಯೋಜಕ ಪ್ರೊ. ದೇವದಾಸ್ ವೇದಿಕೆಯಲ್ಲಿದ್ದರು.

**ಗೌರವ**

**ಕಾರ್ಯಕ್ರಮದಲ್ಲಿ ವಿಶೇಷ ಸಾಧನೆಗೈದ 17 ವಿದ್ಯಾರ್ಥಿಗಳನ್ನು ಗೌರವಿಸಲಾಯಿತು, ಕಾಲೇಜಿನ ವಾರ್ಷಿಕ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು.**

---

**ಹೊಸದಿಗಂತ ವರದಿಗೆ ಸ್ಪಂದನೆ | ಸಹಿ ಸಂಗ್ರಹಿಸಿ ಮನವಿ ಸಲ್ಲಿಸಿದ್ದ ವರ್ತಕರು–ನಾಗರಿಕರ ಬೇಡಿಕೆ ಈಡೇರಿಕೆ**

# ಸುಗಮ ಸಂಚಾರಕ್ಕೆ ತೊಡಕಾಗಿದ್ದ ಬಿ.ಸಿ.ರೋಡ್ ಬಸ್ ತಂಗುದಾಣ ಕೊನೆಗೂ ತೆರವು!



**ಬಂಟ್ವಾಳ:** ರಾ.ಹೆ.ಯ ಬಿ.ಸಿ.ರೋಡಿನ ಖಾಸಗಿ ಬಸ್ ನಿಲ್ದಾಣ ಸಮೀಪದ ವಾಣಿಜ್ಯ ಸಂಕೀರ್ಣ ಮುಂಭಾಗ ದಲ್ಲಿ ಜಾಹೀರಾತು ಫಲಕವನ್ನೊಳಗೊಂಡ ಬಸ್ ತಂಗುದಾಣ ತೆರವುಗೊಳಿಸುವ ನಿಟ್ಟಿನಲ್ಲಿ ಬಂಟ್ವಾಳ ಪುರಸಭೆ ಈ ಹಿಂದೆ ಕೈಗೊಂಡ ನಿರ್ಣಯ ಕೊನೆಗೂ ಜಾರಿಗೆ ತಂದಿದ್ದು, ಪರಿಣಾಮ ಹೆದ್ದಾರಿಯಲ್ಲಿ ಸುಗಮ ವಾಹನ ಸಂಚಾರಕ್ಕೆ ಕೊಂಚ ನಿರಾಳವಾ ಏದಂತಾಗಿದೆ.

ಈ ಬಸ್ ತಂಗುದಾಣದ ತೆರವುಗೊಳಿಸುವ ನಿಟ್ಟಿನಲ್ಲಿ ಪುರಸಭೆ ಕೈಗೊಂಡ ನಿರ್ಣಯ ಜಾರಿಯಾಗದ ಹಿನ್ನಲೆ ಮೇ 15 ರಂದು 'ಹೊಸದಿಗಂತ'ದ ಸಂಗಮಮ ಮೊದಲ ಪುಟದಲ್ಲಿ ವಿಶೇಷ ಸಚಿತ್ರ ವರದಿ ಪ್ರಕಟಿಸಿ ಗಮನ ಸೆಳೆದಿರುವುದನ್ನು ಇಲ್ಲಿ ನೆನಪಿಸಬಹುದಾಗಿದೆ.

ಚುನಾಯಿತ ಪ್ರತಿನಿಧಿಗಳ ಆಡಳಿತ ವಿದ್ದಾಗಲೇ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿ ಖಾಸಗಿ ಬಸ್ ನಿಲ್ದಾಣದ ಪಕ್ಕದ ವಾಣಿಜ್ಯ ಸಂಕೀರ್ಣದ ಮುಂಭಾಗ ಕಳೆದ ಐದಾರು ವರ್ಷಗಳ ಹಿಂದೆ ಕೇವಲ ಜಾಹಿರಾತು ಅಳವಡಿಸಲು ರಾತ್ರೋರಾತ್ರಿ ನಿರ್ಮಾಗೊಂಡ ಬಸ್ ತಂಗುದಾಣ ತೆರವುಗೊಳಿಸಲು ಪುರಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಚುನಾಯಿತ ಪ್ರತಿನಿಧಿಗಳ ಆಡಳಿತವು ಮುಕ್ತಾಯಗೊಂಡು 6 ತಿಂಗಳು ಕಳೆದು ಆಡಳಿತಾಧಿಕಾರಿಯವರು ನಿಯುಕ್ತರಾದರೂ ಬಸ್ ತಂಗುದಾಣದ ತೆರವು ಕಾರ್ಯಾಚರಣೆಯಾಗದ ಬಗ್ಗೆ ಹೊಸದಿಗಂತ ವಿಶೇಷ ವರದಿಯಲ್ಲಿ ಗಮನಸೆಳೆದಿತ್ತು.

ಈ ಬಸ್ ತಂಗುದಾಣದ ಎದುರೇ ಅನಧಿಕೃತ ರಿಕ್ಷಾ ಪಾರ್ಕಿಂಗ್ ಇದ್ದು ಅಪಘಾತಗಳಿಗೂ ಕಾರಣವಾಗುತ್ತಿದೆ. ಈ ನಡುವೆ ಖಾಸಗಿ ಬಸ್ ನಿಲ್ದಾಣದಿಂದ ಹೊರಡುವ ಪಾಣೆಮಂಗಳೂರು, ಮೂಡುಬಿದ್ರೆ, ಮೆಲ್ಕಾರ್, ಮುಡಿಪು, ಸಾಲೆತ್ತೂರು ಕಡೆಗೆ ಸಂಚರಿಸುವ ಖಾಸಗಿ ಬಸ್ ನಿಲ್ದಾಣದಿಂದ ಹೊರಟು ಈ ತಂಗುದಾಣ ಮತ್ತೆ ಇಲ್ಲೇ ಕೆಲಹೊತ್ತು ಠಿಕಾಣಿ ಹೂಡುತ್ತಿದ್ದು, ಇತರೆ ವಾಹನಗಳ ಸುಗಮ ಸಂಚಾರಕ್ಕೆ ತೊಡಕಾಗುತಿತ್ತು.

ಈ ಬಸ್ ಶೆಲ್ಟರ್ ಮತ್ತು ರಿಕ್ಷಾ ಪಾರ್ಕಿಂಗ್ ತೆರವುಗೊಳಿಸಬೇಕು ಎಂದು ಆಗ್ರಹಿಸಿ ಕೆಲ ದಿನಗಳ ಹಿಂದೆ ಸಂಕೀರ್ಣದ ವರ್ತಕರು– ಸಾರ್ವಜನಿಕರು ಸಹಿ ಸಂಗ್ರಹಿಸಿ ಪುರಸಭೆ–ಸಂಚಾರಿ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ ಹಿನ್ನಲೆ ಮುಖ್ಯಾಧಿಕಾರಿ, ಸಂಚಾರಿ ಠಾಣೆ ಎಸ್ಸೈ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದು ಇದೀಗ ಬಸ್ ತಂಗುದಾಣದ ತೆರವು ನಡೆಸಲಾಗಿದೆ.

**ಕ್ರಮ ಕೈಗೊಳ್ಳುತ್ತಿಲ್ಲ**

**ಈಗ ಇಲ್ಲಿ ಮುಂದಕ್ಕೆ ಮುಖ ಮಾಡಿ ನಿಲುಗಡೆಯಾಗುವ ಆಟೋರಿಕ್ಷಾಗಳು ಹೆದ್ದಾರಿಗೆ ಮುಖ ಮಾಡಿ ನಿಲುಗಡೆಯಾಗುತ್ತಿದೆ. ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಹತ್ತಿಸಿದ ಬಳಿಕ ಹೊರಡುವ ಖಾಸಗಿ ಬಸ್ ಮತ್ತೆ ವಾಣಿಜ್ಯ ಸಂಕೀರ್ಣ ಎದುರು ನಿಂತು ಪ್ರಯಾಣಿಕರನ್ನು ಹತ್ತಿಸುವ ಕಾರ್ಯ ಈಗಲು ಮುಂದುವರಿದಿದೆ. ಈ ವಿಚಾರದಲ್ಲಿ ಟ್ರಾಫಿಕ್ ಪೊಲೀಸರು ಯಾವುದೇ ಕ್ರಮಕೈಗೊಳ್ಳದಿರುವುದು ಮಾತ್ರ ಸಾರ್ವಜನಿಕರ ಅನುಮಾನಗಳಿಗೆ ಕಾರಣವಾಗಿದೆ.**

ಸುತ್ತ ಮುತ್ತ

## ಮೇ 29ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಉಡುಪಿ:** ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಉಡುಪಿ ನಗರ ಪ್ರದೇಶಗಳಾದ ಬಡಗುಪೇಟೆ, ಸಿಟಿ ಬಸ್ ಸ್ಟ್ಯಾಂಡ್ ಏರಿಯಾ, ಕಡಿಯಾಳಿ, ಎಂ.ಜಿ.ಎಂ ಎದುರು, ಸಿಟಿ ಸೆಂಟರ್ ಮಾಲ್ಕಿನ್ನಿ ಮುಲ್ಕಿ, ಕೊಳಂಬೆ, ಮಿಷನ್ ಕಂಪೌಂಡ್, ಕೋರ್ಟ್ ರಸ್ತೆ, ಕೋರ್ಟ್ ಬ್ಯಾಕ್ ರಸ್ತೆ, ಅಜ್ಜರಕಾಡು, ಪಿ.ಡಬ್ಲ್ಯೂಡಿ ಕಚೇರಿ, ಒಳಕಾಡು, ಕೋರ್ಟ್ ರಸ್ತೆ, ಕೆ.ಎಂ.ಮಾರ್ಗ, ಮಾರುತಿ ವೀಥಿಕ, ಸರ್ವಿಸ್ ಬಸ್ ನಿಲ್ದಾಣ, ಸಿಟಿ ಆಸ್ಪತ್ರೆ ಸುತ್ತಮುತ್ತ, ಸರಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ಶಾರದ ಕಲ್ಯಾಣ ಮಂಟಪ, ಬೈಲಕೆರೆ, ವಾದಿರಾಜ ಕ್ರಾಸ್ ರೋಡ್, ಕೃಷ್ಣಮಠ ಪಾರ್ಕಿಂಗ್ ಏರಿಯಾ, ಶಾರದಾಂಬ ರಸ್ತೆ, ಕುಂಜಿಬೆಟ್ಟು, ಕಡಿಯಾಳಿ, ಗುಂಡಿಬೈಲು, ಕಲ್ಸಂಕ, ವೇಗಾಸ್ ಲೇಔಟ್, ಬೈಲೂರು, ಚಂದು ಮೈದಾನ,ಶಾಂತಿನಗರ, ಎಂ.ಎಂ ದೇವಸ್ಥಾನದ ಸುತ್ತಮುತ್ತ, ಪಣಿಯಾಡಿ, ಚಿಟ್ಪಾಡಿ, ಇಂದಿರಾನಗರ, ಹನುಮಾನ್ ಗ್ಯಾರೇಜ್, ಮಾಂಡವಿ ಟೈಮ್ ಸ್ಕೇರ್ ಮಾಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 29ರಂದು ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ಹನುಮಂತನಗರ ವ್ಯಾಪ್ತಿ**

ಹನುಮಂತನಗರ, ಅಡ್ಕದಕಟ್ಟೆ, ಅಡ್ಕದಕಟ್ಟೆ ಮಾರ್ಗ, ಕೊಡಪಾನಬೆಟ್ಟು, ಕಲ್ಲಕಂಡ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 29ರಂದು ಬೆಳಿಗ್ಗೆ 9.30ರಿಂದ ಸಂಜೆ 5:30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ತಿಳಿಸಿದೆ.

## ಮೇ 30ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಉಡುಪಿ:** ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಶಿರ್ವ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಎಲ್ಲಾ ಫೀಡರ್ ಮಾರ್ಗದ ಪಾಂಗಳ, ಮೂಡಬೆಟ್ಟು, ಬಂಟಕಲ್ಲು, ಶಂಕರಪುರ, ಕುಂಜಾರುಗಿರಿ, ಸಾಲ್ಮರ, ಕುರ್ಕಾಲು, ಪಾಜೈ, ಇನ್ನಂಜೆ, ಪಡುಬೆಳ್ಳೆ, ಶಿರ್ವ, ಮಟ್ಟಾರು, ಪದವು ಪಂಜಿಮಾರು, ಪಿಲಾರುಖಾನ, ಪೆರ್ನಾಲು, ಕುತ್ಯಾರು, ಪುಂಚಲಕಾಡು, ಕಳತ್ತೂರು, ಚಂದ್ರನಗರ, ಕಲ್ಯ ಪದವು, ಅಬ್ಬೇಟ್ಟು, ಹೇರೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 30ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

## ಮೇ 29ರಂದು ಮೂಡುಬಿದಿರೆಯಲ್ಲಿ ರೈತ ಪ್ರತಿಭಟನಾ ಜಾಥಾ

**ಮೂಡುಬಿದಿರೆ:** ಸರ್ಕಾರದ ರೈತ ವಿರೋಧಿ ನೀತಿಗಳಿಂದಾಗಿ ಕೃಷಿಕರ ಬದುಕು ದುಸ್ತರಗೊಂಡಿದ್ದು ಹೈನುಗಾರಿಕೆ ಉತ್ಪನ್ನಗಳಿಗೆ ಮೌಲ್ಯಾಧಾರಿತ ಬೆಲೆ ನಿಗದಿ ಹಾಗೂ ಅಕ್ರಮ-ಸಕ್ರಮ ಕಾಯ್ದೆಯ ಸರಳೀಕರಣಕ್ಕೆ ಆಗ್ರಹಿಸಿ ಮೇ 29ರಂದು ಮೂಡುಬಿದಿರೆಯಲ್ಲಿ ಬೃಹತ್ ರೈತ ಪ್ರತಿಭಟನಾ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ಕಿಸಾನ್ ಸಂಘದ ಪ್ರಮುಖರು ಮುಖಂಡ ಜಾಯ್ಲಸ್ ಡಿಸೋಜ ತಿಳಿಸಿದರು. ಪ್ರಸ್ತುತ ಸರ್ಕಾರ ನೀಡುತ್ತಿರುವ 42 ರೂಪಾಯಿ ಬೆಲೆಯು ಕನಿಷ್ಠ ವೆಚ್ಚವನ್ನೂ ಭರಿಸುತ್ತಿಲ್ಲ, ಆದ್ದರಿಂದ ಪ್ರತಿ ಲೀಟರ್ ಹಾಲಿಗೆ 65 ರೂಪಾಯಿ ಮೂಲ ಬೆಲೆ ನಿಗದಿಪಡಿಸಬೇಕು ಹಾಗೂ 15 ರೂಪಾಯಿ ಪ್ರೋತ್ಸಾಹಧನ ನೀಡಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರ ಅಕ್ರಮ-ಸಕ್ರಮ ಕಾಯ್ದೆಗೆ ತಂದಿರುವ ತಿದ್ದುಪಡಿಗಳಿಂದಾಗಿ ಕೃಷಿಕರಿಗೆ ಭೂಮಿ ಮಂಜೂರು ಮಾಡಿಸಿಕೊಳ್ಳಲು ತೊಂದರೆಯಾಗಿದೆ. ಪುರಸಭಾ ವ್ಯಾಪ್ತಿಯ ಗಡಿಯಿಂದ ಟವರ್ ಲೋಕೇಶನ್ ಪ್ರಕಾರ 3 ಕಿಲೋಮೀಟರ್ ವ್ಯಾಪ್ತಿಯೊಳಗೆ ಯಾವುದೇ ಆಸ್ತಿ ಮಂಜೂರು ಮಾಡಬಾರದು ಎಂಬ ನಿಯಮದಿಂದಾಗಿ ರೈತರಿಗೆ ಅನ್ಯಾಯವಾಗುತ್ತಿದೆ. ಪ್ರಕೃತಿ ವಿಕೋಪದಿಂದ ಕೃಷಿ ನಾಶವಾದಾಗ ಪ್ರತಿ ಅಡಿಕೆ ಮರಕ್ಕೆ 20,000 ರೂಪಾಯಿ ಹಾಗೂ ತೆಂಗು ಮತ್ತು ರಬ್ಬರ್ ಗಿಡಕ್ಕೆ 25,000 ರೂಪಾಯಿ ವೈಜ್ಞಾನಿಕ ಪರಿಹಾರ ನೀಡಲು ಸರ್ಕಾರ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದರು. ಪ್ರತಿ ಲೀಟರ್ ಹಾಲಿಗೆ 65 ರೂಪಾಯಿ ದರ ನಿಗದಿ ಹಾಗೂ ಕುಮ್ಕಿ ಆಸ್ತಿಗೆ ಹಕ್ಕು ಪತ್ರ ನೀಡಬೇಕು ಎಂದು ಒತ್ತಾಯಿಸಿ ಮೇ 29ರಂದು ಬೆಳಿಗ್ಗೆ 10:00 ಗಂಟೆಗೆ ಮೂಡುಬಿದಿರೆ ಶಾಮಿಲಿ ಎನ್‌ಕ್ಲೇವ್ ಹಾಗೂ ಶಾಸಕರ ಕಚೇರಿ ಬಳಿಯಿಂದ ತಹಶೀಲ್ದಾರ್ ಕಚೇರಿಯವರೆಗೆ ಬೃಹತ್ ಪ್ರತಿಭಟನಾ ಜಾಥಾ ನಡೆಯಲಿದೆ. ವಕೀಲ, ರೈತ ಹೋರಾಟಗಾರ ಶಾಂತಿ ಪ್ರಸಾದ್ ಹೆಗ್ಡೆ ಪ್ರತಿಭಟನಾ ನಿರತರನ್ನು ಉದ್ದೇಶಿಸಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಪ್ರಮುಖರಾದ ಪ್ರವೀಣ್ ಭಂಡಾರಿ ಮತ್ತು ವಲೇರಿಯನ್ ಕುಟಿನ್ಹೊ ವಸಂತ್ ಭಟ್ ಪಯ್ಯಾಡಿ, ರಾಧಾಕೃಷ್ಣ ಶೆಟ್ಟಿ, ವೆಂಕಟೇಶ್ ಕೋಟ್ಯಾನ್, ನೇಮಿರಾಜ್ ಇದ್ದರು.

### ಅರೆಭಾಷೆ ಗ್ರಾಮೋತ್ಸವ ಕಾರ್ಯಕ್ರಮದ ಮೆರವಣಿಗೆಗೆ ಚಾಲನೆ | ಪುಸ್ತಕಗಳ ಲೋಕಾರ್ಪಣೆ

# ಅರೆಭಾಷೆ ಬೆಳವಣಿಗೆಗೆ ಮತ್ತಷ್ಟು ಶ್ರಮಿಸಬೇಕಿದೆ: ಮಂಥರ್

**ಮಡಿಕೇರಿ:** ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಕಾರ್ಯಕ್ರಮಗಳು ಗ್ರಾಮ ಮಟ್ಟಕ್ಕೂ ತಲುಪುತ್ತಿದ್ದು, ಅರೆಭಾಷೆ ಕಲಿಕೆ ಮತ್ತು ಅಭಿವೃದ್ಧಿಗೆ ಮತ್ತಷ್ಟು ಶ್ರಮಿಸುವಂತಾಗಬೇಕು ಎಂದು ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರು ಸಲಹೆ ಮಾಡಿದರು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮತ್ತು ಮರಗೋಡು ಗೌಡ ಸಮಾಜದ ಸಂಯುಕ್ತಾಶ್ರಯದಲ್ಲಿ ಮರಗೋಡು ಗೌಡ ಸಮಾಜದ ಆವರಣದಲ್ಲಿ ಅರೆಭಾಷೆ ಗ್ರಾಮೋತ್ಸವ ಕಾರ್ಯಕ್ರಮದ ಮೆರವಣಿಗೆಗೆ ಚಾಲನೆ ನೀಡಿ, ಕನ್ನಡದ ಉಪ ಭಾಷೆಯಾದ ಅರೆಭಾಷೆಯನ್ನು ಉಳಿಸಿ ಬೆಳೆಸಿದಲ್ಲಿ ಕನ್ನಡ ಭಾಷೆಯನ್ನೂ ಸಹ ಮತ್ತಷ್ಟು ಔನ್ನತ್ಯಕ್ಕೆ ಕೊಂಡೊಯ್ಯಲು ಸಾಧ್ಯ. ಆ ನಿಟ್ಟಿನಲ್ಲಿ ಅರೆಭಾಷೆಯನ್ನು ಮಕ್ಕಳು ಮತ್ತು ಯುವಜನರಿಗೆ ಕಲಿಸುವಂತಾಗಬೇಕು ಎಂದರು.

ಅರೆಭಾಷೆಯು ಒಂದು ವಿಶಿಷ್ಟ ಭಾಷೆಯಾಗಿದ್ದು, ಕನ್ನಡ ಭಾಷೆಗೆ ಹತ್ತಿರವಾಗಿದೆ. ಆ ದಿಸೆಯಲ್ಲಿ ಅರೆಭಾಷೆ ಸಂಸ್ಕೃತಿ, ಸಾಹಿತ್ಯ, ಪರಂಪರೆ, ಆಚಾರ-ವಿಚಾರಗಳನ್ನು ಉಳಿಸಿಕೊಂಡು ಹೋಗಬೇಕೆಂದು ಅವರು ಸಲಹೆ ಮಾಡಿದರು.




ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಮಾತನಾಡಿ, ಅಕಾಡೆಮಿಯ ಕಾರ್ಯವನ್ನು ತಿಳಿಸಿದರು.

ಅಕಾಡೆಮಿ ಮಾಜಿ ಅಧ್ಯಕ್ಷ ಕೊಲ್ಯದ ಗಿರೀಶ್ ಅವರು ಮಾತನಾಡಿ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಆರಂಭದಿಂದ ಇಲ್ಲಿಯವರೆಗೂ ಉತ್ತಮ ಕೆಲಸ ಮಾಡಿಕೊಂಡು ಬರಲಾಗುತ್ತಿದೆ ಎಂದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಮಡಿಕೇರಿ ತಾಲೂಕು ಘಟಕದ ಅಧ್ಯಕ್ಷ ಮಂದ್ರೀರ ಮೋಹನ್‌ದಾಸ್ ಅವರು ಮಾತನಾಡಿ ಅರೆಭಾಷೆ ಸಂಸ್ಕೃತಿ, ಸಾಹಿತ್ಯ, ಕಲೆಗಳನ್ನು ಉಳಿಸುವಲ್ಲಿ ಗ್ರಾಮೋತ್ಸವ ಮತ್ತು ಗಡಿನಾಡ ಉತ್ಸವ ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಮರಗೋಡು ಗೌಡ ಸಮಾಜದ ಅಧ್ಯಕ್ಷ ಕಟ್ಟೆಮನೆ ಜನಾರ್ಧನ ಅವರು ಮಾತನಾಡಿ ಅರೆಭಾಷೆಯನ್ನು ಉಳಿಸಿ ಮತ್ತಷ್ಟು ಬೆಳೆಸಿಕೊಂಡು ಹೋಗಬೇಕು. ಭಾಷೆ ಉಳಿದರೆ ಸಮಾಜ ಉಳಿಯಲು ಸಾಧ್ಯ. ಹಾಗೆಯೇ ಅನಾದಿಕಾಲದಿಂದಲೂ ಉಳಿಸಿಕೊಂಡು ಬಂದಿರುವ ಅರೆಭಾಷೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು ಎಂದರು.

ಮೈಸೂರಿನ ಗೌಡ ವಿದ್ಯಾಸಂಘದ ಮಾಜಿ ಅಧ್ಯಕ್ಷ ತೋಟಂಬೈಲು ಮನೋಹರ್ ಅವರು ಮಾತನಾಡಿ, ಅರೆಭಾಷೆಯನ್ನು ಹೆಚ್ಚು ಹೆಚ್ಚು ಬಳಸುವ ಮೂಲಕ ಪ್ರೋತ್ಸಾಹಿಸಬೇಕು. ಅರೆಭಾಷೆಯನ್ನು ಹಳ್ಳಿಯಿಂದ ಡೆಲ್ಲಿಯವರೆಗೆ ಕೊಂಡೊಯ್ದು ಅರೆಭಾಷೆ ಮಹತ್ವ ತಿಳಿಸುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮ ಸಂಚಾಲಕ ಸಂದೀಪ್ ಪೂಳಕಂಡ ಮಾತನಾಡಿದರು. ಸೂರ್ತಲೆ ವಾರಿಜಾ ಅವರು ಬರೆದಿರುವ 'ಅರ್ಸು ಮತ್ತು ಪ್ರಧಾನಿನ ಕಥೆ' ಪುಸ್ತಕವನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯಿಂದ ಹೊರತಂದಿರುವ ಹಲವು ಪುಸ್ತಕಗಳನ್ನು ಮರಗೋಡು ಗ್ರಾ.ಪಂ.ಗೆ ನೀಡಲಾಯಿತು. ಮರಗೋಡು ವ್ಯಾಪ್ತಿಯ ಪಟ್ಟೆದಾರರನ್ನು ಇದೇ ಸಂದರ್ಭ ಗೌರವಿಸಲಾಯಿತು.

ಮರಗೋಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕಾಂಗೀರ ಸತೀಶ್, ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಬೆಂಗಳೂರಿನ ಅಧ್ಯಕ್ಷ ಪಾಣತ್ತಲೆ ಪಳಂಗಪ್ಪ, ಮರಗೋಡು ಗೌಡ ಸಮಾಜದ ಮಾಜಿ ಅಧ್ಯಕ್ಷ ದೇವಜನ ನಾಣಯ್ಯ, ನಿವೃತ್ತ ಪೊಲೀಸ್ ಅಧಿಕಾರಿ ಅಪ್ಪಯಂಡ್ರ ದೇವಯ್ಯ, ಅಕಾಡೆಮಿ ಸದಸ್ಯರಾದ ಸೂದನ ಈರಪ್ಪ, ಪಿ.ಎಸ್. ಕಾರ್ಯಪ್ಪ, ತೇಜಕುಮಾರ ಕುಡೆಕಲ್, ಕುದ್ಪಾಜೆ ಪ್ರಕಾಶ್, ಚಂದ್ರಾವತಿ ಬಡ್ಡಡ್ಕ, ಲತಾ ಪ್ರಕಾಶ್ ಕುದ್ಪಾಜೆ, ವಿನೋದ್ ಮೂಡಗದ್ದೆ, ಮರಗೋಡು ಗ್ರಾ.ಪಂ.ಪಿಡಿಒ ಶೋಭಾರಾಣಿ ಇತರರು ಇದ್ದರು. ವಿನೋದ್ ಮೂಡಗದ್ದೆ ಸ್ವಾಗತಿಸಿ, ಡೀನಾ ಪ್ರಭಾ ಮತ್ತು ತೇಜಾ ಪ್ರವೀಣ್ ನಿರೂಪಿಸಿದರು. ರೋಹಿಣಿ ಚೆರಿಯಮನೆ ಮತ್ತು ತಂಡದವರು ಪ್ರಾರ್ಥಿಸಿದರು.

### ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸ್ಟಾರ್ಟ್‌ಅಪ್ ಸಂಸ್ಥೆ

## ಕಾರ್ಪೊರೇಟ್ ಜಗತ್ತಿನ ಅನುಭವಕ್ಕೆ ಪೂರಕ

**ಪುತ್ತೂರು:** ವಿದ್ಯಾರ್ಥಿಗಳಿಗೆ ಕಾರ್ಪೊರೇಟ್ ಜಗತ್ತಿನ ವಾತಾವರಣವನ್ನು ನಿರ್ಮಿಸಿ ಅವರಿಗೆ ಅದರ ಆಗುಹೋಗುಗಳ ಬಗ್ಗೆ ಮಾಹಿತಿ ನೀಡುವ ಸಲುವಾಗಿ ಕಾಲೇಜಿನಲ್ಲಿ ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ಅವಕಾಶವನ್ನು ನೀಡಲಾಗುತ್ತಿದೆ. ಇಂದು 3ನೇ ಕಂಪೆನಿಯ ಉದ್ಘಾಟನೆಯಾಗಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಕಂಪೆನಿಗೆ ಪೂರ್ಣ ಪ್ರಯೋಜನವಾಗಲಿ ಎಂದು ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಆಡಳಿತ ಮಂಡಳಿಯ ನಿರ್ದೇಶಕ ರವಿಕೃಷ್ಣ ಡಿ. ಕಲ್ಲಾಜೆ ಹೇಳಿದರು.

ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಸ್ಟಾರ್ಟ್‌ಅಪ್‌ಗಳ ಆವರಣ ಲಾಂಚ್‌ಪಸ್‌ನಲ್ಲಿ ಡಿಜಿ ಕಾಂಪ್ ಟೆಕ್ನಾಲಜೀಸ್ ಎನ್ನುವ ಸ್ಟಾರ್ಟ್‌ಅಪ್ ಸಂಸ್ಥೆಯನ್ನು ಅವರು ಉದ್ಘಾಟಿಸಿ ಮಾತನಾಡಿದರು.

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್ ಸಮಾಜಕ್ಕೆ ಒಳಿತಾಗುವ, ರೈತ ಸಮುದಾಯಕ್ಕೆ ಸಹಕಾರಿಯಾಗುವ ಯೋಜನೆಗಳ ಮೂಲಕ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದು, ಇದೂ ಅದರ ಒಂದು ಅಂಗ ಎಂದು ತಿಳಿಸಿದರು.

**ಚೀನಾದಿಂದ ಆಮದು ತಗ್ಗಿಸಬೇಕಿದೆ**

ಸಂಸ್ಥೆಯ ಸ್ಥಾಪಕ ಮತ್ತು ಪಾಲುದಾರ ಕಾರ್ತಿಕ್ ಭಟ್ ಮಾತನಾಡಿ, ಮಕ್ಕಳ ಆಟಿಕೆಯಿಂದ ಹಿಡಿದು ದೊಡ್ಡ ದೊಡ್ಡ ಉಪಕರಣಗಳೂ ಕೂಡಾ ಚೀನಾದಿಂದ ಆಮದಾಗುತ್ತಿವೆ. ಇದನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಅನೇಕ ಕಾರ್ಯಗಳು ನಡೆಯುತ್ತಲೇ ಇವೆ. ಆಮದಾಗುತ್ತಿರುವ ಕೆಲವು ಉಪಕರಣಗಳನ್ನು ಇಲ್ಲಿಯೇ ತಯಾರಿಸಬಹುದು ಎನ್ನುವ ದೃಷ್ಟಿಕೋನದಿಂದ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇಲ್ಲಿ ಇಲೆಕ್ಟ್ರಾನಿಕ್ಸ್ ಸಂಬಂಧಿಸಿದ ಪಿಸಿಬಿಗಳ ತಯಾರಿ, ಮೈಕ್ರೋಪ್ರೋಸೆಸರ್‌ಗಳ ಜೋಡಣೆ ಮುಂತಾದ ಕಾರ್ಯವನ್ನು ನಡೆಸಲಾಗುತ್ತದೆ. ಮುಂದಿನ ದಿನಗಳಲ್ಲಿ ಪವರ್ ಇಲೆಕ್ಟ್ರಾನಿಕ್ಸ್ ಸಾಧನಗಳನ್ನು ತಯಾರಿಸುವ ಯೋಚನೆಯೂ ಇದೆ ಎಂದರು.




> ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್ ಸಮಾಜಕ್ಕೆ ಒಳಿತಾಗುವ, ರೈತ ಸಮುದಾಯಕ್ಕೆ ಸಹಕಾರಿಯಾಗುವ ಯೋಜನೆಗಳ ಮೂಲಕ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದು, ಇದೂ ಅದರ ಒಂದು ಅಂಗ.
>
> ● ರವಿಕೃಷ್ಣ ಡಿ. ಕಲ್ಲಾಜೆ

ಕಾಲೇಜ್ ಆಡಳಿತ ಮಂಡಳಿಯ ಅಧ್ಯಕ್ಷ ವಿಶ್ವಾಸ್ ಶೆಣೈ, ಸಂಚಾಲಕ ಸುಬ್ರಮಣ್ಯ ಭಟ್ ಟಿ.ಎಸ್., ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ., ವಿಭಾಗ ಮುಖ್ಯಸ್ಥ ಸಂಸ್ಥೆಯ ಇನ್ನೋವರ್ ಪಾಲುದಾರ ಪದ್ಮಸ್ವರೂಪ್ ಮುರ್ಗಜೆ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಇಲೆಕ್ಟ್ರಾನಿಕ್ಸ್ ಪ್ರಯೋಗಾಲಯ ಮೇಲ್ವಿಚಾರಕ ಹರಿಪ್ರಸಾದ್ ಡಿ. ನಿರ್ವಹಿಸಿದರು.

### ಪುತ್ತೂರು ಶಾಸಕ ಅಶೋಕ್ ರೈ ಆರೋಪಕ್ಕೆ ಮಠಂದೂರು ತಿರುಗೇಟು

## ಲಂಚ ಪಡೆದಿದ್ದರೆ ಹಾಲಿ ಶಾಸಕರು ಸಾಬೀತುಪಡಿಸಲಿ

**ಪುತ್ತೂರು:** ಮಾಜಿ ಶಾಸಕರು ಅಕ್ರಮ-ಸಕ್ರಮ ಅರ್ಜಿ ವಿಲೇವಾರಿಗೆ ರೂ.2 ಲಕ್ಷ ಮೊತ್ತವನ್ನು 45 ಜನರಿಂದ ಲಂಚವಾಗಿ ಪಡೆದಿದ್ದಾರೆ ಎಂದು ಹಾಲಿ ಶಾಸಕರು ಹೇಳಿಕೆ ನೀಡಿದ್ದಾರೆ. ಆ ಮಾಜಿ ಶಾಸಕರು ಯಾರೆಂದು ಮತ್ತು ಆ 45 ಜನ ಯಾರು ಎಂದು ಖಾತ್ರಿಪಡಿಸಲಿ. ಅವರನ್ನು ಒಳ್ಳೆಯ ಜಾಗಕ್ಕೆ ಕರೆದುಕೊಂಡು ಬಂದು ನಾವು ಯಾರಿಗೆ, ಯಾವಾಗ, ಹೇಗೆ ರೂ.2 ಲಕ್ಷ ಕೊಟ್ಟಿದ್ದೇವೆ ಎಂದು ಸಾಬೀತುಪಡಿಸಿದರೆ ಖಂಡಿತಾ ಶಾಸಕರ ದಿಟ್ಟತನವನ್ನು ಬಿಜೆಪಿ ಗೌರವಿಸುತ್ತದೆ ಎಂದು ಮಾಜಿ ಶಾಸಕ ಸಂಜೀವ ಮಠಂದೂರು ಸವಾಲು ಹಾಕಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಣ ಪಡೆದಿರುವುದು ಯಾವ ಮಾಜಿ ಶಾಸಕ, ಯಾರು 45 ಜನರು ಎಂದು ಹೇಳಲಿ. ಒಂದು ವೇಳೆ ನನ್ನನ್ನೇ ಹೇಳಿರುವುದಾದರೆ ಆ 45 ಜನರನ್ನು ಒಂದು ಕಡೆ ಕರೆದುಕೊಂಡು ಬರಲಿ. ನಾನು ಸಹಿತ ಮೂವರು ಆಗಿನ ಅಕ್ರಮ-ಸಕ್ರಮ ಸಮಿತಿ ಸದಸ್ಯರಿದ್ದೇವೆ. ನಾವು ಬರುತ್ತೇವೆ. ಅವರ ಗೌರವಕ್ಕೆ ತೊಂದರೆ ಆಗುವುದಾದರೆ ಯಾವುದಾದರು ಒಂದು ಕಡೆ ಕೊಠಡಿಗೆ ಕರೆದುಕೊಂಡು ಬರಲಿ ಎಂದು ಸವಾಲು ಹಾಕಿದರು.



> ಪುತ್ತೂರಿನಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರವಿದೆ ಎಂದು ಪುತ್ತೂರಿನ ಕಾಂಗ್ರೆಸ್ ಮಹಾನಾಯಕನೇ ಸುದ್ದಿಗೋಷ್ಠಿ ಮೂಲಕ ಹೇಳಿದ್ದಾರೆ. ಲೋಕಾಯುಕ್ತದಲ್ಲಿ ಆರೋಪಿತನಾದ ತಹಶೀಲ್ದಾರ್ ಅವರನ್ನು ಮರಳಿ ಇಲ್ಲಿಗೆ ಕರೆಸಿರುವುದೇ ಭ್ರಷ್ಟಾಚಾರಕ್ಕೆ ಸಾಕ್ಷಿ. ಭ್ರಷ್ಟಾಚಾರ ಶಾಸಕರ ಕಚೇರಿಯಿಂದಲೇ ಆರಂಭಗೊಳ್ಳುತ್ತದೆ.
>
> ● ಸಂಜೀವ ಮಠಂದೂರು

**ಯಾವ 32 ಸಾವಿರ ಅರ್ಜಿ**

ಶಾಸಕ ಅಶೋಕ್ ಕುಮಾರ್ ರೈ ಎಲ್ಲಾ ಕಡೆಗಳಲ್ಲಿ ತಾನು ಶಾಸಕನಾಗಿ ಬರುವ ಸಮಯದಲ್ಲಿ 32 ಸಾವಿರ ಅಕ್ರಮ-ಸಕ್ರಮ ಅರ್ಜಿಗಳನ್ನು ಹಿಂದಿನ ಶಾಸಕರು ಪೆಂಡಿಂಗ್ ಇಟ್ಟಿದ್ದರು, ನಾನು ಬಂದ ಬಳಿಕ ಎಲ್ಲಾ ಅರ್ಜಿಗಳ ವಿಲೇವಾರಿ ಮಾಡಿದ್ದೇನೆ ಎನ್ನುತ್ತಿದ್ದಾರೆ. ಆದರೆ, 2018ರಲ್ಲಿ 94 ಸಿ ಹಾಗೂ ಸಿಸಿ ಅರ್ಜಿ ಅಖೈರು ಆಗಿತ್ತು. ಪುತ್ತೂರು ತಾಲೂಕಿನಲ್ಲಿ 2018ರವರೆಗೆ ಸಲ್ಲಿಕೆಯಾದ ಅರ್ಜಿಗಳ ಒಟ್ಟು ಸಂಖ್ಯೆ 94 ಸಿ ಯಲ್ಲಿ 16210, 94ಸಿಸಿ ಯಲ್ಲಿ 3100. ಅದರಲ್ಲಿ 94 ಸಿಯ 8411 ಅರ್ಜಿಗಳು, 94ಸಿಸಿ ಯ 1534 ಅರ್ಜಿಗಳು ಇತ್ಯರ್ಥವಾಗಿವೆ. 94 ಸಿಯ 6959, 94 ಸಿಸಿ ಯ 1406 ಅರ್ಜಿಗಳು ತಿರಸ್ಕೃತಗೊಂಡಿವೆ. 2025 ಜೂ.9ಕ್ಕೆ 840 ಅರ್ಜಿಗಳು ಮಾತ್ರ ಬಾಕಿ ಇವೆ. ಸ್ವೀಕೃತಗೊಂಡ 8411 ಅರ್ಜಿಗಳಲ್ಲಿ 4440 ಅರ್ಜಿಗಳನ್ನು ಬಿಜೆಪಿ ಶಾಸಕರು ವಿಲೇವಾರಿ ಮಾಡಿದ್ದು, ಉಳಿದ 4 ಸಾವಿರದಷ್ಟು ಅರ್ಜಿಗಳನ್ನು ಮಾಜಿ ಶಾಸಕಿ ಶಕುಂತಲಾ ಶೆಟ್ಟಿ ಮತ್ತು ಅಶೋಕ್ ಕುಮಾರ್ ರೈ ವಿಲೇವಾರಿ ಮಾಡಿರಬಹುದು. ಶಾಸಕರು ಹೇಳುವ 32 ಸಾವಿರ ಅರ್ಜಿ ಯಾವುದು ಅನ್ನುವುದನ್ನು ಶಾಸಕರು ಜನರ ಮುಂದೆ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಪುಣಚಲ್ಲಿ ದಲಿತ ಸಮುದಾಯಕ್ಕೆ ಜಾಗದ ಹಕ್ಕುಪತ್ರ ನೀಡಲು ಸತಾಯಿಸುತ್ತಿರುವುದು ದಲಿತ ಸಮುದಾಯದವರನ್ನು ಕಾಂಗ್ರೆಸ್ ನೋಡುವ ಬಗೆಯನ್ನು ತೋರಿಸುತ್ತದೆ. ಎಂದು ಮಠಂದೂರು ಹೇಳಿದರು.

ಬಿಜೆಪಿ ಗ್ರಾಮಾಂತರ ಮಂಡಲದ ಮಾಜಿ ಅಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ, ಮಾಜಿ ಪ್ರಧಾನ ಕಾರ್ಯದರ್ಶಿ ನಿತೀಶ್ ಕುಮಾರ್ ಶಾಂತಿವನ, ಅಕ್ರಮ ಸಕ್ರಮ ಸಮಿತಿ ಮಾಜಿ ಸದಸ್ಯ ಪರಮೇಶ್ವರಿ ಭಟ್, ಪುರುಷೋತ್ತಮ ಮುಂಗ್ಲಿಮನೆ ಉಪಸ್ಥಿತರಿದ್ದರು.

## ಮಕ್ಕಳಿಗೆ ಲೇಖನ ಪುಸ್ತಕ, ಆರ್ಥಿಕ ಸಹಾಯಧನ ವಿತರಣಾ ಕಾರ್ಯಕ್ರಮ



**ಬಂಟ್ವಾಳ:** ಜಿಲ್ಲಾ ರಾಜ್ಯೋತ್ಸವ ಪುರಸ್ಕೃತ ಸಾಮಾಜಿಕ ಸೇವಾ ಸಂಸ್ಥೆ ಬಂಟ್ವಾಳ ತಾಲೂಕಿನ ಪಿಲಾತಬೆಟ್ಟು ಗ್ರಾಮದ ನಯನಾಡು ಗೆಳೆಯರ ಬಳಗ ಸೇವಾ ಸಂಸ್ಥೆ ಟ್ರಸ್ಟ್ ವತಿಯಿಂದ ಸುಮಾರು ಒಂದೂವರೆ ಲಕ್ಷ ರೂ. ವೆಚ್ಚದ ಉಚಿತ ಲೇಖನ ಪುಸ್ತಕ ಹಾಗೂ ವಿದ್ಯಾರ್ಥಿ ಸಹಾಯಧನ ವಿತರಣೆ ಕಾರ್ಯಕ್ರಮ ಪುಂಜಾಲಕಟ್ಟೆ ಬಂಗ್ಲೆ ಂಐದಾನದಲ್ಲಿ ನಡೆಯಿತು.

ಪುಂಜಾಲಕಟ್ಟೆ ಪೊಲೀಸ್ ಠಾಣೆಯ ಉಪನಿರೀಕ್ಷಕ ರಾಜೇಶ್ ಕೆ.ವಿ. ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳು ಮತ್ತು ಪೋಷಕರು ಅಕ್ಷರ ಸಾಕ್ಷರತೆ ಜತೆಗೆ ಮೊಬೈಲ್ ಸಾಕ್ಷರತೆ ಪಡೆದುಕೊಳ್ಳಬೇಕು. ಇಂದಿನ ದಿನಗಳಲ್ಲಿ ಮೊಬೈಲ್ ಬಳಕೆ ಅನಿವಾರ್ಯವಾಗಿದರೂ, ಇದರ ದುರುಪಯೋಗದ ಬಗ್ಗೆ ಅರಿವು ಹೊಂದಿರಬೇಕು. ಮಕ್ಕಳು ಮೊಬೈಲ್ ಎಂಬ ಭ್ರಮಲೋಕದಿಂದ ಹೊರ ಬರಬೇಕು ಎಂದರು.

ಗೆಳೆಯರ ಬಳಗದ ನಿರ್ದೇಶಕರಾದ ವಿನ್ಸೆಂಟ್ ಗಲ್ಬಾವೊ ಕಾರ್ಯಕ್ರಮ ಉದ್ಘಾಟಿಸಿದರು. ಗೆಳೆಯರ ಬಳಗದ ಗೌರವಾಧ್ಯಕ್ಷ ನೆಲ್ವಿಸ್ಟರ್ ಪಿಂಟೊ, ನಯನಾಡು ಸರಕಾರಿ ಪ್ರೌಢಶಾಲೆಯ ಕನ್ನಡ ಅಧ್ಯಾಪಕ ಜಯಪ್ರಕಾಶ್ ಕೆ.ಎಸ್. ಗೆಳೆಯರ ಬಳಗದ ಅಧ್ಯಕ್ಷ ಡೋನ್ ಪ್ರವೀಣ್ ಕ್ರಾಸ್ತಾ ಮಾತನಾಡಿದರು. ಪ್ರಗತಿಪರ ಕೃಷಿಕ ಜಾಯ್ಸ್ ಪಿಂಟೊ, ಗ್ರಾ.ಪಂ.ಮಾಜಿ ಸದಸ್ಯೆ ಪುಷ್ಪಲತಾ ಸಾಲ್ಯಾನ್, ಮೇಬುಲ್ ಫೆರ್ನಾಂಡಿಸ್, ಪತ್ರಕರ್ತ ರತ್ನದೇವ್ ಶುಭ ಹಾರೈಸಿದರು. ಗೆಳೆಯರ ಬಳಗದ ಗೌರವ ಸಲಹೆಗಾರ ಎಲಿಯಾಸ್ ಕ್ರಾಸ್ತಾ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ 90 ಮಕ್ಕಳಿಗೆ ಲೇಖನ ಸಾಮಾಗ್ರಿ ಸಹಿತ ಪುಸ್ತಕ ವಿತರಣೆ ಇಬ್ಬರು ಮಕ್ಕಳ ಉನ್ನತ ಶಿಕ್ಷಣಕ್ಕೆ ಸಹಾಯಧನ, ಸಂಕಷ್ಟದಲ್ಲಿರುವ ಇಬ್ಬರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಸಹಾಯಧನ ನೀಡಲಾಯಿತು ನಯನಾಡು ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಜೊಯೆಲ್ ಲೋಬೊ ಸ್ವಾಗತಿಸಿದರು. ಪ್ರದೀಪ್ ಪಿಂಟೋ ನಿರೂಪಿಸಿದರು.


## ಬೈಂದೂರು ಸೈಂಟ್ ಥಾಮಸ್ ಶಾಲೆಯಲ್ಲಿ ವಿಶೇಷ ಕಾರ್ಯಾಗಾರ



**ಬೈಂದೂರು:** ಇಲ್ಲಿನ ಸೈಂಟ್ ಥಾಮಸ್ ಶಾಲೆಯಲ್ಲಿ ಸಿಬಿಎಸ್‌ಸಿ ವತಿಯಿಂದ ಸಾಮರ್ಥ್ಯಾಭಿವೃದ್ಧಿ (ಕೌಶಲ್ಯಾಭಿವೃದ್ಧಿ), ಸಾಮರ್ಥ್ಯಾಧಾರಿತ ಕಲಿಕೆ ಮತ್ತು ಬಹು ಆಯ್ಕೆಯ ಪ್ರಶ್ನೆಗಳು, ವಿಷಯಾಧಾರಿತ ಕಾರ್ಯಕ್ರಮ ನಡೆಯಿತು. ಈ ಎರಡು ದಿನಗಳ ತರಬೇತಿ ಕಾರ್ಯಾಗಾರದಲ್ಲಿ ವಿವಿಧ ಶಾಲೆಗಳ ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀಧರ ಬಿ. ಹಾಗೂ ಡಾ. ಮೋನಿಕಾ ಡಿಸೋಜ ಅವರು ಶಿಕ್ಷಕರಿಗೆ ಸಮಗ್ರ ಮಾಹಿತಿ ನೀಡಿದರು. ಸಾಮರ್ಥ್ಯಾಧಾರಿತ (ಕೌಶಲ್ಯ) ಪ್ರಶ್ನೆಗಳನ್ನು ರೂಪಿಸುವ, ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಅಳೆಯುವ ಹೊಸ ವಿಧಾನಗಳು, ಪ್ರಶ್ನೆಗಳು ಕೇವಲ ನೆನಪಿನ ಶಕ್ತಿಯನ್ನು ಪರೀಕ್ಷಿಸುವಂತಿರದೆ, ವಿದ್ಯಾರ್ಥಿಗಳ ಅರ್ಥೈಸುವಿಕೆ, ವಿಶ್ಲೇಷಣಾ ಸಾಮರ್ಥ್ಯ ಹಾಗೂ ತಾರ್ಕಿಕ ಚಿಂತನೆಗಳನ್ನು ಅಳೆಯುವ ರೀತಿಯಲ್ಲಿ ರೂಪಿಸಬೇಕೆಂದು ತಿಳಿಸಿದರು. ಕಾರ್ಯಾಗಾರದಲ್ಲಿ ಭಾಗವಹಿಸಿದ ಶಿಕ್ಷಕರು ಚರ್ಚೆ, ಗುಂಪು ಚಟುವಟಿಕೆ ಮತ್ತು ಪ್ರಾಯೋಗಿಕ ತರಬೇತಿಗಳ ಮೂಲಕ ತಮ್ಮ ಅನುಭವಗಳನ್ನು ಹಂಚಿಕೊಂಡರು. ತರಗತಿಯಲ್ಲಿ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಹೇಗೆ ಪ್ರಶ್ನೆಗಳನ್ನು ರೂಪಿಸಬೇಕು ಎಂಬುದರ ಕುರಿತು ವಿಶೇಷ ಅಧಿವೇಶನ ನಡೆಯಿತು. ಕಾರ್ಯಕ್ರಮದಲ್ಲಿ ಓಕ್ವುಡ್ ಇಂಡಿಯನ್ ಶಾಲೆ ಕುಂದಾಪುರ, ಶ್ರೀ ಮೂಕಾಂಬಿಕಾ ಶಾಲೆ ಕೊಲ್ಲೂರು. ಹಾಗೂ ಸೇಕ್ರೆಡ್ ಹಾರ್ಟ್ ಕಾನ್ವೆಂಟ್ ಶಾಲೆ ಜಡ್ಕಲ್ ಸೇರಿದಂತೆ ಸೈಂಟ್ ಥಾಮಸ್ ಶಾಲೆಯ ಶಿಕ್ಷಕರು ಭಾಗವಹಿಸಿದ್ದರು. ಶಾಲಾ ಪ್ರಾಂಶುಪಾಲ ರೆ. ಫಾ. ಫಿಲಿಪ್ ವೆಲ್ಲಿವಿಲಾ ಸ್ವಾಗತಿಸಿ, ಸಿಸ್ಟರ್ ಕಾರ್ಮೆಲ್ ನಿರೂಪಿಸಿದರು.

## ಬಾಳುಗೋಡು ಮುಂಡೋಕಜೆ ನೀರಿನ ಸಮಸ್ಯೆಗೆ ಕೊನೆಗೂ ಮುಕ್ತಿ



**ಸುಬ್ರಹ್ಮಣ್ಯ:** ಬಾಳುಗೋಡು ಗ್ರಾಮದ ಮುಂಡೊಕಜೆ ಎಂಬಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ಇಲ್ಲಿನ ಸಮಸ್ಯೆಗಳನ್ನು ತಾಲೂಕು ಪಂಚಾಯತ್ ಇಒ ಅವರ ಮುಖಾಂತರ ಆರಿತ ಕೆಪಿಸಿಸಿ ಸದಸ್ಯ ಜಿ. ಕೃಷ್ಣಪ್ಪ ಅವರು ಗ್ರಾಮ ಪಂಚಾಯತ್ ಮತ್ತು ಸ್ಥಳೀಯರನ್ನು ಮಾತನಾಡಿಸಿ ಕೊಳವೆ ಬಾವಿ ಕೊರೆಸಲು ಕ್ರಮ ಕೈಗೊಂಡಿದ್ದರು. ಇದೀಗ ಇಲ್ಲಿ ಪಂಚಾಯತ್ ಸಹಕಾರದಲ್ಲಿ ಕೊಳವೆ ಬಾವಿ ಕೊರೆಸಲಾಗಿದೆ.

ಬಾಳುಗೋಡು ಗ್ರಾಮದ ಮುಂಡೊಕಜೆ ಎಂಬಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ಈ ಕಾರಣದಿಂದ ಚುನಾವಣಾ ಬಹಿಷ್ಕಾರ ಮಾಡಲು ಇಲ್ಲಿನ ನಿವಾಸಿಗಳು ನಿರ್ಧರಿಸಿದ್ದರು. ಇದೀಗ ಮಂಡೋಕಜೆ ಭಾಗಕ್ಕೆ ನೀರಿನ ವ್ಯವಸ್ಥೆಯಾಗಿದ್ದು, ಇನ್ನಾದರೂ ಈ ಭಾಗದಲ್ಲಿ ನೀರಿನ ಸಮಸ್ಯೆ ಬಗೆಹರಿಯಬಹುದು ಎಂಬ ವಿಶ್ವಾಸ ಸ್ಥಳೀಯರದ್ದಾಗಿದೆ.

ಈ ಸಂದರ್ಭ ಕಡಬ ಬ್ಲಾಕ್ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಗೋಪಿನಾಥ್, ಸುಬ್ರಹ್ಮಣ್ಯ ದೇವಾಲಯದ ಮಾಸ್ಟರ್ ಪ್ಲಾನ್ ಸಮಿತಿ ಸದಸ್ಯ ಲೋಲಕ್ಷ ಕೈಕಂಬ, ತಾ.ಪಂ. ಇಒ ರಾಜಣ್ಣ, ಇಂಜಿನಿಯರ್ ಮಣಿಕಂಠ, ಪಿಡಿಒ ಶ್ಯಾಮ್ ಪ್ರಸಾದ್, ಪ್ರಮುಖರಾದ ಅಚ್ಚುತ ಗುತ್ತಿಗಾರು, ಶರತ್ ಕೆರ್ಮಾಯಿ, ಪ್ರಮೋದ್ ಬಾಳುಗೋಡು, ಜಯರಾಮ್ ಮುಂಡಕಜೆ, ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

### ಮಾಳವ ಯಾನೆ ಮಲ್ಲವ ಸಮಾಜಾಭ್ಯುದಯ ಸಂಘದ ವಾರ್ಷಿಕೋತ್ಸವ, ಸಮಾಜದ ವಿವಿಧ ಕ್ಷೇತ್ರದ ಸಾಧಕರಿಗೆ, ವಿದ್ಯಾರ್ಥಿಗಳಿಗೆ ಸನ್ಮಾನ

# ಧಾರ್ಮಿಕ, ಸಾಮಾಜಿಕ, ಕೃಷಿ ಕ್ಷೇತ್ರದಲ್ಲಿ ಮಲ್ಲವ ಸಮಾಜದ ಛಾಪು: ಮರಳಸಿದ್ಧ ಶಿವಾಚಾರ್ಯ ಶ್ರೀ

**ಬೆಳ್ತಂಗಡಿ:** ಕೆಳದಿ ಮಹಾಸಂಸ್ಥಾನದ ಶಿವಪ್ಪ ನಾಯಕ ಹಾಗೂ ಕೆಳದಿ ರಾಣಿ ಚೆನ್ನಮ್ಮಾಜಿ ಕಾಲದಲ್ಲಿ ಮಲೆನಾಡು, ಕರಾವಳಿ ಹಾಗೂ ಕೇರಳದ ಭಾಗದಲ್ಲಿ ಹಲವಾರು ಧಾರ್ಮಿಕ, ಸಾಮಾಜಿಕ, ಕೃಷಿ ವಿಚಾರಗಳಿಗೆ ಒತ್ತು ನೀಡಲಾಗಿತ್ತು. ಈಗ ಅದೇ ಸಮಾಜ ಬಾಂಧವರು ಕೂಡಾ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ತೀರ್ಥಹಳ್ಳಿ ಕವಲೇದುರ್ಗ ಮಠದ ಕೆಳದಿ ಸಂಸ್ಥಾನದ ರಾಜಗುರು ಶ್ರೀ ಷ.ಬ್ರ ಮರಳಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಅವರು ಬೆಳ್ತಂಗಡಿ ಶ್ರೀ ಧ.ಮಂ.ಸ್ವಾಮಿ ಕಲಾಭವನ ಆವರಣದ ಬಯಲು ಮಂದಿರದಲ್ಲಿ ಮಾಳವ ಯಾನೆ ಮಲ್ಲವ ಸಮಾಜಾಭ್ಯುದಯ ಸಂಘ ಬೆಳ್ತಂಗಡಿ ಮಾಳವ ಯಾನೆ ಮಲ್ಲವರ ಯುವಕರ ಸಂಘ ಮತ್ತು ಮಹಿಳಾ ಸಂಘ, ಬೆಳ್ತಂಗಡಿ ಇದರ ಜಂಟಿ ಆಶ್ರಯದಲ್ಲಿ ನಡೆದ 30ನೇ ವರ್ಷದ ವಾರ್ಷಿಕೋತ್ಸವ ಮತ್ತು ಶಿವ ಪೂಜೆ, ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಹಾಗೂ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.



**ಇಡೀ ಸಮಾಜಕ್ಕೆ ಕೊಡುಗೆ**

ದ.ಕ. ಉಡುಪಿ ಹಾಗೂ ಕಾಸರಗೋಡು ಜಿಲ್ಲೆಯ ಮಲ್ಲವ ಸಮಾಜದವರು ಹಲವಾರು ವರ್ಷಗಳಿಂದ ಸಮಾಜದ ಅಭ್ಯುದಯಕ್ಕೆ ಶ್ರಮಿಸುತ್ತಿದ್ದಾರೆ. ಹಿರಿಯರ ಮಾರ್ಗದರ್ಶನದಲ್ಲಿ ಯುವ ಜನತೆ ಇದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದು ಮುಂದೆಯೂ ಸಮಾಜದ ಅಭ್ಯುದಯಕ್ಕೆ ಎಲ್ಲರೂ ಅಹಂ ತೊರೆದು ನಾವು, ನಮ್ಮವರು ಎಂಬ ನಿಟ್ಟಿನಲ್ಲಿ ದುಡಿಯಬೇಕು ಎಂದರು.

> ಹಿರಿಯರು ಹಾಕಿಕೊಟ್ಟ ಮಾರ್ಗ ದರ್ಶನದಲ್ಲಿ ಮುನ್ನಡೆಸಿಕೊಂಡು ಬರುತ್ತಿದ್ದೇವೆ. ಮುಂದಿನ ದಿನದಲ್ಲಿ ಯುವಜನಾಂಗ ನಮ್ಮ ಸಮಾಜ ಮುನ್ನಡೆಸಿಕೊಂಡು ಹೋಗಬೇಕು.
>
> ● ಶಿವಶಂಕರ, ಮಾಳವ ಯಾನೆ ಮಲ್ಲವ ಸಮಾಜದ ಅಧ್ಯಕ್ಷ

ಮಾಳವ ಯಾನೆ ಮಲ್ಲವ ಸಮಾಜದ ಅಧ್ಯಕ್ಷ ಶಿವಶಂಕರ ಅಧ್ಯಕ್ಷತೆ ವಹಿಸಿದ್ದರು. ಕಾಞಂಗಾಡ್ ಶ್ರೀ ಮಹಾಸತಿ ದೇವಸ್ಥಾನದ ಅಧ್ಯಕ್ಷ ಹೆಚ್.ಎನ್. ಜಗದೀಶ್ ಮಲ್ ಮತ್ತು ದುರ್ಗ ಮಲ್ಲಿಕಾರ್ಜುನ ಜಟ್ಟಿ ಮನೆತನದ ಅಧ್ಯಕ್ಷ ಬಿ.ನವನೀತ ಮಾಳವ, ಸಮಾಜ ಬಾಂಧದವರ ಸಹಕಾರ ಕೋರಿದರು.

ಕಾಞಂಗಾಡ್ ಇಕ್ಕೇರಿ ಮಲ್ಲವ ಸಮಾಜ ಸಂಘದ ಅಧ್ಯಕ್ಷ ದಯಾನಂದ ಕುದ್ರು, ಚಿತ್ತಾರಿ ಕುದ್ರು ಶ್ರೀ ಮೂಕಾಂಬಿಕಾ ದೇವಸ್ಥಾನದ ಅಧ್ಯಕ್ಷ ನಾಗರಾಜ್ ಕೆ.ಪಿ., ಚಿತ್ತಾರಿ ಎಲ್ಲಾಂಬಿಕಾ ದೇವಸ್ಥಾನದ ಅಧ್ಯಕ್ಷ ಒ.ರಮೇಶ್, ರಾವಣೇಶ್ವರ ಒರವಂಗೆರೆ ಶ್ರೀ ಜಟಕೇಶ್ವರ ದೇವಸ್ಥಾನದ ಅಧ್ಯಕ್ಷ ಎನ್. ಪ್ರಭಾಕರ, ಮಿತ್ತಬೆಟ್ಟು ಶ್ರೀ ಮಹಮ್ಮಾಯಿ ವನದುರ್ಗ ದೇವಿ ದೇವಸ್ಥಾನದ ಅಧ್ಯಕ್ಷ ಎನ್. ಮೋಹನ ಹೆಗ್ಡೆ, ಯುವಕ ಸಂಘದ ಅಧ್ಯಕ್ಷ ಮೋಹನ ಬೆಳ್ತಂಗಡಿ, ಮಹಿಳಾ ಸಂಘದ ಅಧ್ಯಕ್ಷೆ ಮಂಜುಳ ಬೆಳ್ತಂಗಡಿ ಮೊದಲಾದವರು ಉಪಸ್ಥಿತರಿದ್ದರು. ಇದೇ ಸಂದರ್ಭ ಸಮಾಜದ ಸಾಧಕರಾದ ದೇಹದಾನ ನೀಡಿದ ಸುಶೀಲ ಹೆಗ್ಡೆ ಅಳದಂಗಡಿ, ಮಾಧ್ಯಮ ಕ್ಷೇತ್ರದ ಭುವನೇಶ್ ಗೇರುಕಟ್ಟೆ, ಆ್ಯಂಬ್ಯುಲೆನ್ಸ್ ಸೇವೆಗೆ ಭುವನೇಶ್ ಕೆಂಬರ್ಜೆ ಹಾಗೂ ಶ್ರೀನಿವಾಸ ವಿ.ವಿ. ಫಿಜಿಯೋತೆರಫಿಸ್ಟ್‌ನಲ್ಲಿ ನಾಲ್ಕನೆ ರ್‍ಯಾಂಕ್ ಪಡೆದ ಡಾ. ಪ್ರಣೀತ್ ಹೆಗ್ಡೆ ಇವರನ್ನು ಗೌರವಿಸಲಾಯಿತು. ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ವಿಶಿಷ್ಟ ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಮಳವ ಯಾನೆ ಮಲ್ಲವ ಸಂಘದ ಕೋಶಾಧಿಕಾರಿ ಸತೀಶ್ ರಾಜ್ ವರದಿ ವಾಚಿಸಿದರು. ಯುವಕ ಸಂಘದ ಪ್ರ. ಕಾರ್ಯದರ್ಶಿ ಈಶ್ವರ ಅಲ್ಲಟಬೈಲು ಪ್ರಸ್ತಾವಿಸಿದರು. ಗೌತಮ್ ಹೆಗ್ಡೆ ಬೆಳ್ತಂಗಡಿ ಕಾರ್ಯಕ್ರಮ ನಿರ್ವಹಿಸಿ ಮಹಿಳಾ ಸಂಘದ ಕಾರ್ಯದರ್ಶಿ ಅಶ್ವಿನಿ ಉಜಿರೆ ವಂದಿಸಿದರು.

## ಸುತ್ತ ಮುತ್ತ

### ತಿರಸ್ಕೃತ ಬೆಳೆ ವಿಮೆ ಪಟ್ಟಿ ಪ್ರಕಟ: ಆಕ್ಷೇಪಣೆ ಸಲ್ಲಿಕೆ ಅವಧಿ ವಿಸ್ತರಣೆ

**ಉಡುಪಿ:** ಕೃಷಿ ಇಲಾಖೆಯ ವತಿಯಿಂದ 2024-25ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿಗಳ ಫಸಲ್ ಭಿಮಾ ಯೋಜನೆಯಡಿ ಬೈಂದೂರು ತಾಲೂಕಿನ 58 ಹಾಗೂ ಕುಂದಾಪುರ ತಾಲೂಕಿನ 38 ಪ್ರಸ್ತಾವನೆಗಳು ವಿಮಾ ಸಂಸ್ಥೆಯಿಂದ ತಿರಸ್ಕೃತಗೊಂಡಿದ್ದು, ತಿರಸ್ಕೃತಗೊಂಡ ರೈತರ ಪ್ರಸ್ತಾವನೆಯ ಪಟ್ಟಿಯನ್ನು ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ರೈತ ಸಂಪರ್ಕ ಕೇಂದ್ರ ಹಾಗೂ ಸಂಬಂಧಿತ ಗ್ರಾಮ ಪಂಚಾಯತ್ ಕಚೇರಿಗಳ ನೋಟೀಸ್ ಬೋರ್ಡಿನಲ್ಲಿ ರೈತರ ಮಾಹಿತಿಗಾಗಿ ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕಲ್ಪಿಸಿದ್ದು, ಈವರೆಗೂ ಆಕ್ಷೇಪಣೆ ಸಲ್ಲಿಕೆಯಾಗದ ಹಿನ್ನೆಲೆ, ಮತ್ತೊಮ್ಮೆ ಜೂ.9ರವರೆಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕಲ್ಪಿಸಲಾಗಿರುತ್ತದೆ. ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗಾಗಿ ರೈತರು ತಿರಸ್ಕೃತ ವಿಮಾ ಪ್ರಸ್ತಾವನೆಗಳ ಕುರಿತು ಪರಿಶೀಲಿಸಿ, ತಮ್ಮ ಆಕ್ಷೇಪಣೆಗಳಿದ್ದಲ್ಲಿ ಮನವಿಯನ್ನು ಲಿಖಿತವಾಗಿ ಬೆಳೆ ವಿಮೆಗೆ ನೋಂದಾಯಿಸಿದ ಭತ್ತದ ಬೆಳೆ ಬೆಳೆದ ಬಗ್ಗೆ ಅಗತ್ಯ ದಾಖಲಾತಿಗಳೊಂದಿಗೆ ಕುಂದಾಪುರ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಕುಂದಾಪುರ, ಬೈಂದೂರು ಮತ್ತು ವಂಡ್ಸೆ ರೈತ ಸಂಪರ್ಕ ಕೇಂದ್ರದ ಕಚೇರಿಗಳಲ್ಲಿ ಜೂ.9ರ ಒಳಗಾಗಿ ಮುದ್ದಾಂ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕುಂದಾಪುರ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

### ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರೀಲ್ಸ್ ಸ್ಪರ್ಧೆ

**ಉಡುಪಿ:** ವಿಶ್ವ ಪರಿಸರ ದಿನಾಚರಣೆ 2026ರ ಅಂಗವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ಉಡುಪಿ ಇವರ ವತಿಯಿಂದ ಪರಿಸರ ಜಾಗೃತಿ ಹಾಗೂ ಹವಾಮಾನ ಕ್ರಮಗಳಲ್ಲಿ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ವಿಶೇಷ ರೀಲ್ಸ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಪ್ರಕೃತಿಯಿಂದ ಪ್ರೇರಿತ, ಹವಾಮಾನಕ್ಕಾಗಿ; ನಮ್ಮ ಭವಿಷ್ಯಕ್ಕಾಗಿ ಎಂಬ ಧ್ಯೇಯವಾಕ್ಯದಡಿ ನಡೆಯಲಿರುವ ಈ ಸ್ಪರ್ಧೆಯ ಮೂಲಕ ಪರಿಸರ ಸಂರಕ್ಷಣೆ, ಸುಸ್ಥಿರ ಜೀವನಶೈಲಿ, ಹವಾಮಾನ ಬದಲಾವಣೆಯ ಬಗ್ಗೆ ಅರಿವು ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಲಾಗುವುದು. ಜಿಲ್ಲೆಯ ನಿವಾಸಿಗಳು ಮುಕ್ತವಾಗಿ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದ್ದು ತಮ್ಮ ಸೃಜನಶೀಲತೆಯನ್ನು ಬಳಸಿಕೊಂಡು 30 ಸೆಕೆಂಡುಗಳಿಂದ 120 ಸೆಕೆಂಡುಗಳ ಅವಧಿಯ ಮೂಲ ರೀಲ್ಸ್ ವೀಡಿಯೋಗಳನ್ನು ಸಿದಪಡಿಸಿ, ಜೂನ್ 3 ರ ಒಳಗಾಗಿ ಇ-ಮೇಲ್ udupi@kspcb.gov.in ಅಥವಾ kspcbroudupi@gmail.com ವಿಳಾಸ ಹಾಗೂ ಮೊ.ನಂ: 9964027311 ಗೆ ವಾಟ್ಸಾಪ್ ಮೂಲಕ ಕಳುಹಿಸಬಹುದಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಕ್ರಮವಾಗಿ 5000, 3000 ಹಾಗೂ 2000 ರೂ.ಗಳ ನಗದು ಬಹುಮಾನ ನೀಡಲಾಗುವುದು. ಸಲ್ಲಿಕೆಯಾಗುವ ವಿಡಿಯೋಗಳು ಸ್ಪರ್ಧೆಯ ಅಧಿಕೃತ ವಿಷಯ ವಸ್ತುವಿಗೆ ಹೊಂದಿಕೆಯಾಗಿರಬೇಕು. ಅಸಭ್ಯ, ಆಕ್ರಮಣಕಾರಿ, ಮಾನಹಾನಿಕಾರಕ ಅಥವಾ ಧಾರ್ಮಿಕವಾಗಿ ಸೂಕ್ಷ್ಮ ವಿಷಯಗಳನ್ನು ಒಳಗೊಂಡಿರಬಾರದು ಎಂದು ಕ.ರಾ.ಮಾ.ನಿ.ಮಂಡಳಿಯ ಪರಿಸರ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

### ಮೇ 31: ರಕ್ತದಾನ ಶಿಬಿರ

**ಕುಂದಾಪುರ:** ಯಕ್ಷಾಭಿಮಾನಿ ರಕ್ತದಾನಿಗಳ ಬಳಗ ಗಂಗೊಳ್ಳಿ ಇದರ 17ನೇ ವರ್ಷದ ಧರ್ಮಸ್ಥಳ ಪಾದಯಾತ್ರೆಯ ಪ್ರಯುಕ್ತ ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ. ಗಂಗೊಳ್ಳಿ, ಅಭಯಹಸ್ತ ಚಾರಿಟೇಬಲ್ ಟ್ರಸ್ಟ್ ಉಡುಪಿ ಹಾಗೂ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಕುಂದಾಪುರ ಇವರ ಸಹಯೋಗದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ ಗಂಗೊಳ್ಳಿಯ ಶ್ರೀ ವೀರ ವಿಠಲ ಸಭಾಗೃಹದಲ್ಲಿ ಮೇ 31 ರಂದು ಬೆಳಗ್ಗೆ 9 ಗಂಟೆಯಿಂದ ನಡೆಯಲಿದೆ. ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಶಿಬಿರವನ್ನು ಉದ್ಘಾಟಿಸಲಿದ್ದು, ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಜಿ.ವೆಂಕಟೇಶ ಭಾಸ್ಕರ ಶೆಣೈ ಅಧ್ಯಕ್ಷತೆ ವಹಿಸಲಿದ್ದಾರೆ. ರಾಮಪ್ಪ ಖಾರ್ವಿ, ಸತೀಶ್ ಸಾಲಿಯಾನ್, ದಿವಾಕರ ಖಾರ್ವಿ, ಜಯಕರ ಶೆಟ್ಟಿ ಮಿಥುನ್ ಬಿಜೂರು, ಬಿ.ರಾಘವೇಂದ್ರ ಪೈ, ವಾಸು ದೇವಾಡಿಗ, ಚಂದ್ರ ಖಾರ್ವಿ ಮೊದಲಾದವರು ಪಾಲ್ಗೊಳ್ಳಲಿದ್ದು, ರಕ್ತದಾನಿ ದೇವದಾಸ ಪಾಟ್ಕರ್ ಅವರನ್ನು ಗೌರವಿಸಲಾಗುವುದು ಎಂದು ಸಂಘಟಕರ ಪ್ರಕಟಣೆ ತಿಳಿಸಿದೆ.

---


### ಶಾಲಾ- ಕಾಲೇಜು ಪ್ರಾರಂಭದ ಬಳಿಕ ಬೆಳಿಗ್ಗೆ, ಸಂಜೆ ವೇಳೆ ಬಸ್ಸಿನಲ್ಲಿ ಪ್ರಯಾಣಿಸುವುದು ಸಾಹಸದ ಕೆಲಸ

# ಗ್ರಾಮೀಣ ವಿದ್ಯಾರ್ಥಿಗಳಿಗೆ ಪಠ್ಯಕ್ಕಿಂತ ಬಸ್ ಪ್ರಯಾಣ ಚಿಂತೆ

**ಕುಂದಾಪುರ:** ಶಾಲೆಗಳಿಗೆ ಬೇಸಿಗೆ ರಜೆ ಮುಗಿಯುತ್ತಾ ಬಂದಿದ್ದು, ಶಾಲಾ ಕಾಲೇಜು ಆರಂಭಕ್ಕೆ ಕ್ಷಣಗಣನೆ ಆರಂಭವಾಗಿದೆ. ಆದರೆ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಗೆ ಬಸ್ ಸಮಸ್ಯೆ, ಪಠ್ಯಕ್ಕಿಂತ ಪ್ರಯಾಣದ ಚಿಂತೆ ಕಾಡುತ್ತಿದೆ.

ಗ್ರಾಮೀಣ ಪ್ರದೇಶಗಳ ಶಾಲಾ, ಕಾಲೇಜು ವಿದ್ಯಾರ್ಥಿಗಳು ಶಾಲಾ ಬಸ್‌ಗಳ ಹೊರತಾಗಿ ಆಶ್ರಯಿಸುವುದು ಸರ್ಕಾರಿ ಮತ್ತು ಸರ್ಕಾರಿ ಬಸ್‌ಗಳನ್ನು. ಸಮಯಕ್ಕೆ ಸರಿಯಾಗಿ ಬಾರದ ಮತ್ತು ತಡವಾಗಿ ಬರುವ ಬಸ್‌ಗಳಿಂದಾಗಿ ವಿದ್ಯಾರ್ಥಿಗಳು ತರಗತಿಗಳನ್ನು ತಪ್ಪಿಸಿಕೊಳ್ಳುವುದು, ಹಾಜರಾತಿ ತಪ್ಪಿಸಿಕೊಳ್ಳುವುದೂ ಇದೆ. ಕುಂದಾಪುರ ಮತ್ತು ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ಮತ್ತು ಸರ್ಕಾರಿ ಬಸ್ ಕೊರತೆ ಇದೆ. ಅಪರೂಪಕೊಮ್ಮೆ ಸಂಚರಿಸುವ ಬಸ್‌ಗಳನ್ನೇ ಈ ಭಾಗದ ಜನರು ನೆಚ್ಚಿಕೊಂಡಿದ್ದು, ಶಾಲಾ- ಕಾಲೇಜು ಪ್ರಾರಂಭವಾದ ಬಳಿಕ ಬೆಳಿಗ್ಗೆ ಮತ್ತು ಸಂಜೆ ವೇಳೆ ಬಸ್ಸಿನಲ್ಲಿ ಪ್ರಯಾಣಿಸುವುದು ಸಾಹಸವೇ ಸರಿ.

ಸಾಂದರ್ಭಿಕ ಚಿತ್ರ



#### ಸಮರ್ಪಕ ವ್ಯವಸ್ಥೆ ಇಲ್ಲ

ಅಮಾಸೆಬೈಲು, ಜಡ್ಡಿನಗದ್ದೆ ಕೆಳೆಸಂಕ, ಆಜ್ರಿ, ಕಮಲಶಿಲೆ, ಕೆರಾಡಿ, ನೂಜಾಡಿ, ಆಲೂರು, ಹಕ್ಲಾಡಿ, ಪಡುಕೋಣೆ, ಬಡಾಕೆರೆ, ಮೊವಾಡಿ, ಬಗ್ವಾಡಿ, ಬೆಳ್ಳಾಲ, ಹೆಮ್ಮಕ್ಕಿ ಕಂದಾವರ, ಮೂಡ್ಲಕಟ್ಟೆ-ಉಳ್ಳೂರು, ಪಡುವರಿ, ದೊಂಬೆ, ತಾರಾಪತಿ ಮೊದಲಾದ ಪ್ರದೇಶಗಳಿಗೆ ಸಮರ್ಪಕ ಬಸ್ ವ್ಯವಸ್ಥೆ ಇಲ್ಲ. ಬಸ್‌ಗೆ ಕಾಯುವ ವಿದ್ಯಾರ್ಥಿಗಳು ಬಸ್ ಸಿಗದೇ ನಿಲ್ದಾಣದಲ್ಲೇ ಉಳಿಯುವುದೂ ಇದೆ. ನಂತರ ದುಬಾರಿ ಹಣ ತೆತ್ತು ಆಟೋ, ಕಾರು ಮೂಲಕ ಶಾಲಾ ಕಾಲೇಜು ಸೇರುವುದಿದೆ.

> **ಮನೆಗೆ ತಲುಪುವಾಗ ರಾತ್ರಿ 7 ಗಂಟೆ**
> ಬೆಳಗ್ಗೆ ಏಳು ಗಂಟೆಯಿಂದ ಒಂಬತ್ತೂವರೆ ತನಕ ಮಕ್ಕಳಿಗೆ ಶಾಲೆ ಕಾಲೇಜಿಗೆ ಹೋಗುವ ಬಸ್ ಸಿಕ್ಕಿತಾ ಇಲ್ಲಾ ಅಂತ ಯೋಚನೆ. ಸಂಜೆ ನಾಲ್ಕೂವರೆಯಿಂದ ಮತ್ತೆ ಚಿಂತೆ. ಬಸ್ ಸಿಗದೇ, ತಡವಾಗಿ ಮಕ್ಕಳು ಮನೆ ತಲುಪುವಾಗ ಸಂಜೆ ಏಳೂವರೆ ಗಂಟೆ ಆಗುವುದೂ ಇದೆ.
> ● ನಾಗರಾಜ್, ಪೋಷಕರು

#### ಬಸ್ ಸಿಗದೆ ಬೇರೆ ಕಾಲೇಜಿಗೆ ಸೇರ್ಪಡೆ

ಶಂಕರನಾರಾಯಣ- ಕೊಲ್ಲೂರು ಮಾರ್ಗದಲ್ಲಿ ವಂಡ್ಸೆ, ನೆಂಪು, ನೇರಳಕಟ್ಟೆ ಅಂಪಾರು ಭಾಗದ ವಿದ್ಯಾರ್ಥಿಗಳಿಗೆ ಉಡುಪಿ- ಶಂಕರನಾರಾಣ ಮಾರ್ಗದಲ್ಲಿ ವಿದ್ಯಾರ್ಥಿಗಳು ಬೆಳಗ್ಗೆ ಬಸ್‌ಗಳು ಸಿಗದೇ ಪಡುವ ಪಾಡು ಹೇಳತೀರದು. ಕೊಲ್ಲೂರು- ಶಂಕರನಾರಾಯಣ ಮಾರ್ಗದಲ್ಲಿ ಬಸ್ ಸಂಪರ್ಕ ಇಲ್ಲದೆ ಇರುವುದರಿಂದ ಅನೇಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಂಕರನಾರಾಯಣ ಪದವಿ ಕಾಲೇಜಿಗೆ ಹೋಗಲು ಸಾಧ್ಯವಾಗದೆ, ಕುಂದಾಪುರ ಕಾಲೇಜಿಗೆ ಸೇರ್ಪಡೆಯಾಗುತ್ತಿದ್ದಾರೆ.

> **ಸಮಸ್ಯೆ ಆಗದಿರಲಿ**
> ಸಮಯಕ್ಕೆ ಸರಿಯಾಗಿ ಬಾರದ ಮತ್ತು ತಡವಾಗಿ ಬರುವ ಬಸ್‌ಗಳಿಂದಾಗಿ ಸಮಸ್ಯೆಯಿಂದಾಗಿ ಕಳೆದ ವರ್ಷ ಸಾಕಷ್ಟು ತರಗತಿಗಳು ತಪ್ಪಿವೆ. ಈ ವರ್ಷವಾದರೂ ಸಮಸ್ಯೆ ಆಗದಿರಲಿ.
> ● ಸುರೇಂದ್ರ, ವಿದ್ಯಾರ್ಥಿ

ಇಂತಹ ಗ್ರಾಮೀಣ ಪ್ರದೇಶಗಳಲ್ಲಿ ಕೆಲವೊಂದು ಖಾಸಗಿ ಬಸ್‌ಗಳು ಸಂಚರಿಸುತ್ತಿದ್ದರೆ, ಸರ್ಕಾರಿ ಬಸ್ ಸಂಚಾರ ಇಲ್ಲ, ಸರ್ಕಾರಿ ಬಸ್ಸಿಗಾಗಿ ಅನೇಕ ವರ್ಷಗಳಿಂದ ಬೇಡಿಕೆ ಇಟ್ಟು ಹೋರಾಟ ನಡೆಸುತ್ತಾ ಬಂದರೂ ಸರ್ಕಾರಿ ಬಸ್ ಭಾಗ್ಯ ಇನ್ನೂ ದೊರೆತಿಲ್ಲ. ಸಂಚರಿಸುವ ಬಸ್‌ಗಳಲ್ಲಿ ಸ್ಥಳಾವಕಾಶ ಕೊರತೆ. ಈ ಬಸ್‌ಗಳು ಪ್ರತಿನಿತ್ಯ ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದು, ಶಾಲೆ ಆರಂಭ ಹಾಗೂ ಸಂಜೆ ಬಿಡುವ ಸಮಯದಲ್ಲಿ ವಿದ್ಯಾರ್ಥಿಗಳು ಫುಟ್‌ಬೋರ್ಡ್ ಮೇಲೆ ನೇತಾಡಿಕೊಂಡು ಬರುವ ದೃಶ್ಯಗಳು ಸಾಮಾನ್ಯವಾಗಿದೆ. ಕೆಲವೊಮ್ಮೆ ಬಸ್ ಬಾರದೆ ಜನರು ಬಸ್ ಸಿಗದೇ ಕಾಯುತ್ತಲೇ ಇರುತ್ತಾರೆ.

#### ಸಮಸ್ಯೆ ಪರಿಹಾರಕ್ಕೆ ಆಗ್ರಹ

ಕುಂದಾಪುರ ಮತ್ತು ಬೈಂದೂರು ವ್ಯಾಪ್ತಿಯ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ಮತ್ತು ಸರ್ಕಾರಿ ಬಸ್ ಸಂಚಾರ ವಿರಳವಾಗಿದ್ದು, ಪ್ರಯಾಣಿಕರಿದ್ದರೂ ಅನೇಕ ಕಡೆಗಳಲ್ಲಿ ಬಸ್ ನಿಲ್ಲಿಸುವುದಿಲ್ಲ ಎಂಬ ಆರೋಪ ಕೂಡ ಕೇಳಿ ಬಂದಿದೆ. ಈ ಶೈಕ್ಷಣಿಕ ವರ್ಷದಲ್ಲಾದರೂ ಸಮಸ್ಯೆ ಬಗೆಹರಿಸಬೇಕು ಎಂದು ವಿದ್ಯಾರ್ಥಿಗಳು ಮತ್ತು ಪೋಷಕರು ಆಗ್ರಹಿಸಿದ್ದಾರೆ.

---

### ಎಸ್.ವಿ.ಎಚ್ ಶಾಲೆಗೆ ಕರ್ನಾಟಕ ಬ್ಯಾಂಕ್ ಬಸ್ ಕೊಡುಗೆ | ಸಿಇಒ ರಾಘವೇಂದ್ರ ಸಲಹೆ

# ಕನ್ನಡ ಶಾಲೆಗಳ ಉಳಿವಿಗೆ ಪರಿವರ್ತನೆ ಅಗತ್ಯ

**ಶಿರ್ವ:** ಅಧ್ಯಾಪಕರು ಮತ್ತು ಸಮಾಜಸೇವಕರನ್ನು ಸಮಾಜ ಸದಾ ನೆನಪಿನಲ್ಲಿ ಇಡುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸೋದೆ ಶ್ರೀಗಳಾದ ವಿಶ್ವೇಂದ್ರತೀರ್ಥ ಶ್ರೀಪಾದರಿಂದ ಸಂಸ್ಥಾಪಿಸಲ್ಪಟ್ಟ ಈ ವಿದ್ಯಾಸಂಸ್ಥೆ ಭವಿಷ್ಯದ ಕನಸನ್ನು ಹೊತ್ತು ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸಂಸ್ಕಾರಯುತ ಶಿಕ್ಷಣವನ್ನು ನೀಡಿದೆ ಎಂದು ಶತಮಾನೋತ್ಸವ ಸೇವಾ ಇತಿಹಾಸ ಹೊಂದಿರುವ ಕರ್ನಾಟಕ ಬ್ಯಾಂಕ್ ಆಡಳಿತ ನಿರ್ದೇಶಕರು ಹಾಗೂ ಸಿಇಒ ರಾಘವೇಂದ್ರ ಶ್ರೀನಿವಾಸ ಭಟ್ ನುಡಿದರು.

ಅವರು ಬುಧವಾರ ಇನ್ನಂಜೆ ಎಸ್‌ವಿಎಚ್ ಕನ್ನಡ ಮಾಧ್ಯಮ ಶಾಲೆಗೆ ಬ್ಯಾಂಕ್‌ನ ಸಿಎಸ್ಆರ್ ನಿಧಿಯಿಂದ ಕೊಡುಗೆಯಾಗಿ ನೀಡಿದ ವಾಹನದ ದಾಖಲೆ ಸಹಿತ ಕೀ ಯನ್ನು ಯಸ್‌ವಿಎಚ್ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷರೂ, ಉಡುಪಿ ಶ್ರೀಸೋದೆ ಮಠದ ಯತಿವರ್ಯರಾದ ಶ್ರೀವಿಶ್ವವಲ್ಲಭತೀರ್ಥ ಶ್ರೀಪಾದರಿಗೆ ಹಸ್ತಾಂತರಿಸಿ ಮಾತನಾಡಿದರು.

ಶಿಕ್ಷಣ ಕ್ಷೇತ್ರಕ್ಕೆ ಉಡುಪಿ ಅಷ್ಟಮಠಗಳಲ್ಲಿ ಅದಮಾರು, ಪೇಜಾವರ, ಸೋದೆ ಮಠಗಳ ಕೊಡುಗೆ ಅವಿಸ್ಮರಣೀಯ. ವಿದ್ಯಾರ್ಥಿಗಳು ತಾಯಿ, ತಂದೆ ಮತ್ತು ಶಾಲೆಯನ್ನೂ ಯಾವತ್ತೂ ಮರೆಯಬಾರದು. ಇಂದಿನ ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ಕನ್ನಡ ಶಾಲೆಗಳು ಉಳಿಯಲು ಕಾಲಕ್ಕೆ ತಕ್ಕಂತೆ ಪರಿವರ್ತನೆ ಅಗತ್ಯ ಎಂದರು.



ಅಧ್ಯಕ್ಷತೆ ವಹಿಸಿದ ಸೋದೆ ಶ್ರೀಗಳು ಆಶೀರ್ವಚನದಲ್ಲಿ 2026-27ನೇ ಸಾಲಿನ ಶಾಲಾ ಶೈಕ್ಷಣಿಕ ವರ್ಷದ ಆರಂಭೋತ್ಸವದ ಕರ್ನಾಟಕ ಬ್ಯಾಂಕ್ ವಾಹನದ ಕೊಡುಗೆ ಮೂಲಕ ಶುಭಾರಂಭಗೊಂಡಿದೆ. ಕಾಲ ಬದಲಾಗುತ್ತಿದೆ. ವ್ಯವಸ್ಥೆಗಳು ಜಾಸ್ತಿಯಾಗುತ್ತಿವೆ. ಮಕ್ಕಳ ಭೌತಿಕ ಮಟ್ಟ ಅಭಿವೃದ್ಧಿ ಶಿಕ್ಷಣದ ಜೊತೆಗೆ ಪೂರಕ ವ್ಯವಸ್ಥೆಗಳೂ ಆಗಬೇಕು. ಕರ್ನಾಟಕ ಬ್ಯಾಂಕ್‌ಗೂ ಸೋದೆ ಮಠಕ್ಕೂ ಅವಿನಾಭಾವ ಸಂಬಂಧವಿದೆ. ಇನ್ನಂಜೆ ಶಿಕ್ಷಣ ಸಂಸ್ಥೆಗೆ ಇದು ಮೂರನೇ ಬಸ್ ಕೊಡುಗೆಯಾಗಿ ಬಂದಿದೆ. ವಿದ್ಯಾರ್ಥಿಗಳಿಗೂ ಈ ಭಾವನೆ ಇರಬೇಕು ಎಂದರು.

ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಸಿಇಒ ಡಾ.ರಾಧಾಕೃಷ್ಣ ಎಸ್.ಐತಾಳ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಟ್ರಸ್ಟ್ ಉಪಾಧ್ಯಕ್ಷ ಪಿ. ಶ್ರೀನಿವಾಸ ತಂತ್ರಿ, ಎಸ್‌ವಿಎಚ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ರತ್ನಕುಮಾರ್ ವೇದಿಕೆಯಲ್ಲಿದ್ದರು.

ಕರ್ನಾಟಕ ಬ್ಯಾಂಕ್ ಉಡುಪಿ ವಲಯದ ಸಹಾಯಕ ಮಹಾ ಪ್ರಬಂಧಕ ರಮೇಶ್ ವೈದ್ಯ, ಉಡುಪಿ ಶಾಖಾಧಿಕಾರಿ ಪ್ರಶಾಂತ್ ರಾವ್, ಬಂಟಕಲ್ಲು ತಾಂತ್ರಿಕ ಕಾಲೇಜಿನ ಪ್ರಾಚಾರ್ಯ ನಾಗರಾಜ ಭಟ್, ಇನ್ನಂಜೆ ಪ್ರೌಢ ಶಾಲಾ ಮುಖ್ಯ ಶಿಕ್ಷಕ ನಟರಾಜ ಉಪಾಧ್ಯಾಯ ಇದ್ದರು. ಸಂಸ್ಕೃತ ಪಂಡಿತ ರಾಘವೇಂದ್ರ ಪುರಾಣಿಕ್ ಪ್ರಾರ್ಥಿಸಿದರು. ಉಪನ್ಯಾಸಕಿ ರೈಲಿನ್ ಪ್ರಿಯಾ ಕಸ್ತಲೀನೋ ನಿರೂಪಿಸಿದರು. ಪ್ರಾಂಶುಪಾಲ ರಾಜೇಂದ್ರ ಪ್ರಭು ವಂದಿಸಿದರು.

---

### ಶ್ರೀ ವೆಂಕಟರಮಣ ಸಂಸ್ಥೆಯಲ್ಲಿ ಸಾಧಕರಿಗೆ ಸನ್ಮಾನ | ಜಯಪ್ರಕಾಶ್ ಹೆಗ್ಡೆ ಅಭಿಪ್ರಾಯ

# ನಿರಂತರ ಪ್ರಯತ್ನ, ಪರಿಶ್ರಮದಿಂದ ಯಶಸ್ಸು

**ಕುಂದಾಪುರ:** ಶಿಕ್ಷಣ ನಾಗರಿಕರತೆಯ ಬೆಳವಣಿಗೆಯ ದಾರಿ. ಉತ್ತಮ ಜ್ಞಾನದಿಂದ ಒಳ್ಳೆಯ ಪ್ರಜೆಗಳಾಗಲು ಸಾಧ್ಯ. ಪ್ರತಿಯೊಬ್ಬರು ನಿಮ್ಮ - ನಿಮ್ಮ ದಾರಿಯಲ್ಲಿ ಮೇಲೆ ಬರಲು ಪ್ರಯತ್ನ. ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಿ. ನಿರಂತರ ಪ್ರಯತ್ನ, ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ ಎಂದು ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ ಹೇಳಿದರು.

ಕುಂದಾಪುರದ ಶ್ರೀ ವೆಂಕಟರಮಣ ಪದವಿ ಪೂರ್ವ ಕಾಲೇಜಿನ ವತಿಯಿಂದ ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ರ‍್ಯಾಂಕ್ ಪಡೆದ ಕಾಲೇಜಿನ ಸಾಧಕ ವಿದ್ಯಾರ್ಥಿಗಳನ್ನು ಕಾಲೇಜಿನ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸಮ್ಮಾನಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ವೆಂಕಟರಮಣ ದೇವ್ ಎಜುಕೇಶನಲ್ ಆ್ಯಂಡ್ ಕಲ್ಚರಲ್ ಟ್ರಸ್ಟ್‌ನ ಅಧ್ಯಕ್ಷ ಕೆ. ರಾಮಕೃಷ್ಣ ಕಾಮತ್ ಮಾತನಾಡಿ, ಮಕ್ಕಳ ಪರಿಶ್ರಮ, ಶಿಕ್ಷಕ ವೃಂದದವರ ಪ್ರಯತ್ನ, ಸಹಕಾರದಿಂದ ಇಂತಹ ಉತ್ತಮ ಫಲಿತಾಂಶ ಬರಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸ್ಥಾನಕ್ಕೇರುವಂತಾಗಲಿ ಎಂದವರು ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.



#### ಕಾರ್ಯಾಗಾರ

**ಶ್ರೀ ವೆಂಕಟರಮಣ ದೇವ ಎಜುಕೇಶನಲ್ ಮತ್ತು ಕಲ್ಚರಲ್ ಟ್ರಸ್ಟ್ ಕುಂದಾಪುರ ವತಿಯಿಂದ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲಾ ಶಿಕ್ಷಕರಿಗೆ ಶೈಕ್ಷಣಿಕ ಪುನಶ್ಚೇತನ ಕಾರ್ಯಾಗಾರ ಮಂಗಳವಾರ ನಡೆಯಿತು. ಸಂಪನ್ಮೂಲ ವ್ಯಕ್ತಿ ಡಾ. ಸಿಜು ಥಾಮಸ್ ಅವರು, ಶಿಕ್ಷಕರು ವೈಯಕ್ತಿಕ ಮತ್ತು ವೃತ್ತಿಪರ ಸಮತೋಲನವನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ವಿವರಿಸಿದರು. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ರೇಷ್ಮಾ ಡಿಸೋಜ, ಪೂರ್ವ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ಪ್ರಮೀಳಾ ಡಿಸೋಜಾ ಉಪಸ್ಥಿತರಿದ್ದರು. ಶಿಕ್ಷಕಿ ಜಾಹ್ನವಿ ಕಾರ್ಯಕ್ರಮವನ್ನು ನಿರೂಪಿಸಿದರು. ದೀಪಾ ಆಚಾರ್ ಸ್ವಾಗತಿಸಿದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ಕೃಷ್ಣ ಅಡಿಗ ವಂದಿಸಿದರು.**

ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಕೆ. ಉಮೇಶ್ ಶೆಟ್ಟಿ ಶುಭಾಶಂಸನೆಗೈದರು. ಟ್ರಸ್ಟ್‌ನ ಕಾರ್ಯದರ್ಶಿ ಕೆ. ರಾಧಾಕೃಷ್ಣ ಶೆಣೈ, ಖಜಾಂಚಿ ಕೆ. ಲಕ್ಷ್ಮೀನಾರಾಯಣ ಶೆಣೈ, ಶಾಲೆಯ ವಿವಿಧ ವಿಭಾಗಗಳ ಮುಖ್ಯ ಶಿಕ್ಷಕರಾದ ರೇಷ್ಮಾ ಡಿಸೋಜಾ, ಪ್ರಮೀಳಾ ಡಿಸೋಜಾ, ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ ಪೋಷಕರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಓರಿಯೆಂಟೇಶನ್ ಕಾರ್ಯಕ್ರಮ ನಡೆಯಿತು.

ಶ್ರೀ ವೆಂಕಟರಮಣ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಂದೀಪ್ ಗಾಣಿಗ ಪ್ರಸ್ತಾವಿಸಿ, ಉಪಪ್ರಾಂಶುಪಾಲ ಸುಜಯ್ ಕೋಟೆಗಾರ್ ಸ್ವಾಗತಿಸಿದರು. ಉಪನ್ಯಾಸಕರಾದ ಅಮೃತಾ, ಮಂಜುನಾಥ ಸಾಧಕ ವಿದ್ಯಾರ್ಥಿಗಳ ಪಟ್ಟಿ ವಾಚಿಸಿ, ಸುಧೀರ್, ಸುಪ್ರೀತಾ ಪರಿಚಯಿಸಿದರು. ಸುನೀತಾ ಶೆಟ್ಟಿ ನಿರೂಪಿಸಿ, ಭೌತಶಾಸ್ತ್ರ ವಿಭಾಗ ಮುಖ್ಯಸ್ಥ ಭರತ್ ಚಂದ್ರ ವಂದಿಸಿದರು.

---

# ನಾಗೂರು: 'ಚಿಣ್ಣರ ಕಲರವ-2026', ಎಸ್ಸೆಸ್ಸೆಲ್ಸಿಯ ಸಾಧಕರಿಗೆ ಗೌರವಾರ್ಪಣೆ



**ಬೈಂದೂರು:** ನಾಗೂರು ಪರಿಸರದ ವಿದ್ಯಾರ್ಥಿಗಳಿಗಾಗಿ ರಾಘವೇಂದ್ರ ನಾಗೂರು ಇವರ ನಿರ್ದೇಶನದಲಿ ಬೇಸಿಗೆ ಶಿಬಿರ ಚಿಣ್ಣರ ಕಲರವ-2026 ಕಾರ್ಯಕ್ರಮ ನಡೆಯಿತು. ಶಿಬಿರದಲ್ಲಿ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಶಿಬಿರದಲ್ಲಿ ನೂರಾ ಇಪ್ಪತ್ತುಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡ ಕವನ ಕಟ್ಟುವಿಕೆ, ಪೇಪರ್ ಕ್ರಾಫ್ಟ್, ಮಾರ್ಬಲ್ ಆರ್ಟ್, ಮುಖವಾಡ ತಯಾರಿಕೆ, ಹಾಡು ಪಾಡು, ಗಾಳಿಪಟ ತಯಾರಿಕೆ, ಬಣ್ಣದ ಜೊತೆ ಆಟ, ಸೂಪರ್ ಮಿನಿಟ್ ಹಾಗೂ ಇತರ ಕಾರ್ಯಕ್ರಮಗಳು ನಡೆಸಲಾಯಿತು. ಈಶ್ವರ ದೇವಾಡಿಗ, ಸಂಧ್ಯಾ ಉಡುಪ, ಫಾರುಕ್ ಸಾಹೇಬ್, ಎಮ್. ಹೆಚ್. ಉಬೈದುಲ್ಲಾ, ಚಿತ್ತಾರ ಡಿಜಿಟಲ್ ಯೋಗೀಶ್ ದೇವಾಡಿಗ, ಗಣೇಶ್ ದೇವಾಡಿಗ, ರಾಘವೇಂದ್ರ ಖಾರ್ವಿ, ಬಾಲಕೃಷ್ಣ ಪ್ರಭು, ಮಂಜುನಾಥ್ ಕಾರಂತ್, ಡಾ. ಪ್ರವೀಣ ಶೆಟ್ಟಿ, ಜಗದೀಶ್ ಕೆ, ನಾಗರತ್ನ, ವಂದನಾ, ವಿದ್ಯಾಧರ ದೇವಾಡಿಗ ಜಿಶಾನ್, ಸುರೇಶ, ಅಚ್ಯುತ್ ಬಿಲ್ಲವ, ಪದ್ಮಾವತಿ ಆರ್ಟ್ ಗ್ಯಾಲರಿಯ ದಿನಕರ, ಭಾಸ್ಕರ ದೇವಾಡಿಗ, ನಿತ್ಯಾನಂದ ದೇವಾಡಿಗ, ಗಣೇಶ್ ಹೇರಾಂಜಲು, ಕೃಷ್ಣ ಕೊಡೇರಿ, ಅನ್ನಪೂರ್ಣ ಹಾಗೂ ನೂರಾರು ಪೋಷಕರು ಇದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಕಂಬದಕೋಣೆ ಸಹಿಪ್ರಾ ಶಾಲಾ ಮುಖ್ಯಶಿಕ್ಷಕ ಮಹಾಬಲ ಕೆ., ಬಲಗೋಣ ಸಹಿಪ್ರಾ ಶಾಲಾ ಶಿಕ್ಷಕ ಶೇಖರ ದೇವಾಡಿಗ ಬಿ., ಜಿಲ್ಲಾ ಉತ್ತಮ ಪ್ರಶಸ್ತಿ ವಿಜೇತ, ಆಜ್ರಗದ್ದೆ ಸಹಿಪ್ರಾ ಶಾಲಾ ಮುಖ್ಯ ಶಿಕ್ಷಕ ದಿನೇಶ್ ಎ., ರಾಜೇಂದ್ರ ಹಳ್ಳಿಹೊಳೆ ಭಾಗವಹಿಸಿದ್ದರು. ಸಂತೋಷ್ ಮೊಗವೀರ ವಂದಿಸಿದರು.

# ಬೈಂದೂರು ಕ್ಷೇತ್ರದ ಮೀನುಗಾರರಿಗೆ ಇಲಾಖೆಯ ಲೈಫ್ ಜಾಕೆಟ್ ವಿತರಣೆ



**ಬೈಂದೂರು:** ಮಾನವನ ಜೀವ ಅತ್ಯಮೂಲ್ಯವಾದದ್ದು. ಇಂದಿನ ದಿನಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹೊಟ್ಟೆಪಾಡಿಗಾಗಿ ಮೀನುಗಾರಿಕೆಯಲ್ಲಿ ತೊಡಗಿರುವ ಸಮಯ ದುರ್ಘಟನೆಗಳಾಗಿ ಜೀವ ಕಳೆದು ಕೊಳ್ಳುವ ಸಂದರ್ಭಗಳನ್ನು ಕಾಣುತ್ತಿದ್ದೇವೆ. ಇದು ಅತ್ಯಂತ ದುರಾದೃಷ್ಟಕರ ಸಂಗತಿ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.

ಇಲ್ಲಿನ ತಾಲೂಕು ಕಚೇರಿ ಪ್ರಜಾಸೌಧದ ಸಭಾಂಗಣದಲ್ಲಿ ಬೈಂದೂರು ಕ್ಷೇತ್ರದ ಮೀನುಗಾರರಿಗೆ ಲೈಫ್‌ಜಾಕೆಟ್ ವಿತರಿಸಿ ಮಾತನಾಡಿದರು. ಈ ಸಾಲಿನ ಸಮುದ್ರ ಮೀನುಗಾರಿಕೆ ನಿಷೇಧಿತ ಅವಧಿಯಲ್ಲಿ ಸಂಪ್ರದಾಯಿಕ ಮೀನುಗಾರಿಕೆಯಲ್ಲಿ ಹಾಗೂ ನದಿಪಾತ್ರಗಳಲ್ಲಿ ಇನ್ನಿತರ ಕೆಲಸಗಳಲ್ಲಿ ತೊಡಗಿಕೊಳ್ಳುವ ಮೀನುಗಾರ ಬಾಂಧವರು ಅತ್ಯಂತ ಜಾಗರೂಕರಾಗಿದ್ದುಕೊಂಡು ಎಲ್ಲಾ ಸುರಕ್ಷತಾ ಕ್ರಮ ಅನುಸರಿಸಿ ಮೀನುಗಾರಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಮನವಿ ಮಾಡಿದರು. ಲೈಫ್‌ಜಾಕೆಟ್ ಸಾಕಷ್ಟು ಸಂಖ್ಯೆಯಲ್ಲಿ ವಿತರಣೆ ಆಗಿದ್ದು, ಅದನ್ನು ಪಡೆದು ಕೊಂಡವರು ಅದರ ಸದ್ಬಳಕೆ ಮಾಡಬೇಕು ಎಂದು ಸಲಹೆ ನೀಡಿದ ಶಾಸಕರು, ಪ್ರಸ್ತುತ ಕ್ಷೇತ್ರ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಿದ ಎಲ್ಲರಿಗೂ ಲೈಫ್‌ಜಾಕೆಟ್ ವಿತರಿಸಲಾಗಿದೆ. ಕೆಲವು ಕಡೆ ಮೀನುಗಾರರಿಂದ ಲೈಫ್‌ಬಾಯ್ ಒದಗಿಸಲು ಬೇಡಿಕೆ ಇರುವುದಾಗಿದೆ. ಹಾಗಾಗಿ ಮುಂದಿನ ಬಾರಿ ಮೀನುಗಾರರ ಬೇಡಿಕೆಯಂತೆ ಲೈಫ್‌ಬಾಯ್ ಒದಗಿಸಲು ಅಗತ್ಯ ಕ್ರಮವಹಿಸಲು ಮೀನುಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮೀನುಗಾರಿಕೆ ಸಹಾಯಕ ನಿರ್ದೇಶಕರು ಹಾಗೂ ಇತರೆ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.



**ಶಿರೂರು ಎಂ. ಎಂ. ಫೌಂಡೇಶನ್ ವತಿಯಿಂದ ಹದಿನಾರು ಫಲಾನುಭವಿಗಳಿಗೆ ಉಚಿತ ಮನೆ ಹಸ್ತಾಂತರಿಸಲಾಯಿತು. ಫೌಂಡೇಶನ್ ಟ್ರಸ್ಟಿ ಮಣಿಗಾರ್ ಮೀರಾನ್ ಸಾಹೇಬ್ ಶಿರೂರು, ಮಣಿಗಾರ ಜಾಫರ್, ಹ್ಯಾರಿಸ್, ಕಾಪ್ಸಿ ನೂರ್ ಮಹದ್, ಅರುಣ್ ಕುಮಾರ್ ಶಿರೂರು, ರವೀಂದ್ರ ಶೆಟ್ಟಿ ಸಾಧಿಕ್, ಫಯೊಸ್, ಅಲ್ತಾಫ್, ಶಕೀಲ್ ಅಹ್ಮದ್ ಮುಂತಾದವರು ಇದ್ದರು.**




**ಇನ್ನಂಜೆ ಎಸ್‌ವಿಎಚ್ ಪಿಯು ಕಾಲೇಜಿಗೆ ಎಂಆರ್‌ಪಿಎಲ್ ಸಂಸ್ಥೆಯ ಸಿಎಸ್‌ಆರ್ ನಿಧಿ ರೂ.25 ಲಕ್ಷ ಮತ್ತು ಸಂಸ್ಥೆಯಿಂದ 5 ಲಕ್ಷ ರೂ ಸಹಿತ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ ಕಂಪ್ಯೂಟರ್ ಲ್ಯಾಬ್ ಉದ್ಘಾಟನೆಯನ್ನು ಬುಧವಾರ ಎಸ್‌ವಿಎಚ್ ಶಿಕ್ಷಣ ಸೊಸೈಟಿಯ ಅಧ್ಯಕ್ಷ ಶ್ರೀವಿಶ್ವವಲ್ಲಭತೀರ್ಥ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಕಾರ್ಯದರ್ಶಿ ರತ್ನಕುಮಾರ್, ಉಪಾಧ್ಯಕ್ಷ ಪಿ. ಶ್ರೀನಿವಾಸ ತಂತ್ರಿ, ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಸಿಇಒ ಡಾ.ರಾಧಾಕೃಷ್ಣ ಎಸ್. ಐತಾಳ್, ಪ್ರಾಚಾರ್ಯರಾದ ರಾಜೇಂದ್ರ ಪ್ರಭು ಉಪಸ್ಥಿತರಿದ್ದರು.**

---

### ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ, ಹಣಕಾಸು ನಿಗಮದಿಂದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ | ಟಿ. ರಘುಮೂರ್ತಿ ಸೂಚನೆ

# ಕುಡಿಯುವ ನೀರು ಪೂರೈಕೆ ವ್ಯವಸ್ಥೆಯ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಿ

**ಉಡುಪಿ:** ಉಡುಪಿ ನಗರ ಹಾಗೂ ಕೆಲವು ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವ ಕಾಮಗಾರಿ ವಿಳಂಬದಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತವೆ. ಇವುಗಳನ್ನು ಆದ್ಯತೆ ಮೇಲೆ ಕೈಗೊಂಡು ಪೂರ್ಣಗೊಳಿಸಿ ಕುಡಿಯುವ ನೀರು ಒದಗಿಸಬೇಕು ಎಂದು ರಾಜ್ಯ ವಿಧಾನ ಮಂಡಲದ ಸಾರ್ವಜನಿಕ ಉದ್ದಿಮೆಗಳ ಸಮಿತಿ ಅಧ್ಯಕ್ಷ ಟಿ. ರಘುಮೂರ್ತಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಇಂದು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದಿ ಹಾಗೂ ಹಣಕಾಸು ನಿಗಮದ ವತಿಯಿಂದ ನಡೆಸಲಾದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.



#### ಆದ್ಯತೆ ಮೇಲೆ ಪೂರ್ಣಗೊಳಿಸಿ

ಉಡುಪಿ ನಗರಕ್ಕೆ ವಾರಾಹಿ ನದಿಯಿಂದ ಪ್ರತಿದಿನ 45 ಎಂಎಲ್‌ಡಿ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗಳನ್ನು ಆದ್ಯತೆ ಮೇಲೆ ಕೈಗೊಂಡು ಶೀಘ್ರದಲ್ಲಿ ಪೂರ್ಣಗೊಳಿಸಬೇಕು ಎಂದರು.

ಉಡುಪಿ ನಗರಕ್ಕೆ ಪ್ರಸ್ತುತ ಬಜೆ ಹಾಗೂ ಹಾಲಾಡಿಯ ಕೆಎನ್‌ಎನ್‌ಎಲ್ ನಾಲೆಯಿಂದ ತಾತ್ಕಾಲಿಕವಾಗಿ ನೀರು ನೀಡಲಾಗುತ್ತಿದೆ. ಭರತ್ಕಲ್ ಜಾಕ್‌ವೆಲ್‌ನಿಂದ ಹಾಲಾಡಿ ನೀರು ಶುದ್ಧೀಕರಣ ಘಟಕದವರೆಗೆ 3 ಕಿ.ಮೀ.ನ ಪೈಪ್‌ಲೈನ್ ಕಾಮಗಾರಿಗೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ, ಕಾಮಗಾರಿಯನ್ನು ಶೀಘ್ರದಲ್ಲಿಯೇ ಮುಕ್ತಾಯಗೊಳಿಸಬೇಕು ಎಂದರು.

> **ಹೊಸದಾಗಿ ಪ್ರಸ್ತಾವನೆ**
> ಉಡುಪಿ ನಗರದಲ್ಲಿ 270 ಕಿ.ಮೀ. ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿಗೆ 2021ರಲ್ಲಿ 330 ಕೋಟಿ ರೂ. ಅಂದಾಜು ವೆಚ್ಚದ ಯೋಜನಾ ವರದಿಯನ್ನು ಕೆಯುಡಬ್ಲ್ಯುಎಸ್‌ಡಿಬಿ ಮೂಲಕ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಅನುಮೋದನೆ ದೊರಕಿಲ್ಲ ಎಂದು ಡಿಸಿ ಸ್ವರೂಪ ಟಿ.ಕೆ. ಹೇಳಿದರು. ಹೊಸದಾಗಿ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಸಮಿತಿ ಗಮನಕ್ಕೆ ತಂದರು.

ಕಾಮಗಾರಿ ವಿಳಂಬದಿಂದಾಗಿ ಯೋಜನಾ ವೆಚ್ಚವು ದಿನದಿಂದ ದಿನಕ್ಕೆ ಹೆಚ್ಚುತ್ತಿರುತ್ತದೆ. ದರ ಪರಿಷ್ಕರಣೆಯಲ್ಲಿ ಸಿಮೆಂಟ್ ಮತ್ತು ಕಬ್ಬಿಣದ ವಸ್ತುಗಳಿಗೆ ಮಾತ್ರ ಹೆಚ್ಚುವರಿ ನೀಡಲು ಸಾಧ್ಯ. ಕಾಮಗಾರಿ ವಿಳಂಬವಾದಾಗ ಹೆಚ್ಚುವರಿ ಅನುದಾನದ ಅವಶ್ಯಕತೆಯು ಉಂಟಾಗುತ್ತದೆ. ಇದಕ್ಕೆ ಆಸ್ಪದ ನೀಡಬಾರದು ಎಂದರು.

#### ಜನಸಂಪನ್ಮೂಲ ಇಲಾಖೆ ಅನುಮತಿ ಪಡೆಯಿರಿ

ಹಾಲಾಡಿ ನೀರು ಶುದ್ಧೀಕರಣ ಘಟಕದ ಪಕ್ಕದಲ್ಲಿರುವ ವಾರಾಹಿ ಎಡದಂಡೆ ಕಾಲುವೆ ಮೂಲಕ ಕೆಎನ್‌ಎನ್‌ಎಲ್ ಇಲಾಖೆಯವರು ಕರಾರು ಒಪ್ಪಂದದಂತೆ ಉಡುಪಿ ನಗರ ಹಾಗೂ ಇತರೆ ಗ್ರಾಮಗಳಿಗೆ ಡಿಸೆಂಬರ್‌ನಿಂದ ಜೂನ್ ಅಂತ್ಯದವರೆಗೆ ನೀರು ಸರಬರಾಜು ಮಾಡಲಿದ್ದಾರೆ. ಕಾಮಗಾರಿ ಮುಗಿಯುವವರೆಗೆ ವರ್ಷಪೂರ್ತಿ ನೀಡಲು ಜಲ ಸಂಪನ್ಮೂಲ ಇಲಾಖೆಯಿಂದ ಅನುಮತಿಯನ್ನು ಪಡೆಯಬೇಕು ಎಂದರು.

#### ವಿಳಂಬವಾಗದಂತೆ ಎಚ್ಚರ ವಹಿಸಿ

ಸಮಿತಿ ಸದಸ್ಯ ಐವನ್ ಡಿ'ಸೋಜಾ ಮಾತನಾಡಿ, ಕುಡಿಯುವ ನೀರನ್ನು ಒದಗಿಸುವ ಹಾಗೂ ಚರಂಡಿ ಕಾಮಗಾರಿ ಪೂರ್ಣಗೊಳಿಸಲು 5ರಿಂದ 6 ವರ್ಷ ತೆಗೆದುಕೊಂಡರೆ ಜನರಿಗೆ ಸಮಸ್ಯೆಗಳು ಉಂಟಾಗುತ್ತವೆ. ಕಾಮಗಾರಿ ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದರು.

ಸಮಿತಿ ಸದಸ್ಯರಾದ ಜಿ.ಕೆ. ವೆಂಕಟಶಿವಾರೆಡ್ಡಿ, ಎಂ. ಕೃಷ್ಣಪ್ಪ ಶಾಂತನಗೌಡ ಡಿ.ಜಿ, ಎಸ್. ಮುನಿರಾಜು, ಟಿ.ಎನ್ ಜವರಾಯ ಗೌಡ, ಸಮಿತಿ ಉಪ ಕಾರ್ಯದರ್ಶಿಗಳಾದ ಹರೀಶ, ಶ್ರೀ ವಾತ್ಸವ, ನಗರಸಭೆ ಆಯುಕ್ತ ಮಹಾಂತೇಶ್ ಹಂಗರಗಿ, ನಗರಾಭಿವೃದಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ ಇದ್ದರು.

# ನಿಮ್ಮೂರಿನ ಸುದ್ದಿ



website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಗುರುವಾರ 28, ಮೇ 2026

## ಕಡಬ ಮೆಸ್ಕಾಂ ಜನಸಂಪರ್ಕ ಸಭೆ | ಗ್ರಾಹಕರ ಅಸಮಾಧಾನ, ಬದಲಿ ವ್ಯವಸ್ಥೆಗೆ ಅಧೀಕ್ಷಕರ ಸೂಚನೆ

# 33 ಕೆವಿ ವಿದ್ಯುತ್ ಮಾರ್ಗದಲ್ಲಿ ಸತತ ವಿದ್ಯುತ್ ವ್ಯತ್ಯಯ

**ಕಡಬ:** ಕಡಬ ಮೆಸ್ಕಾಂ ಉಪ ವಿಭಾಗ ವ್ಯಾಪ್ತಿಯ ಜನಸಂಪರ್ಕ ಸಭೆಯು ಉಪವಿಭಾಗ ಕಚೇರಿಯ ಸಭಾಂಗಣದಲ್ಲಿ ಮೆಸ್ಕಾಂ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

33 ಕೆ.ವಿ. ವಿದ್ಯುತ್ ಮಾರ್ಗದಲ್ಲಿ ಸತತ ವಿದ್ಯುತ್ ಕಡಿತ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಕಡಬ ಮೆಸ್ಕಾಂ ಉಪವಿಭಾಗ ವ್ಯಾಪ್ತಿಯಲ್ಲಿ ಆಗಾಗ ವಿದ್ಯುತ್ ವ್ಯತ್ಯಯ ಸಂಭವಿಸುತ್ತಿದೆ ಎಂದು ಗ್ರಾಹಕರು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಕಡಬ ಮೆಸ್ಕಾಂ ಎಇಇ ಸಜಿ ಕುಮಾರ್ ಪ್ರತಿಕ್ರಿಯಿಸಿ, ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಹಿನ್ನೆಲೆಯಲ್ಲಿ 33 ಕೆ.ವಿ. ವಿದ್ಯುತ್ ಮಾರ್ಗವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ಆದೇಶದಂತೆ ಈ ಕ್ರಮ ಕೈಗೊಳ್ಳಲಾಗಿದ್ದು ಇದರಿಂದ ಕಡಬ ಉಪವಿಭಾಗದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ ಎಂದರು. ಬಳಿಕ ಮಾತನಾಡಿದ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ್ ಅವರು 33 ಕೆವಿ ವಿದ್ಯುತ್ ಮಾರ್ಗವನ್ನು ಕೂಡಲೇ ಪರಿಶೀಲಿಸಿ, ಬದಲಿ ವ್ಯವಸ್ಥೆಗಳ ಕುರಿತು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಬಿಳಿನೆಲೆ ಗ್ರಾಮದ ಗೋಪಾಳಿ ಭಾಗದ ಕೆಲ ನಿವಾಸಿಗಳು, ದಾಖಲೆ ಸಮಸ್ಯೆಯಿಂದ ತಮ್ಮ ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡುವಂತೆ ಮನವಿ ಸಲ್ಲಿಸಿದರು. ಆ ಬಗ್ಗೆ ಚರ್ಚೆ ನಡೆದಾಗ ಗ್ರಾ.ಪಂ.ನಿಂದ ಎನ್‌ಒಸಿ ಸಿಗದಿರುವ ಕಾರಣ ಸಂಪರ್ಕ ನೀಡಲು ಸಾಧ್ಯವಾಗಿಲ್ಲ ಎಂಬ ಮಾಹಿತಿ ತಿಳಿದುಬಂತು. ಅದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷರು ಗ್ರಾ.ಪಂ. ಎನ್‌ಒಸಿ ಇಲ್ಲದೆ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಿಲ್ಲ. ತಾತ್ಕಾಲಿಕ ಸಂಪರ್ಕ ನೀಡುವ ಸಾಧ್ಯತೆ ಕುರಿತು ಕಾನೂನು ತಜ್ಞರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಅನೀಶ್ ಕೋಡಿಂಬಾಳ ಮಾತನಾಡಿ, ಕೋಡಿಂಬಾಳ ಭಾಗದಲ್ಲಿನ ತ್ರಿಫೇಸ್ ವಿದ್ಯುತ್ ಸಮಸ್ಯೆಯನ್ನು ಶೀಘ್ರ ಪರಿಹರಿಸುವಂತೆ ಆಗ್ರಹಿಸಿದರು. ಜೊತೆಗೆ ಸೂರ್ಯಘರ್ ಯೋಜನೆಯ ಅನುಷ್ಠಾನದ ಕುರಿತು ಮಾಹಿತಿ ನೀಡುವಂತೆ ಮನವಿ ಮಾಡಿದರು. ಅದಕ್ಕೆ ಉತ್ತರಿಸಿದ ಅಧೀಕ್ಷಕರು ಯೋಜನೆಗೆ ಸಂಬಂಧಿಸಿದ ಮಾಹಿತಿ ನೀಡಿದ್ದು, ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ ಎಂದರು. ಜಿಲ್ಲಾ ಪರಿಷತ್ ಮಾಜಿ ಸದಸ್ಯ ಸೈಯದ್ ಮೀರಾ ಸಾಹೇಬ್ ಮಾತನಾಡಿ, ಕಡಬದ ಅಡ್ಡಗದ್ದೆ ರಸ್ತೆಯ ಬದಿಯಲ್ಲಿರುವ ಮರಗಳ ಕೊಂಬೆಗಳು ವಿದ್ಯುತ್ ತಂತಿಗಳಿಗೆ ತೊಂದರೆ ಉಂಟು ಮಾಡುತ್ತಿದ್ದು ಅವುಗಳನ್ನು ತೆರವುಗೊಳಿಸುವಂತೆ ಒತ್ತಾಯಿಸಿದರು. ಈಶ್ವರ ಗೌಡ ಹೊಸ್ಮಠ ಹೊಸಮಠ ಸಿಎ ಬ್ಯಾಂಕ್ ಹಿಂಭಾಗದಲ್ಲಿರುವ ಮರಗಳಿಂದ ವಿದ್ಯುತ್ ತಂತಿಗಳು ನೆಲದತ್ತ ಬಾಗಿದ್ದು ಅಪಾಯಕಾರಿಯಾಗಿದೆ ಎಂದು ಅಹವಾಲು ಸಲ್ಲಿಸಿದರು. ಕೆ.ಎಂ. ಅಬ್ರಹಾಂ ಕವನಾಟಿಲ್ ಕೊಲ್ಯದಕಟ್ಟ ಸಮೀಪದ ವಿದ್ಯುತ್ ಪರಿವರ್ತಕಕ್ಕೆ ಸಂಪರ್ಕಿಸುವ ತಂತಿಗಳನ್ನು ಬದಲಾಯಿಸುವಂತೆ ಮನವಿ ಮಾಡಿದರು. ಕುಮಾರ ಗೋಪಾಳಿ ಮನೆ ಆವರಣದಲ್ಲಿ ಅಪಾಯಕಾರಿಯಾಗಿ ನಿಂತಿರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸುವಂತೆ ವಿನಂತಿಸಿದರು. ಕಡಬ ಜೆಇ ಸತ್ಯನಾರಾಯಣ, ಸಹಾಯಕ ತಾಂತ್ರಿಕ ಇಂಜಿನಿಯರ್ ಅನ್ನಮ್ಮ, ನೆಲ್ಯಾಡಿ ಶಾಖೆಯ ಜೆಇ ರಾಮಣ್ಣ, ಆಲಂಕಾರು ಶಾಖೆಯ ಜೆಇ ಪ್ರೇಮ್ ಕುಮಾರ್, ಬಿಳಿನೆಲೆ ಶಾಖೆಯ ಜೆಇ ಮನೋಜ್ ಹಾಗೂ ಮೇಲ್ವಿಚಾರಕ ರಾಜನ್ ಕೆ.ಆರ್. ಉಪಸ್ಥಿತರಿದ್ದರು.

### ಮಾಹಿತಿ ಇಲ್ಲ

**ಇಚ್ಲಂಪಾಡಿ ಭಾಗದಲ್ಲಿ ಆಗಾಗ ವಿದ್ಯುತ್ ಕಡಿತಗೊಳ್ಳುತ್ತಿದ್ದರೂ ಮಾಹಿತಿ ನೀಡಲಾಗುತ್ತಿಲ್ಲ ಎಂದು ಗ್ರಾಹಕರೊಬ್ಬರು ಆರೋಪಿಸಿದರು. ಅದಕ್ಕೆ ಉತ್ತರಿಸಿದ ಎಇಇ ಸಜಿ ಕುಮಾರ್, 33 ಕೆವಿ ಮಾರ್ಗದ ವಿದ್ಯುತ್ ಸ್ಥಗಿತದಿಂದ ಈ ವ್ಯತ್ಯಯ ಉಂಟಾಗುತ್ತಿದೆ ಎಂದರು. ಇಚ್ಲಂಪಾಡಿ ಬದನೆ ಪ್ರದೇಶದ 63 ಕೆವಿ ವಿದ್ಯುತ್ ಪರಿವರ್ತಕ ಪದೇ ಪದೇ ದೋಷಕ್ಕೀಡಾಗುತ್ತಿದ್ದು, ಅದನ್ನು ಬದಲಿಸಲು ಜಾನ್ಸನ್ ಮನವಿ ಮಾಡಿದರು.**

---

## ಸುತ್ತಮುತ್ತ

### ಜೂ. 2ರಂದು ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ

**ಉಡುಪಿ:** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ಉಡುಪಿ ಇವರ ವತಿಯಿಂದ ವಿಶ್ವ ಪರಿಸರ ದಿನಾಚರಣೆ 2026ರ ಅಂಗವಾಗಿ ಜೂ. 2ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಣಿಪಾಲದ ಶಿವಳ್ಳಿ ಗ್ರಾಮದ ವಿದ್ಯಾನಗರ ಜ್ಞಾನಸುಧಾ ಪಿಯು ಕಾಲೇಜಿನಲ್ಲಿ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಕ.ರಾ.ಮಾ.ನಿ.ಮಂಡಳಿಯ ಪರಿಸರ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

### ಒಲಂಪಿಯಾಡ್ ಪರೀಕ್ಷೆ: ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

**ಕುಂದಾಪುರ:** ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಯಲು ಒಲಂಪಿಯಾಡ್ ಸಹಕಾರಿಯಾಗಲಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಪ್ರಾದೇಶಿಕ ಕಚೇರಿಯ ಸಿಎಸ್‌ಸಿ ಯೋಜನಾಧಿಕಾರಿ ದಿಲೀಪ್ ಅಭಿಪ್ರಾಯಪಟ್ಟರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ ಕುಂದಾಪುರ ತಾಲೂಕಿನ ವ್ಯಾಪ್ತಿಯಲ್ಲಿ ಒಲಂಪಿಯಾಡ್ 6.0 ಪರೀಕ್ಷೆ ಬರೆದು ಉತ್ತೀರ್ಣರಾದ ಒಟ್ಟು 478 ವಿದ್ಯಾರ್ಥಿಗಳಿಗೆ ಯೋಜನಾ ಕಚೇರಿಯಲ್ಲಿ ಪ್ರಮಾಣಪತ್ರ ವಿತರಿಸಿ ಅವರು ಮಾತನಾಡಿದರು. ಯೋಜನೆಯ ತಾಲೂಕು ಯೋಜನಾಧಿಕಾರಿ ಉಮೇಶ ಶೆಟ್ಟಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಯಾವುದೇ ಹುದ್ದೆಯನ್ನು ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಬೇಕಾಗಿದ್ದು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಸಾಕಷ್ಟು ಸಿದ್ಧತೆ ಪೂರ್ವ ತಯಾರಿ ಸಿದ್ಧತೆಯ ಅವ್ಯಕತೆ ಇದೆ. ಗ್ರಾಮಾಭಿವೃದ್ಧಿ ಯೋಜನೆಯ ಸಿಎಸ್‌ಸಿ ಕೇಂದ್ರಗಳ ಮೂಲಕ 3ರಿಂದ 12 ತರಗತಿವರೆಗಿನ ವಿದ್ಯಾರ್ಥಿಗಳು ಒಲಂಪಿಯಾಡ್ ಪರೀಕ್ಷೆಗೆ ನೊಂದಣಿ ಮಾಡಿಸಿ ಆನ್ ಲೈನ್ ಮೂಲಕ ಪರೀಕ್ಷೆ ಬರೆದು ಸರ್ಟಿಫಿಕೇಟ್ ಪಡೆದುಕೊಳ್ಳಬಹುದು ಹಾಗೂ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯಬಹುದಾಗಿದೆ ಎಂದು ಹೇಳಿದರು. ಸಿಎಸ್‌ಸಿ ತಾಲೂಕು ನೋಡೆಲ್ ಅಧಿಕಾರಿ ಪ್ರದೀಪ್ ಹಾಗೂ ಹಣಕಾಸು ಪ್ರಬಂಧಕ ರೋಹಿತ್ ಇದ್ದರು.

### ಸುಂಟಿಕೊಪ್ಪ ವರ್ಕ್‌ಶಾಪ್ ಮಾಲೀಕರ ಸಂಘಕ್ಕೆ ಆಯ್ಕೆ

**ಸುಂಟಿಕೊಪ್ಪ:** ಸುಂಟಿಕೊಪ್ಪ ವರ್ಕ್‌ಶಾಪ್ ಮಾಲೀಕರ ಸಂಘದ ಅಧ್ಯಕ್ಷರಾಗಿ ಮಣಿಕಂಠನ್, ಪ್ರಧಾನ ಕಾರ್ಯದರ್ಶಿಯಾಗಿ ಸಂದೀಪ್ ಅವರನ್ನು ಆಯ್ಕೆಗೊಳಿಸಲಾಯಿತು. ಸಂಘದ ಉಪಾಧ್ಯಕ್ಷರಾಗಿ ಅನೀಸ್, ಸಹ ಕಾರ್ಯದರ್ಶಿಯಾಗಿ ರಜಾಕ್, ಸಂಘಟನಾ ಕಾರ್ಯದರ್ಶಿಯಾಗಿ ಸತೀಶ್, ಖಜಾಂಜಿಯಾಗಿ ಹೂವೆಗೌಡ, ಹಾಗೂ ಗೌರವಾಧ್ಯಕ್ಷರಾಗಿ ವಿವಿ ಸಂತೋಷ್, ಕೆಪಿ ವಿನೋದ್, ಪಿ. ಆರ್. ಸುಕುಮಾರ್ ಅವರು ಹಾಗೂ 9 ಜನ ನಿರ್ದೇಶಕರು ಆಯ್ಕೆಗೊಳಿಸಲಾಯಿತು. ಈ ವೇಳೆ ಮಾಜಿ ಅಧ್ಯಕ್ಷ ಪಿ.ಆರ್. ಸುನಿಲ್‌ಕುಮಾರ್, ತಂಗವೇಲು ನಜೀಮ್, ಸದಸ್ಯರು ಇದ್ದರು.




### ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಉಪನ್ಯಾಸ

**ಕಾರ್ಕಳ:** ಶ್ರೀ ಭುವನೇಂದ್ರ ಕಾಲೇಜಿನ ಐಕ್ಯೂಎಸಿ ಆಶ್ರಯದಲ್ಲಿ, ರಸಾಯನ ಶಾಸ್ತ್ರ ವಿಭಾಗದ ವತಿಯಿಂದ ಅತಿಥಿ ಉಪನ್ಯಾಸವು ನೆರವೇರಿತು. ಎನಪೋಯ ಸಂಸ್ಥೆಯ ಇನ್ಕ್ಯುಬೇಟರ್ ವಿಭಾಗದ ಡಾ. ಸುಪ್ರಿಯಾ ಜೈನ್ ಮಾತನಾಡಿ, ಪದವಿಯ ನಂತರದ ಶಿಕ್ಷಣಕ್ಕೆ ರಸಾಯನ ಶಾಸ್ತ್ರ ವಿಭಾಗದಲ್ಲಿ ವಿಪುಲ ಅವಕಾಶಗಳಿವೆ. ಸ್ನಾತಕೋತ್ತರ ಪದವಿ ಹಾಗೂ ಸಂಶೋಧನೆಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಇಂದಿನ ದಿನಗಳಲ್ಲಿ ಅಗತ್ಯವಾಗಿದೆ. ಸ್ಪರ್ಧಾತ್ಮಕ ಯುಗದಲ್ಲಿ ಯಾವುದೂ ಸುಲಭವಲ್ಲ, ರಸಾಯನಶಾಸ್ತ್ರ ವಿಭಾಗಕ್ಕೆ ಅದರದ್ದೇ ಆದ ಮೌಲ್ಯ ಇದೆ. ಕೃಷಿ ವಿಜ್ಞಾನ, ನ್ಯಾನೋ ತಂತ್ರಜ್ಞಾನ, ಪರಿಸರ ಸಂಶೋಧನಾ ಕ್ಷೇತ್ರವು ಅನೇಕ ಅವಕಾಶಗಳನ್ನು ಕಲ್ಪಿಸುತ್ತದೆ ಎಂದರು. ಪ್ರಾಚಾರ್ಯ, ಡಾ. ಮಂಜುನಾಥ ಎ. ಕೋಟ್ಯಾನ್, ಐಕ್ಯೂಎಸಿ ಸಂಯೋಜಕರಾದ ಪ್ರೊ. ಲಕ್ಷ್ಮೀನಾರಾಯಣ ಕೆ ಎಸ್., ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಡಾ. ಈಶ್ವರ್ ಭಟ್, ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ಮಹೇಶ್ ಕುಮಾರ್ ಇದ್ದರು. ಸೃಜಾ ಸ್ವಾಗತಿಸಿದರು. ವೆರಿನಾ ಪರಸ್ ನಿರೂಪಿಸಿದರು.

### ಕಲಿಕೋಪಕರಣ ವಿತರಣೆ

**ಬೈಂದೂರು:** ಜೆಸಿಐ ಬೈಂದೂರು ಸಿಟಿ ಸಂಸ್ಥೆಯು ತನ್ನ ಸಂಸ್ಥೆಯ ಪ್ರಮುಖ ಯೋಜನೆ ದಾನ್ ಅಭಿಯಾನದಡಿಯಲ್ಲಿ ಮಕ್ಕಳಿಗೆ ಉಚಿತವಾಗಿ ಕೊಡಮಾಡುವ ಪುಸ್ತಕ ಹಾಗೂ ಕಲಿಕೋಪಕರಣಗಳನ್ನು ಅಧ್ಯಕ್ಷೆ ಚೈತ್ರಾ ಸತೀಶ್ ಯೋಜನಾನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಯಶೋಧಾ ಅವರಿಗೆ ಹಸ್ತಾಂತರಿಸಿದರು. ಕೇತ್ರ ಶಿಕ್ಷಣಾಧಿಕಾರಿ ನಾಗೇಶ ಕೆ. ನಾಯ್ಕ್, ಎಸ್‌ಡಿಎಂಸಿ ಅಧ್ಯಕ್ಷ ಲಕ್ಷ್ಮಣ ಬೈಂದೂರು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರವೀಣ್, ಉಪಾಧ್ಯಕ್ಷೆ ಪ್ರೇಮಾ, ಜೆಸಿಐ ಘಟಕದ ಸ್ಥಾಪಕಾಧ್ಯಕ್ಷ ಮಣಿಕಂಠ ದೇವಾಡಿಗ, ನಿಕಟಪೂರ್ವಾಧ್ಯಕ್ಷ ರಾಜು ಮೊಗವೀರ, ಸದಸ್ಯರಾದ ರಾಘವೇಂದ್ರ ಸೂರ್ಕುಂದ, ನಗೇಶ ಆಚಾರ್ಯ, ಸುರೇಂದ್ರ ಶೇಟ್ ಇದ್ದರು.

---

## ಕುರ್ಪಾಡಿಯಿಂದ ಕಳ್ತೂರು ಸಂತೆಕಟ್ಟೆ ವರೆಗಿನ ಮುಖ್ಯ ರಸ್ತೆಯ ಉದ್ಘಾಟನೆ



**ಉಡುಪಿ:** ವಿಧಾನಸಭಾ ಕ್ಷೇತ್ರದ ಬ್ರಹ್ಮಾವರ ಹೆಬ್ರಿ ರಾಜ್ಯ ಹೆದ್ದಾರಿಯ ಕುರ್ಪಾಡಿಯಿಂದ ಕಳ್ತೂರು ಸಂತೆಕಟ್ಟೆ ವರೆಗಿನ ಸುಮಾರು 5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಂಡ ಮುಖ್ಯ ರಸ್ತೆಯನ್ನು ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಉದ್ಘಾಟಿಸಿದರು.

ರಸ್ತೆಯ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಅವರು ಗ್ರಾಮೀಣ ರಸ್ತೆಗಳ ಅಭಿವೃದ್ಧಿಯಿಂದ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ವೇಗ ನೀಡುವ ನಿಟ್ಟಿನಲ್ಲಿ 5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ರಸ್ತೆಯನ್ನು ಲೋಕಾರ್ಪಣೆ ಮಾಡಲಾಗಿದ್ದು, ಈಗಾಗಲೇ ಬ್ರಹ್ಮಾವರ ಹೆಬ್ರಿ ಮುಖ್ಯ ರಸ್ತೆಯ ಸುಮಾರು 80 ಶೇಕಡ ರಸ್ತೆ ದ್ವಿಪಥವಾಗಿ ಅಭಿವೃದ್ಧಿ ಪಡಿಸಲಾಗಿದ್ದು, ಕರ್ಜೆಯಿಂದ ಕುರ್ಪಾಡಿ ವರೆಗಿನ ರಸ್ತೆಯನ್ನು ಅತೀ ಶೀಘ್ರದಲ್ಲಿ ಅಭಿವೃದ್ಧಿ ಪಡಿಸಲು ವಿಶೇಷ ಆದ್ಯತೆ ನೀಡುವುದಾಗಿ ಹೇಳಿದರು.

ಸುಮಾರು 5 ಕೋಟಿ ಅನುದಾನ ಒದಗಿಸಿ ರಸ್ತೆಯ ಅಭಿವೃದ್ಧಿಗೆ ವಿಶೇಷ ಮುತುವರ್ಜಿ ವಹಿಸಿದ ಶಾಸಕ ಯಶ್ ಪಾಲ್ ಸುವರ್ಣ ರವರಿಗೆ ಗ್ರಾಮಸ್ಥರ ಪರವಾಗಿ ನಾಗರಾಜ ಸೂಡಾ ಹಾಗೂ ಸತೀಶ್ ಪೈ ಅಭಿನಂದನೆ ಸಲ್ಲಿಸಿದರು. ಉಡುಪಿ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ರಾಜೀವ್ ಕುಲಾಲ್, ನಿಕಟಪೂರ್ವ ಜಿ.ಪಂ. ಸದಸ್ಯರಾದ ಪ್ರತಾಪ್ ಹೆಗ್ಡೆ ಮಾರಾಳಿ, ಪಕ್ಷದ ಪ್ರಮುಖರಾದ ಭೈಕಾಡಿ ಸುಪ್ರಸಾದ್ ಶೆಟ್ಟಿ, ಕಮಲಾಕ್ಷ ಹೆಬ್ಬಾರ್, ಹರೀಶ್ ಶೆಟ್ಟಿ ಚೇರ್ಕಾಡಿ, ಗ್ರಾಮಾಂತರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮನೋಜ್ ಶೆಟ್ಟಿ, ಗುತ್ತಿಗೆದಾರರಾದ ತಡಾಲ್ ಸುರೇಶ್ ಶೆಟ್ಟಿ, ಕೆಂಜೂರು ಕಳ್ತೂರು ಗ್ರಾ.ಪಂ. ಸದಸ್ಯರು, ಪಕ್ಷದ ಸ್ಥಳೀಯ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು ಉಪಸ್ಥಿತರಿದ್ದರು.

## ಮಂಗಳೂರು ವಿವಿ: ಮೂಲಸೌಕರ್ಯ, ಶುಲ್ಕ ಸಮಸ್ಯೆ ಪರಿಹಾರಕ್ಕೆ ಆಗ್ರಹ, ಪ್ರತಿಭಟನೆ



**ಮಂಗಳೂರು:** ಮಂಗಳೂರು ವಿವಿಯಲ್ಲಿ ಎದುರಾಗಿರುವ ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ಮೂಲಭೂತ ಸೌಕರ್ಯಗಳ ಸಮಸ್ಯೆಗಳ ವಿರುದ್ಧ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಬುಧವಾರ ವಿವಿಯ ಆಡಳಿತ ಸೌಧದ ಬಳಿ ಪ್ರತಿಭಟನೆ ನಡೆಸಿ ಪರಿಹಾರಕ್ಕಾಗಿ ಮನವಿ ಸಲ್ಲಿಸಿದರು.

ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಬರಬೇಕಿರುವ ಅನುದಾನವನ್ನು ತಕ್ಷಣ ಬಿಡುಗಡೆಗೊಳಿಸುವಂತೆ, ಖಾಲಿ ಇರುವ ಹುದ್ದೆಗಳಿಗೆ ಪೂರ್ಣಕಾಲಿಕ ಉಪನ್ಯಾಸಕರ ನೇಮಕಗೊಳಿಸಬೇಕು ಎಂದು ಒತ್ತಾಯಿಸಿದ ವಿದ್ಯಾರ್ಥಿಗಳು ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹೆಚ್ಚಳವನ್ನು ಹಿಂಪಡೆದು 2023ರ ಶುಲ್ಕ ವ್ಯವಸ್ಥೆಯನ್ನು ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ಅಲ್ಲದೆ ವಿಭಾಗಗಳಿಗೆ ಅಗತ್ಯವಿರುವ ಲ್ಯಾಬ್ ರಾಸಾಯನಿಕಗಳು, ಉಪಕರಣಗಳು, ಕ್ರೀಡಾ ಸಾಮಗ್ರಿಗಳು, ಗ್ರಂಥಾಲಯ ಹಾಗೂ ಕಂಪ್ಯೂಟರ್ ಲ್ಯಾಬ್‌ಗಳ ದುರಸ್ತಿ ಕಾರ್ಯವನ್ನು ಕೂಡಲೇ ಕೈಗೊಳ್ಳಬೇಕೆಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ವಿದ್ಯಾರ್ಥಿಗಳ ಎಲ್ಲಾ ನ್ಯಾಯಸಮ್ಮತ ಬೇಡಿಕೆಗಳನ್ನು ತಕ್ಷಣ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ವಿದ್ಯಾರ್ಥಿ ಪ್ರತಿನಿಧಿಗಳು ಕುಲಪತಿಗಳಿಗೆ ಮನವಿ ಸಲ್ಲಿಸಿದರು. ಕುಲಪತಿ ಪ್ರೊ.ಎಲ್.ಧರ್ಮ ಅವರು ವಿದ್ಯಾರ್ಥಿಗಳಿಂದ ಮನವಿ ಸ್ವೀಕರಿಸಿ ಸಮಸ್ಯೆಯನ್ನು ಬಗೆಹರಿಸುವ ಕುರಿತು ಭರವಸೆ ನೀಡಿದರು. ವಿದ್ಯಾರ್ಥಿ ನಾಯಕ ಅಭಿಷೇಕ್ ವಾಲ್ಮೀಕಿ, ಮಂಜುನಾಥ ಮ್ಯಾಗೇರಿ, ಚೇತನ್, ಮಹೇಶ್, ಸಂಶೋಧನಾ ವಿದ್ಯಾರ್ಥಿಗಳಾದ ಸೌಮ್ಯ, ಅಮರೇಶ್, ರಘುದಾಸ್ ಉಪಸ್ಥಿತರಿದ್ದರು.

## ಕೊಪ್ಪಲಕಾಡು ಶಂಕರಭವನ ರಸ್ತೆ ಚರಂಡಿ ನಿರ್ಮಾಣಕ್ಕೆ ಚಾಲನೆ




**ಮಂಗಳೂರು:** ಮಹಾನಗರ ಪಾಲಿಕೆ ವ್ಯಾಪ್ತಿಯ 22ನೇ ಕದ್ರಿ ಪದವು ವಾರ್ಡಿನ ಕೊಪ್ಪಲಕಾಡು ಶಂಕರಭವನ ರಸ್ತೆಯ ಚರಂಡಿ ನಿರ್ಮಾಣ ಕಾಮಗಾರಿಯು 25ಲಕ್ಷ ರೂ. ವಿಶೇಷ ಅನುದಾನದಲ್ಲಿ ನಡೆಯಲಿದ್ದು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಭೂಮಿ ಪೂಜೆಯು ನಡೆಯಿತು.

ನಂತರ ಮಾತನಾಡಿದ ಶಾಸಕರು, ಈ ಭಾಗಕ್ಕೆ ಅತೀ ಅಗತ್ಯವಿರುವ ಚರಂಡಿ ನಿರ್ಮಾಣ ಕಾಮಗಾರಿಗೆ ಮಾಜಿ ಮೇಯರ್ ಹಾಗೂ ಸ್ಥಳೀಯ ನಿಕಟಪೂರ್ವ ಕಾರ್ಪೋರೇಟರ್ ಜಯಾನಂದ ಅಂಚನ್ ಅವರು ವಿಶೇಷ ರೀತಿಯಲ್ಲಿ ಶ್ರಮ ವಹಿಸಿದ್ದಾರೆ. ಸ್ಥಳೀಯರು ಸಹ ಈ ಬಗ್ಗೆ ಅನೇಕ ಬಾರಿ ಮನವಿ ಮಾಡಿದ್ದು ಲೋಕೋಪಯೋಗಿ ಇಲಾಖೆಯಿಂದ ಅನುದಾನಗಳನ್ನು ಹೊಂದಿಸಿಕೊಂಡು ಕಾಮಗಾರಿಗೆ ಚಾಲನೆ ನೀಡುತ್ತಿರುವುದು ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ಸದಾನಂದ ಪ್ರಭು, ಅಶೋಕ್, ಸೌಮ್ಯ ಧನರಾಜ್, ಗೋಪಾಲಶೆಟ್ಟಿ ವಿನಯ್, ಪ್ರವೀಣ್ ನಿಡ್ಡೇಲ್, ಮಧುಸೂದನ್ ಕುಲಾಲ್, ನೆರೆದಂತೆ ಸ್ಥಳೀಯರು, ವಾರ್ಡಿನ ಬಿಜೆಪಿ ಕಾರ್ಯಕರ್ತರು, ಉಪಸ್ಥಿತರಿದ್ದರು.



**ಉಡುಪಿ ಜಿ.ಪಂ. ಶಾಲಾ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘ ಮತ್ತು ಮಾಹೆ ಮಣಿಪಾಲ ಇವರ ಸಹಯೋಗದಲ್ಲಿ ಎಂಐಟಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಪಡೆದ ಹೆಬ್ರಿ ಪಿಆರ್‌ಎನ್ ಅಮೃತಭಾರತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯನು ಅಭಿನಂದಿಸಿದಾರೆ. ಸಂಸ್ಕೃತ ಶಿಕ್ಷಕ ವಿದ್ವಾನ್ ವೇದವ್ಯಾಸ ತಂತ್ರಿ ಮೆಡಾಮಕ್ಕಿ ಪ್ರಶಸ್ತಿ ಪತ್ರ ಸ್ವೀಕರಿಸಿದರು.**

## ಸುಳ್ಯ ಬ್ಲಾಕ್ ಕಾಂಗ್ರೆಸ್ ವತಿಯಿಂದ ಬಿಎಲ್‌ಎ-2 ವಿಶೇಷ ಸಭೆ-ಕಾರ್ಯಾಗಾರ




**ಸುಳ್ಯ:** ಸುಳ್ಯ ಬ್ಲಾಕ್ ಕಾಂಗ್ರೆಸ್ ವತಿಯಿಂದ ಬಿಎಲ್‌ಎ-2 ವಿಶೇಷ ಸಭೆ ಮತ್ತು ಕಾರ್ಯಾಗಾರ ಯುವಜನ ಸಂಯುಕ್ತ ಮಂಡಳಿ ಸಭಾಂಗಣದಲ್ಲಿ ಮಂಗಳವಾರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಅಧ್ಯಕ್ಷತೆಯಲ್ಲಿ ನಡೆಯಿತು.

ದ.ಕ. ಜಿಲ್ಲಾ ವೀಕ್ಷಕ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪದ್ಮರಾಜ್ ಆರ್. ಪೂಜಾರಿ ಮಾತನಾಡಿ, ಮತದಾರರ ಪಟ್ಟಿ ಪರಿಷ್ಕರಣೆಯ ಹಿನ್ನೆಲೆಯಲ್ಲಿ ಮತದಾರರ ಮ್ಯಾಪಿಂಗ್ ಕಾರ್ಯ ಅತೀ ಶೀಘ್ರದಲ್ಲಿ ಪೂರ್ಣಗೊಳ್ಳಲಿದ್ದು ಮತದಾರರ ಮ್ಯಾಪಿಂಗ್ ಕಾರ್ಯವನ್ನು ತ್ವರಿತಗೊಳಿಸುವ ನಿಟ್ಟಿನಲ್ಲಿ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಿದರು.

ಸುಳ್ಯ ವಿಧಾನಸಭಾ ಕ್ಷೇತ್ರದ ವೀಕ್ಷಕ ಎಂ.ಎಸ್. ಮಹಮ್ಮದ್ ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ 8594ರಷ್ಟು ಮತದಾರರ ಮ್ಯಾಪಿಂಗ್ ಕಾರ್ಯ ಇನ್ನೂ ಬಾಕಿಯಿದ್ದು ಇದರಲ್ಲಿ ಸುಳ್ಯ ಬ್ಲಾಕ್ ವ್ಯಾಪ್ತಿಯಲ್ಲಿ 4799 ಮತದಾರರ ಮ್ಯಾಪಿಂಗ್ ಬಾಕಿ ಇರುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಿ, ಈ ಬಗ್ಗೆ ಬೂತ್‌ವಾರು ಮತದಾರರ ಮ್ಯಾಪಿಂಗ್ ಪ್ರಗತಿಗೆ ಸಹಕಾರ ನೀಡಬೇಕು ಎಂದರು.

ಸಭಾ ವೇದಿಕೆಯಲ್ಲಿ ಕಾರ್ಮಿಕರ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಎಂ. ವೆಂಕಪ್ಪ ಗೌಡ, ಪಿ.ಸಿ. ಜಯರಾಮ, ವಿಧಾನಸಭಾ ಕ್ಷೇತ್ರದ ಪ್ರಚಾರ ಸಮಿತಿ ಅಧ್ಯಕ್ಷ ದಿನೇಶ್ ಅಂಬೆಕಲ್ಲು, ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷ ಅಬ್ದುಲ್ ಗಫೂರ್ ಕಲ್ಮಡ್ಕ ಸೂಡ ಅಧ್ಯಕ್ಷ ಕೆ.ಎಂ. ಮುಸ್ತಫ, ನಗರ ಕಾಂಗ್ರೆಸ್ ಅಧ್ಯಕ್ಷ ಶಶಿಧರ ಎಂ.ಜೆ. ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಭವಾನಿಶಂಕರ ಕಲ್ಮಡ್ಕ ವಂದಿಸಿದರು.

## ಗಂಗೊಳ್ಳಿ ಸರಸ್ವತಿ ವಿದ್ಯಾಲಯದಲ್ಲಿ ಪ್ರಥಮ ಪಿಯುಸಿ ಆರಂಭೋತ್ಸವ



**ಕುಂದಾಪುರ:** ಮಕ್ಕಳ ಸಾಧನೆಯಿಂದ ಹೆತ್ತವರಿಗೆ ಗೌರವ ಸಿಗುವಂತಾದರೆ ಅದು ನಿಜಕ್ಕೂ ಮಕ್ಕಳು ಹೆತ್ತವರಿಗೆ ನೀಡುವಂತಹ ಅತಿ ದೊಡ್ಡ ಉಡುಗೊರೆಯಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಜೀವನದಲ್ಲಿ ಪರಿಶ್ರಮ ಮತ್ತು ಶ್ರದ್ಧೆಯಿಂದ ಸಾಧನೆಗಳನ್ನು ಮಾಡಬೇಕು ಮತ್ತು ಗುರಿಯನ್ನು ತಲುಪಬೇಕು ಎಂದು ಗಂಗೊಳ್ಳಿಯ ಉದ್ಯಮಿ ವಾಮನ ಎಸ್. ಪೈ ಹೇಳಿದರು.

ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಪ್ರಥಮ ಪಿಯುಸಿ ತರಗತಿಗಳ ಆರಂಭೋತ್ಸವ ಮತ್ತು ಅಭಿಮುಖೀಕರಣ ಕಾರ್ಯಕ್ರಮವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲೆ ಕವಿತಾ ಎಂ. ಸಿ. ಅಧ್ಯಕ್ಷತೆ ವಹಿಸಿದ್ದರು. ಜಿ.ಎಸ್.ವಿ. ಎಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ಕಾಶೀನಾಥ್ ಪಿ. ಪೈ, ಕಾಲೇಜಿನ ಕಾರ್ಯದರ್ಶಿ ಎನ್. ಸದಾಶಿವ ನಾಯಕ್ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರತಿಭೆಗಳಾದ ಅದಿತಿ ಎಸ್. ಖಾರ್ವಿ ಅವರಿಂದ ಭರತನಾಟ್ಯ ಮತ್ತು ಶ್ಯಾಮ್ ಜಿ. ಎನ್. ಪೂಜಾರಿ ಅವರ ಕೊಳಲು ವಾದನ ಹಾಗೂ ರಚಿತ್ ಚಂದ್ರ ಖಾರ್ವಿ ಅವರಿಂದ ತಬಲ ವಾದನ ಕಾರ್ಯಕ್ರಮ ನಡೆಯಿತು.

ಉಪನ್ಯಾಸಕರಾದ ಸುಜಯೀಂದ್ರ ಹಂದೆ ಅತಿಥಿಗಳನ್ನು ಸ್ವಾಗತಿಸಿ, ನರೇಂದ್ರ ಎಸ್. ಗಂಗೊಳ್ಳಿ ಸಿಬ್ಬಂದಿಗಳನ್ನು ಪರಿಚಯಿಸಿದರು. ಎನ್.ಸಿ ವೆಂಕಟೇಶಮೂರ್ತಿ ಕಾಲೇಜಿನ ನೀತಿ ನಿಯಮಗಳ ಬಗ್ಗೆ ಮತ್ತು ಪ್ರಮೋದ ಪೈ ಎಂ.ಜಿ. ಕಚೇರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಉಪನ್ಯಾಸಕಿ ಸುಪ್ರೀತಾ ಆಚಾರ್ಯ ನಿರೂಪಿಸಿದರು. ಉಪನ್ಯಾಸಕ ಥಾಮಸ್ ಪಿ.ಎ. ವಂದಿಸಿದರು.

## ಕಾರ್ಕಳ: ಅಕ್ರಮ ಸಕ್ರಮ ಸಮಿತಿ ಸಭೆ



**ಕಾರ್ಕಳ:** ತಾಲೂಕು ಕಚೇರಿ ಸಭಾಂಗಣದಲ್ಲಿ ಶಾಸಕ ವಿ. ಸುನೀಲ್ ಕುಮಾರ್ ಅಧ್ಯಕ್ಷತೆಯಲ್ಲಿ ಅಕ್ರಮ ಸಕ್ರಮ ಸಮಿತಿ ಸಭೆ ನಡೆಸಲಾಯಿತು. ಅಕ್ರಮಸಕ್ರಮಸಮಿತಿಮುಂದೆಒಟ್ಟು6 ಕಡತಗಳನ್ನು ಹಾಜರುಪಡಿಸಲಾಗಿತ್ತು. ಸದ್ರಿ 6 ಕಡತಗಳಲ್ಲಿ 6 ಕಡತಗಳನ್ನು ಮಂಜೂರಾತಿ ಮಾಡಲಾಯಿತು. ತಹಶೀಲ್ದಾರ್ ಪ್ರದೀಪ ಆರ್., ಉಪ ತಹಶೀಲ್ದಾರ್ ಮಂಜುನಾಥ ನಾಯಕ್, ಕಂದಾಯ ನಿರೀಕ್ಷಕರಾದ ರಿಯಾಜ್ ಮಹಮ್ಮದ್, ಶಿವಪ್ರಸಾದ್ ವಿ. ರಾವ್, ವಿಷಯ ನಿರ್ವಾಹಕರಾದ ತಾರೇಶ್, ಪೂಜಾ ಬಿ., ಸಮಿತಿ ಸದಸ್ಯರಾದ ರಮೇಶ್ ಬಜಕಲ, ನವೀನ್ ದೇವಾಡಿಗ, ಸುನೀತ ಶೆಟ್ಟಿ ಕಾರ್ಕಳ, ಅಜೆಕಾರು ಹೋಬಳಿಯ ಸಿಬ್ಬಂದಿ ಇದ್ದರು.

---

## ಶಾಸಕ ಯಶ್‌ಪಾಲ್ ನೇತೃತ್ವದಲ್ಲಿ ಶೇ. 100 ಫಲಿತಾಂಶ ಶಾಲಾ ಕಾಲೇಜುಗಳಿಗೆ ಗೌರವಾರ್ಪಣೆ | ವೀರೇಶಾನಂದ ಸರಸ್ವತಿ ಶ್ರೀ ಬಣ್ಣನೆ

# ಮೌಲ್ಯಾಧಾರಿತ ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಕೊಡುಗೆ ಅನನ್ಯ

**ಉಡುಪಿ:** ಶಾಸಕ ಯಶ್‌ಪಾಲ್ ಸುವರ್ಣ ನೇತೃತ್ವದಲ್ಲಿ ಪುಷ್ಪಾನಂದ ಫೌಂಡೇಶನ್ ವತಿಯಿಂದ ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದ 41 ಶಾಲಾ ಕಾಲೇಜುಗಳಿಗೆ ಅಭಿನಂದನಾ ಸಮಾರಂಭ ಬೀಡಿನಗುಡ್ಡೆಯ ಯಕ್ಷಗಾನ ಕಲಾರಂಗ ಆಡಿಟೋರಿಯಂನಲ್ಲಿ ನಡೆಯಿತು.

ಉದ್ಘಾಟನೆ ನೆರವೇರಿಸಿದ ಶ್ರೀ ರಾಮಕೃಷ್ಣ ಆಶ್ರಮ ತುಮಕೂರಿನ ಪರಮಪೂಜ್ಯ ಶ್ರೀ ಎಸ್. ವೀರೇಶಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ಉತ್ತಮ ಸಂಸ್ಕಾರ ಹಾಗೂ ಮೌಲ್ಯಾಧಾರಿತ ಆದರ್ಶ ವ್ಯಕ್ತಿತ್ವ ರೂಪಿಸುವ ಏಕೈಕ ವೃತ್ತಿ ಶಿಕ್ಷಕ ವೃತ್ತಿಯಾಗಿದ್ದು ಮೌಲ್ಯಾಧಾರಿತ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಕೊಡುಗೆ ಅನನ್ಯವಾಗಿದ್ದು ಇಂದಿನ ಸಮಾಜದಲ್ಲಿ ಶೈಕ್ಷಣಿಕವಾಗಿ ಉತ್ತಮ ಫಲಿತಾಂಶದ ಜೊತೆಗೆ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಸಂಕಲ್ಪ ಮಾಡಬೇಕಿದೆ ಎಂದರು.



ಶಿಕ್ಷಣಕ್ಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಸಾಧನೆಯನ್ನು ಗುರುತಿಸಿ ಗೌರವಿಸುವ ಶಾಸಕ ಯಶ್‌ಪಾಲ್ ಸುವರ್ಣರವರ ಕಾರ್ಯ ಇತರರಿಗೂ ಪ್ರೇರಣೆ ಯಾಗಲಿ ಎಂದರು.

ಉಡುಪಿ ಜಿಲ್ಲೆಯ ಶೈಕ್ಷಣಿಕ ಸಾಧನೆಗೆ ವಿಶೇಷ ಮುತುವರ್ಜಿ ವಹಿಸಿದ ಶಿಕ್ಷಣ ಇಲಾಖೆಯ ಪರವಾಗಿ ಶಿಕ್ಷಣ ಇಲಾಖೆ ಉಪನಿರ್ದೇಶಕ ಲೋಕೇಶ್, ಮಾರುತಿ, ಡಯಟ್ ಪ್ರಾಂಶುಪಾಲ ಅಶೋಕ್ ಕಾಮತ್, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಯಲ್ಲಮ್ಮ, ಉಮಾ ಅವರನ್ನು ಅಭಿನಂದಿಸಲಾಯಿತು. ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಕಲ್ಯಾಣಿ, ಅಶ್ವಿತ ಹಾಗೂ ನಿಶಲ್ ಪೂಜಾರಿ, ಶೇ, 100 ಫಲಿತಾಂಶ ಬಂದ ಶಾಲಾ ಕಾಲೇಜುಗಳಿಗೆ ನಗದು ಪುರಸ್ಕಾರ ಸಹಿತ ಸನ್ಮಾನಿಸಿ ಗೌರವಿಸಲಾಯಿತು. ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಳಿ ಕಡೆಕಾರ್ ಹಾಗೂ ಜಿ.ಪಂ. ಮಾಜಿ ಸದಸ್ಯ ಪ್ರತಾಪ್ ಹೆಗ್ಡೆ ಮಾರಾಳಿ ಶಿಕ್ಷಕರಿಗೆ ಅಭಿನಂದನೆ ಸಲ್ಲಿಸಿದರು. ಶಾಸಕರ ಆಪ್ತ ಕಾರ್ಯದರ್ಶಿ ಮಟ್ಟು ಯತೀಶ್ ಕೋಟ್ಯಾನ್ ಸ್ವಾಗತಿಸಿದರು. ಶಿಕ್ಷಕ ಸತೀಶ್ಚಂದ್ರ ಶೆಟ್ಟಿ ಚಿತ್ರಪಾಡಿ ಕಾರ್ಯಕ್ರಮ ನಿರೂಪಿಸಿದರು.

### ಸಂತಸ ತಂದಿದೆ

**ಉಡುಪಿ ಜಿಲ್ಲೆಯ ಶಿಕ್ಷಣ ವ್ಯವಸ್ಥೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ನಗದು ಪುರಸ್ಕಾರದೊಂದಿಗೆ ನೂರು ಶೇಕಡ ಫಲಿತಾಂಶ ಬಂದ 41 ಶಾಲೆಗಳಿಗೆ ಫೌಂಡೇಶನ್ ವತಿಯಿಂದ ಗೌರವಿಸುತ್ತಿರುವುದು ಸಂತಸ ತಂದಿದೆ. ನರೇಂದ್ರ ಮೋದಿಯವರ ವಿಕಸಿತ ಭಾರತ ನಿರ್ಮಾಣದ ಸಂಕಲ್ಪ ಸಾಕಾರಕ್ಕೆ ಉಡುಪಿಯ ಶೈಕ್ಷಣಿಕ ಸಾಧನೆಯ ಮೂಲಕ ಮತ್ತಷ್ಟು ಶಕ್ತಿ ತುಂಬಿದೆ.**

● **ಯಶ್ ಪಾಲ್ ಸುವರ್ಣ, ಪ್ರವರ್ತಕರು, ಪುಷ್ಪಾನಂದ ಫೌಂಡೇಶನ್**

## ಸುತ್ತಮುತ್ತ

### ಡಯಾಲಿಸಿಸ್ ತಂತ್ರಜ್ಞರ ನೇಮಕಾತಿ

**ಕಾಸರಗೋಡು:** ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯಲ್ಲಿ ಕಾರುಣ್ಯ ಆರೋಗ್ಯ ಮತ್ತು ಸುರಕ್ಷತಾ ಯೋಜನೆಯಡಿ ಡಯಾಲಿಸಿಸ್ ತಂತ್ರಜ್ಞರ ನೇಮಕಾತಿಗಾಗಿ ಸಂದರ್ಶನವು ಜೂ.4 ರಂದು ಬೆಳಗ್ಗೆ 10.30ಕ್ಕೆ ಸೂಪರಿಂಟೆಂಡೆಂಟ್ ಚೇಂಬರ್‌ನಲ್ಲಿ ನಡೆಯಲಿದೆ. ಡಯಾಲಿಸಿಸ್ ತಂತ್ರಜ್ಞ ಪದವಿ, ಡಿಪ್ಲೊಮಾ. ಕೇರಳ ಪ್ಯಾರಾಮೆಡಿಕಲ್ ಕೌನ್ಸಿಲ್ ನೋಂದಣಿ ವಿದ್ಯಾರ್ಹತೆಯಾಗಿದೆ. ಮಾಹಿತಿಗೆ 04994 230080 ಸಂಪರ್ಕಿಸಬಹುದು.

### ಕಾರಡ್ಕ ಜಯನಗರದಲ್ಲಿ ಚಿರತೆ ಪತ್ತೆ: ಇಲಾಖೆಯಿಂದ ಬೋನು ಸ್ಥಾಪನೆ

**ಮುಳ್ಳೇರಿಯ:** ಕಾರಡ್ಕ ಗ್ರಾ.ಪಂ.ನ 4 ನೇ ವಾರ್ಡ್ ವ್ಯಾಪ್ತಿಯ ಜಯನಗರದಲ್ಲಿ ಚಿರತೆ ಕಾಣಿಸಿಕೊಂಡ ಬಗ್ಗೆ ವರದಿಯಾಗಿದೆ. ಈ ನಿಟ್ಟಿನಲ್ಲಿ ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ವಿಭಾಗೀಯ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಈ ನಿಮಿತ್ತ ಚಿರತೆಯನ್ನು ಹಿಡಿಯಲು ಆ ಪ್ರದೇಶದಲ್ಲಿ ಬೋನು ಸ್ಥಾಪಿಸಲಾಗಿದೆ ಎಂದು ಅರಣ್ಯ ವಿಭಾಗದ ಅಧಿಕಾರಿ ಕೆ.ಎ.ಬಾಬು ತಿಳಿಸಿದ್ದಾರೆ.

ಸ್ಥಳೀಯ ನಿವಾಸಿಗಳು ಮಂಗಳವಾರ ರಾತ್ರಿ ಮತ್ತು ಬುಧವಾರ ಬೆಳಗ್ಗೆ ಆ ಪ್ರದೇಶದಲ್ಲಿ ಚಿರತೆಯನ್ನು ಕಂಡಿದ್ದರು. ಚಿರತೆ ಈ ಪ್ರದೇಶದಲ್ಲಿ ಐದು ನಾಯಿಗಳನ್ನು ಕೊಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇದೇ ವೇಳೆ ಜಿಲ್ಲಾಧಿಕಾರಿಗಳ ಸೂಚನೆಯಂತೆ ವಿಭಾಗೀಯ ಅರಣ್ಯ ಅಧಿಕಾರಿ ಜೋಸ್ ಮ್ಯಾಥ್ಯೂ ಅವರ ಮೇಲ್ವಿಚಾರಣೆಯಲ್ಲಿ ಮತ್ತು ಕಾರಡ್ಕ ವಿಭಾಗ ಅರಣ್ಯ ಅಧಿಕಾರಿ ಕೆ.ಎ.ಬಾಬು ನೇತೃತ್ವದಲ್ಲಿ ಬೋನು ಅಳವಡಿಸಲಾಯಿತು. ಕ್ಷಿಪ್ರ ಪ್ರಕ್ರಿಯೆ ತಂಡದ ಸದಸ್ಯರು ಗೂಡು ಸ್ಥಾಪನೆ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು.

### ಎಲ್‌ಎಸ್‌ಎಸ್ ಪರೀಕ್ಷೆ: ಸಮನ್ವಿ ಸಾಧನೆ

**ಪೆರ್ಲ:** ಪೆರ್ಲ ಶ್ರೀ ಸತ್ಯನಾರಾಯಣ ಎಎಲ್‌ಪಿ ಶಾಲೆಯ ವಿದ್ಯಾರ್ಥಿನಿ ಸಮನ್ವಿ ಬಜಕೂಡ್ಲು



2025-26ನೇ ಸಾಲಿನ ಎಲ್‌ಎಸ್‌ಎಸ್ ಸ್ಕಾಲರ್ ಶಿಪ್ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದು ಉತ್ತೀರ್ಣರಾಗುವುದರೊಂದಿಗೆ ಸಾಧನೆ ತೋರಿದ್ದಾಳೆ.

ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ರಾಜೇಶ್ ಬಜಕೂಡ್ಲು ಮತ್ತು ಸುನೀತಾ ದಂಪತಿಯ ಪುತ್ರಿಯಾದ ಸಮನ್ವಿ 4ನೇ ತರಗತಿ ವಿದ್ಯಾರ್ಥಿನಿ. ಪಠ್ಯ ಚಟುವಟಿಕೆಗಳಲ್ಲದೆ ಪಠ್ಯೇತರ ಚಟುವಟಿಕೆಗಳಾದ ನೃತ್ಯ, ನಟನೆ ಹಾಗೂ ಕ್ರೀಡಾ ರಂಗದಲ್ಲೂ ಶಾಲೆ , ಉಪಜಿಲ್ಲಾ ಮಟ್ಟದಲ್ಲೂ ಸಾಧನೆ ಮೆರೆದಿದ್ದಾಳೆ. ರಂಗಡಿಂಡಿಮ ಪೆರ್ಲ ಇದರ ಕಲಾವಿದೆಯಾಗಿರುವ ಈಕೆ ಹಲವಾರು ಕನ್ನಡ ನಾಟಕಗಳಲ್ಲೂ ಅಭಿನಯಿಸಿದ್ದಳು. ಈಕೆಯ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ರಕ್ಷಕ ಶಿಕ್ಷಕ ಸಂಘದವರು ಅಭಿನಂದಿಸಿದ್ದಾರೆ.

### ಆ್ಯಂಬುಲೆನ್ಸ್ ಚಾಲಕರ ನೇಮಕಾತಿ

**ಕಾಸರಗೋಡು:** ಕರಿಂದಳಂ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಆ್ಯಂಬುಲೆನ್ಸ್ ಚಾಲಕರ ನೇಮಕಾತಿಗಾಗಿ ಜೂನ್ 1ರಂದು ಮಧ್ಯಾಹ್ನ 2 ಗಂಟೆಗೆ ಕರಿಂದಳಂ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಸಂದರ್ಶನ ನಡೆಯಲಿದೆ. ಎಸ್‌ಎಸ್‌ಎಲ್‌ಸಿ, ಹೆವಿ ಚಾಲನಾ ಪರವಾನಗಿ, ಬ್ಯಾಡ್ಜ್, ಮೂರು ವರ್ಷಗಳ ಕೆಲಸದ ಅನುಭವ ಅರ್ಹತೆಯಾಗಿದೆ. ವಯೋಮಿತಿ 50 ವರ್ಷಗಳು. ಹೆಚ್ಚಿನ ಮಾಹಿತಿಗೆ 0467 2235053 ಕರೆ ಮಾಡಬಹುದು.

### ಶಿಕ್ಷಕರ ಸಂದರ್ಶನ

**ಕಾಸರಗೋಡು:** ಚೆರುವತ್ತೂರು ಜಿಎಫ್‌ವಿಎಚ್‌ಎಸ್‌ಎಸ್ ಶಾಲೆಯಲ್ಲಿ ಎಚ್‌ಎಸ್‌ಟಿ ಇಂಗ್ಲಿಷ್ , ಹಿಂದಿ ವಿಷಯಗಳಿಗೆ ಶಿಕ್ಷಕರ ನೇಮಕಾತಿಗಾಗಿ ಮೇ 30 ರಂದು ಮಧ್ಯಾಹ್ನ 2 ಗಂಟೆಗೆ ಸಂದರ್ಶನ ನಡೆಯಲಿದೆ. ಮಾಹಿತಿಗೆ 0467 2261470 ಕರೆ ಮಾಡಬಹುದು.

### ಶಿಕ್ಷಕರ ನೇಮಕಾತಿ

**ಕಾಸರಗೋಡು:** ಇರಿಯಣ್ಣಿ ಸರಕಾರಿ ವೃತ್ತಿಪರ ಪ್ರೌಢಶಾಲೆಯ ಪ್ರೌಢಶಾಲಾ ವಿಭಾಗದಲ್ಲಿ ಎಚ್‌ಎಸ್‌ಟಿ ಭೌತ ವಿಜ್ಞಾನ, ಗಣಿತ, ಇಂಗ್ಲಿಷ್, ಮಲೆಯಾಳ, ಚಿತ್ರಕಲಾ ಹುದ್ದೆಗಳು ಮತ್ತು ಯುಪಿಎಸ್‌ಟಿ ಮಲೆಯಾಳ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನ ಮೇ 30 ರಂದು ಬೆಳಿಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಮಾಹಿತಿಗೆ 9495093814 ಕರೆ ಮಾಡಬಹುದು.

## ನಗರಸಭಾ ಆಡಳಿತದ ನಿರ್ಲಕ್ಷ್ಯ ಆರೋಪ | ಟ್ರಾಫಿಕ್ ಜಾಮ್ ಸರಿಪಡಿಸಲು ಪೊಲೀಸರ ಹರಸಾಹಸ

# ನಗರದಲ್ಲಿ ನಿತ್ಯ ಸಂಚಾರ ದಟ್ಟಣೆಯಿಂದ ನಾಗರಿಕರು ಹೈರಾಣ!

**ಕಾಸರಗೋಡು:** ಕಾಸರಗೋಡು ನಗರಸಭಾ ವ್ಯಾಪ್ತಿಯಲ್ಲಿ ವಾಹನ ದಟ್ಟಣೆ ದಿನನಿತ್ಯ ಹೆಚ್ಚುತ್ತಿದ್ದು, ಸಮಸ್ಯೆಯಾಗಿ ಪರಿಣಮಿಸಿದೆ. ಒಂದೆಡೆ ಟ್ರಾಫಿಕ್ ಜಾಮ್ ಪರಿಹರಿಸಲು ಪೊಲೀಸರು ಹರಸಾಹಸ ಪಡುತ್ತಿದ್ದು, ಇನ್ನೊಂದೆಡೆ ನಗರಸಭಾ ಆಡಳಿತ ಮಾತ್ರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ ಎಂಬ ಆರೋಪಗಳು ವ್ಯಾಪಕಗೊಂಡಿವೆ.

ಅಣಂಗೂರಿನಿಂದ ಆರಂಭಗೊಂಡು ಹೊಸ ಬಸ್ ನಿಲ್ದಾಣ ಮೂಲಕ ಚಂದ್ರಗಿರಿ ಟ್ರಾಫಿಕ್ ಜಂಕ್ಷನ್ ವರೆಗೆ, ಹಳೆ ಬಸ್ ನಿಲ್ದಾಣದಿಂದ ರೈಲ್ವೆ ಸ್ಟೇಷನ್ ರಸ್ತೆ ಹಾಗೂ ಬ್ಯಾಂಕ್ ರಸ್ತೆ ಮೂಲಕ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ತನಕ ಟ್ರಾಫಿಕ್ ಜಾಮ್ ಹೇಳತೀರದು. ಇದೇ ವೇಳೆ ನಾಯಕ್ಸ್ ರೋಡ್, ಬೀಚ್ ರೋಡ್ ಜಂಕ್ಷನ್, ಕರಂದಕ್ಕಾಡು ಜಂಕ್ಷನ್ ಮೊದಲಾದ ಭಾಗಗಳಲ್ಲಿ ವಾಹನ ದಟ್ಟಣೆಯಿಂದ ಚಾಲಕರು, ಪ್ರಯಾಣಿಕರು , ಪಾದಚಾರಿಗಳು ನಿತ್ಯ ಹೈರಾಣಾಗುತ್ತಿದ್ದಾರೆ.

ಬೆಳಿಗ್ಗೆ, ಸಂಜೆ ಹೊತ್ತಿನಲ್ಲಿ ಈ ಸಮಸ್ಯೆ ವಿಪರೀತವಾಗಿದ್ದು ಉಳಿದ ಸಮಯದಲ್ಲೂ ವಾಹನಗಳ ಸರದಿ ಸಾಲು ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಸಂಚಾರ ತಡೆ



ತಲೆದೋರುತ್ತಿದ್ದು ಕೆಲವು ಸಂದರ್ಭ ಪಾದಚಾರಿಗಳಿಗೆ ರಸ್ತೆ ದಾಟಲು ಅನಾನುಕೂಲವಾಗುತ್ತಿದೆ.

ಈ ಮಧ್ಯೆ ಹೊಸ ಬಸ್ ನಿಲ್ದಾಣದಿಂದ ನಗರದಾದ್ಯಂತ ಯಾವುದಾದರೂ ಸಂಘಟನೆಗಳು, ರಾಜಕೀಯ ಪಕ್ಷಗಳು ಅಲ್ಲದೆ ಇನ್ನಿತರ ಸಂಘ ಸಂಸ್ಥೆಗಳ ನೇತೃತ್ವ ಮೆರವಣಿಗೆ ಹಮ್ಮಿಕೊಂಡಲ್ಲಿ ಆ ದಾರಿಯಾಗಿ ಉಸಿರಾಡಲೂ ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕಾಸರಗೋಡಿನ ಜನರು, ವ್ಯಾಪಾರಿಗಳು , ಪ್ರಯಾಣಿಕರು ಸಂಚಾರ ದಟ್ಟಣೆ ಅನುಭವಿಸುತ್ತಿರುವುದು ಇಂದು ನಿನ್ನೆಯದಲ್ಲ, ಆದರೆ ನಗರದಲ್ಲಿ ಕಳೆದ ಕೆಲ ದಿನಗಳಿಂದ ಈ ಸಮಸ್ಯೆ ಇನ್ನಷ್ಟು ಬಿಗಡಾಯಿಸಿರುವುದು ಗೋಚರಿಸುತ್ತಿದೆ.

ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಇನ್ನೂ ಲಭಿಸದಿರುವುದು ದುರಂತವಾಗಿದೆ. ಈ ನಡುವೆ ಇಂತಹ ಟ್ರಾಫಿಕ್ ಜಾಮ್ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳ ಬೇಕಾದುದು ನಗರಸಭಾ ಆಡಳಿತದ ಮುಖ್ಯ ಕರ್ತವ್ಯ. ಆದರೆ ನಗರಸಭಾ ಆಡಳಿತ ಈ ಬಗ್ಗೆ ಬೇಜವಾಬ್ದಾರಿತನ ತೋರ್ಪಡಿಸುತ್ತಿದೆ ಎಂಬ ಆಕ್ರೋಶ ವ್ಯಕ್ತಗೊಂಡಿದೆ.

**ಮೇಲ್ಸೇತುವೆ ಆದರೂ ಪರಿಹಾರ ಸಿಕ್ಕಿಲ್ಲ**

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಮೇಲ್ಸೇತುವೆ ನಿರ್ಮಾಣದೊಂದಿಗೆ ಸಂಚಾರ ಸಮಸ್ಯೆಗೆ ಪರಿಹಾರ ಸಾಧ್ಯವಾದೀತು ಎಂಬ ಅಭಿಪ್ರಾಯಗಳೂ ನಿಜವಾಗಲಿಲ್ಲ. ತೀವ್ರಗೊಂಡ ಸಂಚಾರ ತಡೆ ನಿಯಂತ್ರಿಸಲು ಹೊಸ ಬಸ್ ನಿಲ್ದಾಣದಿಂದ ಹಳೆ ಬಸ್ ನಿಲ್ದಾಣ ಮೂಲಕ ಕರಂದಕ್ಕಾಡು ಜಂಕ್ಷನ್‌ವರೆಗೆ ಹೆಚ್ಚುವರಿ ಪೊಲೀಸರನ್ನು ನೇಮಿಸಲಾಗುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಶಾಲೆಗಳು ಮುಂದಿನ ವಾರ ದಿಂದ ಆರಂಭಗೊಳ್ಳಲಿದ್ದು, ಇದರೊಂದಿಗೆ ವಾಹನ ದಟ್ಟಣೆ ಮತ್ತಷ್ಟು ಬಿಗಡಾಯಿಸಲಿದೆಂಬ ಆತಂಕ ಸಾರ್ವಜನಿಕರದ್ದಾಗಿದೆ.

**ಕಾಸರಗೋಡು ನಗರದಲ್ಲಿ ಶಾಶ್ವತ ಕ್ರಮಗಳು ಬೇಕು**

**ಕಾಸರಗೋಡು ನಗರದಲ್ಲಿ ಉಂಟಾಗುತ್ತಿರುವ ಟ್ರಾಫಿಕ್ ಜಾಮ್ ಸಮಸ್ಯೆಗೆ ಶಾಶ್ವತ ಕ್ರಮಗಳು ಅತ್ಯಗತ್ಯವಾಗಿದ್ದು, ಈ ಬಗ್ಗೆ ನಗರಸಭಾ ಆಡಳಿತವು ರಸ್ತೆಗಳ ಅಗಲೀಕರಣ ಸಹಿತ ಇನ್ನಿತರ ಜನಪರ ಯೋಜನೆಗಳ ಕುರಿತು ಗಮನಹರಿಸಬೇಕಾಗಿದೆ. ಮಾತ್ರವಲ್ಲದೆ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ರಸ್ತೆ ಬದಿಗಳಲ್ಲಿ ನಿಲುಗಡೆಗೊಳಿಸುತ್ತಿರುವವರನ್ನು ಪತ್ತೆಹಚ್ಚಿ ಕಠಿಣ ಕ್ರಮ ಕೈಗೊಳ್ಳಬೇಕಿದೆ.**

**ಬಸ್ ಟ್ರಿಪ್ ಸ್ಥಗಿತದಿಂದ ಪ್ರಯಾಣಿಕರಿಗೆ ಸಂಕಷ್ಟ**

**ಕಾಸರಗೋಡು ನಗರದಲ್ಲಿ ಸಂಭವಿಸುತ್ತಿರುವ ಟ್ರಾಫಿಕ್ ಜಾಮ್‌ನಿಂದಾಗಿ ಚೆರ್ಕಳ ಭಾಗದಿಂದ ಆಗಮಿಸುವ ಬಸ್‌ಗಳು ಹೊಸ ಬಸ್ ನಿಲ್ದಾಣದಲ್ಲಿ ಟ್ರಿಪ್ ಕೊನೆಗೊಳಿಸುತ್ತಿರುವುದು ಪ್ರಯಾಣಿಕರ ತೊಂದರೆಗೆ ಕಾರಣವಾಗುತ್ತಿದೆ. ತಲಪಾಡಿ ಭಾಗದಿಂದ ಬರುವ ಬಸ್ ಗಳು ಬಸ್ ನಿಲ್ದಾಣದಿಂದ ಮುಂದೆ ತೆರಳದೆ ಅಲ್ಲೇ ಟ್ರಿಪ್ ಕೊನೆಗೊಳಿಸುತ್ತಿದೆ. ಮಂಗಳೂರಿಗೆ ತೆರಳುವ ಹೆಚ್ಚಿನ ಕೆಎಸ್ಸಾರ್ಟಿಸಿ ಬಸ್‌ಗಳು ಹೊಸ ಬಸ್ ನಿಲ್ದಾಣ ಭಾಗದಲ್ಲಿ ಗೋಚರಿಸುವ ಟ್ರಾಫಿಕ್ ಜಾಮ್‌ನಿಂದ ಪಾರಾಗಲು ಕರಂದಕ್ಕಾಡು ಮೂಲಕ ನೇರ ಮಂಗಳೂರಿಗೆ ತೆರಳುತ್ತಿವೆ. ಇದರಿಂದ ಪ್ರಯಾಣಿಕರು ಸಂಕಷ್ಟ ಅನುಭವಿಸಬೇಕಾಗಿದೆ.**

## ಶ್ರೀಕೃಷ್ಣ ನಿಧಿ ಯೋಜನೆಗೆ ಮಾಣಿಲ ಶ್ರೀ ಮೋಹನದಾಸ ಸ್ವಾಮೀಜಿ ಚಾಲನೆ



**ಪೆರ್ಲ:** ಎಣ್ಮಕಜೆ ಗ್ರಾಮದ ಪೂವಾಡಿಕಲ್ಲು ಖಂಡಿಗೆ ಎಂಬಲ್ಲಿ ಕಳೆದ ಐದು ವರ್ಷಗಳಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಸಮಿತಿಯನ್ನು ರೂಪಿಸಿ ಇದರ ವತಿಯಿಂದ ನಡೆಯುತ್ತಿರುವ ಶ್ರೀಕೃಷ್ಣ ಜನ್ಮಾಷ್ಟಮಿ ಉತ್ಸವದ ಅಂಗವಾಗಿ ಭವ್ಯವಾದ ಶ್ರೀಕೃಷ್ಣ ಮಂದಿರ ನಿರ್ಮಾಣದ ಸಹಾಯಾರ್ಥವಾಗಿ ಶ್ರೀಕೃಷ್ಣ ನಿಧಿ ಯೋಜನೆಗೆ ಚಾಲನೆ ನೀಡಲಾಯಿತು. ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಯೋಜನೆಯ ಚೀಟಿಯನ್ನು ಬಿಡುಗಡೆಗೊಳಿಸಿದರು.

**ಸಹಕಾರ ನೀಡಬೇಕು**

ಪ್ರಸ್ತುತ ಶ್ರೀಕೃಷ್ಣ ನಿಧಿ ಯೋಜನೆಯಲ್ಲಿ ಪತ್ರಿಯೊಬ್ಬರೂ ಪಾಲ್ಗೊಳ್ಳುವುದರ ಜತೆಗೆ ಮಂದಿರದ ಕೆಲಸಕಾರ್ಯಗಳನ್ನು ಮುಂದುವರಿಸಲು ಸಹಕಾರ ನೀಡಬೇಕೆಂದು ಸ್ವಾಮೀಜಿ ನುಡಿದರು. ಶ್ರೀಕೃಷ್ಣನ ಅನುಗ್ರಹ ಲಭಿಸಿದಾಗ ನಾಡು ಅಭಿವೃದ್ಧಿ ಹೊಂದುತ್ತದೆ ಎಂದು ಅವರು ಹೇಳಿದರು.

**ಸುಬ್ರಾಯರಿಂದ ಸ್ಥಳ ದಾನ**

ಶ್ರೀಕೃಷ್ಣ ಸೇವಾ ಸಮಿತಿ ಹಾಗೂ ನಿರ್ಮಾಣ ಸಮಿತಿಯ ಆಶ್ರಯದಲ್ಲಿ ಮಂದಿರ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಸುಬ್ರಾಯ ನಾಯಕ್ ಖಂಡಿಗೆ ಅವರು ಈಗಾಗಲೇ 10 ಸೆಂಟ್ಸ್ ಸ್ಥಳವನ್ನು ದಾನ ಮಾಡಿದ್ದಾರೆ. ನೀರಿನ ವ್ಯವಸ್ಥೆಗೆ ಬೇಕಾಗಿ ಒಂದು ಕೊಳವೆಬಾವಿಯನ್ನು ಕೂಡಾ ತೋಡಲಾಗಿದೆ.

ಮುಂದೆ ಸುತ್ತು ಆವರಣಗೋಡೆ, ಶಾಸ್ತ್ರಬದ್ಧ ವಾಸ್ತು ಶೈಲಿಯ ನೂತನ ಗರ್ಭಗುಡಿ ಮಂದಿರ, ನೈವೇದ್ಯ ಕೊಠಡಿ, ಅಡುಗೆ ಕೋಣೆ, ಕಾರ್ಯಾಲಯ ನಿರ್ಮಾಣಕ್ಕೆ ಸುಮಾರು 60 ಲಕ್ಷ ರೂಪಾಯಿ ಖರ್ಚು ಅಂದಾಜಿಸಲಾಗಿದೆ ಎಂದು ಮಂದಿರ ನಿರ್ಮಾಣ ಹಾಗೂ ಸೇವಾ ಸಮಿತಿ ಪದಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಅವ್ಯವಸ್ಥೆಯ ಆಗರವಾದ ಕುಂಬಳೆ ಗ್ರಾಪಂ: ಸಮಸ್ಯೆ ಬಗೆಹರಿಸದಿದ್ದರೆ ಬೃಹತ್ ಪ್ರತಿಭಟನೆ

**ಕುಂಬಳೆ:** ಕುಂಬಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಂಬಳೆ ಪೇಟೆಯಲ್ಲಿ 40 ವರ್ಷಗಳ ಹಿಂದೆ ನಿರ್ಮಿಸಲಾದ ಬಸ್ ನಿಲ್ದಾಣವನ್ನು ಏಕಾಏಕಿಯಾಗಿ ಕಳೆದ ಕೆಲವು ವರ್ಷಗಳ ಹಿಂದೆ ಕೆಡವಲಾಗಿದೆ. ಅಲ್ಲದೆ ಕುಂಬಳೆ ಪೇಟೆಯ ಕೆಲವು ಹೊಸ ಕಟ್ಟಡಗಳ ಮಾಲಕರಿಗೆ ರಿಯಾಯಿತಿ ನೀಡಲಾ ಗಿದೆ. ಈ ಮೂಲಕ ಕುಂಬಳೆ ಗ್ರಾ.ಪಂ.ಆಡಳಿತವು ಅವ್ಯವಸ್ಥೆಯಿಂದ ಅಧಿಕಾರ ನಡೆಸುತ್ತಿದೆ ಎಂದು ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿ ಸಭೆಯು ಆರೋಪಿಸಿದೆ.

**ಸಮಸ್ಯೆ ಬಗೆಹರಿಸಲು ಆಗ್ರಹ**

ಕುಂಬಳೆ ಪೇಟೆಯ ಈ ಎಲ್ಲಾ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಬೇಕು ಮತ್ತು ಬಸ್‌ಗಳು ಹಳೆಯ ಬಸ್ ನಿಲ್ದಾಣಕ್ಕೆ ಪ್ರವೇಶಿಸಿ ಪ್ರಯಾಣಿಕರನ್ನು ಕರೆದೊಯ್ಯಬೇಕು ಎಂದು ಸಭೆ ಆಗ್ರಹಿಸಿದೆ. ಇಲ್ಲದಿದ್ದರೆ ಬಿಜೆಪಿ ಜನಪರ ಹೋರಾಟದೊಂದಿಗೆ ಬೃಹತ್ ಪ್ರತಿಭಟನೆ ನಡೆಸಬೇಕಾದೀತು ಎಂದು ಬಿಜೆಪಿ ಸಭೆ ಮುನ್ನೆಚ್ಚರಿಕೆ ನೀಡಿದೆ.

ಸಭೆಯನ್ನು ಬಿಜೆಪಿ ಕುಂಬಳೆ ಮಂಡಲ ಉಪಾಧ್ಯಕ್ಷ ವಿಕ್ರಮ್ ಪೈ ಉದ್ಘಾಟಿಸಿದರು. ಕುಂಬಳೆ ದಕ್ಷಿಣ ವಲಯ ಸಮಿತಿಯ ಅಧ್ಯಕ್ಷ ಕೆ.ಸುಜಿತ್ ರೈ ಅಧ್ಯಕ್ಷತೆ ವಹಿಸಿದ್ದರು. ಕುಂಬಳೆ ಉತ್ತರ ವಲಯ ಸಮಿತಿಯ ಅಧ್ಯಕ್ಷ ಶಿವಪ್ರಸಾದ್ ರೈ ಮಡ್ವ, ಪ್ರಮುಖರಾದ ಕೆ.ವಿನೋದನ್ ಕಡಪ್ಪುರ, ಗೋಪಾಲ ಕಂಚಿಕಟ್ಟೆ, ಶಶಿ ಕುಂಬಳೆ, ಕುಂಬಳೆ ಗ್ರಾಮ ಪಂಚಾಯತ್ ಸದಸ್ಯರಾದ ಕೆ.ರಮೇಶ್ ಭಟ್, ಕಾಂಚಾರ, ಶಾರದಾ, ಅಮಿತ, ಅಜಿತ್‌ಕುಮಾರ್ ಮೊದಲಾದವರು ಮಾತನಾಡಿದರು. ಕುಂಬಳೆ ಪಂಚಾಯತ್ ದಕ್ಷಿಣ ವಲಯ ಸಮಿತಿಯ ಪ್ರಧಾನ ಕಾರ್ಯದರ್ಶಿ ವಿವೇಕಾನಂದ ಶೆಟ್ಟಿ ಸ್ವಾಗತಿಸಿ, ವರುಣ್‌ಕುಮಾರ್ ವಂದಿಸಿದರು.

**ಜನತೆ ತೊಂದರೆ ಅನುಭವಿಸುತ್ತಿದ್ದಾರೆ**

**ಕುಂಬಳೆ ಪೇಟೆಯ ಒಂದು ಭಾಗದ ವ್ಯಾಪಾರಿಗಳು ಅಂದರೆ ಕುಂಬಳೆ ಪೇಟೆ ರಸ್ತೆ, ಪೊಲೀಸ್ ಠಾಣೆ ರಸ್ತೆ ಮತ್ತು ಕುಂಬಳೆ ವಿವೇಕಾನಂದ ವೃತ್ತದ ಸುತ್ತಮುತ್ತಲಿನ ವ್ಯಾಪಾರಿಗಳು, ಪಂ. ಕಚೇರಿ, ಕೆಎಸ್‌ಇಬಿ, ಪೊಲೀಸ್ ಠಾಣೆ, ಕೃಷಿ ಭವನ, ಪಶು ವೈದ್ಯಕೀಯ ಆಸ್ಪತ್ರೆ, ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನ ಮತ್ತು ಬ್ಯಾಂಕ್‌ಗಳಿಗೆ ಹೋಗುವ ಜನರು, ಮುಸ್ಲಿಂಲೀಗ್ ನೇತೃತ್ವದ ಯುಡಿಎಫ್ ಒಕ್ಕೂಟ ಪಂ. ಆಡಳಿತದ ತುಘ್ಲಕ್ ನೀತಿಯಿಂದ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಬಿಜೆಪಿ ಕುಂಬಳೆ ಪಂ. ಸಮಿತಿ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದೆ.**

## ಕಾಞಂಗಾಡು ನಗರ ಸಭೆಯಿಂದ ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯ



**ಕಾಞಂಗಾಡು:** ಮಳೆಗಾಲದಲ್ಲಿ ತಗುಲುವ ಮಾರಕ ಹಾಗೂ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಭಾಗವಾಗಿ ಕಾಞಂಗಾಡು ನಗರಸಭೆ ನೇತೃತ್ವದಲ್ಲಿ ನಗರ ಪ್ರದೇಶ ಮತ್ತು ವಿವಿಧ ವಾರ್ಡ್‌ಗಳಲ್ಲಿ ಮಳೆಗಾಲ ಪೂರ್ವ ಶುಚಿಗೊಳಿಸುವಿಕೆ, ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಸೊಳ್ಳೆಗಳ ಸಂತಾನೋತ್ಪತ್ತಿ ಸ್ಥಳಗಳನ್ನು ನಿವಾರಿಸುವುದು ಮತ್ತು ಸುತ್ತಮುತ್ತಲಿನ ಪ್ರದೇಶ ಸ್ವಚ್ಛವಾಗಿಡುವ ಉದ್ದೇಶದಿಂದ ಸಾರ್ವಜನಿಕರ ಭಾಗವಹಿಸುವಿಕೆಯೊಂದಿಗೆ ಶುಚಿಗೊಳಿಸುವ ಚಟುವಟಿಕೆಗಳ ನಡೆಸಲಾಯಿತು.

ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್ , ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್ ಅವರ ನೇತೃತ್ವದಲ್ಲಿ ಸ್ವಚ್ಛತಾ ಅಭಿಯಾನವನ್ನು ಸಂಯೋಜಿಸಲಾಯಿತು. ನಗರಸಭೆಯ ವಿವಿಧ ಸ್ಥಾಯೀ ಸಮಿತಿಗಳ ಅಧ್ಯಕ್ಷರು ಮತ್ತು ವಾರ್ಡ್ ಕೌನ್ಸಿಲರ್‌ಗಳು ಆಯಾ ಪ್ರದೇಶಗಳಲ್ಲಿ ಚಟುವಟಿಕೆಗಳನ್ನು ನಡೆಸಿದರು.

ಹಸಿರು ಕ್ರಿಯಾ ಸೇನೆಯ ಸದಸ್ಯರು ನಗರಸಭಾ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳು ಮತ್ತು ರಸ್ತೆಬದಿಗಳನ್ನು ಸ್ವಚ್ಛಗೊಳಿಸುವ, ತ್ಯಾಜ್ಯ ತೆರವುಗೊಳಿಸುವ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಮನೆಗಳು, ಸಂಸ್ಥೆಗಳು, ಸುತ್ತಮುತ್ತಲಿನ ಪ್ರದೇಶಗಳನ್ನು ತ್ಯಾಜ್ಯದಿಂದ ಮುಕ್ತವಾಗಿಡುವ ಮಹತ್ತರ ಕಾರ್ಯಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು. ಮುಂದಿನ ದಿನಗಳಲ್ಲಿ ವಾರ್ಡ್ ಗಳನ್ನು ಕೇಂದ್ರೀಕರಿಸಿ ಇಂತಹ ಮಾಲಿನ್ಯ ತಡೆಗಟ್ಟುವ ಚಟುವಟಿಕೆ ಮುಂದುವರಿಸಲು ಕಾಞಂಗಾಡು ನಗರಸಭೆ ತೀರ್ಮಾನಿಸಿದೆ.

## ಕಾಯರ್‌ಕಟ್ಟೆ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ನವೀಕೃತ ಕಚೇರಿಯ ಉದ್ಘಾಟನೆ



**ಮಂಜೇಶ್ವರ:** ಪ್ರಮುಖ ಕನ್ನಡ ಮಾಧ್ಯಮ ಶಾಲೆಯಾದ ಪೈವಳಿಕೆ ಬಳಿಯ ಕಾಯರ್ ಕಟ್ಟೆ ಸರಕಾರಿ ಉನ್ನತ ಪ್ರೌಢಶಾಲೆಯ ನವೀಕೃತ ಹೈಸ್ಕೂಲ್ ವಿಭಾಗದ ಕಚೇರಿಯನ್ನು ಕಾಸರಗೋಡು ಜಿಲ್ಲಾ ಪಂಚಾಯತ್ ಸದಸ್ಯ ಹರ್ಷಾದ್ ವರ್ಕಾಡಿ ಉದ್ಘಾಟಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಪೈವಳಿಕೆ ಗ್ರಾಮ ಪಂಚಾಯತ್ ಸದಸ್ಯೆ ಯಶೋಧಾ ಚಿಪ್ಪಾರು, ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಆದಂ ಬಳ್ಳೂರು, ಎಸ್‌ಎಂಸಿ ಅಧ್ಯಕ್ಷ ಅಬ್ದುಲ್ ರಜಾಕ್ ಪೆರ್ವೋಡಿ, ಪಿಟಿಎ ಉಪಾಧ್ಯಕ್ಷ ಖಲೀಲ್ ಚಿಪ್ಪಾರು, ಸಿದ್ದಿಕ್ ಉಸ್ತಾದ್ ಬಾಯಾರು, ಶಾಲಾ ಪ್ರಾಂಶುಪಾಲ ಡೊಮಿನಿಕ್ ಆಗಸ್ಟಿನ್, ಶಾಲಾ ಮುಖ್ಯೋಪಾಧ್ಯಾಯಿನಿ ಭಾಗ್ಯಲಕ್ಷ್ಮಿ, ಸೀನಿಯರ್ ಅಸಿಸ್ಟೆಂಟ್ ಹರೀಶ್ ಕುಮಾರ್ ಬಿ. ಮೊದಲಾದವರು ಉಪಸ್ಥಿತರಿದ್ದು ಮಾತನಾಡಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳು, ರಕ್ಷಕರು ಭಾಗವಹಿಸಿದ್ದರು.

**ಆಧುನಿಕ ರೀತಿಯಲ್ಲಿ ನವೀಕರಣ**

**ಜಿಲ್ಲಾ ಪಂಚಾಯತ್ ಅನುದಾನದೊಂದಿಗೆ ಈ ಕಚೇರಿಯನ್ನು ಆಧುನಿಕ ರೀತಿಯಲ್ಲಿ ನವೀಕರಿಸಲಾಗಿದೆ. ಈ ಹಿಂದೆ ಹಳೆಯ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿದ್ದ ಶಾಲಾ ಕಚೇರಿಯು ಇನ್ನು ಮುಂದೆ ಎಲ್ಲಾ ಸೌಕರ್ಯಗಳೊಂದಿಗೆ ಸಜ್ಜುಗೊಂಡಿರುವ ನೂತನ ಸುಸಜ್ಜಿತ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಿದೆ.**

## ಕೊಲ್ಲಂಗಾನದಲ್ಲಿ ಮೊಬೈಲ್ ಟವರ್ ಸ್ಥಾಪನೆ ವಿರುದ್ಧ ಸ್ಥಳೀಯರಿಂದ ಪ್ರತಿಭಟನೆ



**ಕಾಸರಗೋಡು:** ಮಧೂರು ಗ್ರಾ.ಪಂ. ವ್ಯಾಪ್ತಿಯ 5ನೇ ವಾರ್ಡ್ ಕೊಲ್ಲಂಗಾನದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಮೊಬೈಲ್ ಟವರ್ ವಿರುದ್ಧ ಸ್ಥಳೀಯರು ತೀವ್ರ ಪ್ರತಿಭಟನೆಗಿಳಿದಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಸರಗೋಡು ಬ್ಲಾಕ್ ಪಂಚಾಯತ್ ಸದಸ್ಯ ಖಾದರ್ ಮಾನ್ಯ ಅವರ ಅಧ್ಯಕ್ಷತೆಯಲ್ಲಿ ಜರಗಿದ ಸರ್ವಪಕ್ಷ ಸಭೆಯಲ್ಲಿ ವಿವಿಧ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತಿತರರು ಭಾಗವಹಿಸಿದ್ದರು.

ಜನವಾಸ ವಲಯವಾದ ಕೊಲ್ಲಂಗಾನದಲ್ಲಿ ಮೊಬೈಲ್ ಟವರ್ ಸ್ಥಾಪಿಸಿದರೆ ಆರೋಗ್ಯಕ್ಕೆ ಹಾಗೂ ಪರಿಸರಕ್ಕೆ ಭಾರೀ ಮಾರಕವಾಗಲಿದೆ. ಅಲ್ಲದೆ ವಿವಿಧ ಸಮಸ್ಯೆಗಳು ಸೃಷ್ಟಿಯಾಗಲಿವೆ ಎಂಬ ಆತಂಕದ ಹಿನ್ನೆಲೆಯಲ್ಲಿ ಜನರ ಸುರಕ್ಷತೆ, ಆರೋಗ್ಯಕ್ಕೆ ವಿಶೇಷ ಒತ್ತು ನೀಡಬೇಕು ಎಂದು ತಿಳಿಸಲಾಯಿತು. ಅಲ್ಲದೆ ಜನರ ಬದುಕಿಗೆ ಮಾರಕವಾಗಿರುವ ಟವರ್ ಸ್ಥಾಪಿಸುವ ಕ್ರಮದಿಂದ ಹಿಂದೆ ಸರಿಯಬೇಕೆಂದು ಸಭೆಯಲ್ಲಿ ಅಭಿಪ್ರಾಯಪಡಲಾಗಿದೆ.

ಈ ಬಗ್ಗೆ ಸ್ಥಳೀಯಾಡಳಿತ ಸಂಸ್ಥೆಗಳ ಅಧಿಕಾರಿಗಳಿಗೂ ಮತ್ತು ಸಂಬಂಧಪಟ್ಟ ಇಲಾಖೆಗಳಿಗೂ ದೂರು ನೀಡಲು ನಿರ್ಧರಿಸಲಾಯಿತು. ಜನಪರ ಆಂದೋಲನ ಆಯೋಜಿಸಲು ಕ್ರಿಯಾ ಸಮಿತಿ ರೂಪೀಕರಿಸಲಾಯಿತು.

ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಎಂ.ರಾಜೀವನ್ ನಂಬ್ಯಾರ್, ಮಂಡಲಾಧ್ಯಕ್ಷ ಮಹಮ್ಮದ್ ವಟ್ಟಯಕ್ಕಾಡ್, ಸಿಪಿಎಂ ಬ್ರಾಂಚ್ ಕಾರ್ಯದರ್ಶಿ ಮೋಹನನ್ ಪನ್ನಿಪ್ಪಾರ, ಬಿಜೆಪಿ ಬೂತ್ ಸಮಿತಿ ಅಧ್ಯಕ್ಷ ಉದಯಕುಮಾರ್, ವಿವಿಧ ರಾಜಕೀಯ ಪಕ್ಷಗಳ ಮುಖಂಡರಾದ ಸಾದಿಕ್ ಕೊಲ್ಲಂಗಾನ, ಸಂತೋಷ್ ಕ್ರಾಸ್ತಾ, ಸುಜಾತ ರೈ, ಧರ್ಮಧೀರ ಎಂ., ಅಬ್ದುಲ್ ರಶೀದ್, ರಾಫೆಲ್ ರಾಡ್ರಿಗಸ್, ಹರ್ಷ ಕುಮಾರ್, ಕಿಶೋರ್, ಗಣೇಶ್, ರಶೀದ, ಶೈಜ, ಫೆಲಿಕ್ಸ್, ಶರತ್, ವಿಜಯ್ ಜೋನ್, ಸುರೇಶ್ ರಾಡ್ರಿಗಸ್ ಮಾತನಾಡಿದರು.

ವಾರ್ಡ್ ಪ್ರತಿನಿಧಿ ಮಂಜು ಕೆ. ವಿಜಯ್ ಸ್ವಾಗತಿಸಿ, ಶಶಿಕರ ವಂದಿಸಿದರು.

## ಅಪಾಯವನ್ನು ಆಹ್ವಾನಿಸುತ್ತಿದೆ ವಿದ್ಯುತ್ ತಂತಿಗೆ ಬಾಗಿದ ಮರ: ಸ್ಥಳೀಯರಲ್ಲಿ ಆತಂಕ



**ಉಪ್ಪಳ:** ವಿದ್ಯುತ್ ತಂತಿಗಳ ಮೇಲೆ ಅಕೇಶಿಯಾದ ಬೃಹತ್ ಮರವೊಂದು ಬಾಗಿಕೊಂಡಿದ್ದು ಯಾವುದೇ ಕ್ಷಣದಲ್ಲಿ ಮುರಿದು ಬೀಳುವ ಆತಂಕ ಎದುರಾಗಿದ್ದು, ಅಪಾಯವನ್ನು ಆಹ್ವಾನಿಸುವಂತಿದೆ.

ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ 8ನೇ ವಾರ್ಡ್ ಬೇಕೂರು ಹಳೆ ಅಂಚೆ ಕಚೇರಿ ಬಳಿಯ ಉಬರ್ಲೆ ರಸ್ತೆಯಲ್ಲಿ ಈ ಆತಂಕದ ಸ್ಥಿತಿ ಕಂಡುಬಂದಿದೆ. ಈ ಪರಿಸರದಿಂದ ಹಾದು ಹೋದ ವಿದ್ಯುತ್ ತಂತಿಗಳ ಮೇಲ್ಭಾಗದಲ್ಲಿ ಖಾಸಗಿ ವ್ಯಕ್ತಿಯ ಬೃಹತ್ ಮರವೊಂದು ಬಾಗಿಕೊಂಡಿದ್ದು ಅದರ ರೆಂಬೆಕೊಂಬೆಗಳು ಗಾಳಿಗೆ ತಂತಿಗಳಿಗೆ ಸ್ಪರ್ಶಿಸುತ್ತಿವೆ. ಇದರಿಂದಾಗಿ ಪದೇ ಪದೇ ವಿದ್ಯುತ್ ಸ್ಥಗಿತಗೊಳ್ಳುತ್ತಿದೆ. ಅಲ್ಲದೆ ಮಳೆ, ಗಾಳಿಗೆ ಯಾವುದೇ ಕ್ಷಣದಲ್ಲಿ ಮುರಿದು ಬಿದ್ದಲ್ಲಿ ಸಮೀಪದಲ್ಲಿರುವ ಮನೆ ಹಾಗೂ ಹಟ್ಟಿ ಧರಾಶಾಹಿಯಾಗುವ ಭೀತಿ ಉಂಟಾಗಿದೆ.

**ಮರ ತೆರವಿಗೆ ನಾಗರಿಕರ ಒತ್ತಾಯ**

**ಈ ದಾರಿಯಾಗಿ ದಿನನಿತ್ಯ ಮಕ್ಕಳು, ಮಹಿಳೆಯರು ಸಹಿತ ಹಲವಾರು ಮಂದಿ ನಡೆದಾಡುತ್ತಿದ್ದಾರೆ. ಮಳೆಗಾಲದಲ್ಲಿ ಯಾವುದೇ ವೇಳೆ ಮುರಿದು ಬಿದ್ದು ದುರಂತ ಸಂಭವಿಸುವ ಮೊದಲೇ ಈ ಮರವನ್ನು ತೆರವುಗೊಳಿಸಿ ವಿದ್ಯುತ್ ತಂತಿಗಳಿಗೆ ಹಾಗೂ ಸ್ಥಳೀಯರಿಗೆ ಭದ್ರತೆ ಒದಗಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಊರವರು ಒತ್ತಾಯಿಸಿದ್ದಾರೆ.**

## ಸಾಹಿತಿ ಪ್ರೊ.ಶ್ರೀನಾಥ್‌ಗೆ ಅಂತಾರಾಷ್ಟ್ರೀಯ ಆರ್ಯಭಟ ಪ್ರಶಸ್ತಿ ಪ್ರದಾನ

**ಕಾಸರಗೋಡು:** ಕಳೆದ ಬಾರಿ ಸುವರ್ಣ ಸಂಭ್ರಮ ಆಚರಿಸಿದ ಅಂತಾರಾಷ್ಟ್ರೀಯ ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯು ತನ್ನ 51ನೇ ವರ್ಷದ ಅಂತಾರಾಷ್ಟ್ರೀಯ ಆರ್ಯಭಟ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿತ್ತು. ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ರಾಜೇಂದ್ರ ಬಾದಾಮಿಕರ್ ಕಾರ್ಯಕ್ರಮ ದೀಪ ಬೆಳಗಿಸಿ ಉದ್ಘಾಟಿಸಿದರು.

ಸಮಾರಂಭದಲ್ಲಿ ಕಾಸರಗೋಡಿನ ವಿಶ್ರಾಂತ ಕನ್ನಡ ಪ್ರಾಧ್ಯಾಪಕ, ಜಾನಪದ ವಿದ್ವಾಂಸ, ಗೊಂಬೆಯಾಟ ಕಲಾವಿದ, ಕೇರಳ ತುಳು ಅಕಾಡೆಮಿಯ ಮಾಜಿ ಸದಸ್ಯ, ಶಿಕ್ಷಣ ತಜ್ಞ, ಸಾಹಿತಿ ಪ್ರೊ.ಎ.ಶ್ರೀನಾಥ್ ಕಾಸರಗೋಡು ಅವರಿಗೆ ಶಿಕ್ಷಣ, ಸಾಹಿತ್ಯ ಮತ್ತು ಕಲಾಕ್ಷೇತ್ರದ ಸಾಧನೆಗಾಗಿ 2026ನೇ ಸಾಲಿನ ಅಂತಾರಾಷ್ಟ್ರೀಯ 'ಆರ್ಯಭಟ' ಪ್ರಶಸ್ತಿಯನ್ನು ಪ್ರದಾನಿಸಿ ಗೌರವಿಸಲಾಯಿತು.



ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಚ್.ಎಲ್.ಎನ್.ರಾವ್ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ದೂರದರ್ಶನ ಕೇಂದ್ರದ ವಿಶ್ರಾಂತ ಹೆಚ್ಚುವರಿ ಮಹಾನಿರ್ದೇಶಕ ನಾಡೋಜ ಡಾ.ಮಹೇಶ್ ಜೋಶಿ, ಖ್ಯಾತ ವಿದ್ವಾಂಸ, ವಿದ್ಯಾ ವಾಚಸ್ಪತಿ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ ಮುಖ್ಯ ಅತಿಥಿಗಳಾಗಿ ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

ಸ್ವಾಗತ ಸಮಿತಿಯ ಡಾ.ಕೆ.ಎನ್.ಅಡಿಗ ಅಡೂರು, ಗುರುರಾಜ್, ಡಾ.ಬಸವರಾಜು, ಎಚ್.ಎಸ್. ಹನುಮಂತ ರಾವ್, ಸುಮಾ, ವಿ.ನಾಗೇಂದ್ರ, ಮಂಗಳೂರಿನ ಪ್ರತಿನಿಧಿ ಪ್ರೊ.ಭಾಸ್ಕರ ರೈ ಕುಕ್ಕುವಳ್ಳಿ ಮೊದಲಾದವರು ಉಪಸ್ಥಿತರಿದ್ದರು.

ಸಂಸ್ಥೆಯ ಅಧ್ಯಕ್ಷ ಡಾ.ಎಚ್.ಎಲ್.ಎನ್.ರಾವ್ ಸ್ವಾಗತಿಸಿ, ಪ್ರಸ್ತಾವನೆಗೈದರು. ಕಾರ್ಯದರ್ಶಿ ಡಾ.ಬಸವರಾಜು ವಂದಿಸಿದರು. ಸಾರ್ಥವಳ್ಳಿ ನಾರಾಯಣಸ್ವಾಮಿ ಮತ್ತು ಆರ್.ವೆಂಕಟರಾಜು ಕಾರ್ಯಕ್ರಮ ನಿರೂಪಿಸಿದರು.

**ಸಾಂಸ್ಕೃತಿಕ ಕಾರ್ಯಕ್ರಮ**

ಸಮಾರಂಭಕ್ಕೂ ಮುನ್ನ ಭರತನಾಟ್ಯ, ಜಾನಪದ ನೃತ್ಯ, ಸ್ಯಾಕ್ಸೋಫೋನ್, ಬೊಂಬೆ ವೈಭವ, ಚೆಂಡೆ ವಾದನ ಹಾಗೂ ನಾಡಗೀತೆಯೊಂದಿಗೆ ವರ್ಣರಂಜಿತ ಆರ್ಯಭಟ ನೃತ್ಯೋತ್ಸವ ಕಾರ್ಯಕ್ರಮ ಜರಗಿತು.

**72 ಮಂದಿ ಹಿರಿಯ ಸಾಧಕರಿಗೆ ಪ್ರಶಸ್ತಿ ಪ್ರದಾನ**

**ತುಳು ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರದ ಸೇವೆಗಾಗಿ ಮಂಗಳೂರಿನ ಡಾ.ಸಂಜೀವ ದಂಡಕೇರಿ, ಮಹಿಳಾ ಯಕ್ಷಗಾನದಲ್ಲಿ ಕುಂದಾಪುರ ಪ್ರೇಮಾ ಕಿಶೋರ್, ಭರತನಾಟ್ಯದಲ್ಲಿ ಪುತ್ತೂರಿನ ರೋಹಿಣಿ ಉದಯ್ ಸೇರಿದಂತೆ ರಾಜ್ಯ, ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 72 ಮಂದಿ ಹಿರಿಯ ಸಾಧಕರಿಗೆ 2025-26ನೇ ಸಾಲಿನ ಅಂತಾರಾಷ್ಟ್ರೀಯ 'ಆರ್ಯಭಟ' ಪ್ರಶಸ್ತಿಯನ್ನು ವಿತರಿಸಲಾಯಿತು.**

## ಸಾಹಿತ್ಯ ಗಾನ ನೃತ್ಯ ವೈಭವ ಕಾರ್ಯಕ್ರಮ



**ಕಾಸರಗೋಡು:** ಕೃಷ್ಣಮೂರ್ತಿ ಕುಲಕರ್ಣಿ ನೇತೃತ್ವದ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಹುಬ್ಬಳ್ಳಿ ಜಿಲ್ಲಾ ಘಟಕ, ಪರ್ಯಾಯ ಉಡುಪಿ ಶೀರೂರು ಮಠ ಶ್ರೀಕೃಷ್ಣ ಮಠದ ಸಹಯೋಗದಲ್ಲಿ ಪುಸ್ತಕ ದಾನ ಮತ್ತು ಚುಟುಕು ಸಂಭ್ರಮ ರಾಜಾಂಗಣದಲ್ಲಿ ಪರ್ಯಾಯ ಶೀರೂರು ಮಠದ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿ ಆಶೀರ್ವಾದದೊಂದಿಗೆ ನಡೆಯಿತು. ಡಾ.ವಾಣಿಶ್ರೀ ಕಾಸರಗೋಡು ಸಾರಥ್ಯದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ಇದರ ವತಿಯಿಂದ 218ನೇ ಕನ್ನಡ ಸಾಹಿತ್ಯ ಗಾನ ನೃತ್ಯ ವೈಭವ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು. ಹುಲಿ ಕುಣಿತ, ಸ್ಯಾಕ್ಸೋಫೋನ್ ವಾದನ, ಶಿವಲಿಂಗ ದರ್ಶನ, ಯಕ್ಷ ನೃತ್ಯ, ಭರತನಾಟ್ಯ, ರಿಂಗ್ ಡಾನ್ಸ್ ಹಾಸ್ಯ ಚಟಾಕಿ, ಭಕ್ತಿ ಭಾವ ಗಾಯನ, ಬಹುವಿಧ ನೃತ್ಯ ಹೀಗೆ ವಿವಿಧ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲಾಯಿತು.

ಸುತ್ತಮುತ್ತ

## 3 ವರ್ಷಗಳ ಸಾಧನೆಯ ಶ್ವೇತಪತ್ರ, ಹೊರಡಿಸಲಿ: ವಿರಾಜಪೇಟೆ ಬಿಜೆಪಿ



**ಮಡಿಕೇರಿ:** ಕಳೆದ ಮೂರು ವರ್ಷಗಳ ಅವಧಿಯಲ್ಲಿ ವಿರಾಜಪೇಟೆ ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳ ಶ್ವೇತಪತ್ರವನ್ನು ಶಾಸಕರು ತಕ್ಷಣ ಬಿಡುಗಡೆ ಮಾಡಬೇಕೆಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಒತ್ತಾಯಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಲಾಯಿತೇ ಹೊರತು ಇಲ್ಲಿಯವರೆಗೆ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಮಾತ್ರ ಕೋಟಿಗಟ್ಟಲೆ ಅನುದಾನದ ಸುಳ್ಳು ಪ್ರಚಾರ ನೀಡಿ ಜನರ ಹಾದಿ ತಪ್ಪಿಸಲಾಗುತ್ತಿದೆ. ಇದೀಗ 150 ಕೋಟಿ ರೂ.ಗಳ ಅನುದಾನದ ಬಗ್ಗೆ ಪ್ರಚಾರ ನೀಡಲಾಗುತ್ತಿದೆಯಾದರೂ ಮಳೆಯ ನೆಪವೊಡ್ಡಿ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳುತ್ತಿಲ್ಲ ಎಂದು ಆರೋಪಿಸಿದ್ದಾರೆ. ಬಜೆಟ್ ನಲ್ಲಿ ಘೋಷಣೆಯಾದ ಯೋಜನೆಗಳನ್ನು ಆರಂಭಿಸುವ ಕಾಳಜಿ ತೋರಿಲ್ಲ, ಅಭಿವೃದ್ಧಿ ಕಾರ್ಯಗಳ ಕುರಿತು ಪ್ರಶ್ನಿಸುವವರ ಬಾಯಿ ಮುಚ್ಚಿಸುವ ಕೆಲಸವನ್ನು ಕಾಂಗ್ರೆಸ್ಸಿಗರು ಮಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಗ್ರಾ.ಪಂ ಮಾಡಬಹುದಾದ ಕಾಮಗಾರಿ ಮಾಡಿ ಮಹಾ ಸಾಧನೆ ಮಾಡಿದಂತೆ ಪ್ರತಿಬಿಂಬಿಸಿ ಕೊಳ್ಳಲಾಗುತ್ತಿದೆ. ಗ್ರಾಮ ಗ್ರಾಮಗಳಲ್ಲಿ ಅಭಿವೃದ್ಧಿ ಶೂನ್ಯವಾಗಿದೆ, ತಮ್ಮ ಹಿತೈಷಿಗಳನ್ನು ಮತ್ತು ಪಕ್ಷದ ಕಾರ್ಯಕರ್ತರನ್ನು ಮೆಚ್ಚಿಸಲಷ್ಟೇ ಕೆಲವು ಭಾಗಗಳಲ್ಲಿ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಜನಸಾಮಾನ್ಯರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ಕಾರ್ಯವನ್ನು ಶಾಸಕರು ಮಾಡುತ್ತಿಲ್ಲ, ಅಭಿವೃದ್ಧಿಯ ಹರಿಕಾರರೆಂದು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಬೆಂಬಲಿಗರಿಂದ ಪ್ರಚಾರಗಿಟ್ಟಿಸಿಕೊಳ್ಳುತ್ತಿರುವ ಶಾಸಕರು 3 ವರ್ಷಗಳ ಸಾಧನೆಯ ಶ್ವೇತಪತ್ರವನ್ನು ಮೊದಲು ಹೊರಡಿಸಲಿ ಎಂದು ರಾಕೇಶ್ ದೇವಯ್ಯ ಸವಾಲು ಹಾಕಿದ್ದಾರೆ.

## ರಿಕ್ಷಾ ಡಿಕ್ಕಿ: ಪಾದಚಾರಿಗೆ ಗಂಭೀರ ಗಾಯ

**ಸುರತ್ಕಲ್:** ರಾಷ್ಟ್ರೀಯ ಹೆದ್ದಾರಿ 66ರ ಮುಕ್ಕ ಬಳಿ ಗೂಡ್ಸ್ ಟೆಂಪೋ ಡಿಕ್ಕಿಯಾಗಿ ಪಾದಚಾರಿ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ನಡೆದಿದೆ. ಗಾಯಾಳುವನ್ನು ಸುರತ್ಕಲ್ ಸಮೀಪದ ಪಡ್ರೆ ನಿವಾಸಿ ಶ್ರೀಧರ್ ಅಮೀನ್ ಎಂದು ಗುರುತಿಸಲಾಗಿದೆ. ಅವರು ರಾಷ್ಟ್ರೀಯ ಹೆದ್ದಾರಿ 66 ರ ಉಡುಪಿ-ಮಂಗಳೂರು ರಸ್ತೆಯನ್ನು ನಡೆದು ಕೊಂಡು ದಾಟಿ ಮಂಗಳೂರು-ಉಡುಪಿ ರಸ್ತೆಯನ್ನು ದಾಟುತ್ತಿರುವಾಗ ಮಂಗಳೂರು ಕಡೆಯಿಂದ ಉಡುಪಿ ಕಡೆಗೆ ಹೋಗುತ್ತಿದ್ದ ಗೂಡ್ಸ್ ರಿಕ್ಷಾ ಚಾಲಕ ಅನ್ವಾರ್ ಎಂಬವರ ನಿರ್ಲಕ್ಷ್ಯತನದ ಚಾಲನೆಯಿಂದ ಈ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಶ್ರೀಧರ್ ಅವರ ತಲೆಗೆ ಗಂಭೀರ ಗಾಯಗಳಾಗಿದ್ದು ಮುಕ್ಕದ ಖಾಸಗಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ದಾಖಲಾಗಿದ್ದಾರೆ. ಈ ಬಗ್ಗೆ ಮಂಗಳೂರು ಉತ್ತರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ ಮುಂದೆ ಸಾರ್ವಜನಿಕರ ಅಳಲು

# ರಾಜಕಾಲುವೆ ಅವ್ಯವಸ್ಥೆಯಿಂದ ದಿನನಿತ್ಯವೂ ನರಕದರ್ಶನ

**ಮಂಗಳೂರು:** ನಗರದಲ್ಲಿ ಕೆಯುಐಡಿಎಫ್‌ಸಿ ವತಿಯಿಂದ ಕೈಗೊಂಡ ವಿವಿಧ ಕಾಮಗಾರಿಗಳನ್ನು ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ ಬುಧವಾರ ಪರಿಶೀಲನೆ ನಡೆಸಿತು.

ನಗರದ ಬಿಜೈ ಆನೆಗುಂಡಿ ಸೇತುವೆಯ ಬಳಿಯಲ್ಲಿ ರಾಜಕಾಲುವೆಯಲ್ಲಿ ಒಳಚರಂಡಿ ತ್ಯಾಜ್ಯ ಹರಿಯುತ್ತಿರುವ ಬಗ್ಗೆ ಪರಿಶೀಲನೆ ನಡೆಸಿದ ಸಮಿತಿ ಅಧ್ಯಕ್ಷ ಟಿ. ರಘುಮೂರ್ತಿ ಹಾಗೂ ಸಮಿತಿ ಸದಸ್ಯರು, ಅಧಿಕಾರಿಗಳು ಹಾಗೂ ಸ್ಥಳೀಯರಿಂದ ಮಾಹಿತಿ ಪಡೆದರು. ಆನೆಗುಂಡಿ ಬಳಿ ಒಳಚರಂಡಿ ತ್ಯಾಜ್ಯ ರಾಜಕಾಲುವೆಯಲ್ಲಿ ಹರಿಯುತ್ತಿದ್ದು, ದುರ್ವಾಸನೆ ಹಾಗೂ ರೋಗ ಹರಡುವ ಭೀತಿಯೊಂದಿಗೆ ಜನರು ವಾಸಿಸುತ್ತಿದ್ದಾರೆ ಎಂದು ಸ್ಥಳೀಯರು ಈ ವೇಳೆ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಕೊಡಿಯಾಲ್ ಗುತ್ತು ಸಮೀಪದ ವೆಟ್‌ವೆಲ್‌ಗೆ ಭೇಟಿ ನೀಡಿದರು. ವೆಟ್‌ವೆಲ್ ಕಾರ್ಯ ಸ್ಥಗಿತಗೊಳಿಸಿದ್ದು, ಒಳಚರಂಡಿ ಕೊಳಚೆಯನ್ನು ನೇರವಾಗಿ ರಾಜಕಾಲುವೆಗೆ ಬಿಡಲಾಗುತ್ತಿದೆ. ಮಳೆಗಾಲದಲ್ಲಿ ನೆರೆಯಾಗುತ್ತಿದ್ದು ಸ್ಥಳೀಯ ಮನೆಗಳಿಗೆ ಕೊಳಚೆ ನೀರು ನುಗ್ಗುತ್ತಿದೆ. ಮನೆಗಳು ನೆರೆಯಿಂದ ಆವೃತ್ತಗೊಳ್ಳುತ್ತವೆ. ಪರಿಸರದಲ್ಲಿ ದುರ್ವಾಸನೆ ಜತೆಗೆ ಜನ ವಾಸಿಸಲು ಸಂಕಷ್ಟ ಅನುಭವಿಸುವಂತಾಗಿದೆ. ಪ್ರತೀ ನಿತ್ಯ ನಿವಾಸಿಗಳು ನರಕ ಯಾತನೆ ಅನುಭವಿಸುತ್ತಿದ್ದೇವೆ. ಪಾಲಿಕೆ ಮೂಲಕ ರಸ್ತೆಯನ್ನು ಅಗೆಯುವುದು, ಪೈಪ್ ಅಳವಡಿಸುವುದು, ಮತ್ತೆ ಅಗೆಯು ವುದು ಇದೇ ಪರಿಪಾಠವಾಗಿದೆ. ಪಾಲಿಕೆ ಅಧಿಕಾರಿಗಳಿಗೆ ಸರಿಯಾದ ಸೂಚನೆ ನೀಡಬೇಕು ಎಂದು ಸ್ಥಳೀಯರು ಆಗ್ರಹಿಸಿದರು. ಸಮಿತಿ ಸದಸ್ಯ ಐವನ್ ಡಿಸೋಜ, ಕಿಶೋರ್ ಕುಮಾರ್ ಪುತ್ತೂರು, ಎಂ. ಕೃಷ್ಣಪ್ಪ, ಡಿ.ಜಿ. ಶಾಂತನಗೌಡ, ಎಸ್. ಮುನಿರಾಜು, ಟಿ.ಎನ್. ಜವರಾಯಿ ಗೌಡ, ದ.ಕ. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಮಾಜಿ ಮೇಯರ್ ಶಶಿಧರ ಹೆಗ್ಡೆ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.



### ನಂದಿನಿ ನದಿ ಮಾಲಿನ್ಯ ಪರಿಶೀಲನೆಗಾಗಿ ಸಮಿತಿ ಸದಸ್ಯರ ಭೇಟಿ

**ಸುರತ್ಕಲ್:** ಇಲ್ಲಿನ ಚೇಳಾರು ಖಂಡಿಗೆ ಸಮೀಪ ಹರಿಯುತ್ತಿರುವ ನಂದಿನಿ ನದಿಗೆ ಒಳಚರಂಡಿ ನೀರು ಬಿಡುತ್ತಿರುವುದರಿಂದ ಮಾಲಿನ್ಯ ಉಂಟಾಗಿದ್ದು ಗ್ರಾಮಸ್ಥರ ದೂರಿನ ಮೇರೆಗೆ ರಾಜ್ಯ ಸರಕಾರದ ವಿಧಾನ ಪರಿಷತ್ ನಿಗಾ ಸಮಿತಿ ಬುಧವಾರ ನಂದಿನಿ ನದಿ ತಟಕ್ಕೆ ಭೇಟಿ ನೀಡಿ ಪರಿಶೀಲಿಸಿತು.

ಸ್ಥಳೀಯ ಗ್ರಾಮಸ್ಥರು ನದಿ ಮಾಲಿನ್ಯದಿಂದ ಉಂಟಾಗಿರುವ ಸಮಸ್ಯೆಗಳ ಕುರಿತು ಸಮಿತಿಗೆ ಮಾಹಿತಿ ನೀಡಿದರು. ಶ್ರೀ ಉಳ್ಳಾಯ ಧರ್ಮರಸು ದೈವಸ್ಥಾನದಲ್ಲಿ ನಡೆಯುವ ಜಾತ್ರಾ ಮಹೋತ್ಸವ, ಮೀನು ಹಿಡಿಯುವ ಜಾತ್ರೆ ಸೇರಿದಂತೆ ನಂದಿನಿ ನದಿಯೊಂದಿಗೆ ಇರುವ ಅವಿನಾಭಾವ ಸಂಬಂಧದ ಬಗ್ಗೆ ವಿವರಿಸಿದ ಗ್ರಾಮಸ್ಥರು, ನದಿಯನ್ನು ಈ ಹಿಂದಿನಂತೆ ಪರಿಶುದ್ಧವಾಗಿ ಹರಿಯುವಂತೆ ಮಾಡಬೇಕು ಎಂದು ಒತ್ತಾಯಿಸಿದರು. ಸಮಿತಿ ಅಧ್ಯಕ್ಷ ವೆಂಕಟಮೂರ್ತಿ, ಸದಸ್ಯರಾದ ಕಿಶೋರ್ ಕುಮಾರ್ ಬೊಟ್ಯಾಡಿ, ಐವನ್ ಡಿಸೋಜಾ, ಡಿಸಿ ದರ್ಶನ್, ಮಂಗಳೂರು ಮಹಾನಗರ ಪಾಲಿಕೆ ಆಯುಕ್ತ ರವಿಚಂದ್ರನಾಯಕ್, ಚೇಳೈರು ಗ್ರಾ.ಪಂ. ಮಾಜಿ ಅಧ್ಯಕ್ಷ ಜಯಾನಂದ, ಪುಷ್ಪರಾಜ್ ಶೆಟ್ಟಿ ಮಾಜಿ ಸದಸ್ಯರಾದ ಸುಧಾಕರ ಶೆಟ್ಟಿ ಬಾಲಕೃಷ್ಣ ಶೆಟ್ಟಿ ರೇಖಾ, ಪ್ರೇಮಾ ಶೆಟ್ಟಿ ನಂದಿನಿ ನದಿ ಹೋರಾಟ ಸಮಿತಿಯ ಸುಕೇಶ್ ಶೆಟ್ಟಿ ಖಂಡಿಗೆ, ನಿತಿನ್ ಶೆಟ್ಟಿ ಖಂಡಿಗೆ, ರಮೇಶ್ ಪೂಜಾರಿ, ಕಿರಣ್ ಶೆಟ್ಟಿ ಕೆರೆಮನೆ, ಗಂಗಾಧರ ಪೂಜಾರಿ ಇದ್ದರು.



## ಹುಸಿಯಾದ ಭರವಸೆ: ಪುಣಚದ ಮೂರು ಕುಟುಂಬದಿಂದ ಮತ್ತೆ ಅಹೋರಾತ್ರಿ ಧರಣಿ

**ಬಂಟ್ವಾಳ:** ಪುತ್ತೂರು ವಿಧಾನಸಭಾ ಕ್ಷೇತ್ರ ಕ್ಕೊಳಪಟ್ಟ ಬಂಟ್ವಾಳ ತಾಲೂಕಿನ ಪುಣಚ ಗ್ರಾಮದ ಪ.ಪಂಗಡ ಸಮುದಾಯದ ಮೂವರು ಕುಟುಂಬಗಳು ಹಕ್ಕುಪತ್ರ ವಿತರಿಸುವ ಬಂಟ್ವಾಳ ತಹಶೀಲ್ದಾರ್ ಹಾಗೂ ಶಾಸಕರ ಭರವಸೆಯು ಹುಸಿಯಾದ ಹಿನ್ನಲೆಯಲ್ಲಿ ಮೂರು ಕುಟುಂಬ ಹಕ್ಕುಪತ್ರಕ್ಕಾಗಿ ಬಂಟ್ವಾಳ ತಾಲೂಕು ಆಡಳಿತ ಸೌಧ ಮುಂಭಾಗ ಅಹೋರಾತ್ರಿ ಧರಣಿ ಆರಂಭಿಸಿದ್ದು ಬುಧವಾರ 2ನೇ ದಿನಕ್ಕೆ ಕಾಲಿಟ್ಟಿದೆ.



ಹಕ್ಕುಪತ್ರ ಸ್ವೀಕರಿಸಲೆಂದು ಮಂಗಳವಾರ ಪೆರ್ನೆ ಗ್ರಾ.ಪಂ.ಗೆ ಹೋಗಿದ್ದ ಪರಿಶಿಷ್ಟ ಕುಟುಂಬದ ಈ ಮೂವರು ಫಲಾನುಭವಿಗಳಿಗೆ ಹಕ್ಕುಪತ್ರ ಸಿಗದೆ ಕಾದು, ಕಾದು ಸುಸ್ತಾಗಿ ಬಂದ ದಾರಿಗೆ ಸುಂಕವಿಲ್ಲದಂತೆ ಬರಿಗೈಯಲ್ಲಿ ವಾಪಾಸ್ ಆಗಿದ್ದರು. ಮೇ 26ರಂದು ಪೆರ್ನೆ ಗ್ರಾ.ಪಂ.ನಲ್ಲಿ ಪುತ್ತೂರು ಶಾಸಕ ಅಶೋಕ್ ರೈ ಅಧ್ಯಕ್ಷತೆಯಲ್ಲಿ ನಡೆಯಬೇಕಾಗಿದ್ದ ಕಾರ್ಯಕ್ರಮ ಶಾಸಕರ ಅಲಭ್ಯತೆಯಿಂದಾಗಿ ದಿಢೀರ್ ರದ್ದಾದ ಹಿನ್ನಲೆಯಲ್ಲಿ ಈ ಮೂವರಿಗೆ ಹಕ್ಕುಪತ್ರ ದೊರಕದಿದ್ದು, ಇದರಿಂದ ಅಸಮಾಧಾನಿತರಾದ ಫಲಾನುಭವಿಗಳು ನೇರವಾಗಿ ಬಂಟ್ವಾಳ ತಾಲೂಕಾಡಳಿತ ಮಿನಿ ವಿಧಾನಸೌಧದತ್ತ ಆಗಮಿಸಿ ಹಕ್ಕುಪತ್ರಕ್ಕಾಗಿ ಧರಣಿ ಆರಂಭಿಸಿದ್ದಾರೆ.

ಈ ಪ್ರಕರಣ ಸದ್ಯ ರಾಜಕೀಯ ತಿರುವು ಪಡೆದು ಕೊಂಡಿದ್ದು ಕಳೆದ ವಾರ 4 ದಿನಗಳ ಕಾಲ ಈ ಮೂರು ಕುಟುಂಬ ಧರಣಿ ನಡೆಸಿದ್ದು ಆಗ ಸಂಸದ ಕ್ಯಾ.ಬ್ರಿಜೇಶ್ ಚೌಟ,ಮಾಜಿ ಶಾಸಕ ಸಂಜೀವ ಮಠಂದೂರು, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಸಹಿತ ಪುತ್ತೂರು ಮತ್ತು ಬಂಟ್ವಾಳ ಮಂಡಲದ ಪದಾಧಿಕಾರಿಗಳು, ಕಾರ್ಯಕರ್ತರು ಆಗಮಿಸಿ ಬೆಂಬಲಿಸಿ ಧರಣಿಯಲ್ಲಿ ಭಾಗವಹಿಸಿದ್ದರು.ಇದಾದ ಬಳಿಕ ಪುತ್ತೂರು ಶಾಸಕರು ಇದನ್ನೇ ಪ್ರತಿಷ್ಠೆಯನ್ನಾಗಿಸಿ ಈ ಕುಟುಂಬಕ್ಕೆ ಹಕ್ಕುಪತ್ರ ವಿತರಿಸಲು ಮೀನಮೇಷ ಎಣಿಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಇದಕ್ಕೆ ಪೂರಕವಾಗಿ ಹಕ್ಕುಪತ್ರ ವಿತರಿಸುವ ಕಾರ್ಯಕ್ರಮ ರದ್ದಾಗಿದೆ. ಇದೀಗ ಈ ಕುಟುಂಬ ಹಕ್ಕುಪತ್ರಕ್ಕಾಗಿ ಬಿ.ಸಿ.ರೋಡಿನ ಮಿನಿ ವಿಧಾನದ ಜಗಲಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರವನ್ನಿರಿಸಿಕೊಂಡು ಧರಣಿ ಕುಳಿತುಕೊಂಡಿದೆ.

### ರದ್ದಾದ ಕಾರ್ಯಕ್ರಮ

**ಮೇ 26ರಂದು ಪೆರ್ನೆ ಗ್ರಾ.ಪಂ.ನಲ್ಲಿ ಮೂರು ಕುಟುಂಬಗಳಿಗೆ ಹಕ್ಕುಪತ್ರವನ್ನು ಪುತ್ತೂರು ಶಾಸಕರು ವಿತರಿಸಲಿದ್ದಾರೆ ಎಂದು ಬಂಟ್ವಾಳ ತಹಶೀಲ್ದಾರ್ ಮಂಜುನಾಥ್ ಹಾಗೂ ಶಾಸಕ ರಾಜೇಶ್ ನ್ಯಾಕ್ ಧರಣಿ ನಿರತ ಕುಟುಂಬಕ್ಕೆ ಭರವಸೆ ನೀಡಿದ ಪರಿಣಾಮ ಧರಣಿ ಹಿಂತೆಗೆಸುವಲ್ಲಿ ಯಶಸ್ವಿಯಾಗಿದ್ದರು.ಆದರೆ ಕಾರ್ಯಕ್ರಮ ರದ್ದಾದ ಹಿನ್ನಲೆಯಲ್ಲಿ ಭರವಸೆ ಹುಸಿಯಾಗಿದೆ.**

## ಪೊಲೀಸ್ ಸಿಬ್ಬಂದಿಗೆ ಕಾರು ಡಿಕ್ಕಿ: ಗಾಯ

**ಮಂಗಳೂರು:** ನಗರದ ಮಣ್ಣಗುಡ್ಡೆಯ ವೇರ್‌ಹೌಸ್ ಬಳಿ ಕರ್ತವ್ಯನಿರತ ಇಬ್ಬರು ಸಂಚಾರಿ ಪೊಲೀಸ್ ಸಿಬ್ಬಂದಿಗೆ ಕಾರು ಡಿಕ್ಕಿಯಾದ ಘಟನೆ ಮಂಗಳವಾರ ರಾತ್ರಿ ನಡೆದಿದೆ. ಇದರಿಂದ ಒಬ್ಬ ಪೊಲೀಸ್‌ಗೆ ಗಂಭೀರ ಗಾಯವಾಗಿದೆ.

ಮಂಗಳೂರು ನಗರ ಸಂಚಾರ ಪಶ್ಚಿಮ ಪೊಲೀಸ್ ಠಾಣೆಯ ಹೆಡ್ ಕಾನ್ ಸ್ಟೆಬಲ್ ವಿಠಲ್ ಗೌಡ ಮತ್ತು ಕಾನ್ ಸ್ಟೆಬಲ್ ಕುಮಾರ ಗಾಯಗೊಂಡವರು. ಆ ಪೈಕಿ ವಿಠಲ ಗೌಡ ಗಂಭೀರವಾಗಿ ಗಾಯಗೊಂಡಿದ್ದಾರೆ. ಮಂಗಳವಾರ ರಾತ್ರಿ ಸುಮಾರು 11ಕ್ಕೆ ಅಪಘಾತ ಪ್ರಕರಣವೊಂದರ ಸಂಬಂಧ ಸ್ಥಳದಲ್ಲಿ ಪೊಲೀಸರು ಪರಿಶೀಲನೆಗೆ ತೆರಳಿದ್ದ ವೇಳೆ ವಿರುದ್ಧ ದಿಕ್ಕಿನಲ್ಲಿ ವೇಗವಾಗಿ ಬಂದ ಕಾರು ಪೊಲೀಸರು ಮತ್ತು ಸಾರ್ವಜನಿಕರ ಮೇಲೆ ನುಗ್ಗಿದೆ ಎನ್ನಲಾಗಿದೆ. ಈ ಸಂದರ್ಭ ಕೆಲವರು ಓಡಿ ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

### ಮಂಗಳೂರಿಗೆ ಅಮ್ಮ ಆಗಮನ, ಭವ್ಯ ಸ್ವಾಗತ



**ಮಂಗಳೂರು ಅಮೃತ ಸಂಗಮ ಆಯೋಜನಾ ಸಮಿತಿಯಿಂದ ಮೇ 28 ಹಾಗೂ 29ರಂದು (ಇಂದು, ನಾಳೆ) ಬೋಳೂರು ರಸ್ತೆಯಲ್ಲಿರುವ ಮಾತಾ ಅಮೃತಾನಂದಮಯಿ ಮಠದಲ್ಲಿ ಆಯೋಜಿಸಲಾದ 'ಬ್ರಹ್ಮಸ್ಥಾನಂ' ಮಹೋತ್ಸವಕ್ಕೆ ಆಗಮಿಸಿದ ಸದ್ಗುರು ಮಾತಾ ಅಮೃತಾ ಅಮೃತಾನಂದಮಯಿ ದೇವಿ ಅವರನ್ನು ಸಮಿತಿಯ ಪದಾಧಿಕಾರಿಗಳು ಆರತಿ ಬೆಳಗಿ, ಭವ್ಯವಾಗಿ ಸ್ವಾಗತಿಸಿದರು. ಈ ಸಂದರ್ಭ ಮಠದ ನೂರಾರು ಹಿತೈಷಿಗಳು ಉಪಸ್ಥಿತರಿದ್ದರು.**

## ಮನೆ ಕಂಪೌಂಡಿಗೆ ಲಾರಿ ಡಿಕ್ಕಿ: ಅಪಾರ ಹಾನಿ

**ಬಂಟ್ವಾಳ:** ತೆಂಕಬೆಳ್ಳೂರು ಗ್ರಾಮದ ಕೊಪ್ಪಲ ಎಂಬಲ್ಲಿ ಇಂಟರ್ ಲಾಕ್ ಹೇರಿ ಕೊಂಡು ಬಂದ ಗೂಡ್ಸ್ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ಮನೆಯ ಕಂಪೌಂಡಗೆ ಡಿಕ್ಕಿ ಹೊಡೆದು ಲಾರಿ ಮಗುಚಿ ಬಿದ್ದು ಇಂಟರ್ ಲಾಕ್, ಸಿಮೆಂಟ್ ಇಟ್ಟಿಗೆಗಳು ಮನೆಯ ಛಾವಣಿ ಮೇಲೆ ಬಿದ್ದು ಅಪಾರ ಹಾನಿಯಾದ ಘಟನೆ ಸಂಭವಿಸಿದೆ.

ಇಲ್ಲಿನ ಜೆಫ್ರಿ ಫರ್ನಾಂಡಿಸ್ ಎಂಬವರ ಮನೆ ಛಾವಣಿ, ಅಂಗಳಕ್ಕೆ ಬಿದ್ದು ಮನೆಯ ಗೋಡೆ, ಕಿಟಕಿ, ಬಾಗಿಲುಗಳು, ಕೌಂಪೌಡ್ ವಾಲ್, ಕಬ್ಬಿಣದ ಗೇಟ್, ಲೈಟ್ ಪೋಲ್ ಮನೆಯ ಮರದ ಪಕ್ಕಾಸು ಹಂಚು ಡಿಟಿಹೆಚ್ ಅಂಟೇನಾ, ನೀರಿನ ಪೈಪ್ ಅಡುಗೆ ಕೋಣೆಯ ಶಿಟ್ ಹಾನಿಯಾಗಿದ್ದು, ಪರಿಣಾಮ ಸುಮಾರು 2.50 ಲಕ್ಷ ರೂ.ನಷ್ಟವುಂಟಾಗಿದೆ ಎಂದು ಅಂದಾಜಿಸಲಾಗಿದೆ. ಮಂಗಳವಾರ ರಾತ್ರಿ ಸುಮಾರು 11.00 ಗಂಟೆಗೆ ಬಿ.ಸಿ ರೋಡ್ ಕಡೆಯಿಂದ ಇಂಟರ್ ಲಾಕ್ ಹೇರಿಕೊಂಡು ಬಂದ ಗೂಡ್ಸ್ ಲಾರಿಯನ್ನು ಚಾಲಕನ ನಿಯಂತ್ರಣ ತಪ್ಪಿ ಈ ಘಟನೆ ಸಂಭವಿಸಿದೆ. ಅಪಘಾತದಿಂದ ಲಾರಿಯ ಚಾಲಕನಿಗೂ ಸಣ್ಣಪುಟ್ಟ ಗಾಯ ಗೊಂಡಿದ್ದು ಲಾರಿಗೂ ಹಾನಿ ಯಾಗಿದೆ. ಈ ಬಗ್ಗೆ ಬಂಟ್ವಾಳ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.